"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಕರ್ನಾಟಕ ವಿಧಾನ ಪರಿಷತ್ತು

**ದಿನಾಂಕ: 20ನೇ ಫೆಬ್ರವರಿ 2018**
**ಮಂಗಳವಾರ**

## ವಿಷಯಾನುಕ್ರಮಣಿಕೆ

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಬಿ.ಶಾಣಪ್ಪ
ಶ್ರೀ ರಾಮಚಂದ್ರಗೌಡ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ರಾಮಲಿಂಗಾರೆಡ್ಡಿ(ಗೃಹ ಸಚಿವರು)

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

2. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**497 – ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡುವ ಬಗ್ಗೆ.**
- ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
- ಡಾ: ಹೆಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

**752 – ತೆಂಗು ಬೆಳೆಗಾರರನ್ನು ಸಬಲರನ್ನಾಗಿಸುವ ಉದ್ದೇಶದಿಂದ ಮಾಡಲಾಗಿರುವ ರಾಜ್ಯ ನೀರಾ ನೀತಿ ಅನುಷ್ಠಾನ ಬಗ್ಗೆ.**
- ಶ್ರೀ ರಾಮಚಂದ್ರಗೌಡ
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

**745 – ರಾಜ್ಯದಲ್ಲಿರುವ ಟೋಲ್‌ಗಳ ಬಗ್ಗೆ.**
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಡಾ: ಹೆಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಸಚಿವರು)

**774 – ಬೀದರ್ ಜಿಲ್ಲೆಯಲ್ಲಿ ಜೋಲಾಡುತ್ತಿರುವ ವಿದ್ಯುತ್ ತಂತಿಗಳ ಬಗ್ಗೆ.**
- ಶ್ರೀ ವಿಜಯ ಸಿಂಗ್
- ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**606 – ಗ್ರಾಮ ಪಂಚಾಯತ್‌ಗಳ ವಿದ್ಯುತ್ ದರವನ್ನು ಕಡಿಮೆಗೊಳಿಸಿ, ಬಡ್ಡಿ ತೆಗೆದು ಹಾಕುವ ಬಗ್ಗೆ.**
- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)
-

**770 – ಮಹಿಳಾ ಉದ್ಯೋಗಿಗಳಿಗೆ ಶಿಶುಪಾಲನಾ ರಜೆ ಸೌಲಭ್ಯದ ಬಗ್ಗೆ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಅಮರನಾಥ ಪಾಟೀಲ್
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**751 – ಬೆಳಗಾವಿ ದಕ್ಷಿಣ ಮತ ಕ್ಷೇತ್ರದ ವಿದ್ಯುತ್ ಸಂಪರ್ಕದ ಬಗ್ಗೆ.**
– ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**618 – ರಾಜ್ಯದ ಹೆದ್ದಾರಿಗಳ ದುರಸ್ಥಿ ಬಗ್ಗೆ.**
– ಶ್ರೀಮತಿ ತಾರಾಅನೂರಾಧ
– ಡಾ: ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

**482 – ವಸತಿ ಸಮುಚ್ಛಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಬಗ್ಗೆ.**
– ಶ್ರೀ ಎಂ.ನಾರಾಯಣ ಸ್ವಾಮಿ (ಆರ್.ಪ್ರಸನ್ನ ಕುಮಾರ್ ಪರವಾಗಿ)
– ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಜವಳಿ ಮತ್ತು ಮುಜರಾಯಿ ಸಚಿವರು)

**754 – ರಾಜ್ಯದಲ್ಲಿ ಹಾಪ್‌ಕಾಮ್ಸ್‌ಗಳಿಗೆ ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಒದಗಿಸುವ ಬಗ್ಗೆ.**
– ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

**620 – ರೈತರು ತಮ್ಮ ಜಮೀನಿಗೆ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಬಗ್ಗೆ.**
– ಶ್ರೀ ಟಿ.ಎ.ಶರವಣ
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

**796 – ಸೋಲಾರ್ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹ**
– ಶ್ರೀ ಆರ್.ಧರ್ಮಸೇನ
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

**783 – ರೈತ ಉತ್ಪಾದಕ ಸಂಸ್ಥೆಗಳ ಬಗ್ಗೆ.**
– ಶ್ರೀ ಎಂ.ನಾರಾಯಣಸ್ವಾಮಿ
– ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)

**747 – ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಕ್ರಮ ನೇಮಕಾತಿ ಬಗ್ಗೆ.**
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
– ಶ್ರೀ ಟಿ.ಎ.ಶರವಣ
– ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)

**088 – ಸಹಕಾರಿ ಬ್ಯಾಂಕುಗಳಲ್ಲಿ ರೈತರ ಸಾಲಮನ್ನಾ ಮಾಡಿರುವ ಬಗ್ಗೆ.**
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

**065 – ಮುಜರಾಯಿ ಇಲಾಖೆ ಅನುದಾನದ ಬಗ್ಗೆ**
– ಶ್ರೀ ರಮೇಶ್ ಬಾಬು
– ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಜವಳಿ ಮತ್ತು ಮುಜರಾಯಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಬೆಳಗಾವಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ನೌಕರರಿಗೆ ಕಳೆದ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4 ವರ್ಷಗಳಿಂದ ಪಿಂಚಣಿ ಬಿಡುಗಡೆ ಮಾಡದಿರುವ ಬಗ್ಗೆ.**

– ಶ್ರೀ ಬಸವರಾವ ಶಿವಲಿಂಗಪ್ಪ ಹೊರಟ್ಟಿ

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಆ) ರಾಜ್ಯದ 9 ಜಿಲ್ಲೆಗಳಲ್ಲಿ ತೊಗರಿ ಬೇಳೆಯನ್ನು ಖರೀದಿಸಿ ರೈತರಿಗೆ ಹಣ ಪಾವತಿಯಾಗದಿರುವ ಬಗ್ಗೆ.**

– ಶ್ರೀ ಅಮರನಾಥ ಪಾಟೀಲ್

– ಶ್ರೀ ಕೃಷಿ ಬೈರೇಗೌಡ(ಕೃಷಿ ಸಚಿವರು)

**ಇ) ಅಡಕೆ ಕ್ಯಾನ್ಸರ್ ಕಾರಕ ಎಂಬ ಆರೋಪದಡಿ ಅಡಕೆ ನಿಷೇಧ ಕುರಿತು ಪ್ರಕಟಗೊಂಡ ವರದಿ ಬಗ್ಗೆ.**

– ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)

– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕಾ ಸಚಿವರು)

**ಈ) ಗಿರಿಜನ ಆಶ್ರಮ ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದ ಶಿಕ್ಷಕರ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**ಉ) ಪದವಿ ಪೂರ್ವ ಕಾಲೇಜಿನ ಸಿಬ್ಬಂದಿಗಳಿಗೆ 15 ದಿನ ರಜೆ ಕಡಿತ ಮತ್ತು ಮೇ 15 ರಿಂದ ಶಾಲೆ ಪ್ರಾರಂಭದ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)

4. **ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ.**

**ಅ) ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯು ಪ್ರಶಸ್ತಿಯ ಜೊತೆಗೆ ನೀಡುವ ನಟರಾಜನ ವಿಗ್ರಹ ಮಾದರಿಯನ್ನು ಬದಲಾಯಿಸಿರುವ ಬಗ್ಗೆ.**

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು,)(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಪರವಾಗಿ)

**ಆ) ವನ್ಯಜೀವಿ ರಕ್ಷಣೆ ಕುರಿತು**

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)(ಅರಣ್ಯ ಸಚಿವರ ಪರವಾಗಿ)

5. **ವರದಿಗಳನ್ನೊಪ್ಪಿಸುವುದು**

6. **ಅರ್ಜಿಗಳನ್ನೊಪ್ಪಿಸುವುದು.**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ನಿಯಮ 330ರ ಮೇರೆಗೆ**

**ರಾಜ್ಯದಲ್ಲಿರುವ ಎಲ್ಲಾ ಮಾದರಿಯ ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷಾ ಬೋಧನೆಯನ್ನು ಕಡ್ಡಾಯಗೊಳಸಿದ್ದು, ಈ ಬಗ್ಗೆ ಖಚಿತಪಡಿಸಿಕೊಳ್ಳಲು ಸಮಿತಿಯನ್ನು ರಚಿಸುವುದು ಮತ್ತು ನಿಯಮವನ್ನು ಉಲ್ಲಂಘನೆ ಮಾಡುವ ಶಾಲೆಗಳಗೆ ದಂಡವನ್ನು ವಿಧಿಸುವ ಜೊತೆಗೆ ಮಾನ್ಯತೆಯನ್ನು ರದ್ದುಪಡಿಸುವಂತಹ ಕಠಿಣವಾದ ನಿಯಮಗಳನ್ನು ಜಾರಿಗೊಳಸುವ ಬಗ್ಗೆ**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ರಾಮಚಂದ್ರಗೌಡ
- ಶ್ರೀ ಆರ್.ಧರ್ಮಸೇನಾ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಸಚೇತಕರು)
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಪುಟ್ಟಣ್ಣ
- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)
- ಶ್ರೀ ವಿ.ಎಸ್.ಉಗ್ರಪ್ಪ

**8 ಗಮನ ಸೆಳೆಯುವ ಸೂಚನೆ**

**ಸಂವಿಧಾನದ ಮೂಲಭೂತ ಹಕ್ಕುಗಳಗೆ ವಿರುದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಬಗ್ಗೆ.**

- ಶ್ರೀ ಪುಟ್ಟಣ್ಣ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಸಚೇತಕರು)
- ಶ್ರೀ ವಿ.ಎಸ್. ಉಗ್ರಪ್ಪ
- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

**9. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**

- ಶ್ರೀ ರಾಮಚಂದ್ರಗೌಡ
- ಶ್ರೀ ಲಹರ್ ಸಿಂಗ್ ಸಿರೋಯಾ
- ಶ್ರೀಮತಿ ತಾರಾಅನೂರಾಧ
- ಶ್ರೀ ಡಿ.ಎಸ್.ವೀರಯ್ಯ

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(119) 20-02-2018 (11-00) BSD-KS

**ಕರ್ನಾಟಕ ವಿಧಾನ ಪರಿಷತ್ತು**

ಮಂಗಳವಾರ, 20 ನೇ ಫೆಬ್ರವರಿ 2018

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ *11 ಗಂಟೆ 04 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯಃ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)ಃ–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೇನೆ.

ಸಭಾಪತಿಯವರುಃ– ಅದನ್ನು ನಾನು ನೋಡಿದ್ದೇನೆ ಮತ್ತು ವಿಷಯವನ್ನು ಕೂಲಂಕಷವಾಗಿ ನೋಡಿದ್ದೇನೆ. ನಮ್ಮ ನಿಯಮಾವಳಿ ಪುಸ್ತಕ ಹಾಗೂ ಕೌಲ್ ಅಂಡ್ ಶಕ್ದರ್ ಪುಸ್ತಕಗಳನ್ನು ರೆಫರ್ ಮಾಡಿ ಗಮನಿಸಿದ್ದೇನೆ. ವಿಷಯವು ಸದನದಲ್ಲಿ ಪ್ರಸ್ತಾಪ ಮಾಡಲು ಯೋಗ್ಯವಾಗಿದೆ. ಮುಂದೆ ಏನು ಮಾಡಬೇಕೆಂಬುದನ್ನು ನಂತರ ತೀರ್ಮಾನ ಮಾಡೋಣ. ನಮ್ಮ ಪದ್ಧತಿಯಂತೆ ಐದೆಂಟು ನಿಮಿಷಗಳಲ್ಲಿ ತಾವು ಪೂರ್ವಭಾವಿಯಾಗಿ ಪೀಠಿಕೆ ಪ್ರಸ್ತಾಪ ಮಾಡಿದ ನಂತರ ಸರ್ಕಾರದ ಅಭಿಪ್ರಾಯವನ್ನು ಕೇಳೋಣ. ನಂತರ ಏನು ಮಾಡಬೇಕೆಂದು ಯೋಚನೆ ಮಾಡೋಣ. ತಾವು ಐದೆಂಟು ನಿಮಿಷಗಳಲ್ಲಿ ತಿಳಿಸಬೇಕಾದ ವಿಷಯಗಳನ್ನು ಪ್ರಸ್ತಾಪ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪಃ– ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರದಲ್ಲಿ ಕಾಂಗ್ರೆಸ್ ಶಾಸಕರು ಮತ್ತು ಅವರ ಮಕ್ಕಳು ಹಾಗೂ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಗೂಂಡಾಗಿರಿ ಮಾಡುವುದಕ್ಕೆ ಪರವಾನಗಿ ಇದೆ ಎಂದುಕೊಂಡು ಬಿಟ್ಟಿದ್ದಾರೆ. ನಾನು ನನ್ನ ಸಮಾಧಾನಕ್ಕೆ ಈ ವಿಚಾರ ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ರಾಮಲಿಂಗಾರೆಡ್ಡಿಯವರು ಗೃಹ ಮಂತ್ರಿಗಳಾಗಿ ಸದನದಲ್ಲಿ ಏನೋ ಒಂದು ಉತ್ತರ ಕೊಡುತ್ತಾರೆ ಎಂಬುದಕ್ಕಷ್ಟೇ ಸೀಮಿತವಾಗಬಾರದು. ಒಂದು ಕಡೆ ಒಬ್ಬ ಶಾಸಕರ ಮಗ ಮತ್ತು ಆತನ ಜೊತೆಯಲ್ಲಿದ್ದವರು ಹೋಟೆಲ್‌ನಲ್ಲಿ ಶ್ರೀ ವಿದ್ವತ್ ಎಂಬ ಯುವಕ ಊಟ ಮಾಡುತ್ತಿರುವ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕೆ ಹಿಗ್ಗಾಮುಗ್ಗಾ ಹೊಡೆಯುತ್ತಾರೆ ಹಾಗೂ ಬೌನ್ಸರ್ ಕರೆಸಿ ಹೊಡೆಸುತ್ತಾರೆ. ಒಂಭತ್ತು ಜನರು ಈ ರೀತಿ ವಿದ್ವತ್ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ಸಂದರ್ಭದಲ್ಲಿ ಇದು ನಮ್ಮ ರಾಜ್ಯ, ನಮ್ಮ ಮುಖ್ಯಮಂತ್ರಿ ಮತ್ತು ನಮ್ಮ ಗೃಹ ಮಂತ್ರಿ, ಯಾರಿಗೆ ಎಷ್ಟು ಬೇಕಾದರೂ ಹೊಡೆಯುತ್ತೇವೆ, ಈ ರೀತಿ ಗೂಂಡಾ ರಾಜ್ಯದಲ್ಲಿ ಗೂಂಡಾಗಿರಿಗೆ ಯಾರೂ ಅಡ್ಡಬರಲು ಸಾಧ್ಯವಿಲ್ಲ ಎಂಬ ಭಾವನೆ ಕಾಂಗ್ರೆಸ್‌ನ ವ್ಯಕ್ತಿಗಳಿಗೆ ಬಂದಿದೆಯೇ? ಆ ರೀತಿ ಅಧಿಕಾರವನ್ನು ಯಾರಾದರೂ ಅವರಿಗೆ ಕೊಟ್ಟಿದ್ದಾರೆಯೇ? ನಾನು ಪ್ರತಿ ಸಾರಿ ಹೇಳುತ್ತಿದ್ದೇನೆ. ಹಿಂದೂ ಕಾರ್ಯಕರ್ತ ಹತ್ಯೆಯಾದ ಸಂದರ್ಭದಲ್ಲಿ ಹೇಳಿದ್ದೇನೆ. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವಾದ ಸಂದರ್ಭದಲ್ಲಿ ಹೇಳಿದ್ದೇನೆ. ಸ್ವತಃ ನಮ್ಮ ಮನೆಯ ಮಕ್ಕಳಿಗೆ ಆ ರೀತಿ ಆದಾಗ ಎಷ್ಟು ನೋವಾಗುತ್ತದೆಯೋ, ಆ ರೀತಿ ನೋವು ಆಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಗೃಹ ಮಂತ್ರಿಗಳಿಗೆ ಅನಿಸುವುದಿಲ್ಲವೋ, ಅಲ್ಲಿಯವರೆಗೂ ಕರ್ನಾಟಕ ರಾಜ್ಯದಲ್ಲಿ ಗೂಂಡಾಗಾರಿಕೆ ನಡೆಯುತ್ತಿರುತ್ತದೆ ಎಂಬ ಭಾವನೆ ರಾಜ್ಯದ ಜನರಿಗೆ ಇದೆ. ಒಂಭತ್ತು ಜನ ನುಗ್ಗಿ ಆತನನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಡೆಯುತ್ತಾರೆ, ಪಾಪ, ಆತ ಜೀವವನ್ನು ಉಳಿಸಿಕೊಳ್ಳಲು ಓಡುತ್ತಿದ್ದರೆ ಅಲ್ಲಿಯೂ ನುಗ್ಗಿ ಹೊಡೆಯುತ್ತಾರೆ. ಆತ ಆಸ್ಪತ್ರೆಯಲ್ಲಿದ್ದರೆ ಆತನನ್ನು ಭೇಟಿ ಮಾಡಲು ಬಂದ ಅವರ ಸಹೋದರರ ಮೇಲೆಯೂ ಹಲ್ಲೆ ಮಾಡಲು ಪ್ರಯತ್ನಿಸುತ್ತಾರೆ. ರಾಜ್ಯದಲ್ಲಿ ಏನು ನಡೆಯುತ್ತಿದೆ? ಒಂಭತ್ತು ಜನರನ್ನು ಅರೆಸ್ಟ್ ಮಾಡಿ ಶಾಸಕರ ಮಗನನ್ನು ಮಾತ್ರ ಅರೆಸ್ಟ್ ಮಾಡುವುದಿಲ್ಲ. ಅವನೇನು ರಾಜಕುಮಾರನೇ? ಯಾರೋ ಪಾಪಿ, ಪರದೇಶಿ ಒಬ್ಬ ಪೋಲೀಸ್ ಅಧಿಕಾರಿಯನ್ನು ಅಮಾನತ್ತು ಮಾಡಿದರೆ ಸಾಕೇ? ಪೋಲೀಸರು ಏನು ತಪ್ಪು ಮಾಡಿದ್ದಾರೆ? ಅವರಿಗೆ ಪೂರ್ಣ ಅಧಿಕಾರ ಕೊಡಿ ಎಂದು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ. ಪ್ರಾಮಾಣಿಕ ಅಧಿಕಾರಿಗಳು ಅನೇಕ ಜನರಿದ್ದಾರೆ. ಅಧಿಕಾರಿಗಳಿಗೆ ಅವಕಾಶ ಕೊಡಬೇಕು. ಗೂಂಡಾಗಳಿಗೆ ಪೋಲೀಸ್ ಅಧಿಕಾರಿಗಳ ಭಯ ಇದೆಯೇ? ಕರ್ನಾಟಕ ರಾಜ್ಯದಲ್ಲಿ ಎಷ್ಟು ಬೇಕಾದರೂ ಗೂಂಡಾಗಿರಿ ಮಾಡಬಹುದೆಂಬ ಪರಿಸ್ಥಿತಿ ಇರುವಾಗ ಸಿಕ್ಕ ಸಿಕ್ಕಂತೆ ಹೊಡೆಯುತ್ತಾರೆ. ಕೊನೆಗೆ ಆತನ ತಂದೆ ' ದಯವಿಟ್ಟು ನನ್ನನ್ನು ಕ್ಷಮಿಸಿ, ನನ್ನ ಮಗ ಈ ಕೆಲಸ ಮಾಡಿದ್ದಾನೆ' ಎಂದು ಹೇಳುತ್ತಾರೆ. ನಾನು ಅವರ ಅಪ್ಪನ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಗೂಂಡಾಗಳ ಬಗ್ಗೆ ಸರ್ಕಾರದ ನಿಲುವು ಏನು? ಮಾನ್ಯ ಮುಖ್ಯಮಂತ್ರಿಗಳು ಗೂಂಡಾಗಳ ಬಗ್ಗೆ ಗಡಿಪಾರು ಕಾಯ್ದೆಯನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ಬಾಗಲಕೋಟೆ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟ ಸಂದರ್ಭದಲ್ಲಿ ಕುರುಬ ಸಮಾಜದ ಕೆಲವು ಯುವಕರು ಕುರುಬ ಜನಾಂಗವನ್ನು ಎಸ್.ಟಿ ಜಾತಿಗೆ ಸೇರಿಸಬೇಕೆಂದು ಮನವಿ ಮಾಡುವ ಸಂದರ್ಭದಲ್ಲಿ ಶ್ರೀ ವೀರಣ್ಣ ಹಳೆಗೌಡರ್ ಮತ್ತು ಅವರ ಜೊತೆಗಿನ ಒಂಭತ್ತು ಜನ ಹಾಗೂ ಡಿ.ಎಸ್.ಎಸ್ ನ ಇಬ್ಬರು ಸೇರಿ ಒಟ್ಟು 11 ಜನರ ಮೇಲೆ ಗಡಿಪಾರು ಕೇಸ್ ಹಾಕುತ್ತಾರೆ. ಇಲ್ಲಿ ಹಲ್ಲೆ ಮಾಡಿರುವ ಶಾಸಕರ ಪುತ್ರನ ಮೇಲೆ ಎಷ್ಟು ಕೇಸ್‌ಗಳಿವೆ? ಕೊಲೆ ಯತ್ನ, ಅಕ್ರಮ ಬಂಧನ, ಅಕ್ರಮ ಗ್ಯಾಂಗ್ ಸದಸ್ಯನಾಗಿರುವುದು, ಗುಂಪು ಕಟ್ಟಿಕೊಂಡು ಹಲ್ಲೆ ಮಾಡಿರುವುದು, ದಾಂಧಲೆ ಮಾಡಿರುವುದು, ಮಾರಕಾಸ್ತ್ರಗಳೊಡನೆ ಅಕ್ರಮ ಕೂಟದಲ್ಲಿ ಭಾಗಿಯಾಗಿರುವುದು, ಅಕ್ರಮ ಕೂಟ, ಜೀವ ಬೆದರಿಕೆ ಇವೆಲ್ಲವೂ ಸೇರಿ ಒಟ್ಟು 11 ಕೇಸ್‌ಗಳನ್ನು ಹಾಕಿದ್ದರೂ ಇಲ್ಲಿಯವರೆಗೂ ಅವರನ್ನು ಏಕೆ ಗಡಿಪಾರು ಕೇಸ್ ಹಾಕಿಲ್ಲ. ಅವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಿಲ್ಲ? ಅವರು ಕಾಂಗ್ರೆಸ್ ವಂಶದವರು ಎಂಬ ಒಂದೇ ಕಾರಣದಿಂದ ಬಂಧಿಸಿಲ್ಲವೇ? ಅದಕ್ಕಾಗಿಯೇ ಒಂದು ಕಾನೂನನ್ನು ತರಲಿ. ಕಾಂಗ್ರೆಸ್ ವಂಶದವರು ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ ಸೇರಿದಂತೆ ಏನು ಮಾಡಿದರೂ ಅವರಿಗೆ ಪರವಾನಗಿ ಇದೆ ಎಂದು ಕಾನೂನನ್ನು ತಂದು ಬಿಡಲಿ. ಇಷ್ಟು ಕೇಸ್‌ಗಳಿರುವ ವ್ಯಕ್ತಿಯನ್ನು ಗಡಿಪಾರು ಮಾಡದೇ, ಏನೋ ಕುರುಬರು ಎಂದುಕೊಂಡು ಎಸ್.ಟಿ ಜನಾಂಗಕ್ಕೆ ಸೇರಿಸಿ ಎಂದು ಮನವಿ ಕೊಡಲು ಬಂದವರ ವಿರುದ್ಧ ಗಡಿಪಾರು ಕೇಸ್ ಹಾಕುತ್ತಾರೆಯೇ? ಇದಕ್ಕೆ ಹಿಂದಿನ ಮುಖ್ಯಮಂತ್ರಿಗಳು ಹೋರಾಟ ಮಾಡಿದ್ದರು. ಇದಲ್ಲದೇ ಈ ಮನವಿ ಕೊಡಲು ಹೋದವರ ವಿರುದ್ಧ ಒಂದೂ ಕೇಸ್ ಇರಲಿಲ್ಲ. ಇಂತಹವರ ವಿರುದ್ಧ ಗೂಂಡಾ ಕಾಯ್ದೆಯಡಿ ಗಡಿಪಾರು ಮಾಡಲು ಹೋಗುತ್ತಿದ್ದಾರೆ. ಇದಕ್ಕೆ ಏನು ಮಾಡಬೇಕು? ವಿರೋಧ ಪಕ್ಷವಾಗಿ ನಾವು ಸದನದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇವೆ. ಮಾಧ್ಯಮದವರು ಅವರ ಕೆಲಸವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದಕ್ಕೆ ಹೋದರೆ ಅವರ ಮೇಲೆ ಹಲ್ಲೆ ನಡೆಸುತ್ತಾರೆ. ತುರ್ತು ಪರಿಸ್ಥಿತಿಯಲ್ಲಿಯೂ ಈ ರೀತಿ ನಡೆದಿರಲಿಲ್ಲ. ಪೊಲೀಸ್ ಠಾಣೆ ಮುಂದೆಯೇ ಮಾಧ್ಯಮದವರ ಮೇಲೆ ಹಲ್ಲೆ ಮಾಡುತ್ತಾರೆ.

(ಮುಂದು)

120/20.02.2018/11.10/ಹೆಚ್‌ವಿಃಕೆಎಸ್

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಪೊಲೀಸ್ ಠಾಣೆಯ ಮುಂದೆ ಮಾಧ್ಯಮದವರ ಮೇಲೆ ಹಲ್ಲೆ ನಡೆಸಲಾಗಿದೆ. 'ಕನ್ನಡ ಪ್ರಭ' ದಿನಪತ್ರಿಕೆಯ ಸಂಪಾದಕೀಯದಲ್ಲಿ 'ಗೂಂಡಾಗಿರಿ ನಡೆಸುವವರ ರಕ್ಷಣೆಗೆ ಯತ್ನಿಸುವುದು ಏಕೆ' ಎನ್ನುವ ಶೀರ್ಷಿಕೆಯಡಿಯಲ್ಲಿ 'ಹಣ ಬಲ, ಅಧಿಕಾರ ಬಲ ಮತ್ತು ದುರಾಹಂಕಾರದಿಂದ ನಡೆಯುವ ಇಂತಹ ದೌರ್ಜನ್ಯಗಳು ಖಂಡಿತವಾಗಿಯೂ ಖಂಡನೀಯವಾಗಿದೆ. ಪತ್ರಕರ್ತರ ಮೇಲೆ ಹಲ್ಲೆ ನಡೆಸಿ ಕ್ಯಾಮೆರಾಗಳನ್ನು ಹೊಡೆದು ಹಾಕಲಾಗಿದೆ. ಶ್ರೀಮಂತಿಕೆ ಮತ್ತು ಅಧಿಕಾರ ಇದೆ ಎನ್ನುವ ಕಾರಣಕ್ಕಾಗಿ ಏನು ಬೇಕಾದರೂ ಮಾಡಬಹುದೇ?........' ಎಂದು ಬರೆದಿದ್ದಾರೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳು ಸಿಗುತ್ತಾರೆ. ಆದರೆ, ಶಾಸಕರ ಪುತ್ರ ಮಾತ್ರ ಸಿಗುವುದಿಲ್ಲ. ಶ್ರೀಮಂತಿಕೆ ಮತ್ತು ಅಧಿಕಾರ ಎನ್ನುವುದು ಶಾಶ್ವತವಲ್ಲ. 'ಕನ್ನಡ ಪ್ರಭ' ಸಂಪಾದಕೀಯದ ಕೊನೆಯ ಭಾಗದಲ್ಲಿ, 'ಪ್ರಸ್ತುತ ಪ್ರಕರಣದಲ್ಲಿ ಸರ್ಕಾರ ಯಾವುದೇ ಕಾರಣಕ್ಕೂ ಹಸ್ತಕ್ಷೇಪ ಮಾಡದೇ ಆರೋಪಿಗೆ ತಕ್ಕ ಶಿಕ್ಷೆಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದು ಇತರ ಹುಂಬರಿಗೆ ಪಾಠವಾಗಬಲ್ಲ ಪ್ರಕರಣವಾಗಬೇಕು. ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ನಂಬಿಕೆಯನ್ನು ಬಲಪಡಿಸಬೇಕು." ಎಂದು ಹೇಳಿದ್ದಾರೆ.

ಇಂದಿನ ದಿನಪತ್ರಿಕೆಯೊಂದರಲ್ಲಿ ಮತ್ತೊಂದು ಪ್ರಕರಣದ ಬಗ್ಗೆ ವರದಿಯಾಗಿದೆ. ಕೆ.ಆರ್.ಪುರಂನಲ್ಲಿರುವ ಹೊರಮಾವಿನ ಹಿಂದಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರೊಬ್ಬರು ಬಿಬಿಎಂಪಿ ಕಛೇರಿಗೆ ಹೋಗಿ ಅಕ್ರಮವಾಗಿ ಯಾವುದೋ ಒಂದು ಕೆಲಸ ಮಾಡಿಕೊಡುವಂತೆ ಅಲ್ಲಿನ ಅಧಿಕಾರಿಯನ್ನು ಕೇಳಿಕೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿ ಅದಕ್ಕೆ ಒಪ್ಪಿಕೊಳ್ಳುವುದಿಲ್ಲ. ಆಗ ಕಾಂಗ್ರೆಸ್ ನಾಯಕರು ಆ ಅಧಿಕಾರಿಯನ್ನು ಪೆಟ್ರೋಲ್ ಹಾಕಿ ಸುಡುವುದಕ್ಕೆ ಹೋಗಿದ್ದಾರೆ. ಇದು ಈ ಸರ್ಕಾರಕ್ಕೆ ಶೋಭೆ ತರುತ್ತದೆಯೇ? ಇಂತಹ ಪ್ರಕರಣಗಳನ್ನು ನೋಡುತ್ತಿದ್ದರೆ, ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಇದ್ದಾರೆಂದು ಅನಿಸುತ್ತದೆಯೇ?

**ಶ್ರೀ ರಾಮಲಿಂಗಾ ರೆಡ್ಡಿ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾನು ಅವರ ಎದುರಿಗೇ ಕುಳಿತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ನನ್ನ ಎದುರಿಗೇ ಗುಂಡು ಕಲ್ಲಿನ ರೀತಿ ಕುಳಿತಿದ್ದಾರೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಇಂತಹ ಪ್ರಕರಣಗಳು ಇವರಿಗೆ ಶೋಭೆ ತರುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಹಲ್ಲೆಗೊಳಗಾಗಿರುವ ವಿದ್ವತ್‌ನ ತಂದೆತಾಯಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳದಲ್ಲಿ ಇವರು ಇದ್ದಿದ್ದರೆ ಏನಾಗುತ್ತಿತ್ತು ಎನ್ನುವುದನ್ನು ಅವರು ಊಹಿಸಿಕೊಳ್ಳಬೇಕಾಗುತ್ತದೆ. ಶಾಸಕರ ಪುತ್ರನಿಂದ ಹಲ್ಲೆಗೊಳಗಾಗಿರುವ ವಿದ್ವತ್‌ನ ಮುಖ ಬಾತು ಹೋಗಿದೆ. ಇವರ ಮಗನಿಗೇ ಆ ರೀತಿ ಆಗಿದ್ದರೆ, 'ನಿಮ್ಮ ಎದುರಿಗೇ ಕುಳಿತಿದ್ದೇನೆ' ಎಂದು ಹೇಳುತ್ತಿದ್ದರೇ? ಆ ಮಾತುಗಳನ್ನು ಹೇಳುವುದಕ್ಕೆ ಇವರಿಗೆ ನಾಚಿಕೆಯಾಗುವುದಿಲ್ಲವೇ? ಒಬ್ಬ ಗೃಹ ಮಂತ್ರಿಯಾಗಿ, 'ಕರ್ನಾಟಕ ರಾಜ್ಯದಲ್ಲಿ ಯಾರು ಈ ರೀತಿ ಗೂಂಡಾಗಿರಿ ಮಾಡುತ್ತಾರೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿ, ಆರೋಪಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಅವರು ಅಮಾಯಕರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಡಲು ಹೋದಂತಹ ವೀರಣ್ಣ ಹಾಲೇಗೌಡರು ಮತ್ತು ಡಿ.ಎಸ್.ಎಸ್.ನ ಕಾರ್ಯಕರ್ತರ ಮೇಲೆ ಅಲ್ಲಿನ ಜಿಲ್ಲಾಧಿಕಾರಿಯವರು, 'ಮುಖ್ಯಮಂತ್ರಿಗಳ ಬಳಿ ಹೋಗಿ ಮನವಿ ಕೊಡುತ್ತೀರಾ?' ಎಂದು ದರ್ಪ ತೋರಿಸಿದ್ದಾರೆ. ಇಂತಹ ಪ್ರಕರಣಗಳನ್ನು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನಾವುಗಳು ಖಂಡಿತವಾಗಿಯೂ ನೋಡಿರಲಿಲ್ಲ. ಮೊಹ್ಮದ್ ನಲ್ಪಾಡ್ ವಿರುದ್ಧ ಕೊಲೆ ಯತ್ನ ಆರೋಪದ ಬೆನ್ನಲೇ ಶಾಸಕರ ಪುತ್ರನಿಂದ ಹಲ್ಲೆಗೊಳಗಾಗಿರುವ ವ್ಯಕ್ತಿಯ ಮೇಲೆ ಆರೋಪಿ ಅರುಣ್‌ಬಾಬು 'ನಾನು ನನ್ನ ಸ್ನೇಹಿತರು ಯು.ಬಿ. ಸಿಟಿ ಹೋಟೆಲ್‌ಗೆ ಹೋಗಿದ್ದಾಗ, ಆತ ಕಾಲು ಚಾಚಿಕೊಂಡು ಕುಳಿತಿದ್ದು, ನಂತರ ಆತನೇ ಕೆಳಗೆ ಬಿದ್ದು ಮುಖಕ್ಕೆ ಗಾಯ ಮಾಡಿಕೊಂಡಿದ್ದಾನೆ.' ಎಂದು ದೂರನ್ನು ನೀಡಿರುತ್ತಾನೆ. ಪಾಪ, ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳು ವಿದ್ವತ್‌ನ ಮೇಲೆ ಐಪಿಸಿ ಸೆಕ್ಷನ್ 341, 323 ಮತ್ತು 504ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಇದಕ್ಕಿಂತ ನಾಚಿಕೆಯ ಸಂಗತಿ ಬೇರೇನಿದೆ?

**Sri K.B.SHANAPPA:-** Everybody is aware of what is happening in this issue.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಏನನ್ನು ಮುಗಿಸಬೇಕೆಂದು ಅವರು ಹೇಳಬೇಕು. ಇಂತಹ ಪ್ರಕರಣಗಳು ನಡೆಯುತ್ತಿದ್ದರು ಏನು ಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಸನ್ಮಾನ್ಯ ಸಭಾಪತಿಯವರೇ, ಹಲ್ಲೆಗೊಳಗಾಗಿರುವ ವಿದ್ವತ್‌ನ ಮುಖ ಮತ್ತು ದೇಹ ಬಾತುಕೊಂಡಿದೆ. ಅದನ್ನು ನೋಡಿಯೂ ಸಹ ಪೊಲೀಸರು ಆತನ ಮೇಲೆ ಪ್ರಕರಣವನ್ನು ದಾಖಲು ಮಾಡಿದ್ದಾರೆಂದರೆ, what is going on? The Government should not give chance for such incidences.

**ಶ್ರೀ ಎಂ.ಆರ್.ಸೀತಾರಾಂ:-** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯಡಿಯಲ್ಲಿ ನೀಡಿರುವ ವಿಷಯದ ಬಗ್ಗೆ ಪೂರ್ವಭಾವಿಯಾಗಿ 5-8 ನಿಮಿಷಗಳ ಕಾಲ ಮಾತನಾಡಿ ಮುಗಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಸಮಯವನ್ನು ನಿಗದಿ ಮಾಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸಿದ ಮೇಲೆ ಸರ್ಕಾರದ ಪರವಾಗಿ ಉತ್ತರವನ್ನು ನೀಡಲು ಮಾನ್ಯ ಗೃಹ ಸಚಿವರು ಸಿದ್ಧರಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಂದುವರೆಸಲಿ. ಅವರು ಮಾತನಾಡುವುದಕ್ಕೆ ತಾವು ಅವಕಾಶವನ್ನು ನೀಡಿ.

**ಶ್ರೀ ಕೆ.ಬಿ.ಶಾಣಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಹೊಡೆತ ತಿಂದಿರುವವನ ಮೇಲೆ ಪ್ರಕರಣವನ್ನು ದಾಖಲು ಮಾಡುತ್ತಾರೆಂದರೆ ಇದರ ಅರ್ಥವೇನು?

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಗೃಹ ಸಚಿವರಾಗಿರುವ ಮಾನ್ಯ ರಾಮಲಿಂಗಾ ರೆಡ್ಡಿಯವರು ಇತ್ತೀಚೆಗೆ, 'ಎರಡು ವರ್ಷಗಳ ಹಿಂದೆ ನನ್ನ ಕೈಗೆ ಗೃಹ ಖಾತೆ ಸಿಕ್ಕಿದ್ದರೆ ಅದರ ಮಾತೇ ಬೇರೆಯಾಗುತ್ತಿತ್ತು' ಎನ್ನುವ ಮಾತುಗಳನ್ನು ಹೇಳಿದ್ದರು. ನಾನು ಹಿಂದಿನ ಗೃಹ ಸಚಿವರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಮಾನ್ಯ ರಾಮಲಿಂಗಾ ರೆಡ್ಡಿಯವರ ಕೈಯಲ್ಲಿಯೇ ಗೃಹ ಖಾತೆ ಇದೆ. ಏನು ಮಾಡಿದ್ದಾರೆ? ಇವರಿಗಿಂತ ಹಿಂದಿನ ಗೃಹ ಸಚಿವರೇ ಉತ್ತಮವಾಗಿದ್ದರು ಎನ್ನುವುದು ನನ್ನ ಭಾವನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)ಃ–** ಸನ್ಮಾನ್ಯ ಸಭಾಪತಿಯವರೇ, ಏನು ಮಾಡಿದ್ದಾರೆಂದು ಹೇಳುವುದಕ್ಕೆ ಮಾನ್ಯ ಗೃಹ ಸಚಿವರಿಗೆ ಅವಕಾಶವನ್ನು ಕೊಡದೇ, ಏನು ಮಾಡಿದ್ದಾರೆಂದು ಕೇಳಿದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಅವರು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕು. ಅವರ ಮಗನಿಗೇ ಈ ರೀತಿ ಆಗಿದ್ದರೆ ಅವರು ಹೀಗೆ ಮಾತನಾಡುತ್ತಿದ್ದರೇ? ಅವರು ಮನುಷ್ಯರೇ?

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂಃ–** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಮೇಲಿನ ಪೂರ್ವಭಾವಿ ಪ್ರಸ್ತಾವನೆಯನ್ನು 5 ರಿಂದ 8 ನಿಮಿಷಗಳೊಳಗೆ ಮುಗಿಸಬೇಕೆಂದು ಹೇಳಿದ್ದೀರಿ. ಅಷ್ಟರೊಳಗೆ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸಲಿ. ಸುಮ್ಮನೆ ಬೆಳೆಸಿಕೊಂಡು ಹೋಗುವುದು ಬೇಡ. ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವವಾಗಿರುವ ವಿಷಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ, ಅವರು 5 ನಿಮಿಷಗಳಲ್ಲ 50 ನಿಮಿಷಗಳವರೆಗೆ ಮಾತನಾಡಲಿ ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಭ್ಯಂತರವೇನು ಇಲ್ಲ. ಈ ರಾಜ್ಯದಲ್ಲಿ ಕಾಯಿದೆ ಕಾನೂನು ಎನ್ನುವುದು ಇಲ್ಲವೇ? ಏನು ಬೇಕಾದರೂ ನಡೆಯಬಹುದೇ? ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ದಯಮಾಡಿ ತಾವು ಸಮಯ ನಿಗದಿಗೊಳಿಸುವುದು ಬೇಡ ಎನ್ನುವುದು ನನ್ನ ಮನವಿಯಾಗಿದೆ. ಇದು ರಾಜ್ಯದ ಜನತೆಯ ರಕ್ಷಣೆಯ ವಿಚಾರವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ, ಟೀಕೆ ಟಿಪ್ಪಣಿಗಳನ್ನು ಮಾಡಲಿ, ಅದಕ್ಕೆ ಮಾನ್ಯ ಗೃಹ ಸಚಿವರು ಉತ್ತರವನ್ನು ನೀಡಲಿ. ಅದನ್ನು ಬಿಟ್ಟು ಸರ್ಕಾರದ ಮುಖ್ಯ ಸಚೇತಕರು ಏತಕ್ಕೋಸ್ಕರ ಎದ್ದು ನಿಂತು ಮಾತನಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಿದ್ದಾರೆ ಎನ್ನುವುದನ್ನು ಅವರು ಕೂತು ಕೇಳಬೇಕಾಗಿದೆ. ನಾವು ಯಾರೂ ವೈಯಕ್ತಿಕವಾಗಿ ಮಾತನಾಡುವುದಿಲ್ಲ. ಈ ರೀತಿ ಅವರು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಈ ಮನೆಯ ಸದಸ್ಯನಾಗಿದ್ದೇನೆ. ಅವರು ಏನೇನೋ ಮಾತನಾಡುತ್ತಿದ್ದರೆ ಅದನ್ನು ಸುಮ್ಮನೆ ಕುಳಿತು ಕೇಳುವುದಕ್ಕೆ ನಾನು ಸದಸ್ಯನಾಗಿಲ್ಲ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮಹತ್ವವಾಗಿರುವ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿರುವಾಗ ಇವರು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ಸರ್ಕಾರದ ಪರವಾಗಿ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಸಭಾ ನಾಯಕರು ಮತ್ತು ಮಾನ್ಯ ಗೃಹ ಸಚಿವರು ಸದನದಲ್ಲಿ ಇದ್ದಾರೆ. ಅವರು ಉತ್ತರ ಕೊಡುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂಃ–** ಸನ್ಮಾನ್ಯ ಸಭಾಪತಿಯವರೇ, ಅವರು ಪೂರ್ವಭಾವಿ ಪ್ರಸ್ತಾವವನ್ನು ಮಾಡಲಿ. ನಂತರ ಮಾನ್ಯ ಗೃಹ ಸಚಿವರು ಉತ್ತರವನ್ನು ಹೇಳುತ್ತಾರೆ.

**ಸಭಾಪತಿಯವರುಃ–** ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆ ಬಂದ ಕೂಡಲೇ ನಾನು ಅದರ ಬಗ್ಗೆ ಚರ್ಚೆ ಮಾಡಿ ವಿಮರ್ಶೆ ಮಾಡಿ, a book titled '***Practice and Procedure of Parliament'*** authored by ***'Kaul and Shakdher'*** ನ್ನು refer ಮಾಡಿ, ನಾನು ಒಂದು ಅಭಿಪ್ರಾಯಕ್ಕೆ ಬಂದಿದ್ದೇನೆ. ಇದೊಂದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಈ ವಿಚಾರವನ್ನು ನಿಲುವಳಿ ಸೂಚನೆಯಡಿ ಚರ್ಚೆ ಮಾಡಲು ಅವಕಾಶವನ್ನು ನೀಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರು ಸಹಿ ಮಾಡಿ ಕೊಟ್ಟಿದ್ದಾರೆ. ಈ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿಯೇ ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸದನ ಪ್ರಾರಂಭವಾದ ಕೂಡಲೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡಲು 5 ರಿಂದ 8 ನಿಮಿಷಗಳ ಅವಕಾಶವನ್ನು ಕೊಟ್ಟು ಸರ್ಕಾರ ಯಾವ ರೀತಿ ಉತ್ತರ ಕೊಡುತ್ತದೆ ಎನ್ನುವುದನ್ನು ನೋಡಿಕೊಂಡು ಮುಂದುವರೆಯುವಂತಹ ಪದ್ಧತಿಯನ್ನು ನಮ್ಮ ಸದನ ಅನುಸರಿಸಿಕೊಂಡು ಬಂದಿದೆ. ಸದರಿ ವಿಚಾರದ ಬಗ್ಗೆ ಪೂರ್ವಭಾವಿ ಪ್ರಸ್ತಾವ ಮಾಡುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈಗ ಅವಕಾಶವನ್ನು ನೀಡಿದ್ದೇನೆ. ಅವರ ಕಾಲಾವಕಾಶ ಮುಕ್ತಾಯಗೊಂಡಿದೆ. ಇನ್ನೊಂದೆರಡು ನಿಮಿಷಗಳಲ್ಲಿ ಅವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದ ನಂತರ ಸರ್ಕಾರ ಏನು ಹೇಳುತ್ತದೆ ಎನ್ನುವುದನ್ನು ನೋಡೋಣ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದಂತೆ ಇದೊಂದು ಗಂಭೀರವಾಗಿರುವ ವಿಚಾರವಾಗಿದೆ. ತಾವುಗಳೆಲ್ಲರೂ ಒಪ್ಪಿ ಇದರ ಮೇಲೆ ಚರ್ಚೆ ನಡೆಯಬೇಕು ಎನ್ನುವುದಾದರೆ ಯಾವ ರೀತಿಯಲ್ಲಿ ಚರ್ಚೆಯನ್ನು ಮುಂದುವರೆಸಬೇಕು ಎನ್ನುವ ತೀರ್ಮಾನವನ್ನು ನಾನು ಮಾಡುತ್ತೇನೆ. ಯಾಕೆ ಈ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿಯೇ ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ವಾದವನ್ನು ಮಂಡಿಸಿದರೆ, ಸರ್ಕಾರ ನಿಲುವಳಿ ಸೂಚನೆಯಡಿಯಲ್ಲಿಯೇ ಚರ್ಚೆಗೆ ತೆಗೆದುಕೊಳ್ಳಲು ಒಪ್ಪಬಹುದು ಅಥವಾ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಬಹುದು. ಅದು ಸರ್ಕಾರದ privilege ಕೂಡ ಆಗಿದೆ. ಆದ್ದರಿಂದ ಸರ್ಕಾರ ಏನು ಉತ್ತರವನ್ನು ಹೇಳುತ್ತದೆ ಎನ್ನುವುದನ್ನು ಕೇಳೋಣ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸಿದ ಕೂಡಲೇ ಮಾನ್ಯ ಗೃಹ ಸಚಿವರಿಗೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ವಿದ್ವತ್ ಎನ್ನುವ ಹುಡುಗನ ಕಾಲು ಗಾಯಗೊಂಡಿದ್ದು, ಮಡಚಿಕೊಳ್ಳಲು ಸಾಧ್ಯವಿಲ್ಲವೆಂದು ಚಾಚಿಕೊಂಡಿದ್ದ ಕಾರಣ ಆತನ ಕಾಲನ್ನು ಎಡವಿ ಬಿದ್ದಿದ್ದಾರೆ. ಆ ಕಾರಣಕ್ಕಾಗಿಯೇ ಆತನನ್ನು ಸಿಕ್ಕಾಪಟ್ಟೇ ಹೊಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ ಮತ್ತು ಆತನ ಮೇಲೆಯೇ ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 'ಗಂಡ ಸತ್ತ ದುಃಖ ಒಂದು ಕಡೆ, ಮೊಂಡು ಕತ್ತಿ ನೋವು ಒಂದು ಕಡೆ' ಎನ್ನುವ ಗಾದೆ ಮಾತಿದೆ. ಹಿಂದೆ ಗಂಡ ಸತ್ತ ಹೆಣ್ಣು ಮಗಳಿಗೆ ಕೇಶ ಮುಂಡನ ಮಾಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಮೊಂಡು ಕತ್ತಿಯನ್ನು ಬಳಸಲಾಗುತ್ತಿತ್ತು. ಗಂಡ ಸತ್ತಿರುವ ನೋವಿಗಿಂತ ಮೊಂಡು ಕತ್ತಿಯನ್ನು ಬಳಸಿ ಕೂದಲು ತೆಗೆಯುವ ಕ್ರಿಯೆಯೇ ಹೆಚ್ಚು ನೋವನ್ನು ನೀಡುತ್ತಿತ್ತು. ಈ ಗಾದೆ ಮಾತಿನಂತೆ ವಿದ್ವತ್ ಹಲ್ಲೆಗೊಳಗಾಗಿ ನೋವನ್ನು ಅನುಭವಿಸುತ್ತಾ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಆತನ ಮೇಲೆ ಕೇಸ್‌ಗಳನ್ನು ದಾಖಲು ಮಾಡಲಾಗಿದೆ. ಇದಕ್ಕೆ ಬದಲಾಗಿ, ಆತನಿಗೆ ಸಾಂತ್ವನ ಹೇಳಿ, ' ನಿನ್ನ ಪರವಾಗಿ ನಾವಿದ್ದೇವೆ. ಯಾರು ಗೂಂಡಾಗಿರಿ ಮಾಡಿದ್ದಾರೆ ಅವರನ್ನು ನಾವು ಬಿಡುವುದಿಲ್ಲ. ಅವರ ತಂದೆ ಎಂ.ಎಲ್.ಎ. ಆಗಿರಬಹುದು, ಮುಖ್ಯಮಂತ್ರಿ ಅಥವಾ ಮಂತ್ರಿಯಾಗಿರಬಹುದು; ಗೂಂಡಾಗಿರಿಗೆ ನಮ್ಮ ಸರ್ಕಾರ ಅವಕಾಶ ಕೊಡುವುದಿಲ್ಲ' ಎನ್ನುವ ಮಾತನ್ನು ಹೇಳಿದ್ದರೆ ಆತನ ತಂದೆತಾಯಿಗೆ ಮತ್ತು ರಾಜ್ಯದ ಜನತೆಗೆ ಸಮಾಧಾನವಾಗುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಲಿಂಗಾ ರೆಡ್ಡಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ಆತನನ್ನು ಭೇಟಿ ಮಾಡಿ ಬಂದಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಆತನನ್ನು ಭೇಟಿ ಮಾಡುವುದಕ್ಕೆ ಹೋಗಿದ್ದೆ ಎಂದು ಅವರು ಹೇಳುತ್ತಿದ್ದಾರೆ. ಆದರೆ, ಆತನ ಮೇಲೆ ಪ್ರಕರಣಗಳನ್ನು ದಾಖಲು ಮಾಡಿರುವುದು ತಪ್ಪು ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ರಾಮಲಿಂಗಾ ರೆಡ್ಡಿಃ–** ಸನ್ಮಾನ್ಯ ಸಭಾಪತಿಯವರೇ, ಅವರು ಕೇಳುತ್ತಿರುವುದಕ್ಕೆ ನಾನು ಉತ್ತರ ನೀಡುತ್ತಿದ್ದೇನೆ. ವಿದ್ವತ್‌ನನ್ನು ಭೇಟಿ ಮಾಡುವುದಕ್ಕೆ ನಾನು ಆಸ್ಪತ್ರೆಗೆ ಹೋಗಿದ್ದೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಆತನನ್ನು ಭೇಟಿ ಮಾಡುವುದಕ್ಕೆ ಅವರು ಆಸ್ಪತ್ರೆಗೆ ಹೋಗಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಆತನ ಮೇಲೆ ಕೇಸ್ ದಾಖಲು ಮಾಡುತ್ತಿರುವುದು ತಪ್ಪು ಎಂದು ಹೇಳುತ್ತಿದ್ದೇನೆ. ಆತನ ಮೇಲೆ ಕೇಸ್ ಹಾಕಿರುವುದನ್ನು ಹೇಳುವುದಕ್ಕೆ ಅವರು ಆಸ್ಪತ್ರೆಗೆ ಹೋಗಿದ್ದರೇ?

**ಶ್ರೀ ರಾಮಲಿಂಗಾ ರೆಡ್ಡಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುವ ಸಂದರ್ಭದಲ್ಲಿ ಈ ಬಗ್ಗೆ ಹೇಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಗೃಹ ಮಂತ್ರಿಗಳಾಗಿ ಅವರು ಆ ಮೇಲೆ ಉತ್ತರವನ್ನು ನೀಡಲಿ. 'ಈ ಸರ್ಕಾರದ ಮೇಲೆ ಯಾವುದೇ ವಿಶ್ವಾಸವಿಲ್ಲ ಮತ್ತು ನಂಬಿಕೆಯಿಲ್ಲ ಆದ್ದರಿಂದ ವಿರೋಧ ಪಕ್ಷವಾಗಿ ನಾವು ನಮ್ಮ ಕೆಲಸವನ್ನು ಮಾಡುತ್ತೇವೆ' ಎಂದು ಹೇಳಿ ನನ್ನ ಮಾತುಗಳನ್ನು ಪ್ರಾರಂಭಿಸಿದ್ದೆ.

(ಮುಂದು)

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದಿದೆ)

ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರಗಳು ಈ ಸರ್ಕಾರದ ಅವಧಿಯಲ್ಲಾಗುತ್ತಿದೆ. ಇದು ಬಹಳ ಅನ್ಯಾಯ. ಶ್ರೀ ವಿದ್ವತ್ ಅವರ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಳ್ಳತ್ತದೆ ಎಂಬುದನ್ನು ತಿಳಿಸಬೇಕು. ಬಾಗಲಕೋಟೆಯಲ್ಲಿ ವೀರಣ್ಣ ಹಳೇಗೌಡರು, 9 ಜನ ಕುರುಬ ಸಮಾಜದವರು ಮತ್ತು 2 ಜನ ಡಿ.ಎಸ್.ಎಸ್., ಕಾರ್ಯಕರ್ತರುಗಳ ಮೇಲೆ ಯಾವುದೇ ಕೇಸ್ ಇಲ್ಲದೇ ಗಡಿಪಾರು ಮಾಡಿದ್ದಾರೆ. ಯಾರ ಮೇಲೆ ಯಾವುದೇ ಕೇಸ್‌ಗಳಿಲ್ಲವೋ ಅಂಥವರನ್ನು ಗಡಿಪಾರು ಮಾಡುತ್ತಾರೆ, ಯಾರು ಗೂಂಡಾಗಿರಿ ಮಾಡುತ್ತಾರೋ, ಯಾರು ಕೊಲೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೋ ಅವರಿಗೆ ರಾಜಾತಿಥ್ಯ, ಇದು ಈ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯುತ್ತಿರುವಂತಹ ವ್ಯವಸ್ಥೆಯಾಗಿದೆ. ಕೆ.ಆರ್.ಪುರಂನಲ್ಲಿ ನಡೆದ ಘಟನೆಯ ಬಗ್ಗೆಯೂ ಮಾನ್ಯ ಗೃಹಮಂತ್ರಿಗಳು ಉತ್ತರ ಕೊಡಬೇಕು. ಶ್ರೀ ವಿದ್ವತ್ ಅವರ ಮೇಲೆ ಆಗಿರುವಂತಹ ಹಲ್ಲೆಯ ಬಗ್ಗೆ ಸರ್ಕಾರ ಯಾವರೀತಿಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲುವು ಹೊಂದುತ್ತದೆ ಮತ್ತು ಮುಂದೆ ಇಂತಹ ಪ್ರಕರಣಗಳು ನಡೆಯದ ಹಾಗೆ ನೋಡಿಕೊಳ್ಳಲು ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು. ಮಾನ್ಯ ಸಭಾಪತಿಯವರೇ, 11 ಕೇಸ್‌ಗಳೇನು ಆತನ ಮೇಲಿದೆಯೋ ಅವೆಲ್ಲವನ್ನೂ quote ಮಾಡಿ, ಆತ ಜೈಲಿನಿಂದ ಹೊರಗೆ ಬಾರದ ಹಾಗೆ ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಬೇಕು. ಗೂಂಡಾಗಿರಿಯಂತಹ ಘಟನೆಗಳು ಇನ್ನು ಮುಂದೆ ಆಗದ ಹಾಗೆ ನೋಡಿಕೊಳ್ಳಬೇಕು. ಒಂದು ವೇಳೆ ಮತ್ತೆ ಇಂತಹ ಘಟನೆ ನಡೆದರೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಿಳಿಸಬೇಕು. ಈ ದಿಸೆಯಲ್ಲಿ ಸರ್ಕಾರ ಯಾವರೀತಿ ಹೇಳಿಕೆ ಕೊಡುತ್ತದೆ ಎಂಬುದನ್ನು ಗಮನಿಸಿ ನಾವು ನಮ್ಮ ಮುಂದಿನ ಹೆಜ್ಜೆ ಇಡುತ್ತೇವೆ.

**ಸಭಾಪತಿಯವರು**:- ಮಾನ್ಯ ಹೊರಟ್ಟಿಯವರೆ, ಈ ಕುರಿತು ನೀವು ಮಾತನಾಡಬಯಸುತ್ತಿದ್ದೀರಿ. ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಇದು ಪ್ರಿಲಿಮಿನರಿ ಸಬ್‌ಮಿಷನ್ ಆಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಏನು ಉತ್ತರ ಕೊಡುತ್ತದೆ ಎಂಬುದನ್ನು ನೋಡಿ ಈ ವಿಷಯವನ್ನು ಯಾವ ನಿಯಮದ ಅಡಿ ಚರ್ಚೆಗೆ ತೆಗೆದುಕೊಳ್ಳಬೇಕು, ನಿಲುವಳಿ ಸೂಚನೆ ಅಡಿಯಲ್ಲೇ ಚರ್ಚೆಗೆ ಅವಕಾಶ ಕೊಡಬೇಕೇ ಅಥವಾ ಚರ್ಚೆಗೆ ತೆಗೆದುಕೊಳ್ಳಬಾರದೋ ಎಂಬ ಬಗ್ಗೆ ತೀರ್ಮಾನ ಮಾಡೋಣ. ಈ ವಿಷಯ ಗಾಂಭೀರ್ಯತೆಯಿಂದ ಕೂಡಿರುವ ಹಿನ್ನೆಲೆಯಲ್ಲಿ ಮಾನ್ಯ ಹೊರಟ್ಟಿಯವರೂ ಸಹ ಮಾತನಾಡಬಯಸುತ್ತಿದ್ದಾರೆ. ಸಾಮಾನ್ಯವಾಗಿ ಅವರು, ಇಂತಹ ಸಂದರ್ಭ ಬಂದಾಗ ಸರ್ಕಾರ ನ್ಯಾಯಯುತ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿ ಸುಮ್ಮನಾಗುತ್ತಾರೆ. ಆದರೆ ಇವತ್ತು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅವರು agitate ಆಗಿದ್ದಾರೆ, ಅವರ ಮನಸ್ಸಿನಲ್ಲೂ ನೋವಿದೆ. ಮಾನ್ಯ ಹೊರಟ್ಟಿಯವರೇ ಈಗ ತಾವು 3-4 ನಿಮಿಷ ಮಾತನಾಡಿ. ಒಂದುವೇಳೆ ಈ ಚರ್ಚೆ ಹೀಗೆಯೇ ಮುಂದುವರೆದರೆ ಆಗ ತಮಗೆ ಪೂರ್ಣ ಪ್ರಮಾಣದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾತನಾಡಿದ್ದಾರೋ ಅದಕ್ಕೆ ನಾನು ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇನೆ. ಮಾನ್ಯ ಗೃಹ ಮಂತ್ರಿಗಳು ಹಲ್ಲೆಗೊಳಗಾದ ವ್ಯಕ್ತಿಯನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿ ಮಾತನಾಡಿ ಬಂದಿದ್ದಾರೆ. ಮಾನ್ಯ ಸಭಾಪತಿಯವರೇ, ಈ ಘಟನೆ ಆದ ತಕ್ಷಣ ಸಂಬಂಧಪಟ್ಟವರನ್ನು ಬಂಧಿಸಿದ್ದರೆ ಈ ಪರಿಸ್ಥಿತಿ ಇನ್ನೂ ಸುಧಾರಿಸುತ್ತಿತ್ತು. ಆಸ್ಪತ್ರೆಗೆ ಹೋಗಿ ಆ ಹುಡುಗನನ್ನು ಹೊಡೆದಿದ್ದಾರೆ. ಆದರೆ, ಆತ ಬಿದ್ದು ಈ ರೀತಿ ಮಾಡಿಕೊಂಡಿದ್ದಾನೆ ಎಂದು ಸರ್ಕಾರ ಕೇಸ್ ದಾಖಲಿಸಿದೆ. ಆ ಹುಡುಗನ ಮುಖ ನೋಡಿದರೆ, ಕಣ್ಣು ತೆಗೆಯುವುದಕ್ಕೆ ಆಗದೇ ಇರುವುದು ಮತ್ತು ಮುಖ ಬಾತು ಹೋಗಿರುವುದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಂಡುಬರುತ್ತದೆ. ನಮ್ಮ ಮಕ್ಕಳಿಗೆ ಹಾಗಾದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು ಎಂದು ಯೋಚನೆ ಮಾಡಬೇಕು.

ಸರ್ಕಾರಕ್ಕೆ ನನ್ನದೊಂದು ಮನವಿ ಇದೆ. ಆ ಫರ್ಜಿ ಕೆಫೆ ಏನಿದೆ, ಅದು ಹಗಲೆಲ್ಲಾ ನಡೆಯುತ್ತಿರುತ್ತದೆ, ಮೇಲಿಂದ ಮೇಲೆ ಇಂತಹ ಪ್ರಕರಣಗಳು ನಡೆಯುತ್ತಿರುತ್ತದೆ. ಅಲ್ಲಿಗೆ ಕೋಟ್ಯಾಧೀಶರು ಹೋಗುತ್ತಾರೆಯೇ ಹೊರತು ಸಾಮಾನ್ಯ ಜನ ಹೋಗುವುದಿಲ್ಲ. ಅಲ್ಲಿಗೆ ಹೋಗುವವರು, ಕುಡಿಯುವುದು, ತಿನ್ನುವುದು, ಗಾಂಜಾ ಸೇದುವುದು, ಹೊಡೆದಾಡುವುದು-ಬಡಿದಾಡುವುದು ಮಾಡುತ್ತಲೇ ಇರುತ್ತಾರೆ. ಇಂಥದ್ದು ಅಲ್ಲಿ ಯಾವಾಗಲೂ ನಡೆಯುತ್ತಲೇ ಇರುತ್ತದೆ. ಇಂತಹ ಪ್ರಕರಣಗಳು ನಡೆದಾಗ ಆ ಪ್ರಕರಣಗಳಲ್ಲಿ, ಬಹುತೇಕ ರಾಜಕಾರಣಿಗಳ ಮಕ್ಕಳು ಮತ್ತು ದೊಡ್ಡ ದೊಡ್ಡವರ ಮಕ್ಕಳು ಭಾಗಿಯಾಗಿರುವ ವಿಚಾರ ಮಾಧ್ಯಮಗಳಲ್ಲಿ ಬರುವುದನ್ನು ನಾವು ನೋಡಿದ್ದೇವೆ. ಸರ್ಕಾರ ಈ ಹೋಟೆಲ್‌ನ ಬಗ್ಗೆ ಒಂದು ತೀರ್ಮಾನ ಮಾಡಬೇಕು. ಮಾನ್ಯ ಗೃಹ ಮಂತ್ರಿಗಳು, ಇಬ್ಬರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ ಮತ್ತು ಒಬ್ಬನನ್ನು ವರ್ಗಾವಣೆ ಮಾಡಿದ್ದೇವೆ ಎಂದು ಹೇಳಿದರು. ಇದರಲ್ಲಿ ಅಧಿಕಾರಿಗಳ ತಪ್ಪೇನಿದೆ? ಯಾರೇ ಅಧಿಕಾರಿಗಳಾಗಲಿ ಅವರು ಸರ್ಕಾರದ ಸೂಚನೆಗಳಿಗೆ ಕಾಯುತ್ತಿರುತ್ತಾರೆ. ಸರ್ಕಾರ, ಎಷ್ಟೇ ದೊಡ್ಡವರ ಮಕ್ಕಳಿರಬಹುದು, ತಕ್ಷಣ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಿ ಎಂದು ಹೇಳಬೇಕು. ಮಾನ್ಯ ಹ್ಯಾರಿಸ್‌ರವರು ಒಂದು ಟಿವಿ ಮಾಧ್ಯಮದಲ್ಲಿ ಮಾತನಾಡುತ್ತಿದ್ದುದನ್ನು ನಾನು ನೋಡಿದೆ. ಅವರು, ನಾನು ಕ್ಷಮೆ ಕೇಳುತ್ತೇನೆ, ನನ್ನ ಮಗ ತಪ್ಪು ಮಾಡಿದ್ದಾನೆ, ಕಾನೂನು ಎಲ್ಲರಿಗೂ ಒಂದೇ ಎಂದು ಹೇಳಿದರು. ನಾನು ಅವರನ್ನು ಶ್ಲಾಘಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾಧ್ಯಮದವರು ರಾಜ್ಯದಲ್ಲಾಗುವ ಅಕ್ರಮ ಮತ್ತು ದೌರ್ಜನ್ಯಗಳನ್ನು ಹೇಳುವ ಕೆಲಸ ಮಾಡುತ್ತಾರೆ. ವಿಜಯವಾಣಿ ಪತ್ರಿಕೆ ಮುಖಪುಟದಲ್ಲಿ ಒಂದು ವರದಿ ಬಂದಿದೆ. ಅದರಲ್ಲಿ *“ಎಳೆದೊಯ್ದು ಹಲ್ಲೆ ನಡೆಸಿದರು” ಎಂಬ ಶೀರ್ಷಿಕೆ ಅಡಿಯಲ್ಲಿ “ ಆರೋಪಿಗಳಿದ್ದ ಪೋಲೀಸ್ ವ್ಯಾನ್ ಹೊರಡುತ್ತಿದ್ದಂತೆ ನಲಪಾಡ್‌ಗೆ ಜೈಕಾರ ಕೂಗುತ್ತಿದ್ದ ಬೆಂಬಲಿಗರು ಖಾಸಗಿ ಸುದ್ದಿ ವಾಹಿನಿ ವರದಿಗಾರ ಕಾರ್ತಿಕ್, ಕ್ಯಾಮೆರಾ ಮ್ಯಾನ್ ಗಣೇಶ್ ಮತ್ತು ಬಿಎನ್‌ಪಿ ಫೋಟೋಗ್ರಾಫರ್ ಅಕ್ರಮ್ ಎಂಬುವವರ ಮೇಲೆ ಮುಗಿಬಿದ್ದು ಹಲ್ಲೆ ನಡೆಸಿದರು. ಆ ನಂತರ ಪೋಲೀಸ್ ಠಾಣೆ ಎದುರಿಂದ ಮಾಧ್ಯಮ ಪ್ರತಿನಿಧಿಗಳನ್ನು ಕಬ್ಬನ್‌ಪಾರ್ಕ್ ಕಡೆಗೆ ಎಳೆದೊಯ್ದು ಬಾಲಭವನ ಮುಂಭಾಗ ಹಲ್ಲೆ ನಡೆಸಿದರು. ಪೋಲೀಸರು ರಕ್ಷಣೆಗೆ ಬಾರದೆ ಮೂಕ ಪ್ರೇಕ್ಷಕರಾಗಿದ್ದರು. ಕೊನೆಗೆ ಖಾಸಗಿ ಸುದ್ದಿ ವಾಹಿನಿಗಳ ಕ್ಯಾಮೆರಾಗಳನ್ನು ಕಂಡು ನಲಪಾಡ್ ಬೆಂಬಲಿಗರ ಗುಂಪು ಚದುರಿತು. ಕೊನೆಗೆ ಮಾಧ್ಯಮ ಪ್ರತಿನಿಧಿಗಳು ಒಟ್ಟಾಗಿ ಸೇರಿ ಒಬ್ಬ ಆರೋಪಿಯನ್ನು ಹಿಡಿದು ಪೋಲೀಸ್ ಠಾಣೆಗೆ ಕರೆದೊಯ್ದು ಒಪ್ಪಿಸಿದರು. ಈ ಸಂಬಂಧ ಖಾಸಗಿ ಸುದ್ದಿವಾಹಿನಿ ಪ್ರತಿನಿಧಿ ದೂರು ನೀಡಿದ್ದಾರೆ.”* ಎಂದು ಬಂದಿದೆ. ಪೋಲೀಸರು ಇಂತಹ ಸಂದರ್ಭಗಳಲ್ಲಿ ಏಕೆ ಸುಮ್ಮನೆ ನಿಲ್ಲುತ್ತಾರೆ? ಮಾನ್ಯ ಸಭಾಪತಿಯವರೇ, 1984ರಲ್ಲಿ ಹೊಸದಾಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸದಸ್ಯನಾಗಿ ಬಂದಿದ್ದೆ. 1985ರಲ್ಲಿ ಕೋಲಾರದಲ್ಲಿ ಗೋಲಿಬಾರ್ ಆದ ಒಂದು ಘಟನೆಯಾಯಿತು. ಆಗ ಎಲ್ಲರೂ, ಪೋಲೀಸರು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ, ಪೋಲೀಸರು ಹೊಡೆಯುತ್ತಾರೆ ಎಂದು ಮಾತನಾಡಿಕೊಂಡರು. ಪೋಲೀಸರು ಹೊಡೆದರೆ ಹೊಡೆದರು ಎಂದು ಹೇಳುತ್ತಾರೆ, ಸುಮ್ಮನೆ ನಿಂತಿದ್ದಾರೆ ಸುಮ್ಮನಿದ್ದರು ಎಂದು ಹೇಳುತ್ತಾರೆ ಎಂಬ ಚರ್ಚೆ ಆಗ ಬಂತು. ಪ್ರಸ್ತುತ ಪ್ರಕರಣದಲ್ಲಿ, ತಮ್ಮ ಮೇಲೆ ಏನಾದರೂ ಅಪವಾದ ಬರಬಹುದೇನೋ ಎನ್ನುವ ಕಾರಣದಿಂದ ಪೋಲೀಸರು ಸುಮ್ಮನೆ ನಿಂತಿದ್ದರೋ ಏನೋ ಗೊತ್ತಿಲ್ಲ. ಆದರೆ, ಯಾರು ಏನೇ ಹೇಳಿದರು ಪೋಲೀಸರು ತಮ್ಮ ಕರ್ತವ್ಯವನ್ನು ಮಾಡಲೇ ಬೇಕಾಗುತ್ತದೆ. ಮಾಧ್ಯಮ ಪ್ರತಿನಿಧಿಗಳನ್ನು ಎಳೆದುಕೊಂಡು ಹೋಗಿ ಬಾಲಭವನದ ಹತ್ತಿರ ಹಲ್ಲೆ ಮಾಡಿದ್ದಾರೆ. ಹೀಗೆ ಆಗುತ್ತಿದ್ದರೂ ಪೋಲೀಸರು ಸುಮ್ಮನೆ ನಿಂತಿರುವುದು ಟಿವಿಗಳಲ್ಲಿ ಬಂತು. ಪೋಲೀಸರಿಗೆ ತಮ್ಮ ಕರ್ತವ್ಯ ಮಾಡಲು ಸ್ವತಂತ್ರವಾಗಿ ಬಿಟ್ಟುಬಿಡಬೇಕು. ಪೋಲೀಸ್ ಇಲಾಖೆಯಲ್ಲಿ ಕೇವಲ ಕೆಟ್ಟ ಅಧಿಕಾರಿಗಳು ಮಾತ್ರ ಅಲ್ಲ, ಸಾಕಷ್ಟು ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ನಾವು ಅಂಥವರ ಎದೆಗುಂದಿಸುವ ಕೆಲಸ ಮಾಡಬಾರದು. ಮಾನ್ಯ ಸಭಾಪತಿಯವರೇ, ಇಂತಹ ಪ್ರಕರಣದಲ್ಲಿ ಆ ಮಹಮದ್‌ನನ್ನು ಪೋಲೀಸರು ಎಳೆದುಕೊಂಡು ಹೋದರೆ ಅವನಿಗೆ ಜೈಕಾರ ಕೂಗುತ್ತಾರೆ. ಹೀಗೆ ಕೂಗುವವರಲ್ಲಿ ಕಾಂಗ್ರೆಸ್ ಕಾರ್ಯಕರ್ತರಿರುತ್ತಾರೋ ಅಥವಾ ಬೇರೆಯವರಿರುತ್ತಾರೋ ಗೊತ್ತಿಲ್ಲ, ಆದರೆ ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಒಬ್ಬ ವ್ಯಕ್ತಿ ಹಲ್ಲೆಗೊಳಗಾಗಿ ಅರೆಪ್ರಜ್ಞಾವಸ್ಥೆಯ ಸ್ಥಿತಿಯಲ್ಲಿರುವಾಗ ಹಲ್ಲೆ ಮಾಡಿದ ವ್ಯಕ್ತಿಯ ಜೈಕಾರ ಹಾಕುವುದು ಎಷ್ಟರಮಟ್ಟಿಗೆ ಸರಿ? ಯಾರು ಈ ಕೃತ್ಯವನ್ನು ಮಾಡಿದ್ದಾರೋ ಅಂಥವರನ್ನು ಒದ್ದು ಒಳಗೆ ಹಾಕಬೇಕು. ಜೈಕಾರ ಹಾಕಿದರೆ ಏನು ಅರ್ಥ? ಹಲ್ಲೆಗೊಳಗಾದ ವ್ಯಕ್ತಿ ಸತ್ತು ಹೋದರೂ ಇವರು ಜೈಕಾರ ಹಾಕುತ್ತಾರೆಯೇ? ಇವರಿಗೆ ಮನುಷತ್ವ ಬೇಡವೇ? ಜೈಲಿಗೆ ಕರೆದುಕೊಂಡು ಹೋಗುವಾಗ ಜೈಕಾರ ಹಾಕುವಂತಹ ಅನಿಷ್ಟ ಪದ್ಧತಿಗಳು ರದ್ದಾಗಬೇಕು. ಯಾರು ತಪ್ಪಿತಸ್ಥರಿದ್ದಾರೋ ಅಂಥವರನ್ನು ಹಿಡಿದು ತಕ್ಕ ಶಾಸ್ತಿ ಮಾಡಬೇಕು. ಮಾನ್ಯ ಸಭಾಪತಿಯವರೇ, ಹಲ್ಲೆ ಮಾಡಿದವನ ಮೇಲೆ ಸೆಕ್ಷನ್ 307, ಐ.ಪಿ.ಸಿ., ಅಡಿಯಲ್ಲಿ ಕೇಸನ್ನು ಹಾಕಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ವತಃ ದೂರವಾಣಿ ಮೂಲಕ ಹೇಳಿದ್ದಾರೆ ಎನ್ನುವ ವಿಚಾರ ಟಿವಿಯಲ್ಲಿ ಬಂತು. ನಾನೂ ಎರಡು ಸಲ ನೋಡಿದ್ದೇನೆ. ಆದರೆ ಈ ನಿಟ್ಟಿನಲ್ಲಿ ಮಾನ್ಯ ಗೃಹ ಮಂತ್ರಿಗಳು ಏನು ಕ್ರಮ ಕೈಗೊಂಡಿದ್ದಾರೋ ಗೊತ್ತಿಲ್ಲ. ಶ್ರೀ ವಿದ್ವತ್ ಅವರ ಮೇಲೆ ಕೇಸ್ ಹಾಕಿರುವುದು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ಸರ್ಕಾರ ಹೇಳಬೇಕು. ದಯವಿಟ್ಟು ವಿಚಾರ ಮಾಡಿ. ಹಲ್ಲೆಗೊಳಗಾಗಿರುವ ವ್ಯಕ್ತಿಯ ಕಾಲು ಮುರಿದಿರುವ ವಿಡಿಯೋ ಟಿವಿಗಳಲ್ಲೇ ತೋರಿಸಿದ್ದಾರೆ. ಹೀಗಿರುವಾಗ ಆತನ ಮೇಲೆ ಕೇಸ್ ಹಾಕುವಂತಹ ಅವಶ್ಯಕತೆ ಏನಿದೆ? ಮಾನ್ಯ ಮುಖ್ಯಮಂತ್ರಿಗಳೇ ಸೆಕ್ಷನ್ 307, ಐ.ಪಿ.ಸಿ., ಅನ್ನು ಅನ್ವಯಿಸಬೇಕು ಎಂದು ಹೇಳಿದರೂ ಏಕೆ ಇದುವರೆಗೂ ಹಾಕಿಲ್ಲ? ಹಲ್ಲೆಗೊಳಗಾಗಿರುವ ಹುಡುಗ ಒಂದು ವೇಳೆ ಸತ್ತರೆ ಪರಿಸ್ಥಿತಿ ಏನಾಗುತ್ತದೆ ಎಂದು ಯೋಚನೆ ಮಾಡಬೇಕು. ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳದೇ ಹೋದರೆ ಈ ಕುರಿತು ಸಕಾರಾತ್ಮಕವಾಗಿ ಸ್ಪಂದಿಸುವ ಸರ್ಕಾರದ ಪ್ರಯತ್ನ ಹೊಳೆಯಲ್ಲಿ ಹುಣಸೆಹಣ್ಣು ತೊಳೆದ ಹಾಗೆ ಆಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಗೃಹ ಮಂತ್ರಿಗಳೇ ತಾವು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ. ಅದರ ಬಗ್ಗೆ ನಾವು dispute ಮಾಡುತ್ತಿಲ್ಲ. ನೀವು ಆ ಹುಡುಗನನ್ನು ನೋಡುವುದಕ್ಕೆ ಆಸ್ಪತ್ರೆಗೆ ಹೋಗಿದ್ದನ್ನು ನಾನು ಟಿವಿಯಲ್ಲಿ ನೋಡಿದೆ. ಆ ಹುಡುಗ ನಿಮ್ಮನ್ನು ನೋಡುವುದಕ್ಕೆ ಆಗಲಿಲ್ಲ. ಏಕೆಂದರೆ, ಕಣ್ಣಿನ ಸುತ್ತ ಊದುಕೊಂಡಿತ್ತು, ತುಟಿಗಳು ಊದಿಕೊಂಡಿದ್ದವು. ಮುಖ ಪೂರ್ತಿ ಬಾತು ಹೋಗಿತ್ತು. ಇದರಲ್ಲಿ ರಾಜಕಾರಣ ಬೆರೆಸುವುದು ಬೇಡ. ನಾವಂತೂ ಖಂಡಿತಾ ರಾಜಕಾರಣ ಬೆರೆಸುತ್ತಿಲ್ಲ. ನಮ್ಮಲ್ಲೂ ಇರುತ್ತಾರೆ, ನಿಮ್ಮಲ್ಲೂ ಇರುತ್ತಾರೆ, ಬಿಜೆಪಿಯವರಲ್ಲೂ ಇರುತ್ತಾರೆ, ಆದರೆ . . .

**ಸಭಾಪತಿಯವರು:–** ಚರ್ಚೆ ಮಾಡಬೇಡಿ. ನೀವು ಇನ್ನೂ ಮಾತನಾಡಿದರೆ ನಾನು ಚರ್ಚೆಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ದಯವಿಟ್ಟು ಕುಳಿತುಕೊಳ್ಳಿ. ಸರ್ಕಾರ ಉತ್ತರ ಕೊಡಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಮಾನ್ಯ ಸಭಾಪತಿಯವರೇ, ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ವಿಚಾರವಾಗಿದೆ. ಇಂತಹ ಪ್ರಕರಣಗಳು ನಡೆಯುತ್ತಿದ್ದರೆ ಮುಗ್ಧ ಜನ ಸತ್ಯಾನಾಶ್ ಆಗುತ್ತಾರೆ. ಆದ್ದರಿಂದ ಈ ವಿಚಾರವಾಗಿ ಎಲ್ಲರೂ ಮಾತನಾಡುವ ಅವಶ್ಯಕತೆ ಇದ್ದು, ಸೂಕ್ತ ನಿಯಮದಡಿ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ:–**ಮಾನ್ಯ ಸಭಾಪತಿಯವರೇ, ಇದೊಂದು ವಿಶೇಷ ಪ್ರಕರಣವಾಗಿದೆ. ಆದ್ದರಿಂದ ಇದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳೋಣ.

**ಸಭಾಪತಿಯವರು:–** ಸರ್ಕಾರ ಏನು ಹೇಳುತ್ತದೆ ಅದನ್ನು ಮೊದಲು ಕೇಳೋಣ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಬಿ.ಶಾಣಪ್ಪ:–**ನಲಪಾಡ್ ಎಂತಹ ಮನುಷ್ಯ ಎಂಬುದರ ಬಗ್ಗೆ ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ವರದಿ ಇದೆ. ಯಾವ ಯಾವ ಅಪರಾಧಗಳನ್ನು ಮಾಡಿದರೆ ಯಾವ ಸೆಕ್ಷೆನ್ ಅಡಿ ಕೇಸ್ ಹಾಕಬೇಕು, ಯಾವ ಕ್ರಿಮಿನಲ್ ಅಪರಾಧ ಮಾಡಿದರೆ ಯಾವ ನಿಯಮದ ಅಡಿ ಗಡಿಪಾರು ಮಾಡಬೇಕು, ಯಾವ ಅಪರಾಧದ ಹಿನ್ನೆಲೆಯಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಗಡಿಪಾರು ಮಾಡಬೇಕು ಅಥವಾ ರಾಜ್ಯದಿಂದ ಗಡಿಪಾರು ಮಾಡಬೇಕು ಎಂಬ ಬಗ್ಗೆ ಕಾನೂನುಗಳಿವೆ. ಹಲ್ಲೆ ಮಾಡಿದವನ ಮೇಲೆ a criminal case has been filed under Sections 307, 326, 341, 504, 143, 146, 147, I.P.C., against this gentleman.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

***ಸಭಾಪತಿಯವರು:–*** ನಾನು ಚರ್ಚೆಗೆ ಇನ್ನೂ ಅವಕಾಶ ಕೊಟ್ಟಿಲ್ಲ. ಅವಕಾಶ ಕೊಟ್ಟಾಗ ತಾವು ವಿವರವಾಗಿ ಮಾತನಾಡಿ. ಚರ್ಚೆಗೆ ಅವಕಾಶವಾಗುವುದಾದರೆ ಎಲ್ಲಾ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, he is a criminal gentleman. It is a fit case to exterminate him. ಇದನ್ನು ಬಿಟ್ಟು ಯಾರು ಹೊಡೆಸಿಕೊಂಡಿದ್ದಾನೋ ಅಂಥವನ ಮೇಲೆ ನೀವು ಕೇಸ್ ಹಾಕಿದ್ದೀರಿ. ಈ ರೀತಿ ಆಗಿರುವುದನ್ನು ನಾನು ಮೊದಲನೆಯ ಸಲ ಕೇಳುತ್ತಿದ್ದೇನೆ.

(ಮುಂದು . . .)

122/20-2-2018/ಡಿಎಸ್-ಜಿಆರ್/11.30

ಶ್ರೀ ಕೆ.ಬಿ.ಶಾಣಪ್ಪ(ಮುಂದು):-

ಮಾನ್ಯ ರಾಮಲಿಂಗಾರೆಡ್ಡಿಯವರು ಒಳ್ಳೆಯ ಮನುಷ್ಯ. ಆದರೆ ಹೊಡೆಸಿಕೊಂಡವರ ಮೇಲೆ ಕೇಸ್ ಹಾಕುತ್ತಿದ್ದಾರೆ. ನಾವು ಅವನನ್ನು ನೋಡಿದ್ದೇವೆ, ಅವನು ಮೊದಲೇ ಸಾಯುವ ರೀತಿ ಆಗಿದ್ದಾನೆ. ಈ ತರಹ ಸರ್ಕಾರ ವ್ಯವಹಾರ ಮಾಡುವುದು ಸರಿಯಲ್ಲ.

**ಸಭಾಪತಿಯವರು:–** ನಿಯಮ 52ರ ಅಡಿಯಲ್ಲಿ ನೋಟಿಸ್‌ನ್ನು ಕೊಟ್ಟಿದ್ದಾರೆ. ಅದನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಬೇಕೋ ಬೇಡವೋ ಅಥವಾ ಚರ್ಚೆಯೇ ಬೇಡ ಎಂದು ಹೇಳುವ ಅಧಿಕಾರ ಸರ್ಕಾರಕ್ಕೆ ಇದೆ. ಪ್ರಾಸಂಗಿಕವಾಗಿ ಅವರು ಕೆಲವು ವಿಚಾರಗಳಿಗೆ ಉತ್ತರ ಕೊಡಬಹುದು.

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಈಗ ಉತ್ತರ ಕೊಡುವುದಕ್ಕೆ ತಯಾರಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ(ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಬಸವರಾಜ ಹೊರಟ್ಟಿಯವರು, ಹಿರಿಯ ಸದಸ್ಯರಾದ ಮಾನ್ಯ ಶಾಣಪ್ಪನವರು ಮಾತನಾಡಿದ್ದಾರೆ. ಈ ಘಟನೆ ದಿನಾಂಕ:17-2-2018 ರಂದು ರಾತ್ರಿ 10.00 ಗಂಟೆಗೆ ನಡೆದಿದೆ. ಯು.ಬಿ.ಸಿ.ಟಿಯಲ್ಲಿ Farzi cafe ಎನ್ನುವ ಹೋಟೆಲ್‌ನಲ್ಲಿ ನಡೆದಿದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ಈ ಹೋಟೆಲ್‌ಗೆ ಎಲ್ಲಾ ದೊಡ್ಡ ವ್ಯಕ್ತಿಗಳೇ ಹೋಗುತ್ತಾರೆ. ಅವತ್ತು ದೊಡ್ಡ ದೊಡ್ಡ ವ್ಯಕ್ತಿಗಳ ಮಕ್ಕಳು ಬಹಳ ಜನ ಇದ್ದರು. ಅವರ ಹೆಸರುಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಕಡಿಮೆ ಹಣದಲ್ಲಿ ಪಾರ್ಟಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಜಾಸ್ತಿ ಹಣ ಇರುವವರೇ ಹೋಗುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಹೆಸರು ಹೇಳಿ.

**ಶ್ರೀ ರಾಮಲಿಂಗಾರೆಡ್ಡಿ:-** ಹೆಸರು ಹೇಳಿ ಎಂದರೆ ನಿಮ್ಮ ಪಾರ್ಟಿಯಲ್ಲಿರುವವರ ಹೆಸರು ಬಂದುಬಿಡುತ್ತದೆ. ಅದಕ್ಕೆ ನಾನು ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ರೀತಿಯ ಬ್ಲ್ಯಾಕ್‌ಮೇಲ್ ಬೇಡ. ಯಾರ್‍ಯಾರು ಇದ್ದಾರೆ ಹೇಳಿ. ಯಾರ್‍ಯಾರು ಕ್ರಿಮಿನಲ್ಸ್ ಇದ್ದಾರೆ ಅವರೆಲ್ಲರೂ ಕ್ರಿಮಿನಲ್‌ಗಳೇ. ಆ ಪಾರ್ಟಿ, ಈ ಪಾರ್ಟಿ ಎನ್ನುವ ಪ್ರಶ್ನೆ ಬರುವುದಿಲ್ಲ. ತಪ್ಪೇನಿದೆ ಹೇಳಿ?

**ಶ್ರೀ ರಾಮಲಿಂಗಾರೆಡ್ಡಿ:-** ನಾನು ಹೇಳುವುದನ್ನು ಅರ್ಥ ಮಾಡಿಕೊಳ್ಳಿ.

**ಸಭಾಪತಿಯವರು:-** ಮಾನ್ಯ ಸಚಿವರು ಈಗ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಪ್ರತಿ ವಾಕ್ಯದಲ್ಲೂ ನಾವು ಮಧ್ಯೆ ಪ್ರವೇಶ ಮಾಡಿದರೆ ಚರ್ಚೆ ಮುಂದಕ್ಕೆ ಹೋಗುವುದೇ ಇಲ್ಲ. ಅವರು ಏನು ಹೇಳುತ್ತಾರೆ ಎಂಬುದನ್ನು ನೋಟ್ ಮಾಡಿಕೊಳ್ಳಿ. ಸಾಧ್ಯವಾದರೆ ಅವಕಾಶ ಕೊಡುತ್ತೇನೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಚಿವರೇ, ಹೋಟೆಲ್‌ಗೆ ಯಾರು ಬರುತ್ತಾರೆ ಅವರ ಹೆಸರನ್ನೆಲ್ಲಾ ಸೇರಿಸುತ್ತೀರಾ?

**ಶ್ರೀ ರಾಮಲಿಂಗಾರೆಡ್ಡಿ:-** ದೊಡ್ಡ ದೊಡ್ಡವರ ಮಕ್ಕಳು ಎಂದು ಹೇಳಿದ್ದೇನೆ.

**ಶ್ರೀ ಸಂದೇಶ್ ನಾಗರಾಜ್:-** ದೊಡ್ಡವರೆಲ್ಲಾ ಹೋಟೆಲ್‌ಗೆ ಹೋಗುತ್ತಾರೆ, ಪಾರ್ಟಿಗೆ ಹೋಗುತ್ತಾರೆ.

(ಗೊಂದಲ)

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಿಮ್ಮ ಕಡೆಯವರೂ ಇದ್ದರು, ಇವರ ಕಡೆಯವರೂ ಇದ್ದರು ಎಂದು ಹೇಳುವುದಕ್ಕೆ ಇದನ್ನು ಹೇಳುತ್ತಿದ್ದಾರೆ. ಇದನ್ನು ನಾನು ಒಪ್ಪುವುದಿಲ್ಲ. ಯಾರು ಗಲಾಟೆಯಲ್ಲಿ ಭಾಗಿಯಾಗಿದ್ದರು ಅದನ್ನು ಮಾತ್ರ ಹೇಳಿ. ಒಟ್ಟಿಗೆ ಕುಳಿತುಕೊಂಡು ಮೂಲೆಯಲ್ಲಿ ಊಟ ಮಾಡುತ್ತಿದ್ದರೆ ಅವರ ಹೆಸರನ್ನು ಹೇಳುವುದಕ್ಕಾಗುತ್ತದೆಯೇ? ಅದು ತಪ್ಪು.

**ಶ್ರೀ ರಾಮಲಿಂಗಾರೆಡ್ಡಿ:-** ನಾನು ಏನು ಹೇಳಿದ್ದೇನೆ ಅದನ್ನು ನೀವು ಅರ್ಥ ಮಾಡಿಕೊಳ್ಳಿ. ನಿಮಗೆ ಎಲ್ಲೋ ಬೇರೆ ಕಡೆ ಗಮನ ಇತ್ತು, ನೀವು ನನ್ನ ಮಾತನ್ನು ಕೇಳಿಸಿಕೊಂಡಿಲ್ಲ.

**ಸಭಾಪತಿಯವರು:-** ಮಾನ್ಯ ಸಂದೇಶ್ ನಾಗರಾಜ್‌ರವರೇ, ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳಿದ್ದನ್ನು ಅವರು ಕೇಳಿಸಿಕೊಂಡಿಲ್ಲ. ದೊಡ್ಡ ದೊಡ್ಡವರ ಮಕ್ಕಳಿದ್ದರು ಎಂದು ಹೇಳಿದೆ. ನಾನು ಕ್ರಿಮಿನಲ್ಸ್ ಎಂದು ಹೇಳಿದ್ದೇನೆಯೇ? ನಾನು ಆ ರೀತಿ ಹೇಳಲಿಲ್ಲ. ದೊಡ್ಡ ದೊಡ್ಡವರ ಮಕ್ಕಳಿದ್ದರು, ಅಲ್ಲಿ ಹೋಗುವುದಕ್ಕೆ ಜಾಸ್ತಿ ದುಡ್ಡು ಬೇಕು ಎಂದು ಹೇಳಿದ್ದೇನೆ. ಯಾರೂ ತಪ್ಪಾಗಿ ಅರ್ಥೈಸಿಕೊಳ್ಳಬಾರದು. ಕ್ರಿಮಿನಲ್ಸ್ ಎಂದು ಅವರು ಹೇಳಿದ್ದು, ನಾನು ಹೇಳಿಲ್ಲ. ದೊಡ್ಡ ದೊಡ್ಡವರ ಮಕ್ಕಳಿದ್ದರು ಎಂದು ಹೇಳಿದ್ದೇನೆ. ಈ ಘಟನೆ ನಡೆದ ಮೇಲೆ ಅಲ್ಲಿ ಏನಾಗುತ್ತದೆಂದರೆ, ಅದು ಕುಳಿತುಕೊಂಡು ಕುಡಿಯುವ ಕ್ಲಬ್ ಅಲ್ಲ, ಎಲ್ಲರೂ ನಿಂತುಕೊಂಡೇ ಇರುತ್ತಾರೆ. ಅಲ್ಲಿ ಊಟಕ್ಕಿಂತಲೂ ಬೇರೆಯದೇ ಜಾಸ್ತಿ. ಎಲ್ಲಾ ಪಾರ್ಟಿ ಮಾಡುತ್ತಿರುತ್ತಾರೆ, ಮಾತು ಮಾತಿಗೆ ಬರುತ್ತದೆ, ಆ ಹುಡುಗನಿಗೆ ಹಿಂದೆ ಫ್ರ್ಯಾಕ್ಚರ್ ಆಗಿತ್ತು, ಆದರೆ ನಡೆದುಕೊಂಡು ಓಡಾಡುತ್ತಿದ್ದ. ಆಮೇಲೆ ಮಾತುಮಾತು ಬೆಳೆಯುತ್ತದೆ. ಇವನು ಒಂದು ಏಟು ಹೊಡೆಯುತ್ತಾನೆ, ಹ್ಯಾರಿಸ್ ಮಗನ ಜೊತೆಯಲ್ಲಿ ಏಳೆಂಟು ಹುಡುಗರು ಇರುತ್ತಾರೆ. ಅವರು ಆ ಹುಡುಗನಿಗೆ ಹೊಡೆಯುತ್ತಾರೆ, ಮುಖಕ್ಕೆಲ್ಲಾ ಗುದ್ದಿ ಮುಖವೆಲ್ಲಾ ಕೆಂಪಾಗಿರುತ್ತದೆ, ರಕ್ತ ಬಿದ್ದಿರುತ್ತದೆ. ಗಲಾಟೆಯಾದ ಮೇಲೆ ಆಸ್ಪತ್ರೆಗೂ ಬರುತ್ತಾರೆ. ಪೋಲೀಸ್ ಸ್ಟೇಷನ್‌ಗೂ ಕೂಡ ಬಂದು ಕೇಸ್ ವಿತ್‌ಡ್ರಾ ಮಾಡಿಕೊಳ್ಳಬೇಕು, ನಮ್ಮ ಮೇಲೆ ಕೇಸ್ ಕೊಡಬಾರದು, ದೂರು ಕೊಡಬಾರದೆಂದು ಹೇಳಿದ್ದಾರೆ. ನಾನು ಆಸ್ಪತ್ರೆಗೆ ಹೋಗಿದ್ದೆ. ಆಸ್ಪತ್ರೆಗೆ ಹೋಗಿ, ಅವರ ತಂದೆಯನ್ನು ಮಾತನಾಡಿಸಿ, ಆ ಹುಡುಗನನ್ನು ಮಾತನಾಡಿಸಿದೆ. ಆ ಹುಡುಗನಿಗೆ ಪ್ರಜ್ಞೆ ಇತ್ತು. ಆದರೆ ಜಾಸ್ತಿ ಏಟು ಬಿದ್ದಿತ್ತು. ಮುಖವೆಲ್ಲಾ ಕೆಂಪಾಗಿತ್ತು. ನಾನು ಆಸ್ಪತ್ರೆಯಿಂದ ಆಚೆ ಬಂದೆ. ನಾನು ಆಚೆ ಬಂದ ಮೇಲೆ ಈ ರೀತಿ ಇಲ್ಲೂ ಬಂದಿದ್ದರು, ಕೇಸ್ ಹಾಕಬಾರದೆಂದು ಹೇಳಿ ಹೋಗಿದ್ದಾರೆಂದು ಹೇಳಿದರು. ನಾನು ಆಚೆ ಬಂದು ಮೀಡಿಯಾದವರಿಗೆ ಹೇಳಿದೆ. ಸಂಜೆ 8 ಗಂಟೆಯೊಳಗೆ ಯಾರು ಅಪರಾಧಿಗಳಿದ್ದಾರೆ ಅವರನ್ನು ಹಿಡಿಯಲಿಲ್ಲವೆಂದರೆ ಸಂಬಂಧಪಟ್ಟವರನ್ನು ಅಮಾನತ್ತು ಮಾಡುತ್ತೇನೆಂದು ಮೀಡಿಯಾದವರಿಗೂ ಹೇಳಿ ಕಮೀಷನರ್‌ರವರಿಗೂ ಫೋನ್ ಮಾಡಿ ಹೇಳಿದೆ. ಅದೇ ರೀತಿ ಇವರು ಸೆರೆಂಡರ್ ಆಗಿರಲಿಲ್ಲ. ಉಳಿದ ಐದಾರು ಜನ ಸಿಕ್ಕಿದರು, ಈ ಹುಡುಗ ಒಬ್ಬ ಸಿಕ್ಕಿರಲಿಲ್ಲ. ಸಾಯಂಕಾಲ 8 ಗಂಟೆಯಷ್ಟೊತ್ತಿಗೆ ಸಂಬಂಧಪಟ್ಟವರನ್ನು ಅಮಾನತ್ತು ಕೂಡ ಮಾಡಿದೆ. ಆ ಎ.ಸಿ.ಪಿ., ಅವರನ್ನು ವರ್ಗಾವಣೆ ಮಾಡಿಸಿದೆ. ಈ ಪ್ರಕರಣವನ್ನು ಸ್ಥಳೀಯ ಪೋಲೀಸ್‌ನವರು ತನಿಖೆ ಮಾಡುವುದು ಬೇಡ ಎಂದು ಅದನ್ನು ಸಿ.ಸಿ.ಬಿ., ಯವರಿಗೆ ತನಿಖೆ ಮಾಡುವುದಕ್ಕೆ ವಹಿಸಿದೆ. ಆ ಹುಡುಗನ ಮೇಲೂ ಕೇಸ್ ಹಾಕಿದ್ದಕ್ಕೆ negligence ಎಂದು ಹೇಳಿ ಅಮಾನತ್ತು ಮಾಡಿದೆವು. ಏಕೆಂದರೆ, ನಿರಾಪರಾಧಿಗಳ ಮೇಲೆ ಕೇಸ್ ಹಾಕಿರುವುದಕ್ಕೆ ಅಮಾನತ್ತು ಮಾಡಿದ್ದೇವೆ ಮತ್ತು 8 ಗಂಟೆ ಮುಂಚೆ ಅಪರಾಧಿಗಳನ್ನು ಹಿಡಿಯಲಿಲ್ಲ ಎನ್ನುವುದಕ್ಕೆ ಅಮಾನತ್ತು ಮಾಡಿದ್ದೇನೆ. ಆ ಎರಡು ಕಾರಣಕ್ಕೆ ನಾನು ಅವರನ್ನು ಅಮಾನತ್ತು ಮಾಡಿದ್ದೇನೆ. ಒಂದೇ ಕೇಸ್‌ಗೆ ಇಷ್ಟು ಸೆಕ್ಷನ್ ಹಾಕಿರುವಂಥದ್ದು. ಅವನ ಮೇಲೆ ಬೇರೆ ಯಾವುದೇ ಕೇಸ್ ಇಲ್ಲ. ಆದರೆ ಗಲಾಟೆಗಳಾಗಿರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಅವನ ಮೇಲೆ ಯಾವುದೇ ಕೇಸ್‌ಗಳು ರಿಜಿಸ್ಟರ್ ಆಗಿರಲಿಲ್ಲ. ಅವರೆಲ್ಲಾ ಓದಿರುವಂಥದ್ದು ಸೆಕ್ಷನ್‌ಗಳು. ಈ ಕೇಸ್‌ಗೆ ಇಷ್ಟು ಸೆಕ್ಷೆನ್ಸ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿದ್ದಾರೆ. ಇಷ್ಟು ಸೆಕ್ಷನ್ಸ್ ಹಾಕಿ ಕೇಸ್ ಹಾಕಿರುವಂಥದ್ದು. ಮೀಡಿಯಾದವರ ಮೇಲೆ ಹಲ್ಲೆ ಮಾಡಿರುವುದು ಕೂಡ ಕೇಸ್ ರಿಜಿಸ್ಟರ್ ಆಗಿದೆ. ಈಗಾಗಲೇ ಒಬ್ಬನನ್ನು ಅರೆಸ್ಟ್ ಮಾಡಲಾಗಿದೆ. ಮೊದಲು ಸೆಕ್ಷನ್ 307 ಹಾಕಿರಲಿಲ್ಲ. ಈಗ ಸೆಕ್ಷನ್ 307 ಹಾಕಿದ್ದೇವೆ. ಏಕೆಂದರೆ, ಅವರ ತಂದೆ ಹೇಳಿದರು, ಈ ರೀತಿಯೆಲ್ಲಾ ಆಗಿದೆ ಎಂದು ಹೇಳಿದ ಮೇಲೆ ನಾನೇ ಸೆಕ್ಷನ್ 307 ಕ್ಕೆ ಕನ್ವರ್ಟ್ ಮಾಡಿ ಎಂದು ಹೇಳಿದೆ. ಮೊದಲು ಸೆಕ್ಷನ್ 307 ಹಾಕಿರಲಿಲ್ಲ. ಆಮೇಲೆ ಅಡಿಷನಲ್ ಆಗಿ ಹಾಕಿದ್ದಾರೆ. ಈಗ ಎಲ್ಲರನ್ನು ಅರೆಸ್ಟ್ ಮಾಡಿದ್ದಾರೆ. ಅವರ ತಂದೆ ಎಂ.ಎಲ್.ಎ., ಆಗಿರಬಹುದು, ಸಾಮಾನ್ಯ ಪ್ರಜೆಯಾಗಿರಬಹುದು, ಕಾನೂನಿಗಿಂತ ಯಾರು ದೊಡ್ಡವರು ಇಲ್ಲ. ಎಲ್ಲರೂ ಕಾನೂನಿನ ಚೌಕಟ್ಟಿನಲ್ಲಿಯೇ ಇರಬೇಕು. ಆದ್ದರಿಂದ ಬಹಳ ಕಠಿಣವಾಗಿ ಕಮೀಷನ್‌ರವರಿಗೆ ಹೇಳಿದ್ದೇನೆ. ಯಾವುದೇ ಕಾರಣಕ್ಕೂ ಅಪರಾಧಿಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಬಿಡಬಾರದೆಂದು ಹೇಳಿದ್ದೇನೆ. ಅವರ ಮೇಲೆ ಕಠಿಣ ಕ್ರಮ ಕೂಡ ತೆಗೆದುಕೊಳ್ಳುತ್ತೇವೆ. ಒಂದು ಕೇಸ್‌ಗೆಲ್ಲಾ ಗಡಿಪಾರು ಮಾಡುವುದಕ್ಕೆ ಹೋಗುವುದಿಲ್ಲ ಮತ್ತು ರೌಡಿ ಲಿಸ್ಟ್‌ಗೂ ಹಾಕುವುದಿಲ್ಲ. ಪದೇಪದೇ ಗಲಾಟೆಗಳು ಮಾಡುವವರಿಗೆ ಗಡಿಪಾರು ಮಾಡುವುದು ಮತ್ತು ಗೂಂಡಾ ಆಕ್ಟ್ ಹಾಕುವುದು.

ಶ್ರೀ ಟಿ.ಎ.ಶರವಣ:- ಮಾನ್ಯ ಸಭಾಪತಿಯವರೇ, ಹಿಂದೆಯೂ ಕೂಡ ಇದೇ ರೀತಿ ಆಗಿತ್ತು. ಅವರ ಮೇಲೆಯೇ ಇದೇ ರೀತಿ ಗಲಾಟೆ ಆಗಿತ್ತು. ಕೇಸ್ ರಿಜಿಸ್ಟರ್ ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ.

ಸಭಾಪತಿಯವರು:- ಸಚಿವರು ಮಾತನಾಡುವಾಗ ಮಧ್ಯೆ ಮಾತನಾಡಬೇಡಿ. ಅವರು ಮುಗಿಸಿದ ಮೇಲೆ ನೋಡೋಣ.

**ಶ್ರೀ ರಾಮಲಿಂಗಾರೆಡ್ಡಿ**:- ಮಾನ್ಯ ಸಭಾಪತಿಯವರೇ, ನಾನು ಕೂಡ ಪತ್ರಿಕೆಗಳಲ್ಲಿ ನೋಡಿದ್ದೇನೆ. ಆದರೆ ಕೇಸ್ ಯಾವುದೂ ರಿಜಿಸ್ಟರ್ ಆಗಿರಲಿಲ್ಲ. ಅವರು ರಾಜಿ ಮಾಡಿಕೊಂಡುಬಿಟ್ಟಿರುತ್ತಾರೆ.

**ಶ್ರೀ ಟಿ.ಎ.ಶರವಣ**:- ಪ್ರಭಾವಿ ವ್ಯಕ್ತಿಗಳ ರಾಜಕೀಯ ಒತ್ತಡದಿಂದ ಕೇಸ್ ರಿಜಿಸ್ಟರ್ ಮಾಡಿರುವುದಿಲ್ಲ ಅಷ್ಟೆ.

**ಶ್ರೀ ರಾಮಲಿಂಗಾರೆಡ್ಡಿ**:- ಅವರವರೇ ಗಲಾಟೆ ಮಾಡಿಕೊಂಡು ರಾಜಿ ಮಾಡಿಕೊಂಡುಬಿಟ್ಟಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಸಂದೇಶ್ ನಾಗರಾಜ್**:- ಇವತ್ತು Whatsapp ನಲ್ಲಿ ಒಬ್ಬ ಲೇಡಿ ಸ್ಪಷ್ಟವಾಗಿ ಕೊಟ್ಟಿದ್ದಾರೆ.

**ಶ್ರೀ ಲಹರ್ ಸಿಂಗ್ ಸಿರೋಯಾ**:- ಕ್ರಿಮಿನಲ್ ಕೇಸ್‌ನಲ್ಲಿ ರಾಜಿ ಆಗುವ ಸಾಧ್ಯತೆ ಇದೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:-** ಪ್ರತಿ ಮಾತಿಗೂ ಈ ರೀತಿ ಮಧ್ಯೆ ಮಾತನಾಡಿದರೆ ಹೇಗೆ ಮುಂದಕ್ಕೆ ಹೋಗುವುದು? ಮಾನ್ಯ ಸಚಿವರು ಮಾತನಾಡಿ ಮುಗಿಸಲಿ. ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಟ್ಟರೆ ನೀವು ಪ್ರಶ್ನೆ ಹೇಳುವುದಕ್ಕೆ ಅವಕಾಶ ಇದೆ. ಚರ್ಚೆ ಇಲ್ಲದಿದ್ದರೆ ಇಲ್ಲ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಕ್ರಿಮಿನಲ್ ಕೇಸ್ ಎಂದರೆ, ಈಗ ಗಲಾಟೆ ಮಾಡಿಕೊಳ್ಳುತ್ತಾರೆ, ಅವರವರೇ ರಾಜಿ ಮಾಡಿಕೊಂಡುಬಿಡುತ್ತಾರೆ. ಕೇಸ್ ದಾಖಲಾತಿ ಮಾಡುವುದಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಚರ್ಚೆ ಮಾಡುವುದು ಬೇಡ. I have not allowed for a discussion.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಯಾವುದೋ ಒಂದು ಬಾರ್ ಅಥವಾ ಹೋಟೆಲ್‌ನಲ್ಲಿ ಗಲಾಟೆ ಮಾಡಿಕೊಳ್ಳುತ್ತಾರೆ. ಅವರು ದೂರು ಕೊಟ್ಟರೆ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಕೆಲವೊಮ್ಮೆ ದೂರು ಕೊಡದೇ ಅವರವರೇ ರಾಜಿ ಮಾಡಿಕೊಂಡು ಹೋಗಿಬಿಡುತ್ತಾರೆ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಅವರು ದೂರು ಕೊಡದಿದ್ದರೆ ಪೋಲೀಸ್‌ನವರು ಕ್ರಮ ತೆಗೆದುಕೊಳ್ಳುವುದಿಲ್ಲವೆ?

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, suo moto ಸಣ್ಣಪುಟ್ಟ ಗಲಾಟೆಗಳಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಯಾರೇ ಶಾಸಕರ ಮಗ ಇದ್ದರೂ ಕೂಡ ಅಥವಾ ಮಂತ್ರಿಗಳ ಮಗ ಇದ್ದರೂ ಕೂಡ ಎಲ್ಲರಿಗೂ ಒಂದೇ ಕಾನೂನು. ಈ ವಿಚಾರದಲ್ಲಿ ಮಾತ್ರ ನಾವು ಕಠಿಣ ಕ್ರಮವನ್ನು ತೆಗೆದುಕೊಂಡಿದ್ದೇವೆ.

(ಮುಂದು)

123/20.02.2018/ಬಿಕೆಪಿ/ಎಂಡಿ/11.40).

**ಶ್ರೀ ರಾಮಲಿಂಗಾ ರೆಡ್ಡಿ(ಮುಂದು. . .)**

ಅವರನ್ನು arrest ಮಾಡುವುದು ಸ್ವಲ್ಪ ತಡವಾಗಿರಬಹುದು. ಅದನ್ನು ಹೊರತುಪಡಿಸಿದರೆ, ಇನ್ಸ್‌ಪೆಕ್ಟರ್‌ರವರ ಅಮಾನತ್ತಿನಿಂದ ಹಿಡಿದು, ಎಸಿಪಿ. ರವರ ವರ್ಗಾವಣೆಯಿಂದ ಹಿಡಿದು ಅದನ್ನು CCB (City Crime Branch) ಗೂ ಸಹ refer ಮಾಡಿದ್ದೇವೆ, ಮತ್ತೆ ಎಲ್ಲರಿಗೂ ಕೂಡ arrest ಮಾಡಿದ್ದೇವೆ. IPC Section 307 ಸಹ ಹಾಕಿದ್ದೇವೆ. False case ಹಾಕಿದ್ದರೆ, ಅದಕ್ಕೂ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಸ್ ಹಾಕಿದ್ದವರನ್ನು ಅಮಾನತ್ತು ಮಾಡುವುದರ ಮೂಲಕ punishment ಮಾಡಿದ್ದೇವೆ. ಮತ್ತೆ, ನಿರಾಪರಾಧಿ ಮೇಲೆ ಹಾಕಿದಂತಹ ಕೇಸ್ ಅನ್ನೂ ಸಹ ವಾಪಸ್ಸು ತೆಗೆದುಕೊಂಡಿದ್ದೇವೆ. False cases ನ್ನು ಸಹ withdraw ಮಾಡಿಕೊಳ್ಳುತ್ತೇವೆ. ಕೇಸ್ ಹಾಕಿರುವಂತಹದ್ದು ತಪ್ಪಾಗಿದ್ದು, ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದಕ್ಕೋಸ್ಕರವೇ ಅವರಿಗೆ punishment ನೀಡಲಾಗಿದೆ. ಇನ್ಸ್‌ಪೆಕ್ಟರ್‌ರಿಗೂ ಕೂಡ punishment ಆಗುವ ರೀತಿಯಲ್ಲಿ ನಮ್ಮ ಇಲಾಖೆ ಕ್ರಮ ತೆಗೆದುಕೊಂಡಿದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಆ ಇನ್ಸ್‌ಪೆಕ್ಟರ್‌ರವರು ಆ ರೀತಿಯಲ್ಲಿ ವರ್ತನೆ ಮಾಡಬೇಕಾದರೆ, ಅದಕ್ಕೆ ಕಾರಣ ಏನೆಂದು ನೋಡಬೇಕಲ್ಲವೇ? Our Police Officers are very good officers. ಅವರು ಆ ರೀತಿಯಲ್ಲಿ ವರ್ತನೆ ಮಾಡಬೇಕಾದರೆ what are the reasons for that?

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅಲ್ಲಿ ಲೋಪ ಆಗಿರುವುದಕ್ಕೆ ಅವರನ್ನು suspend ಮಾಡಲಾಗಿದೆ. ಅಲ್ಲಿ ಅವರು ಕೇಸ್ ನೋಂದಣಿ ಮಾಡಲಿಕ್ಕೂ ನಿಧಾನ ಮಾಡಿದ್ದಾರೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಈ ಘಟನೆ 17ನೇ ತಾರೀಖಿನಂದು ನಡೆದಿದ್ದು, ಕ್ರಮ ತೆಗೆದುಕೊಳ್ಳಲಿಕ್ಕೆ ಏತಕ್ಕೆ ಇಷ್ಟು ತಡವಾಯಿತು?

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅಂದೇ ಕ್ರಮ ತೆಗೆದುಕೊಳ್ಳಲಾಗಿದೆ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಅಂದು ಸಂಜೆಯೇ ಆಯಿತು.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಎಲ್ಲಿ ಆಯಿತು ಎಂದು ಮಾನ್ಯ ಸಚಿವರು ಹೇಳಬೇಕು. ನಿನ್ನೆ ಕ್ರಮ ಆಗಿದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನಾನು ಸಹ ಆಸ್ಪತ್ರೆಗೆ ಹೋಗಿದ್ದೆ. ಆಗ ಅವರ ತಂದೆ ಶ್ರೀಯುತ ಲೋಕೇಶ್‌ರವರನ್ನು ಭೇಟಿ ಮಾಡಿದ್ದೆ. ಶಾಸಕರ ಪುತ್ರ ಇದುವರೆವಿಗೂ ಏನೇನು ಮಾಡಿದ್ದಾನೆ, ಅದರ ಬಗ್ಗೆ ಮಾಹಿತಿಗಳು ಇದೆ. ಅವುಗಳ ಬಗ್ಗೆ ಸಂಪೂರ್ಣವಾಗಿ ಇಲ್ಲಿ ಚರ್ಚೆಯಾಗಬೇಕು. ಇದು ಒಂದೇ ಕೇಸ್ ಅಲ್ಲ. ಈಗ ಎಲ್ಲವನ್ನು ಮಾತನಾಡಲಿಕ್ಕೆ ಆಗುವುದಿಲ್ಲ. ನನಗೆ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಾಗ ಮಾತನಾಡುತ್ತೇನೆ. I don't want to open the book. Yes, this is the very big issue in the State. This is not the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ordinary case. Law and Order ಈ ಸ್ಥಿತಿಗೆ ಬಂದಿದೆ ಎಂದರೆ ಇದಕ್ಕೆ ಇವರಲ್ಲ ಕಾರಣ. ಇದಕ್ಕೆ ಹಿಂದಿನಿಂದ ನಡೆದುಕೊಂಡು ಬಂದಿರುವುದೇ ಕಾರಣ.

**ಸಭಾಪತಿಯವರು:-** ಶ್ರೀಯುತ ರಾಮಚಂದ್ರಗೌಡರವರೇ, ದಯವಿಟ್ಟು ಕುಳಿತುಕೊಳ್ಳಿ. ಎಲ್ಲರೂ ಮಾತನಾಡಬೇಡಿ, ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಬಸವರಾಜರಾಯ ರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಇಡೀ ದಿನ ಚರ್ಚೆ ಮಾಡುತ್ತೇವೆಂದರೆ ಏನಿದು? Cognizable case, compoundable case......

ಸಭಾಪತಿಯವರು:- ಸರ್ಕಾರದಿಂದ ಯಾರು ಉತ್ತರವನ್ನು ಕೊಡುತ್ತಾರೆ?

**ಶ್ರೀ ಬಸವರಾಜರಾಯ ರೆಡ್ಡಿ:-** ಈಗ arrest ಮಾಡಿದ್ದಾರೆ.

**SRI RAMACHANDRA GOWDA:-** Hon'ble Chairman, You don't know. Please sit down. ಪೋಲೀಸರು ಆ ರೀತಿ ವರ್ತನೆ ಮಾಡಬೇಕಾದರೆ ಅದಕ್ಕೆ ಕಾರಣ ಯಾರು? Who is responsible for that? Whether it is that Legislator or any other person... Our Police Officers are very good officers. They have the capacity to do that. But they have been controlled like anything. They have been controlled in a bad way.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ಕೇಸ್ ಇಲ್ಲದಿದ್ದವರ ಮೇಲೆಯೂ ಸಹ Rowdy Sheet open ಮಾಡಿದ್ದಾರೆ. 11 ಕೇಸ್‌ಗಳು ಇದ್ದವರ ಮೇಲೆ Rowdy Sheet ಏತಕ್ಕೆ open ಮಾಡಿಲ್ಲ?

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವರ ಮೇಲೆ ಇರುವುದು ಇದು ಒಂದೇ ಕೇಸ್.

**ಶ್ರೀ ರಾಮಲಿಂಗಾ ರೆಡ್ಡಿ:-** ಇದು ಒಂದೇ ಕೇಸ್. ಇದರ ಮೇಲೆ 11 ಸೆಕ್ಷನ್ಸ್ ಹಾಕಲಾಗಿದೆ.

**ಶ್ರೀ ಎಂ.ಆರ್.ಸೀತಾರಾಮ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವರ ಮೇಲೆ ಇರುವುದು ಒಂದೇ ಕೇಸ್. ಆದಕ್ಕೆ 11 ಸೆಕ್ಷನ್ಸ್ ಹಾಕಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಒಂದು ಹೋಟೆಲ್ open ಮಾಡಬೇಕಾದರೆ ಇವರ ಅನುಮತಿ ಬೇಕು. ಒಂದು ಅಂಗಡಿ open ಮಾಡಬೇಕಾದರೆ ಇವರ ಅನುಮತಿ ಬೇಕು. ಇವರ ಮೇಲೆ ದೂರು ಕೊಟ್ಟರೆ ದೂರನ್ನು ನೋಂದಣಿ ಮಾಡಿಕೊಳ್ಳಬಾರದು ಎಂದು ಹೇಳುತ್ತಾರೆ. ಏತಕ್ಕೆ ಹೇಳುತ್ತಾರೆ, ಯಾರು ಹೇಳುತ್ತಾರೆ?

ಸಭಾಪತಿಯವರು:- ಮಾನ್ಯ ರಾಮಚಂದ್ರಗೌಡರೆ, ದಯಮಾಡಿ ಕುಳಿತುಕೊಳ್ಳಿ.

**SRI RAMACHANDRA GOWDA:-** Hon'ble Chairman, I have never stood up to talk. Today I am standing here to talk about this issue.

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಇದು ಒಂದೇ ಕೇಸ್. ಇದರ ಮೇಲೆ 11 ಸೆಕ್ಷನ್ಸ್ ಹಾಕಲಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರುಗಳು ಗೊಂದಲ ಮಾಡಿಕೊಂಡಿದ್ದಾರೆ. ಸರ್ಕಾರ ಯಾವುದೇ ಕಾರಣಕ್ಕೂ ಇಂತಹ ಘಟನೆಗಳಿಗೆ ಅವಕಾಶ ಕೊಡುವುದಿಲ್ಲ. ಅವರು ಎಷ್ಟೇ ದೊಡ್ಡವರಾದರೂ ಸಹ ಅವರ ಮೇಲೆ ನಾವು ಕಠಿಣ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದನ್ನು ಈಗಾಗಲೇ ತೋರಿಸಿದ್ದೇವೆ. ಈ ರೀತಿಯಲ್ಲಿ ಎಲ್ಲಾ ಪ್ರಕರಣಗಳಲ್ಲೂ ಸಹ ಪೊಲೀಸ್‌ನವರಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ.

**ಸಭಾಪತಿಯವರು:** ಈ ವಿಷಯದ ಮೇಲೆ ಸರ್ಕಾರದ ನಿಲುವು ಏನು?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬಿಬಿಎಂಪಿ ಕಛೇರಿಯಲ್ಲಿ ದಾಖಲೆಗಳ ಮೇಲೆ ಪೆಟ್ರೋಲ್ ಹಾಕುತ್ತಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ?

**SRI RAMACHANDRA GOWDA:-** Hon'ble Chairman, There is no freedom to the Police Department.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಬಿಬಿಎಂಪಿ ಕಛೇರಿ ಹತ್ತಿರ ಹೋಗಿ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾತೆ ಮಾಡಿಕೊಡದಿದ್ದರೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುತ್ತೇನೆಂದು ಗಲಾಟೆ ಮಾಡಿದ್ದಾರಂತೆ. ಈ ಬಗ್ಗೆ ಕಮಿಷನರ್‌ರವರು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ದೂರನ್ನು ಕೊಟ್ಟ ತಕ್ಷಣ ಕ್ರಮ ತೆಗೆದುಕೊಳ್ಳಿ ಎಂದು ನಾನು ಅವರಿಗೆ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

**ಶ್ರೀ ರಾಮಲಿಂಗಾ ರೆಡ್ಡಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವ ಮೊದಲು ಇನ್ನೂ ದೂರು ಬಂದಿರಲಿಲ್ಲ.. ಈ ವಿಚಾರ ಈಗ ಕಮಿಷನರ್‌ರವರ ಗಮನಕ್ಕೆ ಬಂದಿದೆ. ದೂರು ಬಂದ ತಕ್ಷಣ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ.

**ಸಭಾಪತಿಯವರು:–** ಈ ವಿಷಯದ ಮೇಲೆ ನಿಲುವಳಿ ಸೂಚನೆಯ ಮೇರೆಗೆ ಚರ್ಚೆ ಮಾಡಬೇಕೇ ಅಥವಾ ಬೇರೆ ರೀತಿಯಲ್ಲಿ ಚರ್ಚೆ ಮಾಡಬೇಕೇ ಅಥವಾ ಇದರ ಬಗ್ಗೆ ಚರ್ಚೆಯೇ ಬೇಡವೇ ಎಂದು ಇದರ ಬಗ್ಗೆ ಸರ್ಕಾರದ ನಿಲುವು ಏನೆಂದು ಹೇಳಬೇಕು.

**ಶ್ರೀ ಎಂ.ಆರ್.ಸೀತಾರಾಮ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಮ್ಮ ಮಾನ್ಯ ಗೃಹ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಅದರೂ ಸಹ ಮಾನ್ಯ ಸದಸ್ಯರುಗಳಿಗೆ ಈ ಬಗ್ಗೆ ಸಮಾಧಾನವಾಗಿಲ್ಲವೆಂದರೆ, ಬೇರೆ ಯಾವುದಾದರೊಂದು ರೂಪದಲ್ಲಿ ಅಂದರೆ ನಿಯಮ 330 ರಡಿಯಲ್ಲಿ ಅರ್ಧ ಗಂಟೆ ಅಥವಾ ಒಂದು ಗಂಟೆ ಕಾಲ ಚರ್ಚೆಗೆ ನಂತರ ಅವಕಾಶ ಕೊಡಿ. ಅದರ ಬಗ್ಗೆ ಚರ್ಚೆ ಮಾಡೋಣ. ಇದರ ಬಗ್ಗೆ ಸರ್ಕಾರ ಕೇಳುವುದಕ್ಕೆ ಸಿದ್ಧವಾಗಿದೆ.

**ಸಭಾಪತಿಯವರು:–** ಈ ವಿಚಾರವಾಗಿ ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ನಾನು ಮಾನ್ಯ ಸುಭಾಷ್ ಕಶ್ಯಪ್ಪನವರ ವಿಚಾರವನ್ನು ಇಲ್ಲಿ ಉಲ್ಲೇಖ ಮಾಡುತ್ತೇನೆ.

> *"Adjournment motion on Government's failure to give protection to voters, specially Harijans and other weaker sections, rigging of bye-elections to State Assemblies....*
>
> *.... Matter of urgent public importance which is also primarily the concern of the Government and the main object of the motion is to discuss and criticise the conduct of the Government in the matter,..."*

ಎಂದು ಬಂದರೆ ಇದು ನಿಲುವಳಿ ಸೂಚನೆ ರೂಪದಲ್ಲಿ ಬೇಡ. ಬೇರೆ ಯಾವುದಾದರೂ ಒಂದು ರೂಪದಲ್ಲಿ ಇದನ್ನು ಚರ್ಚೆಗೆ ಅವಕಾಶ ಕೊಡಬಹುದು ಎಂದು ಹೇಳಿದ್ದಾರೆ. ತಾವು ಸಹ ಆ ವಿಚಾರವನ್ನು ಹೇಳಿದ್ದೀರಿ. ನಮ್ಮ ಸದನದ ಪದ್ಧತಿ ಪ್ರಕಾರ ನಿಯಮ 68 ರಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇವೆ. ಅವರೆಲ್ಲರೂ ಕೇಳಿರುವುದರಿಂದ ಇದನ್ನು ಚರ್ಚೆ ಮಾಡಬಹುದು ಎಂದು ಸಭಾನಾಯಕರು ಹೇಳಿರುವುದರಿಂದ ನಿಯಮ 68 ರಡಿಯಲ್ಲಿ ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಈ ವಿಷಯದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಂತಹ ಉತ್ತರ ಮಾನ್ಯ ಸದಸ್ಯರುಗಳಿಗೆ ಸಮಾಧಾನವಾಗಿದೆ.

**ಸಭಾಪತಿಯವರು:-** ಅವರಿಗೆ ಸಮಧಾನವಾಗಿಲ್ಲ. ಅವರು ಏನು ಹೇಳುತ್ತಾರೆಂದು ನೀವೇ ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರೀತಿಯ ಹಲವಾರು ಪ್ರಕರಣಗಳ ಬಗ್ಗೆ ಚರ್ಚೆ ಮಾಡುವುದರ ಮೂಲಕ ರಾಜ್ಯಕ್ಕೆ ಪರಿಚಯ ಮಾಡಿಕೊಡಬೇಕಾಗಿದೆ. ಒಂದೆರಡು ಘಟನೆಗಳು ಮಾತ್ರ ನಡೆದಿರುವುದಿಲ್ಲ. ಅವುಗಳ ಬಗ್ಗೆ ಎಳೆಎಳೆಯಾಗಿ ಹೇಳಬೇಕಾಗಿದೆ. ನೀವು ಇನ್ನು ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಸಚಿವರ ಬಗ್ಗೆ ನಮಗೆ ಗೌರವ ಇದೆ. ಗೃಹ ಸಚಿವರ ಕ್ರಮಕ್ಕೆ ಅಭಿನಂದನೆ ಇದೆ. ಆದರೆ, ಆತನ ಎಲ್ಲಾ ಮುಖಗಳು ಪರಿಚಯ ಆಗಬೇಕಲ್ಲವೇ? ಇದರ ಬಗ್ಗೆ ತುರ್ತಾಗಿ ಚರ್ಚೆ ಮಾಡಬೇಕಾಗಿದೆ. ಇಲ್ಲದಿದ್ದರೆ ಸರ್ಕಾರಕ್ಕೆ ದೊಡ್ಡ ಅನಾಹುತ ಆಗುತ್ತದೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಶ್ರೀಯುತ ಸಾ.ರಾ. ಮಹೇಶ್‌ರವರದ್ದನ್ನು ಹೇಳಬೇಕೇ?

(ಗೊಂದಲ)

**ಸಭಾಪತಿಯವರು:-** ಸರ್ಕಾರದ ಪರವಾಗಿ ಗೃಹ ಸಚಿವರು ಹೇಳಿದ್ದಾರೆ. ಸರ್ಕಾರದ ಕಡೆಯಿಂದ ಸೂಕ್ಷ್ಮವಾದ ಅಭಿಪ್ರಾಯ ಬಂದಿದೆ. ಬೇರೆ ರೀತಿಯಲ್ಲಿ ಚರ್ಚೆ ಮಾಡಲಿಕ್ಕೆ ನಾವು ತಯಾರಿದ್ದೇವೆಂದು ಸರ್ಕಾರದ ಕಡೆಯಿಂದ ಹೇಳಲಾಗಿದೆ. ಆದ್ದರಿಂದ, ಪ್ರಶ್ನೋತ್ತರ ಅವಧಿಯಾದ ನಂತರ ನಿಯಮ 68 ರಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಬಸವರಾಜ ಎಸ್. ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದನ್ನು ಏತಕ್ಕೆ ಚರ್ಚೆ ಮಾಡಬೇಕೆಂದು ಮತ್ತೊಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾರೋ ಮಕ್ಕಳು ಮಾಡಿದ ತಪ್ಪಿಗೆ ಯಾರೋ ತಂದೆ-ತಾಯಿಯವರು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಅದಕ್ಕೆ ಈ ವಿಚಾರವಾಗಿ ಚರ್ಚೆ ಮಾಡಬೇಕಾಗುತ್ತದೆ. ಮಕ್ಕಳು ಮಾಡಿದಂತಹ ತಪ್ಪಿಗೆ ತಂದೆ-ತಾಯಿಗಳು ಮಸಿ ಹಚ್ಚಿಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ, ಮಕ್ಕಳನ್ನು ಯಾವ ರೀತಿ ಬೆಳೆಸಬೇಕೆಂದು ಹೇಳಬೇಕಾಗುತ್ತದೆ. ಅದರ ಸಲುವಾಗಿ ಚರ್ಚೆ ಮಾಡಲಿಕ್ಕೆ ಅನುಮತಿ ಕೊಡಬೇಕು.

**2.ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಪ್ರಶ್ನೆ ಸಂಖ್ಯೆ: 497**
**(ಉತ್ತರವನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪ್ರಸ್ತುತ ರೂ.1685.78 ಕೋಟಿ ರೂಪಾಯಿಗಳ ಬಿಲ್‌ಗಳು ಬಾಕಿ ಉಳಿದಿರುತ್ತದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಇಷ್ಟೊಂದು ಹಣವನ್ನು ಬಾಕಿ ಇಟ್ಟುಕೊಂಡರೆ ಅಭಿವೃದ್ಧಿ ಕೆಲಸ ಹೇಗೆ ಆಗುತ್ತದೆ, ಗುತ್ತಿಗೆದಾರರು ಹೇಗೆ ಕೆಲಸ ಮಾಡುವುದು? ಏಕೆಂದರೆ, ಕಾಯಕವೇ ಕೆಲಸ ಎಂದು ಗುತ್ತಿಗೆದಾರರು ಬಂದಿರುತ್ತಾರೆ. ಅವರು ಹಣವನ್ನು ಬಡ್ಡಿಗೆ ತೆಗೆದುಕೊಂಡು ಒಂದು ಕೆಲಸ ಮಾಡಿರುತ್ತಾರೆ. ಇಷ್ಟೊಂದು ಹಣವನ್ನು ಸರ್ಕಾರದಲ್ಲಿ ಬಾಕಿ ಇಟ್ಟುಕೊಂಡರೆ ಅವರು ಯಾವ ರೀತಿಯಲ್ಲಿ ಕೆಲಸ ಮಾಸಬೇಕಾಗುತ್ತದೆ ಎನ್ನುವುದು ಒಂದು ವಿಚಾರ. ಇದರ ಜೊತೆಗೆ ನಾನು ಇನ್ನೂ 2-3 ಪ್ರಶ್ನೆಗಳನ್ನು ಕೇಳಲಿಕ್ಕೆ ಬಯಸುತ್ತೇನೆ.

ಜೊತೆಗೆ ಕೊಡಗು ಜಿಲ್ಲೆಯಲ್ಲಿ 211 ಕೆಲಸಗಳಿಗೆ ಹಣ ಬಾಕಿ ಇಟ್ಟುಕೊಂಡಿದ್ದಾರೆ. ಏಕೆಂದರೆ, ಕೊಡುಗು ಜಿಲ್ಲೆ ಒಂದು ಸಣ್ಣ ಜಿಲ್ಲೆಯಾಗಿದೆ. ಅಲ್ಲಿ ಇಷ್ಟೊಂದು ಬಾಕಿ ಇಟ್ಟುಕೊಂಡರೆ ಯಾವ ರೀತಿಯಲ್ಲಿ ಆ ಜಿಲ್ಲೆ ಅಭಿವೃದ್ಧಿಯಾಗುತ್ತದೆ? ಇಷ್ಟು ಅವಧಿಯೊಳಗೆ ಅವರ ಬಿಲ್‌ಗಳನ್ನು ಪಾವತಿ ಮಾಡುತ್ತೇವೆಂದು ಏನಾದರೂ ಕಾಲಮಿತಿಯನ್ನು ನಿಗದಿ ಮಾಡಿಕೊಂಡಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಬಾಕಿ ಇರುವ ಬಿಲ್‌ಗಳನ್ನು ನಮ್ಮ ಆಯವ್ಯಯದಲ್ಲಿ ಮಂಜೂರು ಆಗಿರುವಂತಹದ್ದು ಮತ್ತು additional ಆಗಿ ಸರಿದೂಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ ನಾವು ಹಿಂದೆ ಅಂದರೆ 2015-2016 ಮತ್ತು 2016-2017ನೇ ಸಾಲಿನಲ್ಲಿ ಏನೂ ಬಾಕಿಯನ್ನು ಇಟ್ಟುಕೊಂಡಿಲ್ಲ. ಇಲ್ಲಿ ನಮ್ಮ ಆಯವ್ಯಯದಲ್ಲಿ ಒದಗಿಸಿರುವಂತಹ ಹಣ ಮತ್ತು additional ಹಣ. ಈ ಎರಡನ್ನು ಸೇರಿಸಿಕೊಂಡು ಸರಿದೂಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಕಾಲಮಿತಿಯಲ್ಲಿಯೇ ನಾವು ಕೆಲಸ ಮಾಡಬೇಕು. ಯಾವಾಗ ಬೇಕೋ ಆಗ ಮಾಡೋಣವೆಂದು ಹೇಳಿ ಯಾವ ಕೆಲಸವನ್ನೂ ಮಾಡುವುದಿಲ್ಲ. ಕೊಡಗು ಜಿಲ್ಲೆಯದ್ದನ್ನೂ ಸಹ ನಾವು ವಿಶೇಷ ಪ್ಯಾಕೇಜ್‌ಗಳ ಮೂಲಕ ಕೊಡಗು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಬಂದ ಮೇಲೆ 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ಹಣ ಮುಗಿದು ಹೋಗಿದೆ. ಬಾಕಿ ಕೇವಲ 37 ಕೋಟಿ ರೂಪಾಯಿಗಳು ಬಾಕಿ ಇದೆ. ಅದನ್ನೂ ಕೂಡ additional ಹಣ ಮತ್ತು ಕೊಟ್ಟಿರುವಂತಹ ಆಯವ್ಯಯದಲ್ಲಿ ಸರಿದೂಗಿಸಿಕೊಂಡು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಶ್ರೀಯುತ ಉಗ್ರಪ್ಪನವರ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಏತಕ್ಕೆ ಕಾಲಾವಕಾಶ ಬೇಕೆಂದು ಮಾನ್ಯ ಸಚಿವರು ಹೇಳಬೇಕು.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ವಿವರವಾಗಿ ಕೊಡಬೇಕಾಗುತ್ತದೆ. ಅದಕ್ಕೆ ಸಮಯ ಬೇಕಾಗುತ್ತದೆ. ಈ ವಿಚಾರ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿದೆ. ಈ ಬಗ್ಗೆ ಸದನ ಸಮಿತಿಯನ್ನು ಸಹ ಮಾಡಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕಾಲಾವಕಾಶವನ್ನು ಕೇಳಿದ್ದೇವೆ. ಮತ್ತೆ frame work agreement ಏನಿದೆ, ಆ guidelines ನಲ್ಲಿಯೇ ಕೆಲಸ ಮಾಡುವುದಕ್ಕೆ ನಮ್ಮ ಸರ್ಕಾರವೇ ಮೊದಲ ಬಾರಿಗೆ ಸದನ ಸಮಿತಿಯನ್ನು ಮಾಡಿದೆ. ನಮ್ಮ ಸರ್ಕಾರದ ಉದ್ದೇಶ, frame work agreement ನ ಉಲ್ಲಂಘನೆಯಾಗಬಾರದು.

**ಸಭಾಪತಿಯವರು:-** ಈ ವಿಷಯವಾಗಿ ಚರ್ಚೆ ಬೇಡ. ಅದಕ್ಕೆ ಸಮಯ ಏತಕ್ಕೆ ಬೇಕು ಎಂದು ಹೇಳಿ. ಮುಂದಿನ ವಾರ ಸಾಧ್ಯವಾಗುತ್ತದೆಯೇ?

**ಡಾ॥ ಹೆಚ್.ಸಿ.ಮಹದೇವಪ್ಪ:-** ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಪೆಂಡಿಂಗ್ ಇರುವುದರಿಂದ ಅಲ್ಲಿನ ವಿಚಾರ ನೋಡಿಕೊಂಡು ಕಾನೂನಿನ ಅಡಿಯಲ್ಲಿಯೇ ನಾನು ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ, ನಾನು ಆದಷ್ಟು ಬೇಗ ಕಾನೂನಿನ ಚೌಕಟ್ಟಿನೊಳಗಡೆ ಉತ್ತರ ಕೊಡುತ್ತೇನೆ.

**ಮುಂದು. . .**

**(124) 20.02.2018 11.50 ಎಸ್‌ವಿ-ಎಂಡಿ**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, Frame work agreement ನಲ್ಲಿ ನೀಡಲಾಗಿರುವ ಜಾಗವೆಷ್ಟು? ಅದು ಎಷ್ಟು develop ಆಗಿದೆ? ಅದಕ್ಕಾಗಿ ವೆಚ್ಚವಾಗಿರುವ ಹಣ ಎಷ್ಟು? ಎಂಬ ಪ್ರಶ್ನೆಗಳನ್ನು ನಾನು ಕೇಳಿರುತ್ತೇನೆ. ಇದು ಎರಡು ದಶಕಗಳಷ್ಟು ಹಳೆಯ ವಿಚಾರವಾಗಿದ್ದು, ಇದರ ಬಗ್ಗೆ ಮಾಹಿತಿಯನ್ನು ನೀಡಲು ಕಾಲಾವಕಾಶವನ್ನು ಕೇಳಿದ್ದಾರೆ ಎಂದರೆ ಅರ್ಥವೇನು? ಈ ಶತಮಾನದ ಅತಿ ದೊಡ್ಡ fraud ಏನಾದರೂ ನಡೆದಿದೆ ಎಂದರೆ ಅದು NICE (Nandi Infrastructure Corridor Enterprises) ಹಗರಣ. ಸಾರ್ವಜನಿಕರ ಸ್ವತ್ತು ಮತ್ತು ಸಾರ್ವಜನಿಕರ ಹಣ ಈ ರೀತಿ ಆಗಬಾರದೆಂದು ನಾನು ಸರ್ಕಾರವನ್ನು ವಿನಂತಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಇದರ ಬಗ್ಗೆ ಚರ್ಚೆ ಬೇಡ. ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಮಾನ್ಯ ಸಚಿವರೆ, ಈ ಪ್ರಶ್ನೆಗೆ ಎಷ್ಟು ದಿನಗಳಲ್ಲಿ ಉತ್ತರವನ್ನು ಕೊಡಿಸುತ್ತೀರಿ?

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಉತ್ತರವನ್ನು ಕೊಡಲಾಗುವುದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, 'ಆದಷ್ಟು ಬೇಗ' ಎಂದರೆ ಅದು ಆಗುವುದಿಲ್ಲ. ದಯಮಾಡಿ ಮುಂದಿನ ಸೋಮವಾರ ಉತ್ತರವನ್ನು ಕೊಡಲಿಕ್ಕೆ ತಾವು ಹೇಳಬೇಕು. It is a serious issue.

**ಸಭಾಪತಿಯವರು:-** ಮುಂದಿನ ಮಂಗಳವಾರ ಉತ್ತರವನ್ನು ಒದಗಿಸಿ.

**Dr.H.C.MAHADEVAPPA:-** Sir, In view of the seriousness of the project it is the gross violation of the frame work agreement. ಅವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. Frame work agreement ನಲ್ಲಿ ಮಾಡಬೇಕೆಂಬುದು ಸರ್ಕಾರದ ಸ್ಪಷ್ಟ ನಿಲುವಾಗಿರುವುದರಿಂದಲೇ ಶ್ರೀ ಸಿದ್ಧರಾಮಯ್ಯನವರು ಸದನ ಸಮಿತಿಯನ್ನು ರಚನೆ ಮಾಡಿದ್ದರು. ಆದಷ್ಟು ಬೇಗ ಉತ್ತರವನ್ನು ಕೊಡಲಾಗುವುದು.

ಶ್ರೀ ವಿ.ಎಸ್.ಉಗ್ರಪ್ಪ:- ಮಾನ್ಯ ಸಭಾಪತಿಯವರೆ, ಆದಷ್ಟು ಬೇಗ ಉತ್ತರವನ್ನು ಕೊಡಿಸಿ. There is a clear violation of agreement. That is my point.

**ಪ್ರಶ್ನೆ ಸಂಖ್ಯೆ: 752**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ;-** ಮಾನ್ಯ ಸಭಾಪತಿಯವರೇ, ಇದೇ ಪ್ರಶ್ನೆಯನ್ನು ನಾನು ದಿನಾಂಕ 21.11.2017ರಲ್ಲಿ ಕೇಳಿದ್ದೆನು. ನೀರಾ ನೀತಿಯನ್ನು ಅನುಷ್ಠಾನಗೊಳಿಸಲು ಯಾವ ರೀತಿಯ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಕೇಳಿದ್ದ ಪ್ರಶ್ನೆಗೆ 2017-18ರ ಆಯವ್ಯಯದಲ್ಲಿ ಮುನ್ನೂರು ಕೋಟಿ ರೂಪಾಯಿಗಳನ್ನು ಇಟ್ಟಿರುತ್ತೇವೆ ಎಂಬ ಉತ್ತರವನ್ನು ಸರ್ಕಾರ ನೀಡಿರುತ್ತದೆ. ಈ ಮುನ್ನೂರು ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? ಈ ವರ್ಷದ ಆಯವ್ಯಯದಲ್ಲಿ ಯಾವುದೇ ಹಣವನ್ನು ಅದಕ್ಕಾಗಿ ವೆಚ್ಚ ಮಾಡಿರುವುದಿಲ್ಲ, ಏಕೆ? ಇದರ ಕುರಿತಾದ ಒಂದು ಕಾರ್ಯಾಗಾರವನ್ನು ಮಾಡುವುದಾಗಿ ಮಾನ್ಯ ಸಚಿವರು ಹೇಳಿದ್ದರು. ಕಾರ್ಯಾಗಾರವನ್ನು ಮಾಡಲಾಯಿತೇ ಅಥವಾ ಇಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದ್ದರೆ, ಕಾರ್ಯಾಗಾರದಲ್ಲಿ ಎಷ್ಟು ಜನ ಭಾಗವಹಿಸಿದ್ದರು? ಈ ಎಲ್ಲಾ ಮಾಹಿತಿಗಳನ್ನು ಮಾನ್ಯ ಸಚಿವರು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್**:- ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ರಾಮಚಂದ್ರಗೌಡರು ಕೇಳಿರುವ ಪ್ರಶ್ನೆಗಳಲ್ಲಿ ಮೊದಲನೆಯದಾಗಿ ನೀರಾ ಇಳಿಸುವ ಘಟಕಗಳಿಗೆ ತಾತ್ವಿಕ ಅನುಮೋದನೆಯನ್ನು ಅಬಕಾರಿ ಇಲಾಖೆಯು ನೀಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹನ್ನೆರಡು ಸಿ.ಪಿ.ಸಿ.ಗಳು ಮತ್ತು ಏಳು ಎಫ್.ಪಿ.ಸಿ.ಗಳು ಒಟ್ಟು 19 ಜನ ಮುಂದೆ ಬಂದಿದ್ದಾರೆ. ಎಲ್ಲಾ ಜಿಲ್ಲಾಧಿಕಾರಿಗಳ ಮುಖಾಂತರ ಸಭೆಯನ್ನು ನಡೆಸಿ ಈಗ ಅಬಕಾರಿ ಇಲಾಖೆಗೆ ಕಳುಹಿಸಿಕೊಡಲಾಗುತ್ತಿದೆ. ಅಬಕಾರಿ ಇಲಾಖೆಯು ಈಗ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಆಯವ್ಯಯದಲ್ಲಿ 300 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದ್ದು, ಇದರಲ್ಲಿ ಎಷ್ಟು ಹಣ ಖರ್ಚಾಗಿದೆ? ಕಳೆದ ಬಾರಿ ಕಾರ್ಯಾಗಾರ ಮಾಡಲಾಗುವುದು ಎಂದು ಮಾನ್ಯ ಸಚಿವರು ಹೇಳಿದ್ದು, ಕಾರ್ಯಾಗಾರವನ್ನು ನಡೆಸಲಾಯಿತೇ ಅಥವಾ ಇಲ್ಲವೇ? ಕಾರ್ಯಾಗಾರವನ್ನು ನಡೆಸಿದ್ದಲ್ಲಿ, ಅದರಿಂದಾದ ಉಪಯೋಗವೇನು? ಈ ಅಂಶಗಳಿಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್**:- ಮಾನ್ಯ ಸಭಾಪತಿಯವರೇ, ಕಾರ್ಯಾಗಾರವನ್ನು ಇನ್ನೂ ಮಾಡಿರುವುದಿಲ್ಲ. ಇದನ್ನು ಅಬಕಾರಿ ಇಲಾಖೆಯವರು ಮಾಡಬೇಕಾಗಿದ್ದು, ರೈತರಿಗೆ ಮತ್ತು ಕಂಪನಿಗಳಿಗೆ ತಿಳಿಹೇಳುವ ಕೆಲಸವನ್ನು ಕಾರ್ಯಾಗಾರದ ಮುಖಾಂತರ ಆದಷ್ಟು ಬೇಗ ಮಾಡಿಸಲಾಗುವುದು. ಪರವಾನಗಿಯನ್ನು ಅಬಕಾರಿ ಇಲಾಖೆಯು ನೀಡಬೇಕಾಗಿದೆ. ಕಾರ್ಯಾಗಾರದ ಬಗ್ಗೆ ನಾವು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಪರವಾನಗಿ ನೀಡುವ ವಿಷಯ ಬೇರೆ. ಕಾರ್ಯಾಗಾರ ಮಾಡಲಾಗುತ್ತದೆಯಲ್ಲವೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್**:- ಕಾರ್ಯಾಗಾರದ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ.

**SRI RAMACHANDRA GOWDA:-** Is it a promise?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್**:- ಖಂಡಿತವಾಗಿಯೂ ಕ್ರಮ ಕೈಗೊಳ್ಳಲಾಗುವುದು.

**ಪ್ರಶ್ನೆ ಸಂಖ್ಯೆ 745**

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಕೇಳುವುದಕ್ಕೆ ನಮಗೆ ನಾಚಿಕೆ ಎನಿಸುತ್ತದೆ. ಹತ್ತು ಬಾರಿ ಇದರ ಬಗ್ಗೆ ಚರ್ಚೆ ಆಗಿದೆ. ಸಭೆಯನ್ನು ಕರೆಯಲಾಗಿದೆ. ಸರ್ಕಾರ ಇದಕ್ಕೆ ನೀಡಿರುವ ಉತ್ತರವನ್ನು ನಾನು ಗಮನಿಸಿದ್ದೇನೆ. ಆದರೆ ಪ್ರತಿನಿತ್ಯ Toll Plaza ಗಳಲ್ಲಿ ನಡೆಯುತ್ತಿರುವುದಕ್ಕೆ ಏನು ಮಾಡಬೇಕು? ಎರಡು – ಮೂರು ನಿಮಿಷಗಳಲ್ಲಿ ಹೋಗಬೇಕೆಂದು ಸರ್ಕಾರ ಹೇಳುತ್ತದೆ. ಆದರೆ ಅಲ್ಲಿ ಇಪ್ಪತ್ತು ನಿಮಿಷಗಳಾದರೂ ವಾಹನಗಳು ಮುಂದೆ ಹೋಗುವುದಿಲ್ಲ. ಅಲ್ಲಿ ಕೆಲಸ ಮಾಡುವವರೆಲ್ಲಾ ಬೇರೆ ಭಾಷೆಯವರು; ಅವರ್‍ಯಾರಿಗೂ ಕನ್ನಡ ಬರುವುದಿಲ್ಲ. ಗಾಡಿಗಳನ್ನು ನಿಲ್ಲಿಸಿ, ಹಿಂಬದಿಯಲ್ಲಿರುವ ಸಾಮಾನುಗಳನ್ನೆಲ್ಲಾ ತೆಗೆಸುತ್ತಾರೆ. ಇದೇ ಪ್ರಶ್ನೆಯನ್ನು ಎಷ್ಟು ಬಾರಿ ಕೇಳುವುದು? ಎರಡೆರಡು ತಾಸುಗಳ ಕಾಲ ಇದೇ ವಿಷಯದ ಬಗ್ಗೆ ಚರ್ಚೆ ಆಗಿದೆ. ಪುನಃ ಪುನಃ ಅದನ್ನೇ ಕೇಳುವುದಕ್ಕೆ ನಮಗೂ ಮುಜುಗರವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರು ತಮ್ಮ ಉತ್ತರವನ್ನು ಕೊಡುತ್ತಾರೆ. ಅವರು ದೂರವಾಣಿ ಸಂಖ್ಯೆಯೊಂದನ್ನು ಕೊಡುವುದಾಗಿಯೂ, ಏನಾದರೂ ತೊಂದರೆಯುಂಟಾದಲ್ಲಿ ಅವರಿಗೆ ಫೋನ್ ಮಾಡಿದಲ್ಲಿ ಉತ್ತರ ನೀಡುತ್ತಾರೆ ಎಂದು ಹೇಳಿದ್ದರು. ಅದು ನನಗೆ ನೆನಪಿದೆ. ಆ ಫೋನ್ ನಂಬರ್ ಅನ್ನು ಮತ್ತೊಮ್ಮೆ ಹೇಳುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ದೂರವಾಣಿ ಸಂಖ್ಯೆಯನ್ನು ನೀಡುವುದು ಸರಿಯಷ್ಟೆ. ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಲಕ್ಷ್ಮಿನಾರಾಯಣ ಅವರಿಗೆ ಫೋನ್ ಮಾಡಿದರೆ ತಕ್ಷಣವೇ ಸ್ಪಂದಿಸುತ್ತಾರೆ. ಇಲ್ಲಿರುವ ಪ್ರಶ್ನೆ ಅದಲ್ಲ. ಸಾಮಾನ್ಯ ಜನರ ಪರಿಸ್ಥಿತಿ ಏನು? ಎಲ್ಲಿಯೂ ಆಂಬ್ಯುಲೆನ್ಸ್ ಹಾಗೂ ವಿ.ಐ.ಪಿ. ವಾಹನಗಳಿಗೆ ಅವಕಾಶವಿಲ್ಲ ಎಂಬುದನ್ನು ತಾವು ಗಮನಿಸಬೇಕು. ಟ್ರಕ್, ಬಸ್‌ಗಳನ್ನು ಬಿಡುತ್ತಾರೆ. ಇತ್ತೀಚೆಗೆ ನಡೆದ ಘಟನೆಯೊಂದನ್ನು ಉದಾಹರಣೆಗಾಗಿ ಹೇಳುತ್ತೇನೆ. ಕಳೆದ ಐದನೇ ತಾರೀಖಿನಂದು ನಾನು ಬೆಂಗಳೂರಿಗೆ ಬರುವ ಸಂದರ್ಭದಲ್ಲಿ Toll Plaza ನಲ್ಲಿ ನನ್ನನ್ನು ತಡೆದರು. ವಿಧಾನ ಪರಿಷತ್ ಸಚಿವಾಲಯದಿಂದಲೇ 'ವಿಧಾನ ಪರಿಷತ್ ಸದಸ್ಯರು' ಎಂದು vehicle pass ಅನ್ನು ನೀಡಲಾಗಿದೆ. ನಾನು ಏಕೆ ನಿಲ್ಲಿಸಿದ್ದೀರೆಂದು ಕೇಳಿದಾಗ ಎಲ್ಲರೂ ಹೀಗೆಯೇ ಹೇಳುತ್ತಾರೆ, ನಿಮ್ಮ ID Card ಅನ್ನು ತೋರಿಸಿ ಎಂದರು. ಐಡಿ ಕಾರ್ಡ್ ಅನ್ನು ತೋರಿಸಿದೆ. ನನಗಿಂತ ಮುಂದೆ ಹೋದವನು ಎಂ.ಎಲ್.ಎ.ನೂ ಅಲ್ಲ, ಎಂ.ಎಲ್.ಸಿ.ನೂ ಅಲ್ಲ, ಆದರೆ ಪಾಸ್ ಹಾಕಿಕೊಂಡಿದ್ದಾನೆ. ನಮ್ಮ ಪಾಸುಗಳೂ ಸಹ ದುರುಪಯೋಗವಾಗುತ್ತಿವೆ. ಮುಂದೆ ಹೋದ ನಂತರ ಚಹಾ ಕುಡಿಯುವಾಗ ನೋಡಿದರೆ ಅಲ್ಲಿ ಎಂ.ಎಲ್.ಎ., ಎಂ.ಎಲ್.ಸಿ. ಯಾರೂ ಇರಲಿಲ್ಲ. ಅದನ್ನು strict ಆಗಿ ತಡೆಯಬೇಕು. ಶ್ರೀ ಚೌಡರೆಡ್ಡಿ ತೂಪಲ್ಲಿಯವರು ಹಾಗೂ ನಾನು ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಸಚಿವರು ಸಭೆಯನ್ನು ಕರೆಯಲಾಗುವುದು ಎಂದು ಹೇಳಿದ್ದರು. ಇದು ಪದೇ ಪದೇ ಸದನದಲ್ಲಿ ಚರ್ಚೆಗೆ ಬರುತ್ತಿದ್ದರೂ ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ನಾವು ಪ್ರತಿಬಾರಿ ಟೋಲ್‌ಗಳ ಬಳಿ ಹೋದಾಗಲೂ ಮುಜುಗರಕ್ಕೆ ಒಳಗಾಗಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಶ್ರೀ ಸೋಮಣ್ಣ ಅವರು ಇಲ್ಲಿಯೇ ಇದ್ದಾರೆ. ಅವರು ಒಂದೂವರೆ ತಾಸು ನಿಂತಿದ್ದರು. ನಾನು ನಲವತ್ತು ನಿಮಿಷಗಳ ಕಾಲ ನಿಂತಿದ್ದೇನೆ. ನಾನು ಪದೇ ಪದೇ ಪ್ರಶ್ನೆಯನ್ನು ಕೇಳಿ ಸದನದ ಸಮಯವನ್ನು ಹಾಳು ಮಾಡುವುದಿಲ್ಲ. ಮಾನ್ಯ ಸಚಿವರು ಒಂದು ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಲಿ. ನಮ್ಮ ಲೋಕೋಪಯೋಗಿ ಸಚಿವರು ದೊಡ್ಡ ಸಾಹಿತಿಗಳಂತೆ ಮಾತನಾಡುತ್ತಾರೆ. ಸಾಹಿತಿಯ ರೀತಿ ಭಾಷಣ ಮಾಡಿ ನಮ್ಮ ಮುಂದೆ ಗಿಡದಾಗಿನ ಮಂಗ್ಯಾನನ್ನೂ ಕೈಬಿಡುವ ರೀತಿಯಲ್ಲಿ ಮಾತನಾಡುತ್ತಾರೆ. ಆಮೇಲೆ ಮುಗಿಯಿತು. ಎಲ್ಲಿದ್ದರಲ್ಲೇ ಗೋವಿಂದಾ ಎನ್ನುತ್ತಾರೆ. ಅದಕ್ಕೆ ಅವರು ಸಾಹಿತ್ಯವನ್ನು ಬಿಟ್ಟು ಸರಿಯಾಗಿ ಉತ್ತರವನ್ನು ಹೇಳಬೇಕೆಂದು ಕೇಳುತ್ತೇನೆ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು Toll Plaza ಗಳ ಸಮಸ್ಯೆಯ ಬಗ್ಗೆ ಮಾತನಾಡುತ್ತಿರುವುದರಲ್ಲಿ ಸತ್ಯಾಂಶವಿದೆ. ವಾಹನ ದಟ್ಟಣೆ ಹೆಚ್ಚಾಗಿದೆ. ಆಂಬ್ಯುಲೆನ್ಸ್‌ಗಾಗಿ ಪ್ರತ್ಯೇಕವಾಗಿ ಒಂದು lane ಅನ್ನು ನಿಗದಿ ಪಡಿಸಿ, ವಾಹನ ದಟ್ಟಣೆಯಿದ್ದರೂ ಸಹ ಐದು ನಿಮಿಷಗಳೊಳಗಾಗಿ ಬಿಡಬೇಕು ಎಂದಿದ್ದರೂ ಸಹ ಅದು ಆಗುತ್ತಿಲ್ಲ. ನಾನು ದಿನಾಂಕ 13.02.2017ರಲ್ಲಿ ಎಲ್ಲರನ್ನೂ ಕರೆದು ಒಂದು ಸಭೆಯನ್ನು ಮಾಡಿರುತ್ತೇನೆ. ಕಟ್ಟುನಿಟ್ಟಿನ ಸೂಚನೆಗಳನ್ನೂ ಸಹ ಕೊಟ್ಟಿರುತ್ತೇನೆ. ಕೆಲವು ಕಡೆ ರಸ್ತೆಗಳು ಕಿರಿದಾಗಿದ್ದು, ಅದನ್ನು ಅಗಲೀಕರಣಗೊಳಿಸುವ ಕಾಮಗಾರಿಯು ನಡೆದಿರುವುದಿಲ್ಲ. ಅದು ಕೂಡ ಶೀಘ್ರವಾಗಿ ಆಗಬೇಕೆಂದು ಹೇಳಿದ್ದೇನೆ. ಬಂಟ್ವಾಳ ಮತ್ತು ಸುರತ್ಕಲ್‌ನಲ್ಲಿ ಸ್ಥಳವಿಲ್ಲದೆ ಅದನ್ನು ಮಾಡಿರುವುದಿಲ್ಲ. ತತ್ಕಾಲಕ್ಕೆ ಅದನ್ನು ಮಾಡಿದ್ದೇವೆ. ಯಾವುದೇ ಸಾರ್ವಜನಿಕರಿಂದಾಗಲೀ ಅಥವಾ ಸದಸ್ಯರಿಂದಾಗಲೀ ದೂರು ಬಂದರೆ ಅದನ್ನು ಜರೂರಾಗಿ ಮಾಡಬೇಕೆಂದು ನಾನು ನಮ್ಮ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಟ್ಟಿರುತ್ತೇನೆ. Toll Plaza ಗಳ ಬಳಿಯಲ್ಲಿ ಮಧ್ಯಾಹ್ನ ಮತ್ತು ಸಂಜೆಯ ವೇಳೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ನಮ್ಮ ಅಧಿಕಾರಿಗಳಿಗೂ, Toll Plaza ದವರನ್ನೂ ಕರೆಸಿ ಸೂಚನೆಯನ್ನು ನೀಡಿರುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ;-** ಮಾನ್ಯ ಸಭಾಪತಿಯವರೇ, ನನ್ನ ಬಳಿಯಿರುವುದು ಒಂದೇ ಕಾರು. ಆ ಕಾರಿನ ಮೇಲೆ ಪೇಂಟ್‌ನಿಂದ ಶಾಸಕರು, ವಿಧಾನಪರಿಷತ್ ಎಂದು ಬರೆಯಲಾಗಿದೆ. ತಾವು ಕೊಟ್ಟಂತಹ ಪಾಸ್ ಅನ್ನು ಸಹ ಮುಂಭಾಗದ ಗಾಜಿನ ಮೇಲೆ ಅಂಟಿಸಿರುತ್ತೇನೆ. Toll Plaza ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋದಾಗ ನನ್ನನ್ನು ತರುಬಿದರು. ತರುಬಿದ್ದಕ್ಕಾಗಿ ನನ್ನದೇನೂ ತಕರಾರಿಲ್ಲ. ಮೊದಲು ನಿಮ್ಮ ಗುರುತಿನ ಚೀಟಿಯನ್ನು ಕೊಡಿ ಎಂದು ಕೇಳಿದರು. ID Card ಅನ್ನು ನಾನು ಅವರಿಗೆ ತೋರಿಸಿದೆನು. ಇಂತಹ ID Card ಗಳು ಸಾಕಷ್ಟು ಬರುತ್ತವೆ. ಇದು ನಿಮ್ಮದಲ್ಲ ಎಂದು ಹೇಳಿದರು. ಇದು ನೀವು ಕೊಟ್ಟಿರುವ ಗುರುತಿನ ಚೀಟಿಯಾಗಿದ್ದು, ಇದನ್ನು ನಾನು ಯಾವಾಗಲೂ ನನ್ನ ಕಿಸೆಯೊಳಗೆ ಇಟ್ಟುಕೊಂಡಿರುತ್ತೇನೆ.

(...ಮುಂದು)

(125)20.02.2018-12.00-ಎಂವಿ-ಎಕೆ

**ಶ್ರೀ ಸೋಮಣ್ಣ ಮ. ಬೇವಿನಮರದ (ಮುಂದು):-**

ಮಾನ್ಯ ಸಭಾಪತಿಯವರೇ, ನನ್ನನ್ನು ಸುಮಾರು ಒಂದೂವರೆ ತಾಸು ತರುಬಿದರು. ಆಗ ಅಲ್ಲಿ ನಾನು ಒಬ್ಬನೆ ಇದ್ದೆ, ನನ್ನ ಆಜುಬಾಜು ಪರಿಚಯ ಇದ್ದವರು ಯಾರು ಸಹ ಇರಲಿಲ್ಲ. ಅವರು ನನ್ನನ್ನು ಸುಮಾರು ಒಂದೂವರೆ ತಾಸು ತರುಬಿದರು ನಂತರ ಹಾವೇರಿಯಿಂದ ಮುನ್ಸಿಪಾಲಿಟಿ ಅಧ್ಯಕ್ಷರು ಮತ್ತು ಸದಸ್ಯರು ಬಂದರು. ಅವರು ಅಲ್ಲಿಗೆ ಬಂದು ಅಣ್ಣಾವ್ರೆ, ಏಕೆ ಇಲ್ಲಿ ತರುಬಿದ್ದೀರಿ ಎಂದು ಕೇಳಿದರು. ಅದಕ್ಕೆ ನಾನು ಅವರಿಗೆ ಹೇಳಿದೆ, ಇವರು ನನ್ನನ್ನು ಎಂಎಲ್‌ಸಿ ಅಲ್ಲ ಮತ್ತು ಈ ಕಾರ್ಡ್ ಅಲ್ಲವೆಂದು ಹೇಳುತ್ತಿದ್ದಾರೆ, ಅದಕ್ಕೆ ನಾನು ಇಲ್ಲೇ ನಿಂತಿದ್ದೇನೆ ಎಂದು ಹೇಳಿದೆ. ನಾನು ಒಂದು ಶಾಣೆತನ ಮಾಡಿದೆ ಏನೆಂದರೆ, ನನ್ನ ಗಾಡಿಯನ್ನು ಮುಂದಕ್ಕೆ ಸರಿಸಲಿಲ್ಲ. ಸುಮಾರು ಒಂದೂವರೆ ಕಿಲೋಮೀಟರ್ ದೂರದಷ್ಟು ಗಾಡಿಗಳು ನಿಂತಿದ್ದವು. ಆಗ ಧಾರವಾಡದ ಎಸ್.ಪಿ ಮತ್ತು ಟಿವಿಯವರು ಸಹ ಅಲ್ಲಿಗೆ ಬಂದರು. ಅಲ್ಲಿ ಎದುರಿಗೆ ರಮ್ಯ ರೆಸಿಡೆನ್ಸಿ ಹೋಟೆಲ್ ಇದೆ. ಆ ಹೋಟೆಲ್‌ನವರು ಮಾನ್ಯ ಸಚಿವರಾದ ವಿನಯ ಕುಲಕರ್ಣಿ ಯವರ ಪರಿಚಯಸ್ಥರು, ಅವರು ಹೇಳಿದರು ಇವರು ಸೋಮಣ್ಣ ಬೇವಿನಮರದ, ಶಿಗ್ಗಾಂವ್‌ದವರು ನೀವು ಅವರನ್ನು ಏತಕ್ಕೆ ತರುಬಿದ್ದೀರಿ ಎಂದು ಹೇಳಿದರು. ಆ ರೀತಿ ಹೇಳಿದರೂ ಸಹ ಬಿಡಲಿಲ್ಲ. ಟಿವಿಯವರು, ಬಸ್‌ನ ಡ್ರೈವರ್‌ಗಳು ಎಲ್ಲರೂ ಸೇರಿಕೊಂಡು ಅವನಿಗೆ ಹೊಡೆಯುವುದಕ್ಕೆ ಹೋದರು, ಆಗ ನನ್ನನ್ನು ಬಿಟ್ಟಿದ್ದಾರೆ. ಹಾಗಾದರೆ ನಾನು ಹೇಳಿರುವುದು ಸುಳ್ಳೆ? ಈ ಕಾರ್ಡ್ ಸುಳ್ಳೆ? ನೀವು ಪಾಸ್ ಕೊಟ್ಟಿರುವುದು ಸುಳ್ಳೆ? ನನ್ನ ಗಾಡಿಯ ಮೇಲೆ ವಿಧಾನ ಪರಿಷತ್ತಿನ ಸದಸ್ಯರು ಎಂದು ಬರೆದಿರುವುದು ಸುಳ್ಳೆ? ಈ ವಿಷಯವನ್ನು ಹೋದ ಬಾರಿಯೂ ಸಹ ಹೇಳಿದ್ದೇನೆ. ಆದರೆ ತಾವು ಇದರ ಬಗ್ಗೆ ಲಕ್ಷ್ಯ ತೆಗೆದುಕೊಳ್ಳಲಿಲ್ಲ. ಇದಕ್ಕೆ ತಾವು ಏನು ಮಾಡುತ್ತೀರೆಂದು ಹೇಳಿ.

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದೆಲ್ಲಾ ಸತ್ಯ ಇರಬಹುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರಾದ ರಾಮಚಂದ್ರ ಗೌಡರೇ ತಾವು ಕುಳಿತುಕೊಳ್ಳಿ, ಮಾನ್ಯ ಸಚಿವರು ಅವರಿಗೆ ಉತ್ತರವನ್ನು ನೀಡಲಿ, ಆಮೇಲೆ ನಿಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ಸದಸ್ಯರಾದ ಸೋಮಣ್ಣ ಮ. ಬೇವಿನಮರದರವರಿಗೆ ಉತ್ತರ ಬೇಡವೆ?

(ಗೊಂದಲ)

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಗುತ್ತಿಗೆದಾರರು ಬಹಳ ದುರಂಹಕಾರಿಗಳು. (ಗೊಂದಲ) ಗುತ್ತಿಗೆದಾರರು ರಸ್ತೆಯೇ ನಮ್ಮದು ಎಂದು ಹೇಳುತ್ತಾರೆ. ಅವರು ಮಾನ್ಯ ಪ್ರಧಾನ ಮಂತ್ರಿಗಳ ಮಾತು ಮತ್ತು ಮಾನ್ಯ ಸಚಿವರ ಮಾತನ್ನು ಸಹ ಕೇಳುವುದಿಲ್ಲ, ಅವರೆಲ್ಲರೂ ಸಹ ಆ ಸ್ಥಿತಿಯಲ್ಲಿದ್ದಾರೆ, ಅವರೆಲ್ಲರೂ ಒಂದು ದೊಡ್ಡ ಕುಳ.

**ಸಭಾಪತಿಯವರು:-** ತಾವು ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಸಚಿವರು ಉತ್ತರ ನೀಡಲಿ.

(ಗೊಂದಲ)

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, B.O.T. (Build Operate Transfer), B.O.O.T.(Build Own Operate Transfer) ಎಲ್ಲಾ ಮಾಡಿರುವುದರಿಂದ, E.P.C. (Engineering, Procurement and Construction) contract ನಲ್ಲಿ ದೊಡ್ಡ ಕುಳಗಳೇ, ಅಂದರೆ national and international level ನ ಕುಳಗಳೆ ಕಟ್ಟಬೇಕು. ಅಂದರೆ infrastructure ಮಾಡುವಾಗ. ಇಲ್ಲಿ ಮುಖ್ಯವಾಗಿ ಇರುವುದು, ಮಾನ್ಯ ಸದಸ್ಯರಿಗೆ ಆಗುವಂತಹ ಅನಾನುಕೂಲ, ಅಂಬ್ಯುಲೆನ್ಸ್ ಮತ್ತಿತರರಿಗೆ ಆಗುವಂತಹ ತೊಂದರೆಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳ ಸಭೆಯನ್ನು ಕರೆದು ಅವರಿಗೆ ಕಟ್ಟುನಿಟ್ಟಿನ ಸೂಚನೆಯನ್ನು ಕೊಟ್ಟಿದ್ದೇನೆ. ಆದರೂ ಸಹ ನೂರಕ್ಕೆ ನೂರರಷ್ಟು ಅನ್ನು ಸರಿಪಡಿಸುವುದಕ್ಕೆ ಆಗಿಲ್ಲ. ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಬಂದರು ಸಹ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಏಕಾಏಕಿ ವಾಹನದ ದೊಡ್ಡ ಸಂದಣಿ ಉಂಟಾದಾಗ, ಅದನ್ನು ಬಿಟ್ಟು ಹೋಗಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾನು ಕೂಡ ಅದನ್ನು ಅನುಭವಿಸಿದ್ದೇನೆ, as a PWD Minister. ಆ ತರಹ ಹೇಳಿ, ನನ್ನ ಗಾಡಿಯನ್ನು ಬಿಟ್ಟುಬಿಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಬಂದರು ಮಾಡುವುದಕ್ಕೆ ಆಗುವುದಿಲ್ಲವೆಂದು ಸದನದಲ್ಲಿ ಹೇಳಿದರೆ, ಅದು ಪತ್ರಿಕೆಯಲ್ಲಿ ಬರುತ್ತದೆ, ಹಾಗಾದರೆ ಸರ್ಕಾರಕ್ಕೆ ಏನು ಮರ್ಯಾದೆ ಇರುತ್ತದೆ. ನೀವು ಇದಕ್ಕೆ ಸದನ ಸಮಿತಿ ಮಾಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ. ನಾನು ಅದನ್ನು ಹದಿನೈದು ದಿವಸದಲ್ಲಿ ನಿಯಂತ್ರಿಸುತ್ತೇನೆ. ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಬಂದರು ಸಹ ಅದನ್ನು ನಿಯಂತ್ರಿಸುವುದಕ್ಕೆ ಆಗುವುದಿಲ್ಲವೆಂದರೆ, ಇದು ಯಾವ ತರಹದ ಸರ್ಕಾರ, ಇದನ್ನು ಸಚಿವರು ಹೇಳುವಂತಹ ಮಾತಲ್ಲ.

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಇನ್ನು ಮುಂದೆ ಮಾನ್ಯ ಸದಸ್ಯರಾದ ಶ್ರೀ ಚೌಡರೆಡ್ಡಿ ತೂಪಲ್ಲಿಯವರ ಅಧ್ಯಕ್ಷತೆಯಲ್ಲಿ ಇದನ್ನು ಮಾಡೋಣ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬರಿ ಭಾಷಣ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಮಾನ್ಯ ಸದಸ್ಯರು ಕುಳಿತುಕೊಳ್ಳುವುದು. You have expressed your views. It has gone on record.

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದೇ ವಿಷಯವನ್ನು ಎಷ್ಟು ಬಾರಿ ಕೇಳುತ್ತಾರೆ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, ಜನದಟ್ಟಣೆ ಇದ್ದಾಗ ಪಾಳೆಯ ಪ್ರಕಾರ ಹೋಗಬೇಕು. ನಾವು ಕದ್ದೇನು ಹೋಗಿಲ್ಲ, ಕ್ಯೂನಲ್ಲೇ ಹೋಗುತ್ತೇವೆ. ಕ್ಯೂನಲ್ಲಿ ಹೋಗಬೇಕಾದರೆ ನಮ್ಮ ಕಾರ್ಡ್ ಅನ್ನು ತೋರಿಸುತ್ತೇವೆ. ನಾವು ನಮ್ಮ ಕಾರ್ಡ್ ಅನ್ನು ತೋರಿಸಿದರು ಸಹ ಅವರು ಬಿಡುವುದಿಲ್ಲವೆಂದರೆ ಇದರ ಅರ್ಥವೇನು?

**Dr. H.C. MAHADEVAPPA:** Please sit down.

**ಸಭಾಪತಿಯವರು:-** ಮಾನ್ಯ ಸಚಿವರು ಏನು ಮಾಡಬೇಕೆಂದು ಹೇಳುತ್ತಾರೆ ತಾವು ಅದನ್ನು ಕೇಳಿ. ನಿಮಗೆ ಮಾನ್ಯ ಸಚಿವರಿಂದ ಉತ್ತರ ಬೇಡವೆ? You don't want his answer? If you don't want his answer, I will go to the next question. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ.

**Dr. H.C. MAHADEVAPPA:** You please sit down.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮಾತನಾಡುತ್ತೇನೆ.

**ಡಾ.ಎಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಎಲ್ಲರೂ ಅನೇಕ ಬಾರಿ ಕೇಳಿದ್ದಾರೆ. ಮಾನ್ಯ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿ, ಶ್ರೀ ಸೋಮಣ್ಣ ಮ. ಬೇವಿನಮರದ ಮತ್ತು ನಮ್ಮ Goldman (ಟಿ.ಎ.ಶರವಣ) ರವರು ಸಹ ಕೇಳಿದ್ದಾರೆ. ಸುಮಾರು ಎಲ್ಲರೂ ಸಹ ಇದೆ ಪ್ರಶ್ನೆಯನ್ನು ಕೇಳಿದ್ದಾರೆ. ಇವರು ಯಾವ ಸಂದರ್ಭದಲ್ಲಿ ಹೋಗುತ್ತಾರೆ, ವಾಹನ ದಟ್ಟಣೆ ಹೇಗೆ ಇರುತ್ತದೆ, we don't know. ಅವರು ಯಾವ ಸಮಯದಲ್ಲಿ ಹೋಗುತ್ತಾರೋ ಅಥವಾ odd hours ನಲ್ಲಿ ಹೋಗುತ್ತಾರೋ ಎಂದು ಗೊತ್ತಾಗುವುದಿಲ್ಲ. ಅದು ಅವರು ಹೋದಂತಹ ಸಂದರ್ಭದಲ್ಲಿ ಇರುತ್ತದೆ. ಕೆಲವು ಸಮಯದಲ್ಲಿ ಆರಾಮವಾಗಿ ಹೋಗುತ್ತೇವೆ. ಸಾಯಂಕಾಲದಲ್ಲಿ ಹೆಚ್ಚು ವಾಹನ ದಟ್ಟಣೆ ಇರುತ್ತದೆ. ಆದರೆ ಈ ರೀತಿ ಇದೆಯೆಂದು ನೀವು ಇಷ್ಟ ಬಂದ ಹಾಗೆ ಮಾಡಿ ಎಂದು ಟೋಲ್‌ನವರಿಗೆ ನಾವು ಯಾವುದೇ ಗೈಡ್‌ಲೈನ್ಸ್ ಕೊಟ್ಟಿಲ್ಲ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಅದಕ್ಕೆಲ್ಲಾ ಒಪ್ಪಂದಗಳು ಇವೆ. ಲಾಭ ಜಾಸ್ತಿಯಾದಾಗ ಯಾವ ರೀತಿ ನಡೆದುಕೊಳ್ಳಬೇಕೆಂದು ನಿಬಂಧನೆಗಳು ಇವೆ.

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಇದು ಪ್ರಶ್ನೋತ್ತರ ವೇಳೆ, ಎಲ್ಲರೂ ಮಾತನಾಡಬೇಡಿ, ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳುವುದು.

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಹಾಗೆಂದು, ನೀವು ಸ್ವೇಚ್ಛಚಾರದಿಂದ ನಡೆದುಕೊಳ್ಳಿ ಎಂದು ಸರ್ಕಾರ ಹೇಳಿಲ್ಲ. There is a specific Concession Agreement according to the National Toll Policy 2008 and 2009. ಅದರ ಉಲ್ಲಂಘನೆ ಆಗಿದ್ದರೆ, ನಾವು ಖಂಡಿತವಾಗಿಯು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ಮಾನ್ಯ ಸದಸ್ಯರಾದ ಸೋಮಣ್ಣ ಬೇವಿನಮರದ ಅವರು ಹೇಳಿದರು, ನನ್ನನ್ನು ಎರಡು ಗಂಟೆ ನಿಲ್ಲಿಸಿದರು, ನನ್ನ ಬಳಿ ಪಾಸ್‌ಪೋರ್ಟ್ ಕೇಳಿದರು ಮತ್ತು ಗುರುತಿನ ಚೀಟಿಯನ್ನು ಕೇಳಿದರು ಎಂದು. ಗುರುತಿನ ಚೀಟಿಯನ್ನು ತೋರಿಸಿದರು ಸಹ ಇದು fake ಇರಬಹುದೆಂದು ಬಿಡಲಿಲ್ಲ. ಆ ತರಹದ ಘಟನೆ ನಿರ್ದಿಷ್ಟವಾಗಿ ಆಗುವುದಾದರೆ, I will get it enquired. ಅವರಿಗೆ ಅಂತಹ ಘಟನೆ ನಡೆದಿದ್ದರೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಸಚಿವರು ಅದನ್ನು ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ, ಸಾಕು ತಾವು ಕುಳಿತುಕೊಳ್ಳಿ, ಮಧ್ಯದಲ್ಲಿ ಬಾಯಿ ಹಾಕಬೇಡಿ, ಮಾನ್ಯ ಸಚಿವರು ಮಾಡುತ್ತೇನೆ ಎಂದು ಹೇಳಿದ್ದಾರೆ, ಅವರು ಮತೇನು ಮಾಡಬೇಕು. ಸಾಕು ಮಧ್ಯ ಎದ್ದು ಹೇಳಬೇಡಿ. No, it's not correct.

**ಡಾ.ಜಯಮಾಲ ರಾಮಚಂದ್ರ**:- ಮಾನ್ಯ ಸಭಾಪತಿಯವರೇ, Please, ಒಂದೇ ಒಂದು ನಿಮಿಷ, ನಾನು ನನ್ನ ಒಂದು ಅನುಭವವನ್ನು ಹೇಳುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದ**:- ಮಾನ್ಯ ಸಭಾಪತಿಯವರೇ, ನಾವು ದುಡ್ಡು ಕೊಟ್ಟು ಹೋಗಬೇಕು ಎಂದು, ಮಾನ್ಯ ಸಚಿವರು ಒಂದು ಆದೇಶವನ್ನು ಮಾಡಲಿ. ಬೇಡವೆಂದರೆ ಇದು ಏತಕ್ಕೆ ಬೇಕು?

**ಡಾ.ಹೆಚ್.ಸಿ.ಮಹದೇವಪ್ಪ**:- ಮಾನ್ಯ ಸಭಾಪತಿಯವರೇ, I mentioned that the Concession Agreement is made under the National Toll Policy Guidelines. I have no jurisdiction over the National Toll Policy Guidelines. ಸ್ವಲ್ಪ ಕೇಳಿ ಸ್ವಾಮಿ. ಆ ಗೈಡ್‌ಲೈನ್ಸ್ ಮಾಡುವಾಗ, ಯಾರ್ಯಾರಿಗೆ ಪರವಾನಿಗೆ ಇದೆ ಎಂದು ಗೊತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಎರಡು ಗಂಟೆ ಕಾದು, ಗುರುತಿನ ಚೀಟಿ ತೋರಿಸಿ, ಪಾಸ್‌ಪೋರ್ಟ್ ತೋರಿಸಿದರೂ ಸಹ ಬಿಡಲಿಲ್ಲ. ಮಾನ್ಯ ಸಚಿವರಾದ ವಿನಯ ಕುಲಕರ್ಣಿಯವರು ಬಂದು ನನ್ನನ್ನು ಗುರುತಿಸಿದರು, ಅಲ್ಲಿ ಗೂಂಡಾಗಿರಿ ಮಾಡಿದರು ಎಂದು. If there is any specific incident, I will get it enquired and I will write to the Union Ministry of Surface Transport for having violated the Concession Agreement Guidelines. What else does the Hon'ble Member want?

**ಚುಕ್ಕೆ ಪ್ರಶ್ನೆ ಸಂಖ್ಯೆ: 606**
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

**ಚುಕ್ಕೆ ಪ್ರಶ್ನೆ ಸಂಖ್ಯೆ: 774**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ ಸಿಂಗ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ವಿದ್ಯುತ್ ಕಂಬಗಳೆಲ್ಲಾ ಬಹಳ ಹಳೆಯದಾಗಿವೆ. ಮಳೆ ಮತ್ತು ಗಾಳಿ ಬಂದರೆ ಅವುಗಳೆಲ್ಲಾ ಬೀಳುತ್ತಿವೆ, ಅದಕ್ಕೆ ಅವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ದೀನ ದಯಾಳು ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಆದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯುತ್ ಸಂಪರ್ಕವನ್ನು ಇನ್ನೂ ಕಲ್ಪಿಸಿಲ್ಲ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಬಹಳಷ್ಟು ಕಡೆ ಇನ್ನೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಇದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಜಯ ಸಿಂಗ್‌ರವರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಸಾಮಾನ್ಯವಾಗಿ 15, 20 ವರ್ಷ ಆದ ಮೇಲೆ ಪೋಲ್‌ಗಳಲ್ಲಿ sag ಜಾಸ್ತಿ ಆಗುತ್ತದೆ. ಅದನ್ನು ನಾವು ಸರಿ ಮಾಡಬೇಕೆಂದು ಮಧ್ಯ interpoles ಹಾಕುವಂಥದ್ದು, reconnecting ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಕಳೆದ ಐದು ವರ್ಷದಲ್ಲಿ ಸುಮಾರು 253 ಕಿಲೋಮೀಟರ್‌ನಷ್ಟು ಅವರ ಪ್ರದೇಶದ ವ್ಯಾಪ್ತಿಯಲ್ಲಿ ಇದನ್ನು restring ಸ್ವಲ್ಪ ಸರಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನು ಎಲ್ಲೆಲ್ಲಿ ಇದೆ ಎಂದು ತಾವು ಬರೆದು ಕಳುಹಿಸಿದರೆ, ಅದನ್ನು ಸರಿಪಡಿಸುತ್ತೇವೆ. ಮೂರನೆಯದಾಗಿ ಗಂಗಾ ಕಲ್ಯಾಣ ಯೋಜನೆ ವಿಚಾರದಲ್ಲಿ ಪ್ರಸ್ತಾವನೆ ಮಾಡಿದ್ದಾರೆ. ಈಗ ನಮ್ಮ ಟಾರ್ಗೆಟ್ ಸುಮಾರು 30 ಸಾವಿರ ಇದೆ. ನಾವು ಈಗಾಗಲೇ ಸುಮಾರು 18 ಸಾವಿರದಷ್ಟು ವಿದ್ಯುತ್ ಅನ್ನು ಜನವರಿ 31ರ ಒಳಗೆ ಮುಗಿಸಿದ್ದೇವೆ. ಮುಂದಿನ ಮಾರ್ಚ್ ಒಳಗಡೆ ಅದೆಲ್ಲವನ್ನು ಸಹ ಮುಗಿಸುತ್ತೇವೆ. ದೀನ ದಯಾಳು ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅಡಿಯಲ್ಲಿ ಸುಮಾರು 83 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಿ, ಕಾರ್ಯ ಪ್ರಾರಂಭ ಮಾಡಿದ್ದೇವೆ. ಈಗ ಎಲ್ಲೆಲ್ಲಿ, ಏನೇನು ಬಾಕಿ ಉಳಿದುಕೊಂಡಿದೆ, ಅದಕ್ಕೆ ಎಲ್ಲದಕ್ಕೂ ಸಹ ಟೆಂಡರ್ ಅನ್ನು ಕರೆದಿದ್ದೇವೆ. ಇದು ಬಹಳ ಮುಖ್ಯವಾದಂತಹ ಕೆಲಸ. ನಿಮ್ಮ ಪ್ರದೇಶ ವ್ಯಾಪ್ತಿಯ ಔರಾದ್, ಬಸವಕಲ್ಯಾಣ, ಭಾಲ್ಕಿ, ಬೀದರ್ ಮತ್ತು ಹುಮನಬಾದ್ ಸೇರಿದಂತೆ, ಏನೆಲ್ಲಾ ವಿದ್ಯುತ್ ಮಾರ್ಗಗಳನ್ನು ಬೇರೆ ಮಾಡುವಂತಹ ಕೆಲಸ ಮತ್ತು ನಮ್ಮ ಗ್ರಾಮೀಣ ವಿದ್ಯುದೀಕರಣ, ಮೀಟರಿಂಗ್ ಇವೆಲ್ಲಾ ಕೆಲಸವನ್ನು ಸಹ ಮಾಡಿದ್ದೇವೆ. ಇನ್ನು specific ಆಗಿ ಏನಾದರೂ ಇದ್ದರೆ, ತಾವು ಶಾಸಕರಾಗಿದ್ದೀರಿ ಅದನ್ನು ಕಳುಹಿಸಿಕೊಡಿ, ನಾವು ಖಂಡಿತವಾಗಿ priority ಮೇಲೆ ಸಹಕಾರ ಮಾಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಮಾನ್ಯ ಇಂಧನ ಸಚಿವರ ಗಮನಕ್ಕೆ. ನಾನು ಒಂದು ವಾರದ ಹಿಂದೆ, ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನಲ್ಲಿ ಒಂದೆರಡು ಗ್ರಾಮಗಳಿಗೆ ಭೇಟಿ ನೀಡಿದ್ದೆ. ಆ ಗ್ರಾಮದಲ್ಲಿ ಅವರ ತೋಟವನ್ನು ತೋರಿಸುವುದಕ್ಕೆ ಕರೆದುಕೊಂಡು ಹೋದರು. ಆ ದಾರಿಯುದ್ದಕ್ಕೂ ಸಹ ವಿದ್ಯುತ್ ತಂತಿಗಳು ಬಾಗಿದ್ದವು, ಆ ತಂತಿಗಳು ಎಷ್ಟು ಬಾಗಿದ್ದವು ಎಂದರೆ, ನನ್ನನ್ನು ಒಬ್ಬರು ಕೈಹಿಡಿದು ಎಳೆದರು. ಏಕೆಂದರೆ ಅದು ನನ್ನ ತಲೆಗೆ ತಾಕುವ ಹಾಗೆ ಇತ್ತು. ಪುಣ್ಯಕ್ಕೆ ಅದರಲ್ಲಿ ವಿದ್ಯುತ್ ಸರಬರಾಜು ಇರಲಿಲ್ಲ. ಸ್ವಲ್ಪ ನಿಮ್ಮ ಅಧಿಕಾರಿಗಳಿಗೆ ಆ ಕಡೆ ಗಮನಿಸುವುದಕ್ಕೆ ಹೇಳಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಚನ್ನಗಿರಿ ತಾಲ್ಲೂಕಿನಲ್ಲಿ ಯಾವ ಊರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಆ ಊರಿನ ಹೆಸರನ್ನು ಆಮೇಲೆ ಹೇಳುತ್ತೇನೆ ಮತ್ತು ಅದರ ಮಾಹಿತಿಯನ್ನು ಕೊಡುತ್ತೇನೆ. ಅದು ಚನ್ನಗಿರಿಯ ಹತ್ತಿರ ಇದೆ, ಅಲ್ಲಿಂದ ಸುಮಾರು ನಾಲ್ಕೈದು ಕಿಲೋಮೀಟರ್ ಇದೆ, ನನಗೆ ಆ ಊರಿನ ಹೆಸರು ನೆನಪಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ನನಗೆ ಆ ಊರಿನ ಹೆಸರು ಹೇಳಿ. ನಾಳೆ ಸಂಜೆಯೊಳಗೆ ನಿಮಗೆ ವರದಿ ಮಾಡಿ, ಅದರ photoವನ್ನು ಸಹ ತಮಗೆ ಕಳುಹಿಸುತ್ತೇನೆ.

**ಸಭಾಪತಿಯವರು**:- ನಿಮ್ಮ ಆಫೀಸ್‌ಗೆ ಫೋನ್ ಮಾಡಿಸುತ್ತೇನೆ.

**(ಮುಂದು...)**

**ಸಭಾಪತಿಯವರು(ಮುಂದು)**:-

ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ತಮ್ಮ ಪರವಾಗಿ ಪ್ರಶ್ನೆಯನ್ನು ಶ್ರೀ ಎಂ.ಕೆ. ಪ್ರಾಣೇಶ್‌ರವರು ಕೇಳಲು ಕಾಗದ ಕೊಟ್ಟಿರುವುದು ನನಗೆ ಈಗ ಬಂದು ತಲುಪಿದೆ. ಅದರಂತೆ, ಶ್ರೀ ಎಂ.ಕೆ. ಪ್ರಾಣೇಶ್‌ರವರು ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ ಪ್ರಶ್ನೆಯನ್ನು ಕೇಳಬಹುದು.

**ಪ್ರಶ್ನೆ ಸಂಖ್ಯೆ: 606**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಕೆ. ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇಲ್ಲಿ ಮೂಲಭೂತವಾಗಿರುವಂತಹ 4-5 ಪ್ರಶ್ನೆಗಳಿಗೆ ಮಾನ್ಯ ಸಚಿವರು ದಯಮಾಡಿ ಉತ್ತರವನ್ನು ಕೊಡಬೇಕು. ಗ್ರಾಮ ಪಂಚಾಯತಿಗಳಲ್ಲಿ ಬಾಕಿ ಇರುವಂತಹ ವಿದ್ಯುತ್ ಬಿಲ್ಲಿಗೆ ಈಗಲೂ ಬಡ್ಡಿ ವಿಧಿಸಲಾಗುತ್ತಿದೆ ಮತ್ತು ಹಳೆಯ ಬಾಕಿಯ ವಸೂಲಿಯನ್ನು ಸಹ ಮಾಡಲಾಗುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟನೆ ನೀಡಬೇಕು. ಎರಡನೆಯದಾಗಿ, ಗ್ರಾಮ ಪಂಚಾಯತಿಗಳು ಎಂದರೆ ಸ್ಥಳೀಯ ಸರ್ಕಾರ ಇದ್ದಹಾಗೆ. ಅವು ಜನರಿಗೆ ಸೇವೆಗಳನ್ನು ನೀಡುತ್ತವೆಯೇ ಹೊರತು ದೊಡ್ಡ ಉದ್ಯಮಗಳಂತೆ ಲಾಭ ಮಾಡುತ್ತಿಲ್ಲ. ಗ್ರಾಮೀಣ ಜನರಿಗೆ ಕುಡಿಯುವ ನೀರು ಸರಬರಾಜು ಮಾಡುವ ಮತ್ತು ಸಾರ್ವಜನಿಕ ಬೀದಿ ದೀಪಗಳಿಗೆ ಅತೀ ಕಡಿಮೆ ವಿದ್ಯುತ್ ದರ ವಿಧಿಸಬೇಕು. ಅದನ್ನು ವಿಧಿಸುತ್ತಿಲ್ಲ, ಅದು ಏತಕ್ಕೆ? ಮತ್ತು ಎಸ್ಕಾಂಗಳು ಬಡ್ಡಿ ವ್ಯವಹಾರದಲ್ಲಿ ತೊಡಗಿವೆಯೇ ಎನ್ನುವಂತಹ ಅನುಮಾನಗಳು ಇವತ್ತಿನ ದಿವಸ ಪ್ರಾರಂಭವಾಗಿದೆ. ಗ್ರಾಮ ಪಂಚಾಯತಿಗಳಲ್ಲಿ ಬಾಕಿ ಇರಿಸಿಕೊಂಡಿರುವಂತಹ ವಿದ್ಯುತ್ ಬಿಲ್‌ಗಳಿಗೆ ಅತಿಯಾದ ಬಡ್ಡಿಯನ್ನು ವಿಧಿಸಲಾಗುತ್ತಿರುವುದು ಮತ್ತು ಪುನಃ ಬಡ್ಡಿಗೂ ಚಕ್ರ ಬಡ್ಡಿಯನ್ನು ಹಾಕುವಂತಹ ಪರಿಸ್ಥಿತಿ ಇದೆ. ಅದನ್ನು ಏತಕ್ಕೆ ಮಾಡಲಾಗುತ್ತಿದೆ? ಇಂಧನ ತಂತ್ರಜ್ಞಾನ ಮುಂದುವರೆದಿರುವ ದಿನಗಳಲ್ಲಿಯೂ ಸಹ ಎಸ್ಕಾಂಗಳು ಮೀಟರ್ ನಂಬರ್, ಬಳಸಿದ ಯೂನಿಟ್ ವಿವರ, ಯೂನಿಟ್ ಬಡ್ಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿವರ, ದರ ಸಹಿತ ಬಿಲ್ಲುಗಳು ಗ್ರಾಮ ಪಂಚಾಯತಿಗಳಿಗೆ ನೀಡುತ್ತಿಲ್ಲ. ಈ ಶಿಸ್ತನ್ನು ಇನ್ನು ಉಳಿಸಿಕೊಂಡಿರುವುದಿಲ್ಲ. Reconciliation ಮಾಡಿದಾಗ ಅನ್ನುವ ಒಂದು ಪ್ರಶ್ನೆ ಇದೆ.

ಹಾಗಾಗಿ, ಇನ್ನೊಂದು ವಿಷಯವೆಂದರೆ, ಈ ವಿದ್ಯುತ್ ಬಿಲ್ ಅವೈಜ್ಞಾನಿಕ ಮತ್ತು ಅಸ್ಪಷ್ಟತೆಯಿಂದ ಕೂಡಿದೆಯೆಂದು ಹೇಳಿದರೆ, ಉಡುಪಿಯ ಮಂಡಕೂರು ಗ್ರಾಮ ಪಂಚಾಯತಿಯವರು ತನ್ನ ಹಳೆಯ ಬಿಲ್ಲು ಮತ್ತು ಪಾವತಿಗಳನ್ನು Auditor ಮೂಲಕ reconciliation ಮಾಡಿದಾಗ ಮೆಸ್ಕಾಂ ಹೆಚ್ಚುವರಿ ವಸೂಲು ಮಾಡಿರುವುದು ಕಂಡುಬಂದಿದೆ. ನಂತರ ಗ್ರಾಮ ಪಂಚಾಯತಿಗಳಿಗೆ ಹೆಚ್ಚುವರಿ ಮೊತ್ತ ಹಿಂದಿರುಗಿಸಿದೆ. ಇದೊಂದು ಉದಾಹರಣೆಯಾಗಿದೆ ಅಷ್ಟೇ. ಹಾಗಾಗಿ, ಇದರ ಬಗ್ಗೆ ಸರ್ಕಾರ ಗಮನ ಹರಿಸಿರುವುದಿಲ್ಲ.

**ಸಭಾಪತಿಯವರು**:- ತಾವುಗಳು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ.ಕೆ. ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ಇದು ಕೊನೆಯ ಪ್ರಶ್ನೆಯಾಗಿದೆ. ಇವುಗಳೆಲ್ಲವೂ ಪ್ರಶ್ನೆಗಳೇ ಆಗಿವೆ. ವಿದ್ಯುತ್ ಬಿಲ್ ಮತ್ತು ಬಡ್ಡಿ ಗ್ರಾಮ ಪಂಚಾಯತಿಗಳಿಗೆ ಹೊರೆಯಾಗಿ ಪರಿಣಮಿಸಿವೆ. ಆದುದರಿಂದ, ಕಡಿಮೆ ವಿದ್ಯುತ್ ದರ ವಿಧಿಸಿ ಗ್ರಾಮ ಪಂಚಾಯತಿಗಳ ಹಿತ ಕಾಪಾಡಲು ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಮತ್ತು ಏನು ಮಾಡುತ್ತಿದೆ ಎನ್ನುವುದನ್ನು ಮಾನ್ಯ ಸಚಿವರು ದಯಮಾಡಿ ತಿಳಿಸಬೇಕಾಗಿದೆ.

**ಶ್ರೀ ಡಿ.ಕೆ. ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆಯ ಸದಸ್ಯರಾದಂತಹ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸ್ಥಳೀಯ ಸಂಸ್ಥೆಗಳ ಪರವಾಗಿ ಬಹಳ ಇಂಟರೆಸ್ಟ್‌ನಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅದಕ್ಕಾಗಿ ಬಹಳ ಅಭಿನಂದನೆಗಳು. ಅವರು ಒಳ್ಳೆಯ ಪ್ರಶ್ನೆಗಳನ್ನು ಕೇಳಿದ್ದು, ಇವು ಸಾರ್ವಜನಿಕವಾಗಿ ಹೆಚ್ಚು ಗಮನ ಸೆಳೆಯುವಂತಹ ಪ್ರಶ್ನೆಗಳಾಗಿವೆ. ಈ ಹಿಂದೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಮಗೆಲ್ಲಾ ಗೊತ್ತಿದೆ, ಅದೇನೆಂದರೆ, ಗ್ರಾಮ ಪಂಚಾಯತಿಗಳಿಗೆ 3,760 ಕೋಟಿ ರೂಪಾಯಿ ವಿದ್ಯುತ್ ಬಿಲ್ ಹಣ ಕಟ್ಟುವುದಕ್ಕೆ ಆಗಿರುವುದಿಲ್ಲ. ಈಗಲೂ ಕೂಡ ಆ ಬಾಕಿ ಉಳಿದುಕೊಂಡು ಬಂದಿದೆ. ಇದರಿಂದಾಗಿ, ಅನೇಕ ಕಂಪನಿಗಳಿಗೆ ಬಹಳ ನಷ್ಟವಾಯಿತು. ಈ ಕಂಪನಿಗಳಿಂದ ಕೆ.ಪಿ.ಸಿ.ಎಲ್. ಗೆ ದುಡ್ಡು ಕೊಡಬೇಕಾಗಿತ್ತು. ಇವತ್ತಿಗೂ ಕೂಡ ಅದು 16 ಸಾವಿರ ಕೋಟಿ ರೂಪಾಯಿ ಬಾಕಿ ಉಳಿದುಕೊಂಡಿದೆ. ನಮ್ಮ ಸರ್ಕಾರ ಗ್ರಾಮ ಪಂಚಾಯತಿಗಳು ವಿದ್ಯುತ್ ಬಿಲ್ ಕಟ್ಟಿಲ್ಲವೆಂದು ವಿದ್ಯುತ್ ಕಡಿತ ಮಾಡಬಾರದೆಂದು, ಸರ್ಕಾರ ಗ್ಯಾರಂಟಿಯಾಗಿ ಪಿ.ಕೆ.ಸಿ.ಎಸ್ ಎನ್ನುವ ಸಂಸ್ಥೆಯಿಂದ ಹಣವನ್ನು ಕೊಡಿಸಿ ಈಗಾಗಲೇ ರಾಜ್ಯ ಸರ್ಕಾರ ಆದೇಶ ಹೊರಡಿಸಿ 2015 ನೇ ಇಸವಿಗಿಂತ ಮೊದಲು ಯಾವ್ಯಾವ ಗ್ರಾಮ ಪಂಚಾಯತಿಗಳು ವಿದ್ಯುತ್ ಬಿಲ್ ಬಾಕಿ ಕೊಡಬೇಕಾಗಿತ್ತು ಅದನ್ನು ಕೊಡುವುದಕ್ಕೆ ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ.

ಇದರ ಜೊತೆಗೆ ಗ್ರಾಮ ಪಂಚಾಯತಿಗಳು ಮತ್ತು ಕಂಪನಿಗಳು ಈ ಬಗ್ಗೆ ಒಂದು ಅಗ್ರಿಮೆಂಟ್ ಕೂಡ ಮಾಡಿಕೊಂಡಿವೆ. ಮಾನ್ಯ ಸದಸ್ಯರು ಬಡ್ಡಿ ವಿಚಾರದ ಬಗ್ಗೆ ಕೇಳುತ್ತಿದ್ದಾರೆ. 2015 ವರೆಗೆ ಯಾವ್ಯಾವ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯತಿಗಳಲ್ಲಿ ವಿದ್ಯುತ್ ಬಿಲ್ ಬಡ್ಡಿ ಬಾಕಿ ಇತ್ತು ಆ ಎಲ್ಲಾ ಬಡ್ಡಿಯನ್ನು ಕಟ್ಟಬೇಕು. ಅದರಂತೆ, ಯಾವುದೇ ಬಾಕಿ ಬಡ್ಡಿಯನ್ನು ಇಟ್ಟುಕೊಂಡಿರುವುದಿಲ್ಲ. ಅಲ್ಲಿಂದ ಮುಂದಕ್ಕೆ ಇರುವಂತಹ ಬಡ್ಡಿಯನ್ನು ಕಟ್ಟಬೇಕು. ಉದಾಹರಣೆಗೆ, ಯಾರಾದರೂ ತಮ್ಮ ಮನೆಯಲ್ಲಿ ಒಂದು ಸಣ್ಣ ಸೋಲಾರ್ ಹಾಕಿಕೊಂಡಿದ್ದು, ಉತ್ಪಾದನೆಯಾದ ಹೆಚ್ಚುವರಿ ವಿದ್ಯುತ್ ಅನ್ನು ಸರ್ಕಾರಕ್ಕೆ ನೀಡಿರುತ್ತಾರೆ, ಅಂತಹವರಿಗೆ, ಸರ್ಕಾರ 60 ದಿನಗಳ ನಂತರ ಪೇಮೆಂಟ್ ಮಾಡಿದರೆ ನಾವು ಕಡ್ಡಾಯವಾಗಿ ಶೇಕಡ 18 ರಷ್ಟು ಬಡ್ಡಿ ಕೊಡಬೇಕು. That is the Act. ಹೀಗಾಗಿ ಎಷ್ಟೋ ಜನರಿಗೆ ಸಾವಿರಾರು ಕೋಟಿ ರೂಪಾಯಿ ಕೇವಲ delay payment ಕೊಡಬೇಕು. ಡಿಲೇ ಪೇಮೆಂಟ್ ಅಂದರೆ, ಬಾಕಿ ಇರುವಂತಹ ವಿದ್ಯುತ್ ಬಿಲ್ ಮೇಲೆ ಶೇಕಡ 18 ರಷ್ಟು ಬಡ್ಡಿ ಹಾಕುವುದಿಲ್ಲ. ಆದರೆ, ನಮಗೆ ವಿದ್ಯುತ್ ಸರಬರಾಜು ಮಾಡಿರುವಂತಹವರಿಗೆ ನಾವು ಶೇಕಡ 18 ರಷ್ಟು ಬಡ್ಡಿ ಹಣವನ್ನು ಕೊಡಬೇಕಾಗುತ್ತದೆ. ಈ ಮಧ್ಯದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಏನಾಗಿದೆಯೆಂದರೆ, ಅವುಗಳಿಗೆ ಸರ್ಕಾರದಿಂದ ದುಡ್ಡು ಬರುತ್ತದೆ. ಆಗ ಅವರು ನೇರವಾಗಿ ವಿದ್ಯುತ್ ಬಿಲ್ ಅನ್ನು ಕಟ್ಟಿದರೆ ಈ ಸಮಸ್ಯೆಯಾಗುವುದಿಲ್ಲ. ಉದಾಹರಣೆಗೆ, ಮಲ್ಟಿ ವಿಲೇಜ್ ಸ್ಕೀಮ್‌ನಲ್ಲಿ 4-5 ಪಂಚಾಯತಿಗಳು ಸೇರಿ ಮಲ್ಟಿ ವಿಲೇಜ್ ಆಗಿರುತ್ತವೆ. ಅದರಲ್ಲಿ ಯಾರು ವಿದ್ಯುತ್ ಬಿಲ್ ಕಟ್ಟಬೇಕು, ಎಷ್ಟು ಹಣ ಕಟ್ಟಬೇಕು ಎನ್ನುವುದನ್ನು ಆಯಾ ಪಂಚಾಯತಿಗಳೇ ತೀರ್ಮಾನಿಸಿ ಬಿಲ್ ಕಟ್ಟಿದರೆ ಈ ಸಮಸ್ಯೆ ಬರುವುದಿಲ್ಲ. ಅವರು ಆ ವಿದ್ಯುತ್ ಬಿಲ್ ಅನ್ನು ಕಟ್ಟದೇ ಇರುವುದರಿಂದ, ಬಡ್ಡಿ, ಚಕ್ರಬಡ್ಡಿ ಇವೆಲ್ಲಾ ಸಮಸ್ಯೆಗಳು ಆಗುತ್ತಾ ಹೋಗುತ್ತಿವೆ. ಆದುದರಿಂದ, ಸ್ಥಳೀಯ ಸಂಸ್ಥೆಯವರು ದಯವಿಟ್ಟು ತಾವು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕು. ಮಲ್ಟಿ ವಿಲೇಜ್ ಸ್ಕೀಮ್ ನಲ್ಲಿ ಸರ್ಕಾರದಿಂದ ಬರುವಂತಹ ದುಡ್ಡನ್ನು ಮೊದಲು ಎಸ್ಕಾಂಗಳಿಗೆ ಕಟ್ಟಿದರೆ ಅವರು ಬಡ್ಡಿ ವಿಧಿಸುವುದಿಲ್ಲ. ಇದರಿಂದಾಗಿ, ಆ ಬಡ್ಡಿ ಹಣವನ್ನು ಬೇರೆಯವರು ಉಪಯೋಗಿಸಲು ಆಗುವುದಿಲ್ಲ. ಅದಕ್ಕೆ ಪ್ರತ್ಯೇಕವಾಗಿ ಬೇರೊಂದು ಅಕೌಂಟ್ ಇರುತ್ತದೆ. ಆದುದರಿಂದ, ಇದರ ಬಗ್ಗೆ ಒಂದು payment mechanism ಅನ್ನು ಮಾಡುವುದಕ್ಕೆ ತಾವೆಲ್ಲಾ ಸೇರಿ ಸಹಕಾರ ನೀಡಬೇಕು. ಇನ್ನು ಕೆಲವು ಬೇರೆ ಬೇರೆ ಪ್ರಶ್ನೆಗಳನ್ನು ಮತ್ತು ಒಳ್ಳೆಯ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. The Hon'ble Member can come for a discussion. ರಾಜ್ಯಪಾಲರ ಭಾಷಣದ ವಿಚಾರದಲ್ಲಿ ಅಥವಾ ಬೇರೆ ವಿಚಾರದಲ್ಲಿ ಪ್ರಸ್ತಾಪ ಮಾಡಲಿ. ಇನ್ನು delayed payments ಬಗ್ಗೆ ಏನು ಬೇಕು ಅದನ್ನು ಸಹ ಮಾಡೋಣ.

**ಪ್ರಶ್ನೆ ಸಂಖ್ಯೆ: 770**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಇಂಧನ ಸಚಿವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದೆನು. ಇಂಧನ ಇಲಾಖೆಯಲ್ಲಿ ಎಷ್ಟು ಕಂಪನಿಗಳು ಕೆಲಸ ಮಾಡುತ್ತಿವೆ ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಉದ್ಯೋಗಿಗಳ ಬಗ್ಗೆ ಮಾಹಿತಿ ಕೇಳಿದ್ದೆನು. ಆ ಪ್ರಶ್ನೆಗೆ, ಮಾನ್ಯ ಸಚಿವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

10 ಕಂಪನಿಗಳ ವಿವರ ನೀಡಿದ್ದಾರೆ. ಇವತ್ತಿನ ದಿವಸ ಮಹಿಳಾ ಉದ್ಯೋಗಿಗಳಿಗೆ ಕರ್ನಾಟಕ ವಿದ್ಯುತ್ ನಿಗಮಗಳ ಅಡಿಯಲ್ಲಿ Child Care Leave (ಶಿಶು ಪಾಲನಾ ರಜೆ)ಯನ್ನು ಕೊಟ್ಟಿದ್ದಾರೆಯೇ ಎಂದು ಪ್ರಶ್ನೆ ಕೇಳಿದ್ದೆನು. ಅದರಲ್ಲಿ ಒಂದು ಕಡೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಮಹಿಳಾ ಉದ್ಯೋಗಿಗಳಿಗೆ ಬಹಳ innovative ಸ್ಕೀಮ್‌ಗಳನ್ನು ಕೊಟ್ಟಿದ್ದಾರೆ. ಅರ್ಥಾತ್ ಶೇಕಡ 33 ರಷ್ಟು ಮೀಸಲಾತಿ ಕಲ್ಪಿಸಿ ಕ್ಷೇಮಾಭಿವೃದ್ಧಿಯಲ್ಲಿ ಸದರಿ ಕಂಪನಿ ಮಂಚೂಣಿಯಲ್ಲಿದೆ. ಅದರ ಜೊತೆಗೆ ಮಹಿಳಾ ಉದ್ಯೋಗಿಗಳಿಗೆ ಅನೇಕ ನಿಯಮಗಳನ್ನು ಜಾರಿಗೆ ತಂದು ಇಡೀ ರಾಜ್ಯಕ್ಕೆ ಮಾದರಿ ಸಂಸ್ಥೆ ಎಂದು ಮಾಡಿದ್ದಾರೆ. ಆದರೆ, ಇನ್ನೊಂದು ಕಡೆ ಏನಾಗುತ್ತಿದೆಯೆಂದರೆ, ಕರ್ನಾಟಕ ವಿದ್ಯುತ್ ನಿಗಮದಲ್ಲಿ ಕೆಲಸ ಮಾಡುತ್ತಿರುವಂತಹ ಮಹಿಳಾ ಉದ್ಯೋಗಿಗಳು ಯಾವ್ಯಾವುದೋ ಪ್ರಾಜೆಕ್ಟ್‌ಗಳಲ್ಲಿ ರಿಮೋಟ್ ಏರಿಯಾಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಅಂತಹವರಿಗೆ ಇವತ್ತಿನ ದಿವಸ ತಮ್ಮ ಮಕ್ಕಳಿಗೆ... ಏಕೆಂದರೆ, ಅವರಿಗೂ ಸಂಸಾರ ಇದೆ, ಅವರಿಗೂ ಹೆರಿಗೆ ಆಗುತ್ತದೆ, ಅವರು ತಮ್ಮ ಮಕ್ಕಳ ಶಿಶುಪಾಲನೆ ಮಾಡುವ ಸಲುವಾಗಿ, ಕೆ.ಪಿ.ಟಿ.ಸಿ.ಎಲ್.ನಲ್ಲಿ ಸರ್ಕಾರದವರು Child Care Leave ಕೊಟ್ಟಿದ್ದಾರೆ. ಆದರೆ, ಕೆ.ಪಿ.ಸಿ.ಎಲ್.ನಲ್ಲಿ ಇದು ಜಾರಿಗೆ ಬಂದಿರುವುದಿಲ್ಲ. ಹೀಗಾಗಿ, ಇವತ್ತಿನ ದಿವಸ ನಾವು ಆರೋಗ್ಯದ ದೃಷ್ಟಿಯಿಂದ ನೋಡಿದಾಗ ತಾಯಿ ತನ್ನ ಮಗುವಿಗೆ ಕಾಳಜಿಯನ್ನು ಮಾಡದೇ ಇರುವಾಗ ಆ ಮಗುವಿನಲ್ಲಿ ಆತಂಕ ಬರುವಂತಹ ಸಾಧ್ಯತೆಯಿದೆ, ಖಿನ್ನತೆ ಬರುವಂತಹ ಸಾಧ್ಯತೆ ಇದೆ, ಹಗೆತನ ಬರುವಂತಹ ಸಾಧ್ಯತೆಯಿದೆ, ಆಕ್ರಮಣದ ಪ್ರವೃತ್ತಿ ಉಂಟಾಗುವಂತಹ ಸಾಧ್ಯತೆ ಇರುವಂತಹದ್ದನ್ನು Health Report ನಲ್ಲಿ ನಾವು ನೋಡುತ್ತಿದ್ದೇವೆ. ಈ ಎಲ್ಲಾ ಅಂಶಗಳ ಹಿನ್ನೆಲೆಯನ್ನು ಮನಗಂಡು 2011 ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದಂತಹ ಶ್ರೀ ಮನಮೋಹನ್‌ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ ಶಿಶುಪಾಲನಾ ರಜೆಯನ್ನು ಜಾರಿಯಲ್ಲಿ ತಂದಿದೆ. ಅವರು ಏನು ಹೇಳುತ್ತಾರೆಂದರೆ,

> "Women employees having minor children may be granted Child Care Leave by an authority competent to grant leave for a maximum period of two years during their entire service, for taking care or up to two children whether for rearing or to look after any of their needs like examination, sickness, etc., in addition to 180 days Maternity Leave"

ಎಂದು ಅವರು ಈಗಾಗಲೇ ಒಂದು ಆದೇಶ ಮಾಡಿದ್ದಾರೆ. ಅದರಂತೆ, ಈಗಾಗಲೇ ಅನೇಕ ರಾಜ್ಯಗಳಲ್ಲಿ ಈ ಕಾನೂನನ್ನು ಜಾರಿಗೆ ತಂದಿದ್ದಾರೆ. ನನ್ನ ವಿನಂತಿ ಏನೆಂದರೆ, ಇಂಧನ ಇಲಾಖೆಯಲ್ಲಿ ಒಂದು ಕಡೆ Child Care Leave ಅನ್ನು ಒಬ್ಬ ಮಹಿಳಾ ಉದ್ಯೋಗಿಗೆ/ತಾಯಿಯಾದವಳಿಗೆ ಕೊಡುತ್ತಿದ್ದಾರೆ. ಆದರೆ, ಕೆ.ಪಿ.ಸಿ.ಎಲ್. ನಲ್ಲಿ ಈ ಸೌಲಭ್ಯವನ್ನು ಕೊಟ್ಟಿರುವುದಿಲ್ಲ. ನನ್ನ ಕ್ಷೇತ್ರದಲ್ಲಿ ...

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಈ ವಿಚಾರದಲ್ಲಿ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿ. ಅದಕ್ಕೆ ಮಾನ್ಯ ಸಚಿವರು ತಮಗೆ ಉತ್ತರ ನೀಡುತ್ತಾರೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಕೆಪಿಸಿಎಲ್ ನಲ್ಲಿ Child Care Leave ಅನ್ನು ಕೊಡಬೇಕೆಂದು ಎಲ್ಲಾ ಮಹಿಳಾ ಉದ್ಯೋಗಿಗಳ ಪರವಾಗಿ ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಶ್ರೀ ಅಮರನಾಥ ಪಾಟೀಲ್‌ರವರು ಕೇಳಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಮಹಿಳಾ ಉದ್ಯೋಗಿಗಳು ಬೋರ್ಡ್ ಮೀಟಿಂಗ್ ಇದ್ದ ದಿವಸ ನನ್ನನ್ನು ಕೂಡ ಭೇಟಿ ಮಾಡಿರುತ್ತಾರೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಸದರಿ ಮಹಿಳಾ ಉದ್ಯೋಗಿಗಳು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಸಹ ಭೇಟಿ ಮಾಡಿರುತ್ತಾರೆ.

**ಶ್ರೀ ಡಿ.ಕೆ. ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಈ ಪ್ರಸ್ತಾವನೆ ಮಾಡಿ ಎಂದು ಕೆ.ಪಿ.ಸಿ.ಎಲ್.ನ ಮಹಿಳಾ ಉದ್ಯೋಗಿಗಳು ನನ್ನನ್ನು ಭೇಟಿ ಮಾಡಿರುತ್ತಾರೆ. ನಮ್ಮಲ್ಲಿ ಕೆ.ಪಿ.ಟಿ.ಸಿ.ಎಲ್., ಕೆ.ಪಿ.ಸಿ.ಎಲ್. ಈ ರೀತಿ ವಿವಿಧ ಕಂಪನಿಗಳು ಇವೆ. ಇವುಗಳಲ್ಲಿ ಬೋರ್ಡ್ ರಚನೆಯಾದಂತಹ ಸಂದರ್ಭದಲ್ಲಿ ಕೆಲವೊಂದು ಪಾಲಿಸಿಗಳು ಬಂದು, ತಮಗೆಲ್ಲಾ ಗೊತ್ತಿರುವ ಹಾಗೆ ಇಡೀ ರಾಜ್ಯದಲ್ಲಿ ಎಲ್ಲಿಯೂ ಇಲ್ಲ, ಕೆ.ಪಿ.ಟಿ.ಸಿ.ಎಲ್. ನಲ್ಲಿ ಮತ್ತು ಎಸ್ಕಾಂ ಕಂಪನಿಗಳಲ್ಲಿರುವಂತಹ ನೌಕರರು ನಮ್ಮ ಮ್ಯಾನೇಜ್‌ಮೆಂಟ್‌ನಲ್ಲಿ ಕುಳಿತುಕೊಳ್ಳುತ್ತಾರೆ. ಇದು ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಡಿವಿಜನ್ ಆದಂತಹ ಸಂದರ್ಭದಲ್ಲಿ ಆಯಾ ಕಂಪನಿಗಳು ಆದಾಗ, in every company, two employees of the Union i.e. President ಗಳು, ಒಂದು ಕೆಳಗಿನ ಮಟ್ಟದ ನೌಕರರು/ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳು ಅವರಿಬ್ಬರನ್ನು ಕಡ್ಡಾಯವಾಗಿ ಯಾರೇ ಸಚಿವರು ಆ ಬೋರ್ಡ್‌ನ ಅಧ್ಯಕ್ಷರಾಗಿರಲಿ ಅಥವಾ ಐ.ಎ.ಎಸ್. ಅಧಿಕಾರಿ ಬೋರ್ಡ್‌ನ ಅಧ್ಯಕ್ಷರಾಗಿರಲಿ ಅವರು ಆ ಸ್ಥಾನದಲ್ಲಿ ಕುಳಿತುಕೊಂಡರೆ they will be a part of the decision making.

(ಮುಂದು)

(127)/20.02.2018/ವೈಎಲ್-ಆರ್‌ಎನ್/12.20

ಶ್ರೀ ಡಿ.ಕೆ.ಶಿವಕುಮಾರ್(ಮುಂದು):-

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಸಂದರ್ಭದಲ್ಲಿ ಕೆಪಿಟಿಸಿಎಲ್‌ರವರು ಈ ಸೌಲಭ್ಯವನ್ನು ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿರತಕ್ಕಂಥ ಬೇರೆ ಬೇರೆ ಇಲಾಖೆಗಳಾದ ಕೃಷಿ ಇಲಾಖೆ ಹಾಗೂ ಇನ್ನಿತರ ಇಲಾಖೆಗಳಲ್ಲಿ ಈಗಾಗಲೇ 38% ಹೆಣ್ಣು ಮಕ್ಕಳು ನೌಕರಿ ಮಾಡುತ್ತಿದ್ದು, ಎಲ್ಲಾ ಕಡೆಯೂ ಒಂದು ಪಾಲಿಸಿ ಇದೆ. ಹಾಗೆಯೇ ಈ ದೇಶದಲ್ಲಿಯೂ ಇದರ ಬಗ್ಗೆ ಒಂದು ಯೂನಿಫಾರ್ಮ್ ಪಾಲಿಸಿ ಇದೆ. ಮೊನ್ನೆ ದಿವಸ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್‌ರವರು ಪ್ರಸ್ತಾವನೆ ಮಾಡಿದಂಥ ವಿಚಾರವೇನಿದೆ ಅದು ಸಹ ನಮ್ಮ ಗಮನದಲ್ಲಿದೆ. ಆದ್ದರಿಂದ ತಕ್ಷಣವೇ ಶಿಶುಪಾಲನಾ ರಜೆಯನ್ನು ಕೆ.ಪಿ.ಟಿ.ಸಿ.ಎಲ್. ನಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಉದ್ಯೋಗಿಗಳಿಗೆ ನೀಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಕೆಪಿಟಿಸಿಎಲ್, ಬಿಡಬ್ಲ್ಯೂಎಸ್‌ಎಸ್‌ಬಿ, ಈ ರೀತಿ ಬೇರೆ ಯಾವುದೇ ಸಂಸ್ಥೆಯಾಗಿರಬಹುದು. ಅವುಗಳಲ್ಲಿ ಒಂದು ಯೂನಿಫಾರ್ಮ್ ಪಾಲಿಸಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಈಗಾಗಲೇ ಕೆಪಿಟಿಸಿಎಲ್‌ನಲ್ಲಿ ಜಾರಿಯಲ್ಲಿದ್ದು, ಆದರೆ, ಬೇರೆ ವಿದ್ಯುತ್ ನಿಗಮದ ಮಹಿಳಾ ನೌಕರರಿಗೆ ಈ ರೀತಿಯ ಸೌಲಭ್ಯಗಳನ್ನು ಕೊಡದೆ ತಾರತಮ್ಯ ಏಕೆ ಮಾಡುತ್ತಿದ್ದಾರೆ? ಕರ್ನಾಟಕ ವಿದ್ಯುತ್ ನಿಗಮದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಸಿಬ್ಬಂದಿಗಳಿಗೂ ಶಿಶುಪಾಲನಾ ರಜೆ ಸೌಲಭ್ಯ ನೀಡಬೇಕು. ಯೂನಿಟಿ ಕ್ರಮದಲ್ಲಿಯೇ ತಾಯಿಯಾದಂಥವರು ತಮ್ಮ ಮಕ್ಕಳ ಬಗ್ಗೆ ಕೇರ್ ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು**:- ಆಯಿತು. ಬಿಡಿ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ನನಗೂ ಸಹ ಮಹಿಳಾ ಸಿಬ್ಬಂದಿಗಳ ಬಗ್ಗೆ ಸಹಾನುಭೂತಿ ಇದೆ. ಜೊತೆಗೆ ಬೇರೆ ನಿಗಮಗಳವರು ಸಹ ಕೆಪಿಟಿಸಿಎಲ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ನೌಕರರಿಗೆ ಕೊಟ್ಟಿರತಕ್ಕಂಥ ಸೌಲಭ್ಯವನ್ನು ಹಿಂಪಡೆಯಿರಿ ಎಂದು ಹೇಳುತ್ತಿದ್ದಾರೆ. ಹಿಂಪಡೆಯುವುದು ಬೇಡವೆಂದು ಸ್ವಲ್ಪ hold ಮಾಡುತ್ತಿದ್ದೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿಯೇ......

**ಸಭಾಪತಿಯವರು**:- ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆ ಎಂಬುದನ್ನು ತಾವು ಕೇಳಲಿಲ್ಲ. ಈಗಾಗಲೇ ಒಂದು ನಿಗಮದ ಮಹಿಳಾ ನೌಕರರಿಗೆ ಕೊಟ್ಟಿರುವ ಸೌಲಭ್ಯವನ್ನು ಮಾಡಿದ್ದು, ಹಿಂಪಡೆಯಿರಿ ಎಂದು ಬೇರೆಯವರು ಹೇಳುತ್ತಿದ್ದಾರೆ. ಆದರೆ, ನಾವೂ ಹಿಂಪಡೆಯುವ ಬದಲು ಬೇರೆ ಕಡೆಗಳಲ್ಲಿಯೂ ಕಾರ್ಯಗತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, just we are discussing. ಇದು ಕೇವಲ ಒಂದೇ ಕಂಪನಿಗೆ ಸಂಬಂಧಪಟ್ಟ ವಿಚಾರವಲ್ಲ. ಮೈಸೂರ್ ಮಿನರಲ್ಸ್, ಹಟ್ಟಿ ಗೋಲ್ಡ್ ಮೈನ್ಸ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಬೇರೆ ಬೇರೆಯ ನಿಗಮಗಳದ್ದು, ಕೆಲಸ ಮಾಡುವಂಥ ಜನರು ಇರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಕಷ್ಟಪಟ್ಟು ಕೆಲಸ ಮಾಡುವ ಮಹಿಳಾ ನೌಕರರಿದ್ದಾರೆ. ವಿಶೇಷವಾಗಿ ಶಿಶುಪಾಲನಾ ರಜೆ (ಚೈಲ್ಡ್ ಕೇರ್ ಲೀವ್) ಸೌಲಭ್ಯದ ಬಗ್ಗೆ ಒಂದು ದೊಡ್ಡ ಚರ್ಚೆಯೇ ಮಾಡಲಾಗಿದೆ. ಇದರ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೆ ಇದರ ಬಗ್ಗೆ ಒಂದು ಗಟ್ಟಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದೆ. ಏಕೆಂದರೆ ಮುಂದೆ ಮಾಡುವುದಕ್ಕೆ ಅವಕಾಶವೂ ಇಲ್ಲ. ಈಗಾಗಲೇ ಒಂದು ನಿಗಮದಲ್ಲಿ ಜಾರಿಗೆ ತಂದಿದ್ದು, ಕರ್ನಾಟಕ ವಿದ್ಯುತ್ ನಿಗಮ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಸಿಬ್ಬಂದಿಗಳಿಗೂ ಈ ಸೌಲಭ್ಯ ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು**:- ತಾವು ಹೇಳುವುದು ಸರಿ. ಆದರೆ, ಮಾನ್ಯ ಸಚಿವರು ಹೇಳುವುದನ್ನು ತಾವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ. ಈಗಾಗಲೇ ಒಂದು ಭಾಗದಲ್ಲಿ ಜಾರಿಯಲ್ಲಿರುವುದನ್ನು ರದ್ಧು ಮಾಡಿ ಎಂದು ಬೇರೆಯವರೆಲ್ಲಾ ಒತ್ತಾಯ ಮಾಡುತ್ತಿದ್ದಾರೆ ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರ ತಾಪತ್ರಯವನ್ನು ತಾವು ಅರ್ಥಮಾಡಿಕೊಳ್ಳಬೇಕು.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು**:- ಇದು ಪ್ರಶ್ನೋತ್ತರ ಅವಧಿ. ಚರ್ಚೆ ಮಾಡುವುದು ಬೇಡ. ಮಾನ್ಯ ಸಚಿವರು ಇರತಕ್ಕಂಥ ಕಷ್ಟವನ್ನು ಹೇಳಿದ ಮೇಲೆಯೂ ನೀವು ಮಾತನಾಡಿದರೆ ಹೇಗೆ?

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಹೆಣ್ಣು ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ತಪ್ಪೇನಿಲ್ಲ. ಶಿಶುಪಾಲನಾ ರಜೆ, maternity ರಜೆಯನ್ನು ಕೊಡುವುಕ್ಕೆ there is a provision.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ಚರ್ಚೆ ಬೇಡ ಎಂದರೆ...

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಇದು ಇಲ್ಲಿ ಚರ್ಚೆ ಮಾಡುವ ವಿಚಾರವಲ್ಲ.

**ಸಭಾಪತಿಯವರು**:- ಇದು administrative discussion ಆಗಿದೆ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಹಟ್ಟಿ ಗೋಲ್ಡ್ ಮೈನ್ಸ್, ನಮ್ಮ Forest Development Corporation, Mysore Minerals ಇದೆ ಇಲ್ಲಿ ಎಲ್ಲರೂ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ನಗರದಲ್ಲಿಯೇ ಮಾತ್ರ ಕೆಲಸ ಮಾಡುತ್ತಿಲ್ಲ. ನಗರದಲ್ಲಿ ಮಕ್ಕಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿಕೊಳ್ಳುವವರು ಯಾರಾದರೂ ಇರುತ್ತಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಮಹಿಳೆಯರ ಬದುಕು ಬಹಳ ಕಷ್ಟವಾದ ಪರಿಸ್ಥಿತಿಯಲ್ಲಿರುತ್ತದೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಇದು ಕೇವಲ ಮಹಿಳಾ ಸಿಬ್ಬಂದಿಗಳಿಗೆ ಸಂಬಂಧಪಟ್ಟ ವಿಚಾರವಾಗಿಲ್ಲ. ಮಕ್ಕಳ ಮುಂದಿನ ಭವಿಷ್ಯದ ವಿಷಯ ಎಂದು ತಿಳಿದುಕೊಳ್ಳಬೇಕು.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. We will come back on this.

**ಸಭಾಪತಿಯವರು**:- ಮಾನ್ಯ ಸಚಿವರು ಚರ್ಚೆ ಮಾಡಿ, ಬೇರೆ ನಿಗಮದ ಮಹಿಳಾ ನೌಕರರಿಗೂ ಪ್ರಯತ್ನ ಮಾಡುತ್ತೇನೆ. ಈ ಸೌಲಭ್ಯವನ್ನು ಕೊಡುವುದಕ್ಕೆ ಎಂದು ಹೇಳುತ್ತಿದ್ದಾರೆ. ನೋಡೋಣ.

**ಪ್ರಶ್ನೆ ಸಂಖ್ಯೆ 751**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ(ಅಣ್ಣಯ್ಯ)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇತ್ತೀಚೆಗೆ ಬೆಳಗಾವಿ ಜಿಲ್ಲೆಯನ್ನು ಹಿಡಿದುಕೊಂಡಿದ್ದಾರೆ. ಬೆಳಗಾವಿ ಜಿಲ್ಲೆಯನ್ನು ಹಿಡಿದು ಆ ಜಿಲ್ಲೆಗೆ ಸಂಬಂಧಪಟ್ಟಂತೆ ವಿಪರೀತ ಕೆಲಸವನ್ನು ಹೇಳುತ್ತಿದ್ದಾರೆ. ನಾನು ಸಹ ಬೆಳಗಾವಿ ಕಡೆಯ ಅಧಿಕಾರಿಗಳಿಗೂ ಸ್ವಲ್ಪ special treatment ಕೊಡುತ್ತಿದ್ದೇನೆ. ಹಾಗಾಗಿ ಮಾನ್ಯ ಸದಸ್ಯರು ಏನಾದರೂ ಮಾಡಿ ವಿಧಾನಸಭೆಗೆ ಬರಲಿ ಎಂಬುದು ನನ್ನ ಆಸೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಬೆಳಗಾವಿ ದಕ್ಷಿಣ ಮತ ಕ್ಷೇತ್ರಕ್ಕೆ ಸಂಬಂಧಿಸಿರುವುದನ್ನೇ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಹೌದು ಕೇಳಿದ್ದಾರೆ. ಹಾಗಾಗಿ ಮಾನ್ಯ ಸದಸ್ಯರು ಕೇಳಿರುವಂತೆ ಖಾಸಗಿ ಬಡಾವಣೆಯಲ್ಲಿದ್ದು, ಸದರಿ ಬಡಾವಣೆಯಲ್ಲಿ 265 ನಿವೇಶನಗಳಿದ್ದು, ಅದನ್ನು ಸ್ವಯಂ ನಿರ್ಮಾಣ ಯೋಜನೆಯಲ್ಲಿ (Self Execution Head) ವಿದ್ಯುದ್ದೀಕರಣ ಮಾಡಿಕೊಳ್ಳಬಹುದು. ನಾನು ಸಹ ಖಂಡಿತವಾಗಿ ಯಾವುದಾದರೂ ಯೋಜನೆಯಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ವ್ಯವಸ್ಥೆ ಮಾಡುತ್ತೇನೆ. ಏನೆಲ್ಲಾ ಶಕ್ತಿ ಕೊಡಬೇಕೋ ಅದನ್ನು ಕೊಡುತ್ತೇವೆ. ಮಾನ್ಯ ಸದಸ್ಯರು ಚಿಂತಿಸುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 618**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಸವಿಸ್ತಾರವಾಗಿ ಒದಗಿಸಿರುವುದರಿಂದ ಮಾನ್ಯ ಸಚಿವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರು ಡಾಕ್ಟರ್ ಪದವಿ ಪಡೆದಿದ್ದಾರೆ ಎಂಬ ವಿಚಾರ ಮಾತ್ರ ಗೊತ್ತಿತ್ತು. ಆದರೆ, ಬಸವರಾಜ ಎಸ್ ಹೊರಟ್ಟಿಯವರು ಹೇಳಿದ ಮೇಲೆ ಮಾನ್ಯ ಸಚಿವರು ಸಾಹಿತಿಗಳು ಎಂಬ ವಿಚಾರ ಗೊತ್ತಾಗಿತ್ತು. ಸದರಿ ಇಲಾಖೆಯನ್ನು ತೆಗೆದುಕೊಂಡ ಮೇಲೆ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ರಾಜ್ಯದಲ್ಲಿ ಬಹಳ ಹೆದ್ದಾರಿಗಳನ್ನು ಮಾಡಿರುವುದು ಒಪ್ಪಿಕೊಳ್ಳುವಂತಹ ವಿಚಾರವಾಗಿದೆ. ಆದರೆ, ಒಂದು ಸಂದೇಹವೆಂದರೆ, ಮಾನ್ಯ ಸಚಿವರಿಗೂ ಗೊತ್ತಿರುವ ಹಾಗೆ ಅವರ ಊರಾದ ಮೈಸೂರಿಗೆ ವಾರಕ್ಕೆ ಎರಡು-ಮೂರು ಬಾರಿ ಹೋಗುತ್ತಿರುತ್ತಾರೆ. ಆ ಹೆದ್ದಾರಿ ಎಷ್ಟೋ ಸಲ ದುರಸ್ಥಿಗಳಾಗಿದೆ. ಅಂತಹ ಗತಿಗೆ ನಾವು ಬಂದಿದ್ದೇವೆ. ಏಕೆಂದರೆ, ನಗರದ ರಸ್ತೆಗಳು ದುರಸ್ಥಿಯಾಗುವ ವಿಚಾರ ಬೇರೆ. ಆದರೆ, ಇತ್ತೀಚೆಗೆ ಹೆದ್ದಾರಿಗಳು ದುರಸ್ಥಿಗಳಾಗುತ್ತಿರುವುದು ಸ್ವಲ್ಪ ಆತಂಕರವಾದ ವಿಚಾರ ಎಂಬುದು ನನ್ನ ಅನಿಸಿಕೆಯಾಗಿದೆ. ಹಾಗೆಯೇ ಮಾನ್ಯ ಸಚಿವರ ಕ್ಷೇತ್ರವಾದ ಕೊಳ್ಳೇಗಾಲದ ಹತ್ತಿರ ಇರತಕ್ಕಂಥ ಮಲೆ ಮಹದೇಶ್ವರ ಬೆಟ್ಟಕ್ಕೆ ಸಾವಿರಾರು ಯಾತ್ರಾರ್ಥಿಗಳು ಹೋಗುತ್ತಿರುತ್ತಾರೆ. ಅದರಲ್ಲಿ ನಾನೂ ಸಹ ಸೇರಿರುತ್ತೇನೆ. ಹೋಗುವಾಗ ಆ ರಸ್ತೆ ಎಷ್ಟು ಕೆಟ್ಟದಾಗಿದೆ ಎಂಬುದು ಗೊತ್ತಾಗುತ್ತದೆ. ಅದು ಸಿಂಗಲ್ ರಸ್ತೆಯಾಗಿದೆ. ಡಬಲ್ ರಸ್ತೆಯನ್ನು ಸಹ ಮಾಡಿಲ್ಲ. ಯಾವಾಗ ಹೋದರೂ ಆ ಸಿಂಗಲ್ ರಸ್ತೆಯಲ್ಲಿಯೇ ಏನಾದರೂ ಕೆಲಸವಾಗುತ್ತಿರುತ್ತದೆ. ಮಾನ್ಯ ಸಚಿವರ ಕ್ಷೇತ್ರವಾಗಿದ್ದು, ಅಲ್ಲಿ ಸಾವಿರಾರು ಜನ ಭಕ್ತಾದಿಗಳು ಓಡಾಡುತ್ತಿರುತ್ತಾರೆ. ಇದರ ಕಡೆಗೆ ಸ್ವಲ್ಪ ಗಮನಹರಿಸಬೇಕು. ಇನ್ನೂ ಹತ್ತಿರದಲ್ಲಿಯೇ ಇರತಕ್ಕಂಥ ಕರ್ನಾಟಕ ಮತ್ತು ತಮಿಳುನಾಡಿನ ಗಡಿ ಭಾಗವಾದ ಮೈಸೂರು ಮತ್ತು ಕೊಳ್ಳೇಗಾಲದ ಹತ್ತಿರವೇ ಪೊನ್ನಾಚಿ ಎಂಬ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ, ಟೆಲಿಫೋನ್ ಬೂತ್ ಸಹ ಇಲ್ಲ. ಒಂದು ಪಕ್ಷ ವಿದ್ಯುತ್ ಸಂಪರ್ಕವಾದರೂ ಇದ್ದರೆ ಮೊಬೈಲ್ ಫೋನ್ ವರ್ಕ್ ಆಗುತ್ತದೆ. ಇತ್ತೀಚೆಗೆ ರೈತ ಕುಟುಂಬದಲ್ಲಿ ಹಿರಿಯರು ಸತ್ತಾಗ ಆ ವಿಷಯವನ್ನು ಸಂಬಂಧಿಕರಿಗೆ ತಿಳಿಸುವುದಕ್ಕೆ 3 ದಿವಸವಾಗಿತ್ತು. ಅದರ ಬಗ್ಗೆ ಯೋಚನೆ ಮಾಡಬೇಕು. ಸರ್ಕಾರದವರು ಜನರೇಟರ್ ಕೊಟ್ಟಿದ್ದಾರೆ ಆದರೆ, ಡೀಸಲ್ ಇಲ್ಲದೇ ಚಾಲನೆ ಮಾಡದೇ ಕೆಟ್ಟು ಹೋಗಿದ್ದೆ. ಅದರ ಬಗ್ಗೆ ಇಂಧನ ಸಚಿವರು, ಲೋಕೋಪಯೋಗಿ ಸಚಿವರು ಗಮನಹರಿಸಬೇಕು. ಈಗ ತಾನೇ ಮಾನ್ಯ ಸದಸ್ಯರಾದ ಅಮರನಾಥ ಪಾಟೀಲ್‌ರವರು ಮಹಿಳೆಯರ ಬಗ್ಗೆ ಹೇಳಿದ್ದರು. ಕೆಪಿಟಿಸಿಎಲ್ ವಿಚಾರಕ್ಕೆ ಬಂದಾಗ ಮಾನ್ಯ ಇಂಧನ ಸಚಿವರು ಮಹಿಳೆಯರ ಬಗ್ಗೆ ಆದರ್ಶರಾಗಿದ್ದಾರೆ. ಅವರ ಆದರ್ಶವನ್ನು ಬೇರೆ ನಿಗಮದವರಿಗೂ ತರಲಿ. ಬೇರೆ ನಿಗಮದವರು ಹಿಂದಕ್ಕೆ ಪಡೆಯಿರಿ ಎಂದು ಹೇಳುತ್ತಿದ್ದರು ಅದನ್ನು ಮಾನ್ಯ ಇಂಧನ ಸಚಿವರು

ಹಿಂದಕ್ಕೆ ತೆಗೆದುಕೊಳ್ಳಬಾರದು ಎಂಬ ವಿಚಾರವನ್ನು ಮಾನ್ಯ ಸದಸ್ಯರಾದ ಅಮರನಾಥ ಪಾಟೀಲ್‌ರವರು ಮಾತನಾಡುವಾಗಲೇ ಹೇಳಬೇಕೆಂದು ಭಾವಿಸಿದ್ದೆ. ಈಗ ಅದನ್ನು ಹೇಳಿದೆ.

**ಸಭಾಪತಿಯವರು**:– ನಿಮ್ಮ ಪ್ರಶ್ನೆ ಏನು?

**ಶ್ರೀಮತಿ ತಾರಾಅನೂರಾಧ**:– ಮಾನ್ಯ ಸಭಾಪತಿಯವರೇ, ದಯವಿಟ್ಟು ಕ್ಷಮಿಸಿ. ರಾಜ್ಯದ ಎಷ್ಟು ರಸ್ತೆಗಳು ಹೆದ್ದಾರಿಯಾಗಿ ಮಾರ್ಪಟ್ಟಿವೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಅನುಬಂಧ–1 ರಲ್ಲಿ ಸವಿಸ್ತಾರವಾಗಿ ಉತ್ತರವನ್ನು ಒದಗಿಸಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಚಿವರಾದ ಡಾ|| ಹೆಚ್.ಸಿ.ಮಹದೇವಪ್ಪನವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತಿದ್ದರಿಂದ ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧರವರು ಮಾತನಾಡುವುದನ್ನು ನಿಲ್ಲಿಸಿದ್ದರು)**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿ)**:– ಏನಮ್ಮ ಮಾತನಾಡುವುದನ್ನು ಇದಕ್ಕಿದ್ದ ಹಾಗೆ ನಿಲ್ಲಿಸಿಬಿಟ್ಟೆ.

**ಶ್ರೀಮತಿ ತಾರಾಅನೂರಾಧ**:– ಮಾನ್ಯ ಸಚಿವರು ತಮ್ಮ ಹತ್ತಿರ ಮಾತನಾಡುತ್ತಿದ್ದಾರೆ ಅದಕ್ಕಾಗಿ ನನ್ನ ಮಾತನ್ನು ನಿಲ್ಲಿಸಿದೆ.

**ಶ್ರೀ ಸಿದ್ದರಾಮಯ್ಯ**:– ನಿಮ್ಮ ಮಾತಿಗೂ ನಮ್ಮ ಮಾತಿಗೂ ಸಂಬಂಧವಿಲ್ಲ. ಮಾತನಾಡಿ.

**ಶ್ರೀಮತಿ ತಾರಾಅನೂರಾಧ**:– ನನ್ನ ಪ್ರಶ್ನೆಯನ್ನು ಕೇಳದಿದ್ದರೆ ಹೇಗೆ? ಮಾನ್ಯ ಸಚಿವರು ಉತ್ತರವನ್ನು ನೀಡಬೇಕಲ್ಲವೇ?

**ಸಭಾಪತಿಯವರು**:– ನಿಮ್ಮ ಪ್ರಶ್ನೆ ಏನೆಂಬುದನ್ನು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರುಗಳ ಪೈಕಿ ಇರುವ ಏಕ ಮಾತ್ರ ಮಹಿಳಾ ಸದಸ್ಯೆಯಾದ ಶ್ರೀಮತಿ ತಾರಾ ಅನೂರಾಧರವರು. ಅವರೊಬ್ಬರಿಗೆ ಇಷ್ಟು ಜೀವ ತಿಂದಿದರೆ ಕಥೆ ಏನು?

**ಶ್ರೀ ಸಿದ್ದರಾಮಯ್ಯ**:– ಮಾನ್ಯ ಸಭಾಪತಿಯವರೇ, ಏನಾದರೂ ಹೆಣ್ಣು ಮಕ್ಕಳಿಗೆ ಜೀವ ತಿನ್ನುವಂಥ ಕೆಲಸವನ್ನು ಮಾಡಿದರೆ ಅದು ಮಾನ್ಯ ಕೆ.ಎಸ್.ಈಶ್ವರಪ್ಪ ಮತ್ತು ಕಂಪನಿಯವರು ಮಾತ್ರ. ನಾವು ಆ ರೀತಿ ಜೀವ ತಿನ್ನುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ತಾರಾ ಅನೂರಾಧರವರೆ ನಾನು ಹೇಳುವುದು ನಿಜವಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ**:– ಮಾನ್ಯ ಸಭಾಪತಿಯವರೇ, ಈಶ್ವರಪ್ಪ ಮತ್ತು ಕಂಪನಿ ಎಂದರೆ ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಸೇರಿಕೊಳ್ಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಹೆಣ್ಣು ಮಕ್ಕಳ ಬಗ್ಗೆ ಬಹಳ ಗೌರವವಿದೆ. ಮಾನ್ಯ ಸದಸ್ಯರಾದ ತಾರಾಅನೂರಾಧರವರೆ ಹೆಣ್ಣು ಮಕ್ಕಳಿಗೆ ನಮ್ಮ ಸರ್ಕಾರ ಮಾಡಿರುವಷ್ಟು ಸವಲತ್ತನ್ನು ಬೇರೆ ಸರ್ಕಾರದವರೂ ಮಾಡಿದ್ದಾರೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಸಾಧ್ಯವೇ ಇಲ್ಲ.

**ಶ್ರೀಮತಿ ತಾರಾಅನೂರಾಧ:-** ಇನ್ನೂ ಬಹಳ ಕೆಲಸ ಮಾಡುವುದು ಇದೆ.

**ಶ್ರೀ ಸಿದ್ಧರಾಮಯ್ಯ:-** ಆತ್ಮ ಮುಟ್ಟಿಕೊಂಡು ಹೇಳಿ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಮುಖ್ಯಮಂತ್ರಿಯವರೇ, ಬಾಣತಿಯರಿಗೆ, ಗರ್ಭಿಣಿಯರಿಗೆ ರಜೆ ಸೌಲಭ್ಯವನ್ನು ಒದಗಿಸುತ್ತಿಲ್ಲ ಎಂಬ ಸುದ್ಧಿ ಬಂದಿದೆ. ಅದರ ಬಗ್ಗೆ ಆಮೇಲೆ ಮಾತನಾಡೋಣ. ಅದಕ್ಕೆ ಸಂಬಂಧಪಟ್ಟ ಒಂದು ವಿಚಾರವನ್ನೇ ತರುತ್ತೇನೆ. ಎಷ್ಟು ರಸ್ತೆಗಳು ಹೆದ್ದಾರಿ ರಸ್ತೆಗಳಾಗಿ ಮಾರ್ಪಟ್ಟಿವೆ ಎಂಬ ಪ್ರಶ್ನೆಗೆ ಅನುಬಂಧ-1 ರಲ್ಲಿ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 08.10.2014 ರ ಮೊದಲು ಹೆದ್ದಾರಿಗಳಾಗಿದ್ದು, 2014ರ ನಂತರ ಯಾವ ಹೆದ್ದಾರಿಗಳು ಮಾರ್ಪಟ್ಟಿಲ್ಲ. ನಿಂತು ಹೋಗಿದ್ದೆ. 2015-2016, 2016-2017, 2017-2018ರಲ್ಲಿ ಯಾವ ರಾಜ್ಯ ಹೆದ್ದಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. ಇನ್ನು ಉಳಿದಿರುವುದು 2 ತಿಂಗಳು ಮಾತ್ರ. ಏನು ಮಾಡುತ್ತಾರೋ ಗೊತ್ತಿಲ್ಲ. ಆದರೆ, 2014ನೇ ಸಾಲಿನಲ್ಲಿ ಮಾರ್ಪಟ್ಟಿರತಕ್ಕಂಥ ಹೆದ್ದಾರಿಗಳ ಬಗ್ಗೆ ಏನು ಕೊಟ್ಟಿದ್ದಾರೆ ಅದನ್ನು ಯಾವ ಕಾಲಮಿತಿಯೊಳಗೆ ತೆಗೆದುಕೊಳ್ಳುತ್ತಾರೆ. ಮಾನ್ಯ ಸಚಿವರ ಕಾಲಮಿತಿಯೊಳಗೆ ತೆಗೆದುಕೊಳ್ಳುತ್ತಾರೆಯೇ ಎಂಬ ಉತ್ತರ ಬೇಕು. ಹಾಗೆಯೇ ರಾಜ್ಯ ಹೆದ್ದಾರಿ ರಸ್ತೆಗಳ ದುರಸ್ಥಿಗೆ ಕೇಂದ್ರದಿಂದ ಇದುವರೆಗೆ ಬಂದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು; ಎಂಬ ಪ್ರಶ್ನೆಗೂ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ನೀಡಿದ್ದು, ಸರಿಯಾಗಿಯೇ ಇದೆ. ನಮಗೆ ಬೇಕಾಗಿರುವುದು ವರ್ಷಕ್ಕೆ CRF (Central Road Fund) ನಲ್ಲಿ ಎಷ್ಟು ಹಣ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿದೆ. ಅದನ್ನು ಪೂರ್ತಿಯಾಗಿ ತೆಗೆದುಕೊಂಡಿದ್ದಾರೆಯೇ? ಇನ್ನು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೇ? ಕೊನೆಯದಾದ ಪ್ರಶ್ನೆಯೇನೆಂದರೆ, ಈಗಾಗಲೇ ಕೇಂದ್ರ ಸರ್ಕಾರ ಅನುದಾನವನ್ನು ಹೆಚ್ಚಿಸಿದ್ದು, ರಾಜ್ಯದ ಎಷ್ಟು ರಸ್ತೆಗಳಿಗೆ ಈ ಭಾಗ್ಯ ದೊರೆಯಲಿದೆ? ಎಂಬ ಪ್ರಶ್ನೆಗೆ ಅನುಬಂಧದಲ್ಲಿಯೇ ಉತ್ತರವನ್ನು ನೀಡಿದ್ದು, 282 ರಸ್ತೆಗಳಿಗೆ ಅನುದಾನವನ್ನು ಹೆಚ್ಚಿಸಿದ್ದು, ಈ ರೀತಿಯ ಭಾಗ್ಯ ದೊರೆಯುತ್ತದೆ ಎಂದು ಅನುಬಂಧ-2 ರಲ್ಲಿ ತಿಳಿಸಿದ್ದಾರೆ. 282 ರಸ್ತೆಗಳಿಗೆ ಈ ರೀತಿಯ ಭಾಗ್ಯ ದೊರೆಯುತ್ತದೆ ಎಂದು ಹೇಳಿದ್ದಾರೆ ಸಂತೋಷ. ಆದರೆ, ಈ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಳ್ಳುತ್ತಾರೆ.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(128)/20.02.2018/12.30/ಎಸ್‌ಕೆ-ಆರ್‌ಎನ್

**ಡಾ. ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಮತ್ತು ಪ್ರಶ್ನೆಯ ಜೊತೆಗೆ ಉತ್ತರ ಎರಡನ್ನೂ ಹೇಳಿರುವುದರಿಂದ, ಅವರಿಗೆ ಅಭಿನಂದನೆಗಳು. ಇದರ ಜೊತೆಗೆ ಪ್ರಶ್ನೆಯಲ್ಲಿ ಇಲ್ಲದೇ ಇರುವಂತಹ ಪ್ರಶ್ನೆಗಳನ್ನು ರಾಜ್ಯದ ಹಿತದೃಷ್ಟಿಯಿಂದ ಮತ್ತು ಜನತೆಯ ಹಿತದೃಷ್ಟಿಯಿಂದ ಕೇಳಿದ್ದಾರೆ. ಇದನ್ನು ಐದಾರು ಮಂತ್ರಿಗಳಿಗೂ ಕೇಳಿದ್ದಾರೆ. ಅವರ ಆಸಕ್ತಿಯನ್ನು ನೋಡಿದರೆ, ಎಲ್ಲಾ ಪ್ರಶ್ನೆಗಳಿಗೆ ಒಂದೇ ಬಾರಿ ಉತ್ತರಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗಲಿ ಎಂಬುದು ಸಹ ಇರಬಹುದು. ಆದರೆ ನನ್ನ ಖಾತೆಗೆ ಸಂಬಂಧಪಟ್ಟಂತೆ, ಮೈಸೂರು-ಬೆಂಗಳೂರು ಹೆದ್ದಾರಿ ಈ ಹಿಂದೆ ಎಂಡಿಆರ್ ಇತ್ತು, ರಾಜ್ಯ ಹೆದ್ದಾರಿ ಸಹ ಆಗಿರಲಿಲ್ಲ. ಮಾನ್ಯ ಎಸ್.ಎಂ. ಕೃಷ್ಣರವರ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಂದ ಡೆವಲಪ್ ಮಾಡಿದ್ದರು. ಆಮೇಲೆ ಅದು ಹಾಗೇ ಇತ್ತು. 2013 ರಲ್ಲಿ ನಮ್ಮ ಸರ್ಕಾರ ಬಂದ ಮೇಲೆ ಕೇಂದ್ರದಲ್ಲಿ ಯುಪಿಎ ಸರ್ಕಾರದಲ್ಲಿ ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಭೂಸಾರಿಗೆ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅದನ್ನು ನ್ಯಾಷನಲ್ ಹೈವೇ ಆಗಿ ಅಪ್‌ಗ್ರೇಡ್ ಮಾಡಿದರು. ಅಪ್‌ಗ್ರೇಡ್ ಮಾಡಿದ ನಂತರ ಡಿಪಿಆರ್ ಮಾಡಿ, ಎಸ್ಟಿಮೇಟ್ ಮಾಡಿ ಕೊಟ್ಟ ಮೇಲೆ, ಅದಕ್ಕೆ ಈಗಿನ ಸರ್ಕಾರ ಮಂಜೂರಾತಿ ಕೊಟ್ಟಿದೆ. 2013-14 ನೇ ಸಾಲಿನಲ್ಲಿಯೇ ಅದನ್ನು ಅಪ್‌ಗ್ರೇಡ್ ಮಾಡಿದರು. ಅದು ಈಗ ಆರು ಪಥದ ರಸ್ತೆ ಆಗಿದೆ. ನಾಲ್ಕು ಪಥಕ್ಕಿಂತ ಹೆಚ್ಚಿನ ರಸ್ತೆಗಳ ಕಾಮಗಾರಿಗಳನ್ನು ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾ ತೆಗೆದುಕೊಳ್ಳುವುದಕ್ಕೆ ಮಾಡಿದ್ದಾರೆ. ಅದಕ್ಕೆ ಎರಡು ಹಂತಗಳಲ್ಲಿ ಮಾಡಿದ್ದಾರೆ. ಸುಮಾರು 2000 ಕೋಟಿಗೂ ಹೆಚ್ಚು ಮೊತ್ತದ ಹಂತ ಒಂದು ಕಡೆಯಾದರೆ, ಮತ್ತೊಂದು ಕಡೆ 1900 ಕೋಟಿಗೂ ಹೆಚ್ಚು ಮೊತ್ತದ್ದಾಗಿದೆ. 2000 ಕ್ಕಿಂತ ಕಡಿಮೆ ಇರುವ ಫೇಸ್‌ಗೆ ಸಂಬಂಧಪಟ್ಟಂತಹ ಮಂತ್ರಿಗಳೇ ಅಪ್ರೂವಲ್ ಕೊಡಬಹುದು. 2000 ಕ್ಕಿಂತ ಮೇಲಿರುವುದನ್ನು ಫೈನಾನ್ಷಿಯಲ್ ಸಬ್ ಕಮಿಟಿಗೆ ಹೋಗಿ, ಆಮೇಲೆ ಸಚಿವ ಸಂಪುಟ ಅದನ್ನು ಅಪ್ರೂವಲ್ ಮಾಡಬೇಕು. ಡಿಪಿಆರ್ ಆಗಿದೆ. ಆದರೆ ಇನ್ನೂ ಅಪ್ರೂವಲ್ ಕೊಟ್ಟಿಲ್ಲ. ಅವರು ಅಪ್ರೂವಲ್ ಕೊಟ್ಟ ನಂತರ ಆಗುತ್ತದೆ. ಅಲ್ಲಿಯ ತನಕ ನಾವು ಕೆಲವು ಕಡೆ ರಸ್ತೆಗಳು ಹಾಳಾಗಿತ್ತು. ಅದನ್ನು ದುರಸ್ತಿ ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಪ್ರಧಾನ ಮಂತ್ರಿಗಳು ಮೈಸೂರಿಗೆ ಬಂದಾಗ ಹೇಳಿದ್ದಾರೆ. ಯುಪಿಎ ಸರ್ಕಾರವಿದ್ದಾಗಲೇ ನ್ಯಾಷನಲ್ ಹೈವೇ ಆಗಿ ಅಪ್‌ಗ್ರೇಡ್ ಆಗಿದ್ದು.

ಅದೇ ರೀತಿಯಲ್ಲಿ ತುಮಕೂರು-ಶಿವಮೊಗ್ಗ ಹೆದ್ದಾರಿಯನ್ನು ಮಾನ್ಯ ಆಸ್ಕರ್ ಫರ್ನಾಂಡೀಸ್ ರವರು ಭೂಸಾರಿಗೆ ಸಚಿವರಾಗಿದ್ದಾಗ ಮಾಡಿದ್ದು ಎಂದು ಈಗಿನ ಭೂಸಾರಿಗೆ ಸಚಿವರಾದ ಮಾನ್ಯ ನಿತಿನ್ ಗಡ್ಕರಿಜೀಯವರು ಸಹ ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಳ್ಳೆಗಾಲದ ಬಗ್ಗೆ ಹೇಳಿದ್ದಾರೆ. KSHIP (Karnataka State Highway Improvement Project ) ಅಡಿಯಲ್ಲಿ ವಿಶ್ವಬ್ಯಾಂಕ್ ಕೆಳಗಡೆ ಟೆಂಡರ್ ಹಾಕಿದ್ದೇವೆ. ರಸ್ತೆಗಳು ಹದಗೆಟ್ಟಿರುವ ಬಗ್ಗೆ ಕೆಲಸ ಮಾಡಬೇಕಾಗಿದೆ. ಪೊನ್ನಾಚಿಗೆ ಸಂಬಂಧಪಟ್ಟಂತೆ, ಆ ರಸ್ತೆಗಳೆಲ್ಲಾ ಗ್ರಾಮೀಣಾಭಿವೃದ್ಧಿ ರಸ್ತೆಗಳು. ಗಡಿಯ ಕೊನೆಯಲ್ಲಿರುವ ಮಹದೇಶ್ವರ ಬೆಟ್ಟದ ಕೆಳಗಡೆ ಗೋಪಿನಾಥಂನಿಂದ ಆ ಕಡೆಗೆ ಬಾರ್ಡರ್‌ನಲ್ಲಿದೆ. ಇದು ಗ್ರಾಮೀಣಾಭಿವೃದ್ಧಿಗೆ ಬರುತ್ತದೆಯೇ ಅಥವಾ ಯಾರಿಗೆ ಬರುತ್ತದೆ ಎಂಬುದನ್ನು ನೋಡಿ ರಸ್ತೆಯನ್ನು ಮಾಡೋಣ. ಈಗ ಸುಮಾರು 6729 ಕಿ.ಮೀ. ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ 2017 ನೇ ಸಾಲಿನಲ್ಲಿ ಮಾಡಿದ್ದಾರೆ. ಈ ಸರ್ಕಾರ ಬಂದ ಮೇಲೆ ಹನ್ನೆರಡು ಸಾವಿರ ಕಿಲೋ ಮೀಟರ್ ರಸ್ತೆಯನ್ನು ಅಪ್‌ಗ್ರೇಡ್ ಮಾಡಿದೆ. ಯುಪಿಎ ಸರ್ಕಾರವಿದ್ದಾಗ ಎರಡು ಸಾವಿರ ಕಿಲೋ ಮೀಟರ್ ರಸ್ತೆಯನ್ನು ನ್ಯಾಷನಲ್ ಹೈವೆ ಆಗಿ ಮಾಡಿದ್ದಾರೆ. ಎರಡು ಸಾವಿರ ಕಿಲೋ ಮೀಟರ್ ರಸ್ತೆಯನ್ನು ಯುಪಿಎ ಸರ್ಕಾರವಿದ್ದಾಗ ಅಪ್‌ಗ್ರೇಡ್ ಮಾಡಿದ್ದರು. ಅವೆಲ್ಲಾ ಡಿಪಿಆರ್ ಆಗಿ, ಎಸ್ಟಿಮೆಟ್ ಆಗಿ, ಅಪ್ರೂವಲ್ ಆಗಿ, ಈಗ ಕೆಲಸ ಪ್ರಾರಂಭವಾಗುತ್ತದೆ. ಈಗ ಆರು ಸಾವಿರ ಕಿಲೋ ಮೀಟರ್ ಹೇಗೆ in principle ಎರಡು ಸಾವಿರ, ಮೂರು ಸಾವಿರ ಮಾಡಿದರೆ ಇನ್ನೂ ಅಗ್ರಿಮೆಂಟ್ ಆಗಿದೆ. ಇದಕ್ಕೆ ಡಿಪಿಆರ್, ಎಸ್ಟಿಮೆಟ್ ಇನ್ನೂ ಆಗದೇ ಕೆಲಸ ಆಗುವುದಿಲ್ಲ. ಡಿಪಿಆರ್, ಎಸ್ಟಿಮೆಟ್ ಆಗಿ ಇಲ್ಲಿ ಅಪ್ರೂವಲ್ ಆದಾಗ, ಅವುಗಳಿಗೆ ಹೊಸ ನ್ಯಾಷನಲ್ ಹೈವೆಗೆ ನಂಬರ್ ಕೊಡುತ್ತಾರೆ. ಇನ್ನೂ ಆಗಿಲ್ಲ. ಎರಡು ಲಕ್ಷ ಕೋಟಿ ಈಗ ಆಗಿರುವುದಕ್ಕೆ ಅಂದಾಜು ಇತ್ತು. ಇನ್ನು ಎರಡು ಲಕ್ಷ ಕೋಟಿ ಕೊಟ್ಟಿಲ್ಲ. ಯುಪಿಎ ಸರ್ಕಾರವಿದ್ದಾಗ ಹದಿನೆಂಟು ಸಾವಿರದಿಂದ ಇಪ್ಪತ್ತು ಸಾವಿರ ಕೋಟಿ, ಅದೆಲ್ಲಾ ಎರಡು ಸಾವಿರ ಕಿ.ಮೀಟರ್‌ಗೆ ಮಂಜೂರಾತಿ ಆಗಿದೆ. ಇನ್ನು ಮುಂದೆ ಏನು ಕೊಡುತ್ತಾರೆ, ಇವರು ಬಂದಾಗ ಡಿಪಿಆರ್ ಆಗಿ, ಎಸ್ಟಿಮೆಟ್ ಆಗಿ, ಅದು ಅಪ್ರೂವಲ್ ಆಗಿ ಇವರು ಕೊಡುವಂತಹದು.

ಹಾಗೆಯೇ, ತುಮಕೂರಿಗೆ ಅಂದರೆ ಸಿಗಂಧೂರಿಗೆ ನಾನು ನನ್ನ ಸ್ನೇಹಿತನಾದ ಶ್ರೀಧರ್‌ನ ಮದುವೆಗೆ ಹೋಗಿದ್ದಾಗ, ಲಾಂಚ್‌ನಲ್ಲಿ ಹೋದರೆ ರಾತ್ರಿಯಾಗುತ್ತಿತ್ತು. ಇಲ್ಲಿ ಏನು ಮಾಡಬೇಕು ಎಂಬುದು ಯಾರಿಗೂ ಗೊತ್ತಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ *Karnataka Road Development Corporation Ltd (KRDCL)* ಮಾಡಬೇಕೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಯಡಿಯೂರಪ್ಪನವರು ಹೇಳಿದರು. ನಾನು ಅದನ್ನು ಹೇಗಾದರೂ ಮಾಡಿ ಕೇಂದ್ರ ಸರ್ಕಾರಕ್ಕೆ ಹೇಳಿ, ಅದನ್ನು ಮಾಡಬೇಕೆಂದು ಹೇಳಿ ಸ್ವತ: ನಾನು ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಅದನ್ನು ಐದು ನೂರರಿಂದ ಆರ್ನೂರು ಕೋಟಿಗೆ ಮೊನ್ನೆ ಅಡಿಗಲ್ಲು ಹಾಕಬೇಕು ಎಂದು ಇದ್ದೆವು, ಆದರೆ ಪ್ರಧಾನ ಮಂತ್ರಿಗಳು ಬಂದದ್ದರಿಂದ, ಅವರನ್ನು ಶಿಷ್ಟಾಚಾರದ ರೀತ್ಯಾ ಬರಮಾಡಿಕೊಳ್ಳುವುದಕ್ಕೆ ಹೋಗಬೇಕಾಯಿತು. ಆದ್ದರಿಂದ ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ. ಮಾನ್ಯ ಗಡ್ಕರಿಜೀ ಅದರ ಅಡಿಗಲ್ಲು ಹಾಕಿದ್ದಾರೆ. ಇದನ್ನು ಹೇಗೆ ಮಾಡಬೇಕೆಂಬುದು ಯಾರಿಗೂ ಸಹ ಐಡಿಯಾ ಇರಲಿಲ್ಲ. ಆರು ನೂರು ಕೋಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿಯ ಯೋಜನೆ. It is the second biggest bridge in the country. ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸ್ವತ: ಆಸಕ್ತಿ ವಹಿಸಿ ಮಾಡಿಸುತ್ತಿರುವಂತಹ ಸೇತುವೆ. CRF (Central Road Fund) ಗೆ ಸಂಬಂಧಪಟ್ಟಂತೆ, ನಮ್ಮ ರಾಜ್ಯಕ್ಕೆ ಈ ವರ್ಷಕ್ಕೆ ಪ್ರಾವಿಜನ್...

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:-** ಅವರು ಮಾತನಾಡುತ್ತಿದ್ದಾರೆ. ಮಧ್ಯೆ ಬಾಯಿ ಹಾಕಬೇಡಿ. ಅವರು ಉತ್ತರ ಕೊಡಲಿ. It is not a discussion.

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಷ್ಟು ಸಾವಿರ ಕೋಟಿ ಪ್ರಧಾನ ಮಂತ್ರಿಯವರು ಘೋಷಿಸಿದರು ಎಂಬುದನ್ನು ದಾಖಲೆಗೋಸ್ಕರ ಅವರು ಹೇಳಲಿ.

**ಸಭಾಪತಿಯವರು:-**ಮಾನ್ಯ ವೀರಯ್ಯನವರೇ, ಇಲ್ಲಿ ಚರ್ಚೆ ನಡೆಯುತ್ತಿಲ್ಲ. ಅವರ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆ. ಅವರು ಉತ್ತರ ಕೊಡಲಿ.

**ಡಾ. ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, 117 ಕಿಲೋ ಮೀಟರ್ ರಸ್ತೆಯನ್ನು ಎರಡು ಫೇಸ್‌ನಲ್ಲಿ ಮಾಡುತ್ತಿದ್ದೇವೆ. ಒಂದು ಫೇಸ್ ಎರಡು ಸಾವಿರ ಕೋಟಿಗೂ ಹೆಚ್ಚಿನದಾಗಿದ್ದು, ಮತ್ತೊಂದು ಒಂದು ಸಾವಿರದ ಒಂಭೈನೂರು ಕೋಟಿಗೂ ಹೆಚ್ಚಿನದಾಗಿದೆ. ಎರಡು ಸಾವಿರ ಕೋಟಿಗಿಂತ ಹೆಚ್ಚಿಗೆ ಇದ್ದರೆ, ಅದು ಸಚಿವ ಸಂಪುಟದ ಅನುಮೋದನೆ ಬೇಕು. ಸಾವಿರದ ಒಂಭೈನೂರು ಕೋಟಿಗಿಂತ ಕಡಿಮೆ ಮತ್ತು ಎರಡು ಸಾವಿರ ಕೋಟಿಯೊಳಗೆ ಇದ್ದರೆ the concerned Minister himself will give approval. ಭೂಸ್ವಾಧೀನಕ್ಕೆ ಮೂರು ಸಾವಿರ ಕೋಟಿಗಳು, ಒಟ್ಟಾರೆ ಏಳು ಸಾವಿರ ಕೋಟಿಗಳು. ಇದನ್ನು ಯುಪಿಎ ಸರ್ಕಾರವಿದ್ದಾಗಲೇ ನ್ಯಾಷನಲ್ ಹೈವೇಗಾಗಿ ಆಸ್ಕರ್ ಫರ್ನಾಂಡೀಸ್‌ರವರು ಘೋಷಿಸಿದ್ದರು. Government is a continuous process and they have to give approval.

ಸಿಆರ್‌ಎಫ್‌ಗೆ ಸಂಬಂಧಪಟ್ಟಂತೆ ನಮ್ಮ ರಾಜ್ಯಕ್ಕೆ 2016-17 ನೇ ಸಾಲಿಗೆ ಸುಮಾರು 430 ಕೋಟಿ ಪ್ರಾವಿಜನ್ ಇತ್ತು. Fuel consumption, ಆಯಾ geographical area ಮೇಲೆ ಬರುವಂತಹದು. ನಾವು 280 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೊದಲು ನಾವು ಎರಡು ಸಾವಿರ ಕೋಟಿಗೆ ಟೆಂಡರ್‌ಗಳನ್ನು ಕರೆದಿದ್ದೆವು. ಅದಕ್ಕೆ ಈಗಾಗಲೇ ಮೂರು ಸಾವಿರದ ಎಂಟುನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಅಷ್ಟೊಂದು ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ಕಾರಣ ನಾವು ಬಜೆಟ್ ಮಾಡಿಕೊಂಡು ಪ್ಲಾನ್ ಮಾಡಿರುತ್ತೇವೆ. ಅವರು ವರ್ಷಕ್ಕೆ ಸುಮಾರು 430 ಕೋಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳಷ್ಟೇ ಕೊಡುತ್ತಾರೆ. Based on fuel consumption and geographical area. ಆದರೆ ಅದನ್ನು ನಾವು ಮಾಡಿದಾಗ ನಮ್ಮ ರಾಜ್ಯ ಸರ್ಕಾರದಿಂದ ಕೊಡಬಹುದು. ಎಷ್ಟೋ ವರ್ಷಕ್ಕೆ ಅವರು reimburse ಮಾಡುತ್ತಾರೆ. ನಮ್ಮ ರಾಜ್ಯದ ಹಕ್ಕನ್ನು. ಸಿಆರ್‌ಎಫ್ ಎಂದರೆ, ಕೇಂದ್ರ ಸರ್ಕಾರ ಕೊಟ್ಟಿದೆ ಎಂಬ ಅರ್ಥವಲ್ಲ. It is the right of State Government. Fuel consumption based on geographical area ಮೇಲೆ ರಾಜ್ಯ ಸರ್ಕಾರಕ್ಕೆ ಕೊಡುವಂತಹ ಹಣ. ಒಂದು ವರ್ಷಕ್ಕೆ ಸುಮಾರು 430 ಕೋಟಿ ರೂಪಾಯಿಗಳು. ಈಗಾಗಲೇ ಐದಾರು ವರ್ಷಕ್ಕಾಗುವಷ್ಟು ಕೊಟ್ಟಿದ್ದಾರೆ. ಈ ಹಿಂದೆ ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಸಾವಿರಾರು ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದರು. This is the subject matter. I think that I have answered all the questions as a authority.

ಸಭಾಪತಿಯವರು:- ಧನ್ಯವಾದಗಳು.

**ಚುಕ್ಕೆಗುರುತಿನ ಪ್ರಶ್ನೆ 482**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಆರ್. ಪ್ರಸನ್ನ ಕುಮಾರ್ ಅವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಒಟ್ಟು ಪ್ರಶ್ನೆಗಳ ಸಂಖ್ಯೆ ಐದು. ವಿವಿಧ ರಾಜ್ಯಗಳಲ್ಲಿರುವ ಪ್ರತಿಷ್ಠಿತ ದೇವಸ್ಥಾನಗಳು ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ನಿರ್ಮಿಸಿರುವ ವಸತಿ ಸಮುಚ್ಛಯಗಳು ಹಾಗೂ ಕಟ್ಟಡಗಳ ಸಂಖ್ಯೆ ಎಷ್ಟು; ಮತ್ತು ಯಾವ ಯಾವ ಸ್ಥಳಗಳಲ್ಲಿ ಇವೆ ಎಂದು ಪ್ರಶ್ನೆಯನ್ನು ಕೇಳಿದ್ದೆವು. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ತಿರುಪತಿ-ತಿರುಮಲ ಆಂಧ್ರಪ್ರದೇಶ. ತಿರುಚಾನೂರು ಆಂಧ್ರ ಪ್ರದೇಶ, ಮಂತ್ರಾಲಯ ಆಂಧ್ರ ಪ್ರದೇಶ, ಶ್ರೀ ಶೈಲಂ, ಆಂಧ್ರ ಪ್ರದೇಶ ಈ ಐದು ಕಡೆಗಳಲ್ಲಿ ಇದೆ ಎಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಜನ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆಂಬ ಪ್ರಶ್ನೆಯನ್ನು ಕೇಳಿದ್ದೆವು. ಅದರ ಬಗ್ಗೆ ಕೂಡ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಕಾಳಜಿ ಇಷ್ಟೇ, ಇವತ್ತು ಉದಾಹರಣೆಗೆ ಹೇಳುವುದಾದರೆ, ಅಲ್ಲಿರುವಂತಹ ಸಿಬ್ಬಂದಿಗಳಿಗೆ, ಸ್ವತಃ ನಾವೇ ದೇವಸ್ಥಾನಗಳಿಗೆ ಹೋಗುತ್ತೇವೆಂದು ಹೇಳಿ, ನಾವು ನಮ್ಮ ಕಾಗದಗಳನ್ನು ಫ್ಯಾಕ್ಸ್ ಮಾಡಿದರೂ ಕೂಡ, ಮತ್ತೆ ನಾವು ದೂರವಾಣಿಯ ಮುಖಾಂತರ ಮನವಿಯನ್ನು ಮಾಡಿಕೊಂಡರೂ ಕೂಡ, ಅವರು ಸರಿಯಾದ ರೀತಿಯಲ್ಲಿ ನಮಗೆ ಪ್ರತ್ಯುತ್ತರವನ್ನು ಕೊಡುವುದಿಲ್ಲ. ಒಂದು ವೇಳೆ ನಾವು ಫ್ಯಾಕ್ಸ್ ಕಳುಹಿಸಿದ್ದೇವೆಂದು ಹೇಳಿ, ದೇವಸ್ಥಾನದ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೋದಾಗ, ಆಗ ಅವರೆಲ್ಲಾ ಹುಡುಕಾಡುತ್ತಿರುತ್ತಾರೆ. ದೇವರ ದರ್ಶನಕ್ಕೆ ನಮಗೆ ವ್ಯವಸ್ಥೆಯಾಗಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಅಲ್ಲಿಗೆ ಹೋದಾಗ, ನಮಗೆ ಪರದಾಡುವಂತಹ ಪರಿಸ್ಥಿತಿ ಬಂದಿದೆ. ತಿರುಪತಿಗೆ ಹೋದಾಗ, ಬೇರೆ ರಾಜ್ಯಗಳ ಶಾಸಕರು ಯಾರಾದರೂ ಹೋದರೆ, ಅವರು ದರ್ಶನಕ್ಕೆ ಎಲ್-1 ಎಂಬ ಸಂದರ್ಶನವನ್ನು ಕೊಡುತ್ತಾರೆ. ನಮಗೆ ಎಲ್-1 ಇಲ್ಲ, ಯಾವುದೂ ಇಲ್ಲ. ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ದಯವಿಟ್ಟು, ಇದರ ಬಗ್ಗೆ ಹೆಚ್ಚಿನ ಗಮನವನ್ನು ಮಾನ್ಯ ಸಚಿವರು ಕೊಡಬೇಕು.

'ಇವುಗಳ ನಿರ್ವಹಣೆಗಾಗಿ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತಿದೆ; ಇವುಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು?' ಎಂದು ಕೇಳಿದ್ದೆವು. ಉದಾಹರಣೆಗೆ ತಿರುಮಲವನ್ನು ತೆಗೆದುಕೊಂಡರೆ 2,81,97,654.00 ರೂಪಾಯಿಗಳ ಆದಾಯ ಬರುತ್ತದೆ ಎಂದು ಹೇಳಿದ್ದಾರೆ. ಖರ್ಚು 2,29,44,809.00 ರೂಪಾಯಿಗಳು. ಅದಕ್ಕಿಂತ ಕಡಿಮೆ ಖರ್ಚು ಮಾಡುವಂತಹದು. ಸರ್ಕಾರದಿಂದ ಒಂದು ರೂಪಾಯಿಯೂ ಕೊಡುತ್ತಿಲ್ಲ. ದಯವಿಟ್ಟು, ನಮ್ಮ ರಾಜ್ಯದಿಂದ ಹೋಗುತ್ತಿರುವಂತಹ ಯತ್ರಾರ್ಥಿಗಳಿಗೆ ಉತ್ತಮವಾದ ಸೌಲಭ್ಯವನ್ನು ಕೊಡುವುದಕ್ಕೆ, ಅಲ್ಲಿ ಆದಾಯ ಬರುವಂತಹದ್ದನ್ನು ಸಂಪೂರ್ಣವಾಗಿ ಖರ್ಚು ಮಾಡುವುದರ ಜೊತೆಯಲ್ಲಿ, ನಮ್ಮ ಸರ್ಕಾರವು ಹೆಚ್ಚು ಅನುದಾನವನ್ನು ಕೊಟ್ಟು, ಅಲ್ಲಿರುವಂತಹ ವಸತಿ ಗೃಹಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕು. ಎಲ್ಲರಿಗೂ ಸರಿಯಾದ ರೀತಿಯಲ್ಲಿ ಉತ್ತಮವಾದ ಸೌಲಭ್ಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವೇ ಸ್ವತಃ ದೇವಸ್ಥಾನಗಳಿಗೆ ಹೋಗುತ್ತೇವೆಂದು ಪತ್ರವನ್ನು ಕೊಟ್ಟಾಗಲೂ ಕೂಡ, ಅಲ್ಲಿರುವಂತಹ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ನಮ್ಮನ್ನು ಇನ್ನು ಯಾರಾದರೂ ಬಂದು ಸಾರ್, ದಯವಿಟ್ಟು ನಾವು ದೇವರ ದರ್ಶನಕ್ಕೆ ಹೋಗಬೇಕು. ತಾವು ಒಂದು ಲೆಟರ್ ಕೊಡಿ ಎಂದು ಕೇಳುತ್ತಾರೆ. ಅವರ ಪರಿಸ್ಥಿತಿಯನ್ನು ಹೇಳುವಂತಿಲ್ಲ. ದಯವಿಟ್ಟು, ಮಾನ್ಯ ಸಚಿವರು ಸರಿಯಾದ ರೀತಿಯಲ್ಲಿ ಸೂಕ್ತವಾದ ಕ್ರಮ ಕೈಗೊಂಡು, ದೇವರ ದರ್ಶನಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿರುವಂತಹ ವಸತಿ ಗೃಹಗಳನ್ನು ಇನ್ನು ಉತ್ತಮ ಪಡಿಸುವುದಕ್ಕೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ಎಂಬ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು...)

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಜವಳಿ ಹಾಗೂ ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ವಿವರವಾದ ಉತ್ತರವನ್ನು ಒದಗಿಸಲಾಗಿದೆ. ಆದರೆ, ಕರ್ನಾಟಕ ಸರ್ಕಾರದಿಂದ ಕಟ್ಟಿರತಕ್ಕಂಥ ಛತ್ರದಲ್ಲಿ ಸುಮಾರು 86 ಕೊಠಡಿಗಳು ಮಾತ್ರ ಇವೆ. ಒಂದು ಕಲ್ಯಾಣ ಮಂಟಪ ಇದೆ. ಪ್ರತಿದಿನ ಸಾಕಷ್ಟು ಜನ ಭಕ್ತರು ತಿರುಪತಿಗೆ ಬರುತ್ತಿದ್ದಾರೆ. ಅಲ್ಲಿ ವಸತಿ ಗೃಹಗಳಿಗೆ demand ಜಾಸ್ತಿ ಇದೆ. ಕೆಲವು ವರ್ಷಗಳಿಂದ ಆ ದೇವಸ್ಥಾನದ ಸಮಿತಿಯವರು ನಮ್ಮ ಜಾಗವನ್ನು ತೆಗೆದುಕೊಂಡು ಹೈಕೋರ್ಟ್‌ನಲ್ಲಿ ಒಂದು stay ಅನ್ನು ತಂದಿದ್ದರು. ಅದನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆರವುಗೊಳಿಸುವುದಕ್ಕೆ ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ನಾವು ಸತತವಾದಂತಹ ಪ್ರಯತ್ನವನ್ನು ಕೂಡ ಮಾಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಅದಕ್ಕೆ ಒಂದು ಹೊಸ ರೂಪ ಕೂಡ ಕಂಡುಕೊಂಡಿದ್ದೇವೆ. ಅಲ್ಲಿನ ಮಾನ್ಯ ಮುಖ್ಯಮಂತ್ರಿಗಳನ್ನು ನಾನೇ ಸ್ವತಃ ಭೇಟಿ ಮಾಡಿ, ಅದರ ಬಗ್ಗೆ ಮಾತನಾಡಿದ್ದೇನೆ. ಜೊತೆಗೆ ನಮ್ಮ ಅಧಿಕಾರಿಗಳನ್ನು ಸಹ ಅಲ್ಲಿಗೆ ಕಳುಹಿಸಿ, ನಾವು ಮತ್ತು ಅವರು ಒಟ್ಟಾಗಿ ಸೇರಿಕೊಂಡು ಒಂದು ಹೊಸ ತೀರ್ಮಾನವನ್ನು ಮಾಡಿ, ಅದನ್ನು ನಮಗೆ ಬಿಟ್ಟುಕೊಡುವಂತಹ ವ್ಯವಸ್ಥೆಗೆ ಅವರು ತಯಾರಾಗಿದ್ದಾರೆ. ಈಗಾಗಲೇ ನೀಲಿನಕ್ಷೆ ಮತ್ತಿತರೆ ಎಲ್ಲವೂ ಕೂಡ ಸಿದ್ಧಗೊಂಡಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಹ ಅಲ್ಲಿನ ಮಾನ್ಯ ಮುಖ್ಯ ಮಂತ್ರಿಗಳಿಗೆ ಸುಮಾರು ಎರಡು-ಮೂರು ಬಾರಿ ಪತ್ರ ವ್ಯವಹಾರವನ್ನು ಕೂಡ ಮಾಡಿದ್ದಾರೆ. ಈಗ ನಮ್ಮ ರಾಜ್ಯದಲ್ಲಿರತಕ್ಕಂಥ ಮುಖ್ಯ ಕಾರ್ಯದರ್ಶಿಯವರು ಕೂಡ ಅಲ್ಲಿಗೆ ಹೋಗಿ ಅವರ ಜೊತೆ ಮಾತನಾಡಿದ್ದಾರೆ. ಒಟ್ಟಾರೆಯಾಗಿ, ಈ ವರ್ಷದ ಆಯವ್ಯಯದಲ್ಲಿ 20 ಕೋಟಿ ರೂಪಾಯಿಗಳ ಹಣವನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಒದಗಿಸಿದ್ದಾರೆ. ಮುಖ್ಯ ವಾಸ್ತುಶಿಲ್ಪಿಗಳಿಂದ ನೀಲಿನಕ್ಷೆ ಕೂಡ ತಯಾರಾಗಿದೆ. ನಾವು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡು, ಬಜೆಟ್‌ನಲ್ಲಿ ಕೂಡ provision ಮಾಡಿಕೊಂಡಿದ್ದೇವೆ. ಇನ್ನು ಬಹಳ ಎಂದರೆ, ಒಂದು ತಿಂಗಳೊಳಗೆ ಅದನ್ನು ಮಾಡಬೇಕೆಂದು ಇದ್ದೇವೆ. ಈ ಕುರಿತು ಈಗಾಗಲೇ ನಾನು ಮುಖ್ಯ ಕಾರ್ಯದರ್ಶಿಯವರ ಜೊತೆ ಕೂಡ ನಿರಂತರವಾಗಿ ಸಂಪರ್ಕದಲ್ಲಿದ್ದೇನೆ. ಆದಷ್ಟು ಬೇಗನೆ ಅದನ್ನು ಮಾಡತಕ್ಕಂಥದ್ದು ಅಗತ್ಯವಾಗಿದೆ. ಈಗ ಯಾವುದೇ ರೀತಿಯಲ್ಲಿ ತೊಂದರೆ ಇಲ್ಲ. ಆದ್ದರಿಂದ ಅದನ್ನು ಆದಷ್ಟು ಬೇಗನೆ ಮಾಡಬೇಕು. ಈ ನನ್ನ ಅಧಿಕಾರಾವಧಿಯೊಳಗೆಯೇ ಮಾಡಬೇಕೆಂದು ನನ್ನ ಆಸೆ ಕೂಡ ಇದೆ. ಆದಷ್ಟು ಪ್ರಯತ್ನ ಮಾಡಿ ಅದನ್ನು ಬಗೆಹರಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಎಂ.ನಾರಾಯಣ ಸ್ವಾಮಿ (ಶ್ರೀ ಆರ್.ಪ್ರಸನ್ನ ಕುಮಾರ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅಲ್ಲಿ ಇರತಕ್ಕಂಥ ಅಧಿಕಾರಿಗಳು ನಾವುಗಳು ಅವರಿಗೆ ಪತ್ರ ಬರೆದು ದರ್ಶನಕ್ಕೆ ವ್ಯವಸ್ಥೆ ಮಾಡಿ ಎಂದು ಕೇಳಿದರೆ, ಅದಕ್ಕೆ ಸರಿಯಾದಂತಹ ರೀತಿಯಲ್ಲಿ ಸ್ಪಂದನೆ ಮಾಡುತ್ತಿಲ್ಲ. ದಯವಿಟ್ಟು ಅಧಿಕಾರಿಗಳು ನಮ್ಮ ಮಾತಿಗೆ ಸ್ಪಂದನೆ ಮಾಡತಕ್ಕಂಥ ಕೆಲಸ ಆಗಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರ ಪ್ರಶ್ನೆಗೆ ಉತ್ತರ ಹೇಳಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ನಾವು ದರ್ಶನಕ್ಕೆ reservation ಮಾಡತಕ್ಕಂಥ ಕೆಲಸವನ್ನು ಅಂತರ್ಜಾಲದಲ್ಲೇ ಮಾಡುತ್ತಿದ್ದೇವೆ. ಆಮೇಲೆ ನಮ್ಮ ಮಾನ್ಯ ಸಚಿವರು ಮತ್ತು ಮಾನ್ಯ ಶಾಸಕರು ತಿರುಪತಿಗೆ ಹೋದಂತಹ ಸಂದರ್ಭಗಳಲ್ಲಿ ನಮ್ಮ ಕಛೇರಿಯಿಂದಲೂ ಸಹ ವ್ಯವಸ್ಥೆ ಮಾಡುತ್ತೇವೆ. ಮತ್ತೆ ಅವರು ನೇರವಾಗಿ ಹೋಗುವುದಕ್ಕೂ ಸಹ ಅವಕಾಶವಿದೆ. ಮಾನ್ಯ ಸದಸ್ಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದಂತೆ, ಕರ್ನಾಟಕದ ಪ್ರವಾಸಿ ಸೌಧದಲ್ಲಿ ಸಿಬ್ಬಂದಿ ಕೊರತೆ ತುಂಬಾ ಇದೆ. ನಮ್ಮ ಇಲಾಖೆಯಲ್ಲಿ ಖಾಲಿ ಹುದ್ದೆಗಳಿವೆ. ನಾವು ಅಲ್ಲಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜನೆ ಮಾಡುತ್ತೇವೆ. ಹಾಗಾಗಿ, ಅಲ್ಲಿ ಅವರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ ಎನ್ನುವುದು ನನ್ನ ಗಮನಕ್ಕೂ ಕೂಡ ಬಂದಿದೆ. ಅದನ್ನು ಸರಿಪಡಿಸಿ, ಆದಷ್ಟು ಬೇಗನೇ ಅಲ್ಲಿಗೆ ಖಾಯಂ ಅಧಿಕಾರಿಗಳನ್ನು ನೇಮಿಸಕ್ಕದ್ದು ಮತ್ತು ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಕೆಲಸವನ್ನು ಸಹ ಆದಷ್ಟು ಬೇಗನೆ ಮಾಡುತ್ತೇವೆ.

**ಸಭಾಪತಿಯವರು**:- ಧನ್ಯವಾದಗಳು.

<u>**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.754**</u>

**(ಉತ್ತರ ಲಗತ್ತಿಸಿದೆ)**

**ಶ್ರೀ ಎಸ್.ವ್ಹಿ.ಸಂಕನೂರ (ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) ರವರ ಪರವಾಗಿ)**:- ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರತಕ್ಕಂಥ ಹಾಪ್‌ಕಾಮ್ಸ್ ಸಂಸ್ಥೆಗಳಿಗೆ ಈಗಾಗಲೇ ಕೆ.ಎಂ.ಎಫ್. ಮತ್ತು ಕೆ.ಓ.ಎಫ್. ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕಾಯ್ದೆ 2000 4 (ಜಿ)ಗೆ ವಿನಾಯಿತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದೇ ಎಂದು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಪರಿಶೀಲಿಸಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ನಾನು ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. 4(ಜಿ)ಗೆ ವಿನಾಯಿತಿ ಕೊಡದಿದ್ದಕ್ಕೆ, ಈ ಸಂಸ್ಥೆಗಳ ವಹಿವಾಟು ಬಹಳ ಕುಂಠಿತವಾಗಿರುತ್ತದೆ ಎಂದು ಅವರು ಈಗಾಗಲೇ ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಅದರ ಜೊತೆಗೆ 4(ಜಿ) ವಿನಾಯಿತಿ ಕೊಟ್ಟಲ್ಲಿ, ಸುಮಾರು 50 ಕೋಟಿ ರೂಪಾಯಿಗಳಿಗೂ ಹೆಚ್ಚು ವಹಿವಾಟು ಹೆಚ್ಚಾಗುತ್ತದೆಂದು ಅವರು ಹೇಳಿದ್ದಾರೆ. ಹೀಗಿರುವಾಗ, ವಿನಾಯಿತಿ ಕೊಡುವಲ್ಲಿ ತಾವು ಏಕೆ ಮೀನಾಮೇಷ ಮಾಡುತ್ತೀರಿ. ಅದಕ್ಕೆ ವಿನಾಯಿತಿ ಕೊಡುವಲ್ಲಿ ವಿಳಂಬ ಏಕೆ ಮಾಡುತ್ತೀರಿ ಎನ್ನುವುದು ನನ್ನ ಪ್ರಶ್ನೆ. ಅವರು ಹೇಳಿದಂತೆ, ಈ ಸಂಸ್ಥೆಗಳು ಸದೃಢವಾಗಬೇಕಾದರೆ, ಇವರು ಅನಿವಾರ್ಯವಾಗಿ ವಿನಾಯಿತಿ ಕೊಡಬೇಕಾಗುತ್ತದೆ. ತಾವು ಪರಿಶೀಲನೆ ಮಾಡಲಾಗುತ್ತದೆ ಎಂದರೆ. ಅದನ್ನು ಮಾಡಲು ಎಷ್ಟು ತಿಂಗಳು ತೆಗೆದುಕೊಳ್ಳುತ್ತೀರಿ? ಇನ್ನು ಕೇವಲ ಎರಡು ತಿಂಗಳು ಮಾತ್ರ ತಮ್ಮ ಅಧಿಕಾರದ ಅವಧಿ ಉಳಿಯುತ್ತದೆ. ಈ ತಮ್ಮ ಅಧಿಕಾರದ ಅವಧಿಯೊಳಗೆ ಮಾಡುತ್ತೀರೋ ಇಲ್ಲವೋ ಹೇಳಿ? ಎನ್ನುವ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇನು 4 (ಜಿ) exemption ನ್ನು ಕೇಳಿದ್ದಾರೆ, ಇದು ಆರ್ಥಿಕ ಇಲಾಖೆಯಲ್ಲಿ ಇದೆ. ಇದರ ಬಗ್ಗೆ ತನಿಖೆ ಮಾಡಿ, ನಾನು ಆದಷ್ಟು ಬೇಗನೆ clear ಮಾಡುವುದಕ್ಕೆ ಆಗುತ್ತದೆಯೋ ಅದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇನೆ. ಇನ್ನೊಂದು ಉತ್ತರವನ್ನು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರು ರವರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರು. ಇನ್ನು ಎರಡು ತಿಂಗಳ ಸರ್ಕಾರದ ಅವಧಿ ಮುಗಿದ ನಂತರ, ಮತ್ತೆ ನಾವೇ ಅಧಿಕಾರಕ್ಕೆ ಬರುವುದು. ಆಗಲಾದರೂ ಮಾಡಿಕೊಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಶರವಣರವರದ್ದು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.620ನ್ನು ಮಾನ್ಯ ಇಂಧನ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್, (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂದ ಕೂಡಲೇ, ಮಾನ್ಯ ಸದಸ್ಯರಿಗೆ ಎಷ್ಟು ಖುಷಿ ಇದೆ ನೋಡಿ, ಅದಕ್ಕೆ ಅಭಿನಂದನೆಗಳು.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಡಿ.ಕೆ.ಶಿವಕುಮಾರ್‌ರವರೇ, ಅವರು ನಮ್ಮ ಸರ್ಕಾರವೆಂದು ಹೇಳಿದ್ದರಲ್ಲಾ, ನಮ್ಮ ಸರ್ಕಾರವೆಂದರೆ, ಅಷ್ಟರೊಳಗೆ ಅವರು ಬಿ.ಜೆ.ಪಿ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇರುತ್ತದೆ ಎಂದರ್ಥ.

**(ಸದನದಲ್ಲಿ ನಗು)**

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅವರ ದೃಷ್ಟಿ ನಿಮ್ಮ ಮೇಲೆ ಬಿದ್ದಿದೆ, ಅದು ನಿಮಗೆ ಇನ್ನೂ ಗೊತ್ತಿಲ್ಲ.

**(ಸದನದಲ್ಲಿ ನಗು)**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.620**

**(ಉತ್ತರ ಲಗತ್ತಿಸಿದೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಯಾವ್ಯಾವ ಕಡೆಗಳಲ್ಲಿ 60 ಕೆವಿ ಟ್ರಾನ್ಸ್‌ಫಾರ್ಮರ್‌ಗಳನ್ನು ತಮ್ಮ ಇಲಾಖೆಯಿಂದ ಅಳವಡಿಸಿದ್ದೀರಿ. ಅದನ್ನು 100 ಕೆವಿ ಯನ್ನಾಗಿ ಬದಲಾವಣೆ ಮಾಡಬೇಕು ಇದು ಒಂದನೆಯದು. ಎರಡನೆಯದಾಗಿ, ಈ ಟ್ರಾನ್ಸ್‌ಫಾರ್ಮರ್‌ಗಳಿಗೆ ಅರ್ಜಿ ಹಾಕಿಕೊಂಡು, ಹಣ ಪಾವತಿ ಮಾಡಿ, ಸುಮಾರು ನಾಲ್ಕೈದು ವರ್ಷಗಳಾದರೂ ಸಹ ನಿಮ್ಮ ಇಲಾಖೆಯವರು ಟ್ರಾನ್ಸ್‌ಫಾರ್ಮರ್‌ಗಳನ್ನು ರೈತರಿಗೆ ಅಳವಡಿಸುತ್ತಿರುವುದು ಏನಿದೆ, ಅದು ನಿಗದಿತ ಸಮಯಕ್ಕೆ ಸರಿಯಾದ ರೀತಿಯಲ್ಲಿ ಅಳವಡಿಸುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅದು ಟ್ರಾನ್ಸ್‌ಫರೋ ಅಥವಾ ಟ್ರಾನ್ಸ್‌ಫಾರ್ಮರ್‌ನೋ ಎನ್ನುವ ಬಗ್ಗೆ ಸರಿಯಾಗಿ ಹೇಳಿ?

**ಶ್ರೀ ಟಿ.ಎ.ಶರವಣ:-** ನಾನು ಹೇಳುತ್ತಿರುವುದು ಟ್ರಾನ್ಸ್‌ಫಾರ್ಮರ್ ಬಗ್ಗೆ ರೀ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರಿಗೆ ಕನ್ನಡ ಮಾತನಾಡುವುದು ಸ್ವಲ್ಪ ಕಷ್ಟ. ಆದರೂ ಅವರು ಸರಿಯಾಗಿ ಹೇಳುತ್ತಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕಿವಿ ಕೇಳಿಸುತ್ತಿಲ್ಲ ಬಿಡಿ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಅದರ ಬಗ್ಗೆ ತಾವು ಗಮನಹರಿಸಿ. ಇನ್ನು ಎರಡನೆಯದಾಗಿ, ತುಮಕೂರು ಜಿಲ್ಲೆಯಲ್ಲಿ ಬಹಳಷ್ಟು ಕಡೆಗಳಲ್ಲಿ ಈ ಒಂದು ದೋಷಗಳು ಕಂಡುಬರುತ್ತಿದೆ. ತುರುವೇಕೆರೆ ತಾಲ್ಲೂಕಿನಲ್ಲಿ ಒಂದೇ ಅಲ್ಲದೇ ಇಡೀ ಜಿಲ್ಲೆಯಾದ್ಯಂತಹ ಆ ರೀತಿಯ ಸಮಸ್ಯೆಗಳಿವೆ. ಆಮೇಲೆ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಪಂಪ್‌ಸೆಟ್‌ಗಳ ಬಗ್ಗೆ ಪ್ರಶ್ನೆ ಕೇಳಿದ್ದೆನು. ಅದಕ್ಕೆ ತಾವು ಏನು ಹೇಳಿದ್ದೀರಿ ಎಂದರೆ, ಬಾಕಿ ಉಳಿದ 1497 ಸಂಖ್ಯೆಯ ಕೃಷಿ ಪಂಪ್‌ಸೆಟ್‌ಗಳ ಕಾಮಗಾರಿಗಳೇನಿವೆ ಅವುಗಳನ್ನು ಜೇಷ್ಠತೆಯ ಆಧಾರದ ಮೇಲೆ ಹಂತ ಹಂತವಾಗಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದು ಕೂಡ ವಿಳಂಬವಾಗುತ್ತದೆ. ಇದರಿಂದ ರೈತರಿಗೆ ಅನಾನುಕೂಲ ಆಗುತ್ತಿದೆ. ಅದನ್ನೂ ಕೂಡ ತಾವು ಸರಿಯಾದ ರೀತಿಯಲ್ಲಿ ರೈತರಿಗೆ ನ್ಯಾಯ ಒದಗಿಸಿಕೊಟ್ಟು, ಸಮಯಕ್ಕೆ ಸರಿಯಾಗಿ ಈ ಕಾಮಗಾರಿಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ರೈತರ ಕೃಷಿಗೆ 12 ಗಂಟೆಗಳ ಕಾಲ ಸತತ ವಿದ್ಯುತ್ ಕೊಡಬೇಕೆಂದು ಅವರು ಕೇಳಿದ್ದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ರೈತರ ಕೃಷಿಗೆ 6 ಗಂಟೆಯಿಂದ 7 ಗಂಟೆಯವರೆಗೆ ವಿದ್ಯುತ್ ಕೊಡುವುದನ್ನು ಹೆಚ್ಚಿಸಲಾಗಿದೆ. ನಮ್ಮ ರಾಜ್ಯದಲ್ಲಿ ಬರಗಾಲ ಬಂದು ಎಷ್ಟೇ ಸಮಸ್ಯೆಯಾದರೂ ಕೂಡ ನಾವು ವಿದ್ಯುತ್‌ನ್ನು ಕೊಡುತ್ತಿದ್ದೇವೆ. ಟ್ರಾನ್ಸ್‌ಫಾರ್ಮರ್‌ಗಳ ವಿಚಾರದ ಬಗ್ಗೆ ತಾವು ಕೇಳಿದ್ದೀರಿ. ಮಾನ್ಯ ಟಿ.ಎ.ಶರವಣರವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಪ್ರತಿ ತಾಲ್ಲೂಕಿನಲ್ಲೂ ಒಂದು ಟ್ರಾನ್ಸ್‌ಫಾರ್ಮರ್ (ಪರಿವರ್ತಕರ) ಬ್ಯಾಂಕ್‌ನ್ನು ಮಾಡಿದ್ದೇವೆ. 174 ತಾಲ್ಲೂಕಿನ ಪೈಕಿ, 140 ತಾಲ್ಲೂಕಿನಲ್ಲಿ ರಿಪೇರಿ ಕೇಂದ್ರಗಳನ್ನು ಮಾಡಿದ್ದೇವೆ. ಅವುಗಳು ಏನಾದರೂ ಕೆಟ್ಟು ಹೋದಲ್ಲಿ ಮೂರು ದಿನಗಳಲ್ಲಿ ಕಡ್ಡಾಯವಾಗಿ ಅವುಗಳನ್ನು ಬದಲಾವಣೆ ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರು 60 ಕೆವಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ, ನಾವು ಎಲ್ಲಾ ತನಿಖೆಯನ್ನು ಮಾಡಿ, ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾಲಿಸಿಯನ್ನೇ ಬದಲಾಯಿಸಿದ್ದೇವೆ. 60 ಕೆವಿ ಮಾಡುವುದು ಸರಿಯಿಲ್ಲವೆಂದು ತಿಳಿದು, ಆದಷ್ಟು 25 ಕೆವಿ, 25 ಕೆವಿ, 25 ಕೆವಿಗಳಿಗೆ ಮಾಡುತ್ತಿದ್ದೇವೆ. ಈ 25 ಕೆವಿಗೆ ಮಾಡಿಕೊಂಡು, single transformer ಅಂದರೆ ಒಬ್ಬೊಬ್ಬರಿಗೆ ಜವಾಬ್ದಾರಿಯನ್ನು ನಿಗದಿ ಮಾಡುತ್ತಿದ್ದೇವೆ. ಈಗ ನಮ್ಮ ಜಿಲ್ಲೆಯಲ್ಲಿ High Voltage Distributor System ಎನ್ನುವಂಥ pilot project ನ್ನು ದೊಡ್ಡಬಳ್ಳಾಪುರ ಭಾಗದಲ್ಲಿ ಮಾಡಿದ್ದೇವೆ. ಒಬ್ಬೊಬ್ಬ ರೈತ ಅಥವಾ ಇಬ್ಬಿಬ್ಬರು ರೈತರಿಗೆ ಸೇರಿಸಿ ಜವಾಬ್ದಾರಿ ಕೊಡುತ್ತಿದ್ದೇವೆ. ಏಕೆಂದರೆ, ಇದು ಬಹಳ ದುರುಪಯೋಗವಾಗುತ್ತಿದೆ. ಈಗ ಏನು ನೀವು ಕೆಲವರಿಗೆಲ್ಲಾ regularize ಮಾಡುವಂತಹ ವಿಚಾರ ಇದೆಯೇ ಎಂದು ಕೇಳಿದ್ದೀರಿ. ಇದು ರಾಜ್ಯದಲ್ಲಿ ಐದು ಲಕ್ಷ ಜನ ಏನೂ ಅನುಮತಿ ಇಲ್ಲದೆಯೇ ಅನಧಿಕೃತವಾಗಿ ವಿದ್ಯುತ್‌ನ್ನು ಹಾಕಿಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಅವರು ಬರೀ 50 ರೂಪಾಯಿಗಳ ಚೀಟಿಯನ್ನು ಕಟ್ಟಿದ್ದರು. ನಾನು ಬಂದನಂತರ, ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಇತರರನ್ನೆಲ್ಲಾ ಮನವಿ ಮಾಡಿಕೊಂಡು time extend ಮಾಡಿಕೊಂಡಿದ್ದೇವೆ. ದಿನಾಂಕ: 23.07.2014ರಂದು ಒಂದು ಹೊಸ ಆದೇಶವನ್ನು ಹೊರಡಿಸಿ, ಯಾರ್‍ಯಾರು ರೈತರು ದುಡ್ಡನ್ನು ಕಟ್ಟುತ್ತಾರೋ ಅವರಿಂದ 10,000 ರೂಪಾಯಿಗಳನ್ನು deposit ಮಾಡಿಸಿಕೊಂಡು ನಿಮಗೆ regularize ಮಾಡಿಕೊಡುತ್ತೇವೆಂದು ಹೇಳಿದ್ದೆವು. ಈಗಾಗಲೇ 5,00,000 ದಲ್ಲಿ 3,70,000 ಮಾಡಿದ್ದೇವೆ. ಇನ್ನು 1,30,000 ಉಳಿದುಕೊಂಡಿದೆ. ಒಬ್ಬ ರೈತನಿಗೆ ಅದನ್ನು regularize ಮಾಡಬೇಕಾದರೆ, 50,000/- ರೂಪಾಯಿಗಳಿಂದ ಎರಡು-ಮೂರು ಲಕ್ಷ ರೂಪಾಯಿಗಳವರೆಗೆ ಖರ್ಚಾಗುತ್ತದೆ. ಇದಕ್ಕೆ infrastructure ಅನ್ನು ಮಾಡುತ್ತೇವೆ. ನಾವು ಬಹಳ ಆದ್ಯತೆಯ ಮೇಲೆ ಮಾಡುತ್ತಿದ್ದೇವೆ. ಸುಮಾರು 1400 ಕೃಷಿ ಪಂಪ್‌ಸೆಟ್‌ಗಳ ಕಾಮಗಾರಿಗಳಿಗೆ ಜೇಷ್ಠತೆಯ ಆಧಾರದ ಮೇಲೆ ಮಾಡುತ್ತೇವೆ. ನಾವು ಜೇಷ್ಠತೆಯ ಮೇಲೆ attend ಮಾಡುತ್ತಿದ್ದೇವೆ. ಖಂಡಿತ ಇದು ನಮ್ಮ ಸರ್ಕಾರದ ಒಂದು priority subject. ತಾವು ಏನು ಹೇಳುತ್ತೀರಿ, ಅತಿ ಕಾಳಜಿ ಇಟ್ಟುಕೊಂಡು ರೈತರಿಗೆ ಕೃಷಿ ಪಂಪ್‌ಸೆಟ್‌ಗಳನ್ನು regularize ಮಾಡಿಕೊಡುವಂಥದ್ದು ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆ ಮಾಡುವಂಥದ್ದನ್ನು ಮೂರು ದಿನಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆ ಮಾಡಲಿಲ್ಲವೆಂದರೆ, ಅಲ್ಲಿನ ಇಂಜಿನಿಯರ್ fine ಕಟ್ಟಬೇಕು. ನಾವು ಜಿಲ್ಲೆಗೆ ಒಬ್ಬರು Ombudsman ಅನ್ನು ನೇಮಕ ಮಾಡಿಕೊಂಡು ಇದನ್ನು ಕೂಡ ಮಾಡುತ್ತೇವೆ. ಇನ್ನು ಏನಾದರೂ ರೈತರ ಪರವಾಗಿ ವಿಚಾರಗಳು ಮತ್ತು ಸಲಹೆಗಳು ಇದ್ದಲ್ಲಿ ಕೊಡಿ, ನಾವು ಸ್ವೀಕಾರ ಮಾಡಿ, ಅದನ್ನು ಪರಿಶೀಲನೆ ಮಾಡುತ್ತೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಟ್ರಾನ್ಸ್‌ಫಾರ್ಮರ್ ಇದೆಯೆಲ್ಲಾ ಅದನ್ನು mobile van ರೀತಿ delivery ಕೊಡುವುದಕ್ಕೆ ಏಕೆ ತಾವು ಆಲೋಚನೆ ಮಾಡಬಾರದು. ಏಕೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮ್ಮ ಇಲಾಖೆಯ line man ಗಳು ಮತ್ತು ಬೇರೆ ಬೇರೆ ಅಧಿಕಾರಿಗಳು ಸರಿಯಾದ ಸಮಯಕ್ಕೆ ಟ್ರಾನ್ಸ್‌ಫಾರ್ಮರ್‌ಗಳನ್ನು delivery ಕೊಡುವುದಿಲ್ಲ. ರೈತರು ದುಡ್ಡನ್ನು ಕಟ್ಟಿಕೊಂಡು ಬಹಳಷ್ಟು ಶ್ರಮಕ್ಕೆ ಒಳಗಾಗುತ್ತಿದ್ದಾರೆ.

**(ಮುಂದು...)**

(130)20.02.2018/ ಎಂಎಂ/ವಿಕೆ/12.50

**ಪ್ರಶ್ನೆ ಸಂಖ್ಯೆ: 620 (ಮುಂದು)**

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅದರ ಅವಶ್ಯಕತೆ ಇಲ್ಲ. ಮೂರು ದಿನದೊಳಗೆ ಅದನ್ನು ಬದಲಾವಣೆ ಮಾಡಲೇಬೇಕು. That is the law.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಹೊಸದಾಗಿ ಅಳವಡಿಸಿದಾಗ ಮೊಬೈಲ್ ವ್ಯಾನ್ ರೀತಿ ಇಲಾಖೆಯಿಂದಲೇ ಏಕೆ ಡೆಲಿವರಿ ಕೊಡಬಾರದು?

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಇಲಾಖೆಯಿಂದಲೇ ವಾಹನವನ್ನು ಕೊಡಲಾಗುತ್ತದೆ. ಅದನ್ನು ಬದಲಾವಣೆ ಮಾಡಬೇಕಾಗಿದೆ. ರೈತರೇ ಬಂದು ತೆಗೆದುಕೊಂಡು ಹೋಗುತ್ತಾರೆ, ತೊಂದರೆಯೇನೂ ಇಲ್ಲ. ನೀವು ಒಂದು ಕೆಲಸ ಮಾಡಿ, ಯಾವುದಾದರೂ ಒಂದು Transformer repair centre ಗೋ ಅಥವಾ ತಾಲ್ಲೂಕಿಗೋ ಹೋಗಿ ಕುಳಿತುಕೊಂಡು ಅಲ್ಲಿ ಸಿಸ್ಟಂ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿಕೊಂಡು ಬನ್ನಿ and then let us discuss on this.

**ಚುಕ್ಕೆ ಪ್ರಶ್ನೆ ಸಂಖ್ಯೆ: 796**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಮುಖವಾದ ಪ್ರಶ್ನೆಯೇನೆಂದರೆ, ತುಮಕೂರು ಜಿಲ್ಲೆಯ ಪಾವಗಡದಲ್ಲಿ ಮಾಡಿರುವ ಸೋಲಾರ್ ಪಾರ್ಕ್ ಅನ್ನು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿಯೂ ರೂಪಿಸಲಾಗುವುದೇ ಎಂದು ಕೇಳಿರುವುದಕ್ಕೆ ಮಾನ್ಯ ಸಚಿವರು ಹಾಗೆ ನಿರ್ಮಾಣ ಮಾಡುವ ವಿಚಾರ ಸರ್ಕಾರದ ಮುಂದಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಚಾಮರಾಜನಗರ ಜಿಲ್ಲೆಯು ನಂಜುಂಡಪ್ಪನವರ ವರದಿ ಪ್ರಕಾರ ಹಿಂದುಳಿದ ಜಿಲ್ಲೆಯಾಗಿದೆ. ಅಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆ ಇದ್ದು, ಅಂತರ್ಜಲದ ಮಟ್ಟ ಕೂಡ ಕುಸಿದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯಮಾಡಿ ತಾವು ಸೋಲಾರ್ ಪಾರ್ಕ್ ಅನ್ನು ನಿರ್ಮಾಣ ಮಾಡಿದರೆ ನಮ್ಮ ಜಿಲ್ಲೆಗೆ ಅನುಕೂಲವಾಗುತ್ತದೆ, ದಯಮಾಡಿ ಅದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ನೀವು ಸಾರಾಸಗಟಾಗಿ ಅವರ ಜಿಲ್ಲೆಗೆ ಕೊಡುವುದಿಲ್ಲ ಎಂದು ಹೇಳಿರುವುದರಿಂದ ಮಾನ್ಯ ಸದಸ್ಯರಿಗೆ ಬೇಜಾರಾಗಿದೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅವರ ಕ್ಷೇತ್ರ ಚಾಮರಾಜನಗರ ಜಿಲ್ಲೆಯ ಗಡಿಯಲ್ಲಿರುವುದರಿಂದ ಅವರು ಕೇಳಿರುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಮಾನ್ಯ ಸದಸ್ಯರೇ, ನಮ್ಮ ಸರ್ಕಾರ ಬಂದ ನಂತರ ಪ್ರತಿ ತಾಲ್ಲೂಕಿನಲ್ಲಿಯೂ ಮಲೆನಾಡು ಪ್ರದೇಶಗಳನ್ನು ಬಿಟ್ಟು ಕನಿಷ್ಠ 20-20 ಮೆಗಾ ವ್ಯಾಟ್ ಮಾಡಿದ್ದೇವೆ. ಏಕೆಂದರೆ, ಅಲ್ಲಿಯೇ ತಯಾರು ಮಾಡಿ, ಅಲ್ಲಿಗೇ ಅನುಕೂಲ ಮಾಡುವಂತಹದ್ದಾಗಿದೆ. ಆದರೆ ಚಾಮರಾಜನಗರದ ಎಲ್ಲಾ ತಾಲ್ಲೂಕಿನಲ್ಲಿಯೂ 20-20 ಮೆಗಾ ವ್ಯಾಟ್ ಸಾಮರ್ಥ್ಯದ ಸೋಲಾರ್ ಪಾರ್ಕ್ ಅನ್ನು procure ಮಾಡಿದ್ದೇವೆ. ಈಗಲೂ ಕೂಡ ಸುಮಾರು 40 ತಾಲ್ಲೂಕುಗಳು ಉಳಿದುಕೊಂಡಿವೆ, ಮುಂಚೆ 60 ತಾಲ್ಲೂಕುಗಳಲ್ಲಿ ಮಾಡಿದ್ದೆವು. Secure ರವರದ್ದು ಒಂದಷ್ಟು ತಾಲ್ಲೂಕುಗಳು ಉಳಿದುಕೊಂಡಿವೆ, ಸುಮಾರು 30-50 ತಾಲ್ಲೂಕುಗಳನ್ನು ತೆಗೆದುಕೊಂಡಿತ್ತು. ಸುಮಾರು ಎಲ್ಲಾ ತಾಲ್ಲೂಕುಗಳನ್ನೂ cover ಮಾಡಿದ್ದೇವೆ. ಒಂದೈದು ತಾಲ್ಲೂಕುಗಳು, ಚಾಮರಾಜನಗರದ ಒಂದು ತಾಲ್ಲೂಕಿನ bid cancel ಆಗಿದೆ. ಅದನ್ನು ಬಿಟ್ಟರೆ ಸುಮಾರು 20-20 ಮೆಗಾ ವ್ಯಾಟ್ ಅನ್ನು ಮಾಡುತ್ತಿದ್ದೇವೆ. ಆದರೆ ಪಾವಗಡದಲ್ಲಿ ಮಾಡಿರುವ ರೀತಿ ಮಾಡಲು ಬಹಳ ಕಷ್ಟವಾಗುತ್ತದೆ.

**ಸಭಾಪತಿಯವರು:-** ಆ ರೀತಿ ಮಾಡುವುದಕ್ಕಾಗುವುದಿಲ್ಲ. That is only one in the State. ಅದು ಇಡೀ ರಾಜ್ಯಕ್ಕೇ ಒಂದು.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ರಾಜ್ಯಕ್ಕಷ್ಟೇ ಅಲ್ಲ ಪ್ರಪಂಚಕ್ಕೆ ಒಂದು ಆಗಿದೆ. ಎಲ್ಲೋ ಒಂದು ಕಡೆ 1500 ಮೆ. ವ್ಯಾ. ಗೆ ಇದೆ. ಇದು 2000 ಮೆ.ವ್ಯಾ. ಆಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ತಾಲ್ಲೂಕಿನ ಜನರ ತ್ಯಾಗದ ಅಭಿಷೇಕ ಮಾಡಿ ಅದನ್ನು ನಿರ್ಮಾಣ ಮಾಡಲಾಗಿದೆ.

**ಸಭಾಪತಿಯವರು:-** ಆಯಿತು, ಅವರು ಚಾಮರಾಜನಗರದ ಬಗ್ಗೆ ಹೇಳಿದರೆ ತಾವು ತಮ್ಮ ತಾಲ್ಲೂಕಿನ ವಿಷಯಕ್ಕೆ ಹೋದಿರಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಯಾವುದಾದರೂ demand ಬಂದರೆ ಮುಂದೆ ಆ ಭಾಗಕ್ಕೂ ಒಂದು consideration ಮಾಡಲಾಗುವುದು.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಧನ್ಯವಾದಗಳು.

**ಚುಕ್ಕೆ ಪ್ರಶ್ನೆ ಸಂಖ್ಯೆ: 783**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಕಳೆದ 03 ವರ್ಷಗಳಿಂದ ಕೃಷಿ ಇಲಾಖೆ ವತಿಯಿಂದ ರೈತ ಉತ್ಪಾದಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ರೂಪುರೇಷೆಗಳೇನು ಎಂದು ಕೇಳಿದ್ದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ *"Formation of farmer producer organisation was proposed under RKVY scheme during the year 2017-18 which is under process. A workshop has been convened on 01.03.2018 inviting all stake holders to finalize the common guidelines for the formation of FPO's in the State,"* ಎಂದು ಉತ್ತರ ಕೊಟ್ಟಿರುವುದರಿಂದ ಈ ಪ್ರಶ್ನೆಯನ್ನು ಕೇಳುವ ಸಮಂಜಸವಿಲ್ಲ ಎಂದು ಹೇಳಬಯಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವಾಗ ಸರಿಯಾಗಿಯೇ ಕೇಳಿದ್ದಾರೆ. ಅಧಿಕ ಮಾಹಿತಿಯನ್ನು ಅವರಿಗೆ ಕೊಡಬಯಸುವುದೇನೆಂದರೆ, ಎಲ್ಲಿಯೋ ಒಂದು ಕಡೆ ರೈತ ಉತ್ಪಾದಕ ಸಂಸ್ಥೆಗಳು ಕಾರ್ಯಾರಂಭ ಮಾಡಿವೆಯೇ ಎಂಬುದು ಅವರ ಪ್ರಶ್ನೆಯಾಗಿದೆ. ಅದು ನಿಜ. ತೋಟಗಾರಿಕಾ ಇಲಾಖೆಯಲ್ಲಿ 92 ಕಾರ್ಯಾರಂಭ ಮಾಡಿವೆ. ಅದರ ಅನುಭವವನ್ನು ನೋಡಿಕೊಂಡು ಈಗ ಕೃಷಿ ಇಲಾಖೆಯಲ್ಲಿಯೂ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಧನ್ಯವಾದಗಳು.

**ಚುಕ್ಕೆ ಪ್ರಶ್ನೆ ಸಂಖ್ಯೆ:747**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಪ್ರಶ್ನೆಯೇನೆಂದರೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ನಡೆದ ಸಹಾಯಕ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರುಗಳ ನೇಮಕಾತಿಯಲ್ಲಿ ಪ್ರತಿಭಾನ್ವಿತ ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು, ಅಕ್ರಮ ಮತ್ತು ಭ್ರಷ್ಟಾಚಾರ ಹಾಗೂ ವೈಪರೀತ್ಯಗಳು ನಡೆದಿರುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಉತ್ತರದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 29.01.2018ರಂದು ಸಹಾಯಕ ಪ್ರಾಧ್ಯಾಪಕರುಗಳು ಹಾಗೂ ಸಹ ಪ್ರಾಧ್ಯಾಪಕರುಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಅದೇ ಉತ್ತರದಲ್ಲಿ ಈ ನೇಮಕಾತಿಯಲ್ಲಿ ತಮಗೆ ಅನ್ಯಾಯವಾಗಿರುವುದಾಗಿ ಶ್ರೀ ವಿಕಾಸ್.ಎಲ್., ಎಸ್.ಆರ್.ಎಫ್., ಕೃವಿವಿ, ಬೆಂಗಳೂರು, ಶ್ರೀ ಎನ್. ಶಶಿಧರ್, ಸಹಾಯಕ ಪ್ರಾಧ್ಯಾಪಕರು, ಕೃವಿವಿ, ರಾಯಚೂರು, ಶ್ರೀ ನರಸಿಂಹಮೂರ್ತಿ ಹಾಗೂ ಇತರರು, ಡಾ: ಜೆ.ಎಂ.ಸರಸ್ವತಿ ಮತ್ತು ಶ್ರೀ ಅನಿಲ್ ಕುಮಾರ್.ಎಸ್.ಎನ್. ಇವರುಗಳಿಂದ ದೂರುಗಳು ಸ್ವೀಕೃತವಾಗಿವೆ, ಈ ದೂರುಗಳನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ಕೃಷಿ ವಿಶ್ವವಿದ್ಯಾಲಯದ ಕುಲಪತಿಯವರಿಗೆ ಸೂಚಿಸಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರವು ಅಡ್ಡಗೋಡೆಯ ಮೇಲೆ ದೀಪವನ್ನಿಟ್ಟ ಹಾಗಿದೆ ಎಂದು ನೇರವಾಗಿ ಆಪಾದನೆ ಮಾಡುತ್ತೇನೆ. ಒಂದು ಕಡೆ ನೇರನೇಮಕಾತಿ ಎಂದು ಹೇಳುತ್ತಾರೆ, ಮತ್ತೊಂದು ಕಡೆ ದೂರುಗಳು ಬಂದಿವೆ ಎಂದು ಹೇಳುತ್ತಾರೆ, ಮತ್ತೊಂದು ಕಡೆ ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ಇದರ ವರದಿ ಕೊಡಿ ಎಂದು ಹೇಳುತ್ತಾರೆ. ಆದ್ದರಿಂದ ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಇದಕ್ಕೆ ಸಂಬಂಧಪಟ್ಟಿರುವ ಅನೇಕ ದಾಖಲೆಗಳನ್ನು ತಂದಿದ್ದೇನೆ. ಇದು ಭ್ರಷ್ಟಾಚಾರದಿಂದ ಕೂಡಿದ್ದು, ಅನೇಕ ದೂರುಗಳಿವೆ, ಸರ್ಕಾರದ ಅನೇಕ ಸುತ್ತೋಲೆಗಳಿವೆ. ಸರ್ಕಾರ ಈ ನೇಮಕಾತಿ ಮತ್ತು ಸಂದರ್ಶನವನ್ನು ಮಾಡಬಾರದು ಎಂದು ನೊಂದ ಅಭ್ಯರ್ಥಿಗಳು ಅನೇಕ ಪತ್ರಗಳನ್ನು ಬರೆದಿದ್ದಾರೆ. ಉದಾಹರಣೆಗೆ ಒಂದು ಪತ್ರವನ್ನು ಓದುತ್ತೇನೆ. "ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಹೊರಡಿಸಿರುವ ಅಧಿಸೂಚನೆ ಬಗ್ಗೆ ವಿವರಣೆ ಕೋರಿರುವ ಕುರಿತು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇದರ ದಿನಾಂಕ 12.04.2016ರ ಅಧಿಸೂಚನೆಯ ಮೂಲಕ ಸುಮಾರು 107 ಬೋಧಕ ಹುದ್ದೆಗಳ ನೇಮಕಾತಿಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಿಯಮಗಳು ಉಲ್ಲಂಘನೆಯಾಗಿರುವ ಬಗ್ಗೆ ಪ್ರಸ್ತಾಪಿಸಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ಸ್ಪಷ್ಟ ಅಭಿಪ್ರಾಯಗಳೊಂದಿಗೆ ವಿವರವಾದ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಲ್ಲೇಖ-1ರ ಪತ್ರದಲ್ಲಿ ಸೂಚಿಸಲಾಗಿತ್ತು. ಈಗಾಗಲೇ ಸುಮಾರು ಪತ್ರಗಳನ್ನು ಕಳುಹಿಸಿದ್ದು ನನ್ನಲ್ಲಿ ಎಲ್ಲಾ ದಾಖಲೆಗಳಿವೆ.

**Mr. CHAIRMAN:-** What is your question? First ask him that.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಅದಕ್ಕನುಗುಣವಾಗಿ ಉಲ್ಲೇಖ-2ರಲ್ಲಿ ಕೆಲವು ದಾಖಲೆಗಳೊಂದಿಗೆ ಪ್ರಸ್ತುತ ನಡೆಯುತ್ತಿರುವ ಈ ನೇಮಕಾತಿಗಳು ನಡೆಯುತ್ತಿದ್ದರೂ ಕೂಡ ಆ ನೇಮಕಾತಿಗಳು ಸರಿ ಇಲ್ಲ, ಸರ್ಕಾರ ಅನುಮತಿ ಕೊಟ್ಟಿರುವುದು 49 ಹುದ್ದೆಗಳಿಗೆ ಮಾತ್ರ. ನೀವು 100 ಹುದ್ದೆಗಳಿಗೆ ಸಂದರ್ಶನವನ್ನು ಕರೆದಿದ್ದೀರಿ. ಇದು ಸರಿ ಇಲ್ಲ ಎಂದು ಸರ್ಕಾರದಿಂದ ಅವರು ಪತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೆದಿದ್ದಾರೆ. ಅವರ ಪತ್ರಗಳಿಗೆ ಯಾವುದೇ ಕಿಮ್ಮತ್ತು ಕೊಡದೇ ಈ ನೇಮಕಾತಿಯನ್ನು ಮಾಡಿ ಅಕ್ರಮವನ್ನು ಎಸಗಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರಿಗೆ ನಿಮ್ಮ ಪ್ರಶ್ನೆ ಏನು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿಯಾಗಿದೆ. ಇಲ್ಲಿ ಚರ್ಚೆ ಮಾಡಲು ಅವಕಾಶವಿಲ್ಲ. What is your question to him?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಕುಲಪತಿಯವರು ನಿವೃತ್ತರಾಗುವ ಸಮಯದಲ್ಲಿ ನೇಮಕಾತಿಗಳನ್ನು ಮಾಡಬಾರದು ಎಂದು ಇದೆ. ಕುಲಪತಿಯವರು ನಿವೃತ್ತರಾಗುವ ಮೂರು ದಿನಗಳ ಮುಂಚೆ ಸುಮಾರು 50–60 ಜನರ ನೇಮಕಾತಿ ಕರೆದು ಅವರಿಂದ ಹಣವನ್ನು ವಸೂಲಿ ಮಾಡಿ, ವರ್ಗಾವಣೆ ಮಾಡಿ, ಯಾವುದೇ ಮಂತ್ರಿ ಅಥವಾ ಮುಖ್ಯಮಂತ್ರಿಯವರ ಮಾತನ್ನು ಕೇಳದೇ ವರ್ಗ ಮಾಡಿ ಹೋಗಿದ್ದಾರೆ. ಇಲ್ಲಿ ಕೋಟಿಗಟ್ಟಲೆ ಹಣವನ್ನು ಹೊಡೆದಿದ್ದಾರೆ. ಅದಕ್ಕೆ ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಳ್ಳುವುದು ಎಂದು ಕೇಳಬಯಸುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ನೇಮಕಾತಿಯು ಸರಿಯಾಗಿ ನಡೆದಿಲ್ಲವೆಂಬ ದೂರುಗಳು ಸರ್ಕಾರಕ್ಕೂ ಬಂದಿದೆ. ಯಾರು ತಮಗೆ ಅನ್ಯಾಯವಾಗಿದೆಯೆಂದು ಹೇಳಿದ್ದಾರೆ, ಅವರು ನಮ್ಮನ್ನು ಭೇಟಿ ಮಾಡಿದಾಗ ಯಾವರೀತಿಯಾಗಿ ತಮಗೆ ಅನ್ಯಾಯವಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಹೇಳಿದ್ದೇನೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಇದರಲ್ಲಿ ನಾವು ಭಾಗಿಯಾಗಿದ್ದರೆ ಮುಚ್ಚುಮರೆ ಇರುತ್ತದೆ. ಆದರೆ ನಮ್ಮಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಅದಕ್ಕೋಸ್ಕರವಾಗಿ ಹೇಳುವುದೇನೆಂದರೆ, ತಪ್ಪುಗಳು ನಡೆದಿವೆ ಎಂಬ ದೂರುಗಳು ನನ್ನ ಗೃಹ ಕಛೇರಿಗೂ ಬಂದಿವೆ. ನನ್ನ ಕ್ಷೇತ್ರ ಕೂಡ ಅಲ್ಲಿಯೇ ಇರುವುದರಿಂದ ಅವರೆಲ್ಲರೂ ನನ್ನ ಬಳಿ ಬಂದು ದೂರುಗಳನ್ನು ಕೊಟ್ಟಿದ್ದಾರೆ. ಅವರಿಗೆ ಯಾವರೀತಿ ಅನ್ಯಾಯವಾಗಿದೆ ಎಂಬುದನ್ನು ಸ್ಪಷ್ಟವಾಗಿ ಕೊಡಿ ಎಂದು ಹೇಳಿದ್ದೇನೆ. ಏಕೆಂದರೆ, ಸ್ವಲ್ಪ ಪಾರದರ್ಶಕತೆಯನ್ನು ತೆಗೆದುಕೊಂಡು ಬಂದಿದ್ದೇವೆ. ಸಂಪೂರ್ಣವಾಗಿ ಇಲ್ಲದಿದ್ದರೂ ಆ score card ಮಾಡಿ ಅದರ basis ಮೇಲೆ ಸಂದರ್ಶನ ಮಾಡಬೇಕೆಂದು ಭಾಗಶಃ ಪಾರದರ್ಶಕ ವ್ಯವಸ್ಥೆಯೊಂದನ್ನು ತಂದಿದ್ದೇವೆ. ಅದರ ಪ್ರಕಾರವಾಗಿ ನಿಮಗೆ ಎಲ್ಲಿ ಅನ್ಯಾಯವಾಗಿದೆ ಎಂಬುದನ್ನು ಸ್ಪಷ್ಟವಾಗಿ ದಾಖಲೆ ಸಮೇತ ಕೊಟ್ಟರೆ ಅದನ್ನು ತನಿಖೆ ಮಾಡಿ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆಂದು ವಿದ್ಯಾರ್ಥಿಗಳಿಗೆ ಹೇಳಿದ್ದೇವೆ.

(ಮುಂದು. . .

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

131/20.02.2018/ಕೆಹೆಚ್/ಬಿಎನ್ಎಸ್/1-00

**ಶ್ರೀ ಕೃಷ್ಣ ಬೈರೇಗೌಡ (ಮುಂದು):-**

ಆದರೆ ಅವರು ನಮಗೆ ಸ್ಕೋರ್ ಕಾರ್ಡ್‌ನ್ನೇ ಕೊಡುತ್ತಿಲ್ಲ. ಸ್ಕೋರ್ ಕಾರ್ಡ್‌ನ್ನು ಕೊಟ್ಟರೆ ತಾನೇ ಗೊತ್ತಾಗುವುದು ಎಂದು ಹೇಳುತ್ತಿದ್ದಾರೆ. ಉದ್ಯೋಗಾವಕಾಶದಿಂದ ವಂಚಿತರಾದವರು ಇದರ ಬಗ್ಗೆ RTI (Right to Information) ಅಡಿಯಲ್ಲಿ ಅರ್ಜಿಯನ್ನು ಹಾಕಿದ್ದೇವೆ, ಸ್ಕೋರ್ ಕಾರ್ಡ್ ಸಿಕ್ಕಿದ ಮೇಲೆ ನಂತರ ಇನ್ನು ಕೆಲವು ದೂರುಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಇಲಾಖೆಯ ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಉದ್ಯೋಗಾವಕಾಶದಿಂದ ವಂಚಿತರಾದವರು RTI ಅಡಿಯಲ್ಲಿ ಅರ್ಜಿಯನ್ನು ಹಾಕಿ ಸ್ಕೋರ್ ಕಾರ್ಡ್‌ನ್ನು ಕೊಡುವ ಹಾಗಿದ್ದರೆ ನೀವೇ ಸ್ವತಃ ಇದನ್ನು ಪ್ರಕಟ ಮಾಡಿ ಎಂದು ತಿಳಿಸಿದ್ದೇವೆ. ಏಕೆಂದರೆ, ಇದರಲ್ಲಿ ಏನಾದರೂ ತಪ್ಪು ನಡೆದಿದ್ದರೆ ಮುಚ್ಚಿಡುವ ಉದ್ದೇಶ ಇಲ್ಲದೆ ಇರುವುದರಿಂದ, ಎಲ್ಲಾ ಅಭ್ಯರ್ಥಿಗಳ ಸ್ಕೋರ್ ಕಾರ್ಡ್‌ನ್ನು ನೀವಾಗಿ ನೀವೇ ಪ್ರಕಟ ಮಾಡಿ ಎಂದು ಸೂಚನೆಯನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತೆ ನನಗೂ ಸಹ ಕೆಲವು ದೂರುಗಳು ಬಂದಿವೆ. ವರ್ಗಾವಣೆಯು ಸಹ 6 ತಿಂಗಳು ಬಾಕಿ ಇದ್ದಾಗ, ರಾಜ್ಯಪಾಲರು ವರ್ಗಾವಣೆಯ ಬಗ್ಗೆ ಹೇಳಲಿಲ್ಲ. ಪ್ರಮುಖ ನಿರ್ಧಾರಗಳನ್ನು ಕೊನೆಯ ದಿನಗಳಲ್ಲಿ ತೆಗೆದುಕೊಳ್ಳಬಾರದು ಎಂದು ರಾಜ್ಯಪಾಲರು ಸೂಚಿಸಿದ್ದಾರೆ. ಇದರ ಜೊತೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವರು ಮುಂದುವರೆಯುವುದಕ್ಕೆ ಒಂದು ಕಾರಣವೇನೆಂದರೆ, ಘನತೆವೆತ್ತ ರಾಜ್ಯಪಾಲರು ಜನವರಿ 2018 ರಂದು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು general ಆಗಿ ಒಂದು ಪತ್ರವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವರಿಗೆ ಬರೆದಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವರು ಮಂಡಳಿಯ ಸಭೆಯಲ್ಲಿ ಈ ಒಂದು ಪತ್ರವನ್ನು ಹಿಡಿದುಕೊಂಡು ರಾಜ್ಯಪಾಲರು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಹೇಳಿದ್ದಾರೆ ಎಂಬ ಆಧಾರದ ಮೇಲೆ ಸಮಜಾಯಿಷಿಯನ್ನು ತೆಗೆದುಕೊಂಡು, ಸರ್ಕಾರ ಕೊಟ್ಟಿರುವಂತಹ ಸೂಚನೆಗಳನ್ನು, ರಾಜ್ಯಪಾಲರು ಕೊಟ್ಟಿರುವಂತಹ ಸೂಚನೆಯ ಮೇರೆಗೆ, ನಾವು ಕೊಟ್ಟಿರುವುದನ್ನು ಪಕ್ಕಕ್ಕಿಟ್ಟು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವರು ನೇಮಕಾತಿಯನ್ನು ಪೂರ್ಣಗೊಳಿಸಿದ್ದಾರೆ. ಆದ್ದರಿಂದ ನಾವು ಸುಮ್ಮನೆ ಯಾರ ಜೊತೆಗೂ ಸಂಘರ್ಷಕ್ಕೆ ಇಳಿಯುವುದು ನಮ್ಮ ಉದ್ದೇಶವಲ್ಲ. ಆದ್ದರಿಂದ ಸ್ಕೋರ್ ಕಾರ್ಡ್ ಪ್ರಕಟಗೊಂಡ ಮೇಲೆ ಅಭ್ಯರ್ಥಿಗಳಿಂದ ಏನಾದರೂ ದೂರುಗಳು ಬಂದರೆ ಅದನ್ನು ಸಹ ತೆಗೆದುಕೊಂಡು, ಖಂಡಿತವಾಗಿ ಅದರಲ್ಲಿ ತಪ್ಪುಗಳಾಗಿದ್ದರೆ, ಅದರ ಬಗ್ಗೆ ಸೂಕ್ತ ತನಿಖೆಯನ್ನು ಮಾಡುವುದಕ್ಕೆ ನಾವು ತಯಾರು ಇದ್ದೇವೆ. ಇದರಲ್ಲಿ ಯಾವುದೇ ರೀತಿಯ ಮುಚ್ಚು-ಮರೆ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೆ ಒಂದು ನಿಮಿಷ. ದಯವಿಟ್ಟು ಉದ್ಯೋಗದಿಂದ ವಂಚಿತರಾದವರಿಂದ ಆಕ್ಷೇಪಣೆ ಬರುವವರೆಗೂ ಹೋಗಲೇಬೇಡಿ. ಅದರ ಅಗತ್ಯವಿಲ್ಲ. ಮೊದಲನೆಯದು ಆ ಮನುಷ್ಯ ನಿವೃತ್ತಿ ಹೊಂದುತ್ತಿರುವಂತಹ ಸಂದರ್ಭದಲ್ಲಿ ಲೂಟಿ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಸಿಗುತ್ತದೆಯೇ ಎಂದು ಬಳಸಿಕೊಂಡು ಯಾರ್ಯಾರಿಗೊ ನೇಮಕಾತಿಯನ್ನು ಕೊಟ್ಟರೆ, merit students ಮತ್ತು ಇನ್ನು ಬೇಕಾದಷ್ಟು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಬಂದಿದೆ. ಇವರನ್ನೆಲ್ಲ ಪಕ್ಕಕ್ಕೆ ತಳ್ಳಿ ಯಾರು ವ್ಯವಹಾರವನ್ನು ಮಾಡಿದ್ದಾರೋ, ಅವರಿಗೆ ಉದ್ಯೋಗವನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಹಣಕಾಸು ಇಲಾಖೆಯವರು ಸಹ ನೇಮಕಾತಿ ಮಾಡಬೇಡಿ ಎಂದು ಹೇಳಿದ್ದಾರೆ. ಇಷ್ಟೆಲ್ಲಾ ಮಾಡಿದರೂ ಕೂಡ ಆಕ್ಷೇಪಣೆಗೆ ಏಕೆ ಕಾಯುತ್ತೀರಿ? ಇದನ್ನು ತಕ್ಷಣ ರದ್ದು ಮಾಡುವ ಅಧಿಕಾರವಿದೆ. ಸುಮ್ಮನೆ ಇದನ್ನು ಎಳೆದುಕೊಂಡು ಹೋಗುವುದು ಸರಿಯಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿವೃತ್ತಿ ಹೊಂದುವ ಒಂದು ವಾರದ ಮುಂಚೆ ನೇಮಕಾತಿ ಮಾಡಲು ಎಲ್ಲಿ ಅವಕಾಶವಿದೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಕೆ.ಟಿ. ಶ್ರೀಕಂಠೇಗೌಡರವರೇ ಇದನ್ನೇ ನಾನು ಹೇಳುತ್ತಿರುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ವರ್ಗಾವಣೆ ಮಾಡುವುದಕ್ಕೆ ಎಲ್ಲಿ ಅವಕಾಶವಿದೆ? ಅದಕ್ಕೆ ಮಂಡಳಿಯ ಸದಸ್ಯರ ಮೂಲಕ ದೊಡ್ಡ ದಂಧೆ ನಡೆದಿರುವುದು, ಇಡೀ ರಾಜ್ಯಕ್ಕೆ ಜಗಜ್ಜಾಹೀರಾಗಿದೆ. ದಯಮಾಡಿ ಮಾನ್ಯ ಸಚಿವರು ಇದನ್ನು ತಡೆ ಹಿಡಿಯಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಶ್ರೀ ಅನಿಲ್ ಕುಮಾರ್ ಎಂಬುವವರಿಗೆ ಚಿನ್ನದ ಪದಕ ಬಂದಿದೆ. ಆದರೆ ಇವರನ್ನು ಆಯ್ಕೆ ಮಾಡಿಕೊಂಡಿಲ್ಲ. ಮಾರ್ಕ್ಸ್‌ಗಳೇ ಬಂದಿಲ್ಲ. ಇನ್ನೊಂದು ಆ ವಿಷಯವೇ ಅಲ್ಲ. ಬೇರೆಯವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಂತಹ ಹತ್ತಾರು ಉದಾಹರಣೆಗಳನ್ನು ನಾನು ಕೊಡಬಲ್ಲೆ. ಅದಕ್ಕೆ ನಾನು ಹೇಳುತ್ತಿರುವುದು, ಇದರ ಬಗ್ಗೆ ಚರ್ಚೆ ಮಾಡಿ, ಈ ಸದನದ ಹೆಚ್ಚಿನ ಸಮಯವನ್ನು ಖಂಡಿತವಾಗಿ ಹಾಳು ಮಾಡುವುದು ಬೇಡ. ಕಾನೂನು ಬಾಹಿರವಾಗಿ ಮಾಡಿಕೊಂಡಿರುವ ನೇಮಕಾತಿಯನ್ನು ರದ್ದು ಮಾಡಿಬಿಡಿ. ನಂತರ ಮಾನ್ಯ ಸಚಿವರು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಈಗ ದೂರುಗಳು ಬಂದಿರುವುದು ಮಾತ್ರವಲ್ಲ. ಸರ್ಕಾರವು ಇದರ ಬಗ್ಗೆ ಪದೇ ಪದೇ ಪತ್ರವನ್ನು ಬರೆದಿದೆ. 49 ಹುದ್ದೆಗಳಿಗೆ ಅನುಮೋದನೆಯನ್ನು ಕೊಟ್ಟಿರುವುದು, ಆದರೆ 107 ಹುದ್ದೆಗಳಿಗೆ ನೇಮಕಾತಿಯನ್ನು ಮಾಡಿದ್ದಾರೆ. ಈ ರೀತಿ ಮಾಡಬಾರದು ತಪ್ಪು ಎಂದು ಹೇಳಿ ಅನೇಕ ಬಾರಿ ಸರ್ಕಾರದಿಂದಲೇ ಪತ್ರವನ್ನು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರು ಇದರ ಬಗ್ಗೆ ಏನು ಮಾಡಬೇಕೆಂದು ತಾವು ಹೇಳಬೇಕಲ್ಲವೇ?

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಈಗ . . .

**ಸಭಾಪತಿಯವರು:-** ಮಾನ್ಯ ಸದಸ್ಯರೆ ತಾವು ಆಗಲೇ ಇದರ ಬಗ್ಗೆ ಹೇಳಿದ್ದೀರಿ. ಇದು ರೆಕಾರ್ಡ್ ಆಗಿದೆ. ಮಾನ್ಯ ಸಚಿವರು ಇದರ ಬಗ್ಗೆ ಏನು ಮಾಡುತ್ತಾರೆಂದು ಕೇಳೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ದಿನಾಂಕ: 15-07-2016 ರ ಸುತ್ತೋಲೆಯಲ್ಲಿ ಕುಲಪತಿಗಳ ಕಾರ್ಯಾವಧಿಯು 6 ತಿಂಗಳುಗಳಿಗೂ ಕಡಿಮೆ ಇದ್ದಾಗ ಯಾವುದೇ ನೇಮಕಾತಿಯನ್ನು ಮಾಡಬಾರದು ಎಂದು ರಾಜ್ಯಪಾಲರು ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಮಾನ್ಯ ಬಸವರಾಜ ರಾಯರೆಡ್ಡಿಯವರು ದಾವಣಗೆರೆಗೆ ಕೊಟ್ಟಿಲ್ಲ ಎಂದು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಇದನ್ನು ನಿಲ್ಲಿಸಿದರು. ಮಾನ್ಯ ಸಚಿವರು ಸರ್ಕಾರದಿಂದ ತಪ್ಪು ಆಗಿಲ್ಲ. ಸರ್ಕಾರದ ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಕೋಟಿ ಕೋಟಿಗಟ್ಟಲೆ ವ್ಯವಹಾರವಾಗಿರುವ ದುಡ್ಡನ್ನು ಖುದ್ದಾಗಿ ಅಲ್ಲೇ ಕುಳಿತುಕೊಂಡು ಎಣಿಸಿಕೊಂಡಿದ್ದಾರೆ. ವೀಡಿಯೊ ಸಹಿತ ಕೊಡಿಸುತ್ತೇನೆ. ಒಂದು ಕಡೆ ನೇಮಕಾತಿ ಆದೇಶ. ಇನ್ನೊಂದು ಕಡೆ ದುಡ್ಡನ್ನು ಎಣಿಸಿಕೊಂಡಿದ್ದಾರೆ. ಇಷ್ಟೆಲ್ಲಾ ಮಾನ್ಯ ಸಚಿವರಿಗೆ ಗೊತ್ತಿದ್ದರೂ, ಇದಕ್ಕೆ ದೂರನ್ನು ಕೊಡಲಿ ಎಂದು ಹೇಳುತ್ತಾರೆ. ತುಂಬಾ ದೂರುಗಳು ಇವೆ. ಒಂದು ವಿಶ್ವವಿದ್ಯಾನಿಲಯದಲ್ಲಿ ಈ ರೀತಿಯ ಭ್ರಷ್ಟಚಾರ ನಡೆದರೆ, ನೀವು ಹೇಗೆ ಇದನ್ನು ಮಾಡುತ್ತೀರಿ. ಆದ್ದರಿಂದ ದಯಮಾಡಿ ದೂರು ಏನು ಬೇಡ. ಇದನ್ನು ತಕ್ಷಣ ರದ್ದು ಮಾಡಿ ಎಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು . . .

**ಸಭಾಪತಿಯವರು:-** ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ಹೇಳುತ್ತಾರೆ. ಇದು ಪ್ರಶ್ನೋತ್ತರ ಅವಧಿಯಾಗಿದ್ದು, ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೆ ತಾವು ಇದರ ಬಗ್ಗೆ ಈಗಾಗಲೇ ಮಾನ್ಯ ಸಚಿವರಿಗೆ ಹೇಳಲಾಗಿದೆ. ಮಾನ್ಯ ಸಚಿವರಿಂದ ಇದರ ಬಗ್ಗೆ ಉತ್ತರ ಬೇಡವೇ? ಹಾಗಾದರೆ, I will close the question. You don't want the answer?

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೆ ತಮಗೆ ಮಾನ್ಯ ಸಚಿವರಿಂದ ಉತ್ತರ ಬೇಡವೇ? ಹಾಗಾದರೆ ನಿಮ್ಮ statement ಮಾಡಿ, ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ಕೊಡಬೇಕಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಆದೇಶ ಹಾಗೂ ಸೂಚನೆಗಳನ್ನು ಪಾಲಿಸದೆ ಒಂದೇ ದಿನ ತರಾತುರಿಯಲ್ಲಿ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಸಭಾಪತಿಯವರು:-** ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರಗಳು ಬೇಕಾಗಿಲ್ಲದೆ ಇರುವುದರಿಂದ, ಅವರು statement ಗಳನ್ನು ಮಾಡುತ್ತಿದ್ದಾರೆ. They are not asking questions.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಯಲ್ಲಿ ಈ ವಿಷಯ ಇರುವುದರಿಂದ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಕುಳಿತುಕೊಳ್ಳಿ. ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ಹೇಳುತ್ತಾರೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಮಗೂ ಗೊತ್ತಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಇದರ ಬಗ್ಗೆ ಅನೇಕ ಬಾರಿ ಹೇಳಿದ್ದಾರೆ. ಸಾಕಷ್ಟು ವಿಶ್ವವಿದ್ಯಾನಿಲಯಗಳು ಒಳ್ಳೆಯ ಕೆಲಸಗಳನ್ನು ಮಾಡಲಿ ಎಂದು ನಾವು ಸ್ವಾಯತ್ತತೆಯನ್ನು ಕೊಟ್ಟಿದ್ದೇವೆ. ಆದರೆ ಸ್ವಾಯತ್ತತೆಯನ್ನು ಯಾವುದಕ್ಕೆ ಬಳಕೆ ಮಾಡಿಕೊಳ್ಳಬೇಕು. ಅದಕ್ಕಿಂತ ಹೆಚ್ಚಾಗಿ ಇಂತಹ ವಿಚಾರದಲ್ಲಿ ಸ್ವಾಯತ್ತತೆಯನ್ನು ಬಳಕೆ ಮಾಡಿಕೊಂಡು ಹೆಚ್ಚು ತಪ್ಪುಗಳು ನಡೆಯುತ್ತಿದೆ. ತಪ್ಪುಗಳು ನಡೆಯುತ್ತಿರುವುದನ್ನು ನಾನು ತಪ್ಪುಗಳು ನಡೆಯುತ್ತಿಲ್ಲವೆಂದು ಹೇಳಿದರೆ ಗೋಡೆಯ ಮೇಲೆ ಸತ್ಯ ಬರೆದಿರುವಾಗ ಅದನ್ನು ನಾನು ನೋಡಲಿಲ್ಲ ಹೇಳಿದರೆ ಹೇಗಾಗುತ್ತದೆ?

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮೇಲೆ ಬಹಳ ಕಳಕಳಿಯನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸಚಿವರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಈ ರೀತಿಯಲ್ಲಿ ಹೇಳಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾವು ಸರ್ಕಾರವನ್ನು ಕೇಳಿದ್ದೇವೆ. ಹಾಗಾದರೆ ತಾವು ಕೊಟ್ಟಿರುವ ಉತ್ತರ ಸರಿಯಾಗಿದೆಯೇ?

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಉತ್ತರವನ್ನು ಹೇಳುತ್ತೇನೆ. ಇವತ್ತಿನ ದಿವಸ ವಾಸ್ತವವಾಗಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಸಮಜಾಯಿಷಿಯನ್ನು ಕೊಡುತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಸಮಜಾಯಿಷಿಯನ್ನು ಕೊಡುತ್ತಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ನನಗೆ ಸಮಜಾಯಿಷಿಯನ್ನು ಕೊಡಬೇಕೆನ್ನುವುದು ಇಲ್ಲ. ವಾಸ್ತವವನ್ನು ವಾಸ್ತವವಾಗಿ ನಾವೆಲ್ಲಾ ಏನಿದೆ, ಅದನ್ನು ಒಪ್ಪಿಕೊಳ್ಳಬೇಕು. ಅನೇಕ ವಿಶ್ವವಿದ್ಯಾನಿಲಯಗಳು ಈ ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಶೋಧನೆಗೆ ಮತ್ತು ಬೇರೆ ಕೆಲಸಕ್ಕೆ ಬಳಕೆ ಮಾಡಬೇಕಾಗಿರುವ ಸ್ವಾಯತ್ತತೆಯನ್ನು ಇಂತಹ ವಿಚಾರಗಳಿಗೆ ಬಳಕೆ ಮಾಡುತ್ತಿರುವುದು ದುರಂತದ ಸಂಗತಿಯಾಗಿದೆ. ಹಾಗಾಗಿ ಮಾನ್ಯ ಬಸವರಾಜ ರಾಯರೆಡ್ಡಿಯವರು ಇದನ್ನು ದಾರಿಗೆ ತರಬೇಕೆಂದು ಹೊರಟಾಗ, ಅವರ ಮೇಲೆಯೇ ಏನೇನೋ ಗೂಬೆಗಳನ್ನು ಕೂರಿಸಿ, ಅವರ ಕೈಯನ್ನು ಕಟ್ಟಿಹಾಕುವಂತಹ ಪ್ರಯತ್ನಗಳು ಸಹ ನಡೆದಿವೆ. ಆದರೆ ಇದನ್ನು ಸರಿ ಮಾಡಬೇಕಾಗಿರುವುದು ನಮ್ಮ ಸರ್ಕಾರವಾಗಲಿ ಅಥವಾ ಯಾವುದೇ ಸರ್ಕಾರವಾಗಲಿ ಇದನ್ನು ಹೀಗೆ ಮುಂದುವರೆಸಿಕೊಂಡು ಹೋದರೆ ವಿಶ್ವವಿದ್ಯಾನಿಲಯಗಳ ಮೌಲ್ಯ ಏನು ಉಳಿಯುವುದಿಲ್ಲ? ಸಮ್ಮಾಜಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಇದರಿಂದ ಯಾವುದೇ ಲಾಭ ಸಿಗದೇ ಇರುವಂತಹ ದಿಕ್ಕಿನಲ್ಲಿ ಸಾಗುತ್ತಿದೆ. ಇದರ ಬಗ್ಗೆ ಬಟ್ಟು ಬಿಡಿ.

**ಸಭಾಪತಿಯವರು**:- ಇದರ ಬಗ್ಗೆ ಏನು ಮಾಡುತ್ತೀರಿ ಎಂದು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಕೃಷ್ಣ ಬೈರೇಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷ ಸದಸ್ಯರಲ್ಲೂ ಮನವಿ ಮಾಡುತ್ತೇನೆ. ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಕೂಡ ತನ್ನದೆ ಆದಂತಹ ಒಂದು ಕಾನೂನು ಇದೆ. ಆ ಕಾನೂನಿನಲ್ಲಿ ಹಿಂದೆ ಯಾವ ರೀತಿಯಲ್ಲಿತ್ತು, ಏನೇ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾದರೆ ನಾವು ಘನತೆವೆತ್ತ ರಾಜ್ಯಪಾಲರಿಗೆ ಮನವಿ ಮಾಡಿ. ಇದರ ಬಗ್ಗೆ ಒಂದು ತನಿಖೆಯನ್ನು ಮಾಡಿಸಬೇಕಾಗಿತ್ತು. ಕಳೆದ ಬಾರಿ ಈ ರೀತಿಯ ಅವ್ಯವಹಾರಗಳು ಆದಮೇಲೆ ಇದಕ್ಕೆ ಒಂದು ತಿದ್ದುಪಡಿಯನ್ನು ತಂದು, ತನಿಖಾ ಸಮಿತಿಯನ್ನು ರಚನೆ ಮಾಡುವಂತಹ ಒಂದು ಅಧಿಕಾರ ಸರ್ಕಾರಕ್ಕೂ ಕೂಡ ಇದೆ. ಆ ಅಧಿಕಾರವನ್ನು ಸರ್ಕಾರಕ್ಕೆ ನಾವು ತೆಗೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಈಗ ಇರುವ ಕಾನೂನಿನ ವಿರುದ್ಧವಾಗಿ ಉತ್ತರ ಕೊಡುವುದು ತಪ್ಪಾಗುತ್ತದೆ. ನಾವು ಏನೇ ಒಂದು ಮಾಡಬೇಕಾದರೂ ಸಹ ಒಂದು ಪ್ರಾಥಮಿಕ ತನಿಖೆಯನ್ನಾದರೂ ಕೂಡ ಮಾಡಬೇಕಾಗುತ್ತದೆ. ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಒಬ್ಬ ಹಿರಿಯ ಅಧಿಕಾರಿಯಿಂದ ತಾವುಗಳು ಹೇಳಿರುವ ವಿಚಾರ ಮತ್ತು ಅಭ್ಯರ್ಥಿಗಳಿಂದ ದೂರನ್ನು ಪಡೆದುಕೊಳ್ಳುವುದಕ್ಕೆ ಮುಕ್ತ ಅವಕಾಶವನ್ನು ಕೊಟ್ಟು, ಅಭ್ಯರ್ಥಿಗಳಿಗೆ ಏನೆಲ್ಲಾ ಮಾಹಿತಿಗಳು ಬೇಕೋ, ಅದನ್ನೆಲ್ಲಾ ಒದಗಿಸಿಕೊಡುತ್ತೇವೆ. ವಿಶ್ವವಿದ್ಯಾನಿಲಯದವರು ಮಾಹಿತಿಯನ್ನು ಕೊಡಲಿಲ್ಲವೆಂದರೂ, ಸರ್ಕಾರದಿಂದ ನಿರ್ದೇಶನವನ್ನು ಕೊಟ್ಟು ಎಲ್ಲಾ ಮಾಹಿತಿಗಳನ್ನು ಕೊಡಿಸಿ, ಯಾವ ರೀತಿಯಲ್ಲಿ ಅನ್ಯಾಯವಾಗಿದೆ. ಏನು ತಪ್ಪು ನಡೆದಿದೆ ಎನ್ನುವುದರ ಬಗ್ಗೆ ಅವರ ಅಭ್ಯರ್ಥಿಗಳಾಗಬಹುದು ಅಥವಾ ತಾವು ಹೇಳಿರುವ ವಿಚಾರದ ಬಗ್ಗೆ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆದಷ್ಟು ಮುಂದಿನ ವಾರದಲ್ಲಿ ತಕ್ಷಣ Enquiry Committee ಯನ್ನು constitute ಮಾಡುತ್ತೇವೆ. ಈ ವಾರದಲ್ಲೇ Enquiry Committee ಯನ್ನು constitute ಮಾಡುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, . . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಎಲ್ಲಾ ಸದಸ್ಯರು ಎದ್ದು ನಿಂತು ಮಾತನಾಡಿದರೆ ಇದೊಂದು ಚರ್ಚೆಯಾಗುತ್ತದೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ .

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೆ ಹಿಂದುಗಡೆ ನೋಡಿ, ಮಾನ್ಯ ಶರವಣರವರು ಮಾತನಾಡುತ್ತಿದ್ದಾರೆ. ನೀವು ಮಾತನಾಡುತ್ತೀರೋ ಅಥವಾ ಅವರು ಮಾತನಾಡುತ್ತಾರೋ,

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೇಮಕಾತಿಯನ್ನು ಮತ್ತು ವರ್ಗಾವಣೆಯನ್ನು ಏನು ಮಾಡಲಾಗಿದೆ. ಆ ಆದೇಶವನ್ನು ತಡೆಹಿಡಿಯಬೇಕು. ಮಾನ್ಯ ಸಚಿವರು ಏನು ತನಿಖೆಯನ್ನು ಮಾಡಬೇಕೋ ಅದನ್ನು ಮಾಡಬೇಕು.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಶರವಣರವರೇ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ನಾನು ಅದನ್ನೇ ಮತ್ತೆ ಮತ್ತೆ ಹೇಳುತ್ತಿದ್ದೇನೆ ಎಂದು ಕಿರಿಕಿರಿ ಮಾಡಿಕೊಳ್ಳಬೇಡಿ. ನಾನು ಹೇಳುವುದನ್ನು ತಾಳ್ಮೆಯಿಂದ ಕೇಳಿಸಿಕೊಳ್ಳಿ. ನಾವು ಬಹಳ ಕಾಲದಿಂದ ವಿಶ್ವವಿದ್ಯಾನಿಲಯಗಳು ಚೆನ್ನಾಗಿ ಕೆಲಸ ಮಾಡಬೇಕೆಂದು ಅವುಗಳು ಸರ್ಕಾರದ ಹಸ್ತಾಕ್ಷೇಪದಿಂದ ಮುಕ್ತವಾಗಿಡಬೇಕೆಂದು, ಅವರಿಗೆ ಸ್ವಾಯತ್ಥ ಹಕ್ಕುಗಳನ್ನು ಕೊಟ್ಟಿದ್ದೇವೆ. ನಾನು ಇಷ್ಟ ಬಂದ ಹಾಗೆ directions ಕೊಡುವುದಲ್ಲಾ, ಕೊಡಬೇಕಾದರೂ ಕೂಡ ಕಾಯ್ದೆಯ ಪ್ರಕಾರವೇ ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗುತ್ತಿದೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, . . . .

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಶರವಣರವರೇ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. Enquiry Committee ಯನ್ನು ಈ ವಾರದಲ್ಲೆ constitute ಮಾಡುತ್ತೇನೆ. Enquiry Committee ಯವರು ಆದಷ್ಟು ಬೇಗ ವರದಿಯನ್ನು ಕೊಟ್ಟರೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಚಿವರೆ, ತಾವು Enquiry Committee ಯನ್ನು constitute ಮಾಡಿ, ಅಲ್ಲಿಯವರೆಗೂ ಇದನ್ನು ತಡೆಹಿಡಿಯಬಹುದಲ್ಲವೇ?

**ಸಭಾಪತಿಯವರು:-** ಇದನ್ನು ತಡೆಹಿಡಿಯುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದನ್ನು ಏಕೆ ತಡೆಹಿಡಿಯುವುದಕ್ಕೆ ಆಗುವುದಿಲ್ಲ?

**ಸಭಾಪತಿಯವರು:-** ಇದನ್ನು ತಡೆಹಿಡಿಯುವುದಕ್ಕೆ ನನಗೆ ಅಧಿಕಾರ ಕಾನೂನಿನಲ್ಲಿ ಇಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮೈಸೂರು ನಗರದಲ್ಲಿ ರಂಗಪ್ಪನವರು ಇದ್ದಂತಹ ಸಂದರ್ಭದಲ್ಲಿ ಇದೇ ರೀತಿಯಾಗಿತ್ತು. ಅದನ್ನು ರದ್ದುಪಡಿಸಲಾಯಿತು. ಇದು ತಮಗೆ ಗೊತ್ತಿದೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು . . .

**ಸಭಾಪತಿಯವರು:-** ಮಾನ್ಯ ಸಚಿವರು ಇದನ್ನು ತಡೆಹಿಡಿಯುವುದಕ್ಕೆ ನನಗೆ ಅಧಿಕಾರ ಇಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೂ ಏಕೆ ತಡೆಹಿಡಿಯುವುದಕ್ಕೆ ಬರುವುದಿಲ್ಲ?

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೆ ಇದರ ಬಗ್ಗೆ ತಮಗೆ ತಿಳಿಸುತ್ತೇನೆ. ನಾನು ಏನೋ ಒಂದು ಆದೇಶವನ್ನು ಹೊರಡಿಸುತ್ತೇನೆ. ಇದು ಕಾನೂನಿನ ಪ್ರಕಾರ ಇಲ್ಲವೆಂದು ತಡೆಯಾಜ್ಞೆಯನ್ನು ತಂದರೆ ಏನು ಪ್ರಯೋಜನವಾಗುತ್ತದೆಯೇ? ಈ ವಿಚಾರದಲ್ಲಿ ತಾವು ಹೇಳುವ ಪ್ರಕಾರ ತಡೆಹಿಡಿಯುವ ಆಗಿದ್ದರೆ, ನಾವು ತಡೆಹಿಡಿಯುತ್ತೇವೆ. ಕಾನೂನನ್ನು ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು:-** ಇದನ್ನು ತಡೆಹಿಡಿಯುವ ಆಗಿದ್ದರೆ ಮಾತ್ರ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 49 ಹುದ್ದೆಗಳಿಗೆ ಮಾತ್ರ ಮಂಜೂರಾತಿಯನ್ನು ಕೊಟ್ಟಿರುವುದು, 107 ಹುದ್ದೆಗಳಿಗೆ ನೇಮಕಾತಿಯನ್ನು ಮಾಡಿರುವುದು. Without sanctioning the posts, ಇದನ್ನು ಹೇಗೆ ಮಾಡಲಾಯಿತು?

**(ಮುಂದು)**

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿದು ವಿಚಾರಣೆಯನ್ನು ಪ್ರಾರಂಭಿಸಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ದಿನಾಂಕ 29/01/2018 ರಂದು ರಾತ್ರಿ ಸಮಯದಲ್ಲಿ ಒಂದು ದಿನದಲ್ಲಿಯೇ ಬೋರ್ಡ್ ಮೀಟಿಂಗ್‌ನ್ನು ಮಾಡುತ್ತಾರೆ. ನೇಮಕಾತಿ ಪಟ್ಟಿಯನ್ನು ಪ್ರಕಟಿಸುವುದಿಲ್ಲ. ಯಾರಿಗೂ ಸಹ ನೇಮಕಾತಿ ಆದೇಶವನ್ನು ನೀಡುವುದಿಲ್ಲ ಹಾಗೂ ಅಂಚೆ ಮೂಲಕವೂ ಸಹ ಕಳುಹಿಸಿಕೊಡುವುದಿಲ್ಲ. ರಾತ್ರಿ ವೇಳೆಯಲ್ಲಿಯೇ 107 ಹುದ್ದೆಗಳನ್ನು ಭರ್ತಿ ಮಾಡುತ್ತಾರೆ. ಒಂದೇ ದಿನದಲ್ಲಿ ತರಾತುರಿಯಲ್ಲಿ ಅಭ್ಯರ್ಥಿಗಳ ನೇಮಕಾತಿಯನ್ನು ಮಾಡಲಾಗಿದೆ. ಈ ಅಂಶವನ್ನು ಸರ್ಕಾರವು ಒಪ್ಪಿಕೊಂಡಿದೆ.

**ಸಭಾಪತಿಯವರು:-** ಈಗ ಮಂತ್ರಿಗಳು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂಬುದನ್ನು ನೋಡೋಣ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿರುವುದಕ್ಕೆ . . .

**(ಗೊಂದಲ)**

**ಸಭಾಪತಿಯವರು:-** ಆಯಿತು, ಎಷ್ಟು ಬಾರಿ ಹೇಳಿದ್ದನ್ನೇ ಪುನರುಚ್ಚರಿಸುತ್ತೀರಿ? ಮಂತ್ರಿಗಳಿಗೆ ಉತ್ತರವನ್ನು ಹೇಳುವುದಕ್ಕೆ ನೀವು ಬಿಡುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಂತ್ರಿಗಳಿಗೆ ಉತ್ತರವನ್ನು ನೀಡಲು ಬಿಡಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಅಭ್ಯರ್ಥಿಗಳ ಸಂದರ್ಶನ ಆದ ಮೇಲೆ . . .

**ಸಭಾಪತಿಯವರು:-** ನೀವು ಈ ಅಂಶವನ್ನು ಈಗಾಗಲೇ ಹೇಳಿದ್ದೀರಿ. ಅದನ್ನು ನಾನು ಕೇಳಿಸಿ ಕೊಂಡಿದ್ದೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಅಭ್ಯರ್ಥಿಗಳ ಸಂದರ್ಶನ ಆದ ಮೇಲೆ ಏಳು ತಿಂಗಳುಗಳ ಕಾಲ ನೇಮಕಾತಿ ಪಟ್ಟಿಯನ್ನು . . .

**ಸಭಾಪತಿಯವರು:-** ಈ ಅಂಶವನ್ನು ಸಹ ನೀವು ಈಗಾಗಲೇ ಹೇಳಿದ್ದೀರಿ. It is on record. Repeat ಮಾಡಬೇಡಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಕೇವಲ ವ್ಯವಹಾರಕ್ಕೋಸ್ಕರ ಏಳು ತಿಂಗಳುಗಳಾದ ಮೇಲೆ . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಾವು ಹೇಳಿರುವ ಅಂಶವನ್ನೇ ಪುನರುಚ್ಚರಿಸಬೇಡಿ. ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬೇಡವೇ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಚೌಡರೆಡ್ಡಿ ತೂಪಲ್ಲಿಯವರು ಹೇಳಿದ್ದನ್ನೇ ಹೇಳುತ್ತಿದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನೇಮಕಾತಿ ಪ್ರಕ್ರಿಯೆಯನ್ನು ಏಕೆ ತಡೆಗೊಳಿಸಬಾರದು ಎಂಬುದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. ನನಗೆ ಲಭ್ಯವಿರುವ ಮಾಹಿತಿಯ ಪ್ರಕಾರವಾಗಿ ನಾನು ಹೇಳಿದ್ದೇನೆ. ಕಾನೂನನ್ನು ಪೂರ್ತಿಯಾಗಿ ಅರೆದು, ಕುಡಿದವರಷ್ಟು ನಾನು ತಿಳಿದುಕೊಂಡಿಲ್ಲ. ನಮ್ಮ ಕಾಯ್ದೆಗಳಲ್ಲಿ ಈ ವಿಚಾರವಾಗಿ ಅವಕಾಶಗಳಿದ್ದರೆ, ಅದನ್ನೂ ಸಹ ನಾವು ಮಾಡುತ್ತೇವೆ. ಒಂದು ವೇಳೆ ಕಾನೂನಿನಲ್ಲಿ ಈ ಬಗ್ಗೆ ಯಾವುದೇ ರೀತಿಯಾದ ಅವಕಾಶಗಳಿಲ್ಲದೇ ಹೋದರೆ ತಕ್ಷಣವಾಗಿ ಇನ್ನೊಂದು ಬಾರಿ . . .

**ಸಭಾಪತಿಯವರು:–** ಮಾನ್ಯ ಸಚಿವರು 'ಕಾನೂನಿನಲ್ಲಿ ಅವಕಾಶಗಳಿದ್ದರೆ' ಎಂಬುದಾಗಿ ಹೇಳುತ್ತಿದ್ದಾರೆ. ಆದರೆ ನೀವು ಮಧ್ಯದಲ್ಲಿ ಬಾಯಿಯನ್ನು ಹಾಕುತ್ತಿದ್ದೀರಿ.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಎಲ್ಲವನ್ನೂ ತಿಳಿದುಕೊಂಡಿಲ್ಲ. ಆದರೆ ಅರ್ಧಂಬರ್ಧ ತಿಳಿದುಕೊಂಡು ಇಲ್ಲಿ ಬಂದು ಕುಳಿತುಕೊಂಡಿದ್ದೇನೆ. On principle, ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿರುವುದಕ್ಕೆ ನನ್ನ ವಿರೋಧವಿಲ್ಲ. ಕಾಯ್ದೆಯಲ್ಲಿ ಅವಕಾಶವಿದ್ದರೆ ಅದನ್ನು ಖಂಡಿತವಾಗಿಯೂ ಸಹ ನಾನು ಮಾಡುತ್ತೇನೆ. ಒಂದು ವೇಳೆ ಅವಕಾಶಗಳಿದಿದ್ದರೆ ತಕ್ಷಣವಾಗಿ ಈ ವಾರದಲ್ಲಿಯೇ ಈ ಸಂಬಂಧ ವಿಚಾರಣಾ ಸಮಿತಿಯನ್ನು ರಚಿಸುತ್ತೇನೆ. ಅದಕ್ಕೆ ಸ್ವಲ್ಪ ಗೌರವ ಇರುವ ಅಧಿಕಾರಿಗಳನ್ನು ನಿಯೋಜಿಸುತ್ತೇನೆ ಹಾಗೂ ಅವರುಗಳ ಮೂಖೇನ ವಿಚಾರಣೆಯನ್ನು ಮಾಡಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಹೇಳಿರುವ ಅಂಶಗಳ ಬಗ್ಗೆ ಅವರಿಗೆ ಉಲ್ಲೇಖವನ್ನೂ ಸಹ ನೀಡುತ್ತೇನೆ. ಇಲ್ಲಿರುವ ಎಲ್ಲಾ ನಡವಳಿಗಳನ್ನು ತೆಗೆದುಕೊಂಡು ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಲಾಗುವುದು. ಇದರ ಜೊತೆಗೆ ವಿದ್ಯಾರ್ಥಿಗಳನ್ನು ಈ ವಿಚಾರದ ಬಗ್ಗೆ ಕೇಳುವಂತೆಯೂ ಸಹ ನಿರ್ದೇಶವನ್ನು ನೀಡುತ್ತೇನೆ. ಈ ವಾರದಲ್ಲಿಯೇ ವಿಚಾರಣಾ ಸಮಿತಿಯನ್ನು ರಚಿಸುತ್ತೇನೆ. ಈ ಬಗ್ಗೆ ಅಧಿಕಾರಿಗಳು ನೀಡುವ ವರದಿಯನ್ನು ನೋಡಿಕೊಂಡು ಮುಂದೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳಲಾಗುವುದು. ಹೀಗಾಗಿ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವುದೇ ರೀತಿಯಾದ ಅನುಮಾನವನ್ನು ಇಟ್ಟುಕೊಳ್ಳುವುದು ಬೇಡ. ಸರ್ಕಾರದಿಂದ ಈ ವಿಚಾರದಲ್ಲಿ ಸಮಜಾಯಿಷಿಯನ್ನು ನೀಡಲಾಗುತ್ತಿದೆ ಎಂಬುದಾಗಿ ಭಾವಿಸುವುದು ಬೇಡ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿಯು ಮುಗಿದಿದೆ. ಈಗ ತಡೆಹಿಡಿಯಲಾದ ಪ್ರಶ್ನೆಗಳು. ಮೊದಲನೆಯದು ಶ್ರೀ ರಘುನಾಥ ರಾವ್ ಮಲ್ಕಾಪೂರೆ ರವರದು. ಸದರಿಯವರು ಪ್ರಸ್ತುತ ಸದನದಲ್ಲಿ ಹಾಜರಿಲ್ಲದಿರುವುದರಿಂದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

**ಪ್ರಶ್ನೆ ಸಂಖ್ಯೆ೪೪**

**(ಉತ್ತರವನ್ನು ಲಗತ್ತಿಸಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿಯ ಆಯವ್ಯಯದಲ್ಲಿ ಈ ವಿಚಾರವಾಗಿ ಘೋಷಣೆಯನ್ನು ಮಾಡಲಾಗಿತ್ತು. 22,27,506 ಫಲಾನುಭವಿಗಳನ್ನು ಗುರುತಿಸಲಾಗಿದೆ. 8,621 ಕೋಟಿ ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡುತ್ತೇವೆ ಎಂಬುದಾಗಿ ಸರ್ಕಾರವು ಘೋಷಣೆ ಮಾಡಿತ್ತು. ಆದರೆ ಈ ಪೈಕಿ ಎಷ್ಟು ಹಣವನ್ನು ಮರುಪಾವತಿ ಮಾಡಲಾಗಿದೆ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಇದುವರೆಗೆ 5,77,404 ರೈತರಿಗೆ ಸಂಬಂಧಿಸಿದಂತೆ 1,932.60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದಾಗಿ ಲಿಖಿತ ಉತ್ತರವನ್ನು ನೀಡಿದ್ದಾರೆ. ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಈ ಬಗ್ಗೆ ಕೆಲವು ಅಂಶಗಳನ್ನು ಲಿಖಿತ ಉತ್ತರದಲ್ಲಿ ಉಲ್ಲೇಖಿಸಿದ್ದಾರೆ. ಯಾರು ಸಾಲವನ್ನು ಪೂರ್ತಿಯಾಗಿ ಮರು ಪಾವತಿಸಿದ್ದಾರೆ, ಅವರಿಗೆ ಈ ಯೋಜನೆಯಿಂದ ಯಾವುದೇ ಲಾಭವಾಗುವುದಿಲ್ಲ. ಯಾರು ಇನ್ನೂ ಸಾಲವನ್ನು ಮರು ಪಾವತಿ ಮಾಡದೇ ಬಾಕಿಯುಳ್ಳಿಕೊಂಡಿದ್ದಾರೆ, ಅವರಿಗೆ ಮಾತ್ರವೇ ಸಾಲ ಮನ್ನಾ ಯೋಜನೆಯ ಲಾಭವು ದೊರೆಯುತ್ತದೆ. ದಿನಾಂಕ 20/06/2017 ಕ್ಕೆ ಸಾಲವು ಮರು ಪಾವತಿಯಾಗದೇ ಬಾಕಿ ಇರಬೇಕು. ಆದರೆ ಫಲಾನುಭವಿಗಳು ಸಾಲವನ್ನು ಮರು ಪಾವತಿಸಬೇಕೆಂದು ಕೆಳಗಡೆ ಹೇಳಲಾಗಿದೆ. ಲಿಖಿತ ಉತ್ತರದ ಕ್ರಮ ಸಂಖ್ಯೆ 2 (3) ರಲ್ಲಿ ದಿನಾಂಕ 20/06/2017 ಕ್ಕೆ ಹೊರಬಾಕಿ ಇರುವ ಸಾಲವು ಸುಸ್ತಿ ಇದ್ದಲ್ಲಿ ದಿನಾಂಕ 20/06/2017 ಕ್ಕೆ ಬಾಕಿ ಇರುವ ಅಸಲು ಮತ್ತು ಬಡ್ಡಿ ಸೇರಿ 50,000/- ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವನ್ನು ಸಾಲ ಪಡೆದ ರೈತರು ದಿನಾಂಕ 31/12/2017 ರೊಳಗಾಗಿ ಮರುಪಾವತಿ ಮಾಡಿದ್ದಲ್ಲಿ, ಅಸಲು ಮತ್ತು ಬಡ್ಡಿ ಸೇರಿ 50,000/- ರೂಪಾಯಿಗಳ ವರೆಗಿನ ಸಾಲವು ಮನ್ನಾ ಆಗುತ್ತದೆ ಎಂಬುದಾಗಿ ತಿಳಿಸಲಾಗಿದೆ. ಈಗಾಗಲೇ ದಿನಾಂಕ 31/12/2017 ಆಗಿ ಎರಡು ತಿಂಗಳುಗಳು ಆಗುತ್ತಾ ಬಂದಿದೆ. ಅಂದರೆ ಯಾರು ಸಾಲವನ್ನು ಈಗಾಗಲೇ ಮರು ಪಾವತಿಸಿದ್ದಾರೆ, ಅವರಿಗೆ ಯೋಜನೆಯ ಪ್ರಕಾರವಾಗಿ ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ. ಆದರೆ ಇನ್ನೂ ಕೆಲವರು ಸಾಲವನ್ನು ಮರು ಪಾವತಿಸಿಲ್ಲ ಎಂಬುದಾಗಿ ತೋರುತ್ತದೆ. ಏಕೆಂದರೆ, ಇದುವರೆಗೆ 1,932.60 ಕೋಟಿ ರೂಪಾಯಿಗಳನ್ನಷ್ಟೇ ಬಿಡುಗಡೆ ಮಾಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನ ಮೊದಲನೆ ಪ್ರಶ್ನೆ ಏನೆಂದರೆ, ಸಾಲವನ್ನು ಮರು ಪಾವತಿಸದಿದ್ದವರಿಗೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಎರಡನೆ ಪ್ರಶ್ನೆ ಏನೆಂದರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, LAMPS (Large-sized Adivasi Multi-Purpose Co-operative Societies), DCC (District Co-operative Central) banks ನ ಶಾಖೆಗಳು ಮತ್ತು PICARD (Primary Co-operative Agriculture and Rural Development) Banks ಎಂಬುದಾಗಿ ಹಲವಾರು ಬ್ಯಾಂಕ್‌ಗಳನ್ನು ಉಲ್ಲೇಖಿಸಲಾಗಿದೆ. ಇವುಗಳಲ್ಲಿ ಯಾವ ರೀತಿಯಾದ ಮಾಹಿತಿ ಇದೆ ಎಂದರೆ, ಎಷ್ಟು ಸಾಲವನ್ನು ಮರು ಪಾವತಿ ಮಾಡಬೇಕಾಗಿದೆ ಅಷ್ಟು ಮೊತ್ತಕ್ಕೆ ಡಿಮ್ಯಾಂಡ್‌ನ್ನು ಕಳುಹಿಸಲಾಗಿದೆ ಹಾಗೂ ಬಹಳ ಹಣ ಇನ್ನೂ ಬಂದಿಲ್ಲ, ಬಾಕಿ ಇದೆ ಎಂಬುದಾಗಿ ಹೇಳುತ್ತಾರೆ. ರೈತರ ಸಾಲ ಮನ್ನಾಗೆ ಸಂಬಂಧಿಸಿದಂತೆ 1,932.60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದಾಗಿ ಸರ್ಕಾರವು ಹೇಳಿದೆ. ಹೀಗಾಗಿ ತಮ್ಮ ಬಳಿ ಲಭ್ಯವಿರುವ ಮಾಹಿತಿಯ ಪ್ರಕಾರ 'ದಿನಾಂಕ 31/12/2017 ಕ್ಕೆ ಎಷ್ಟು ಜನ ರೈತರು ಸಾಲವನ್ನು ಮರು ಪಾವತಿಸಿದ್ದಾರೆ? ಒಂದು ವೇಳೆ ಸಾಲವನ್ನು ಮರು ಪಾವತಿಸಿದ್ದರೆ, ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ನೀಡಲು ಎಷ್ಟು ಹಣ ಬೇಕಾಗುತ್ತದೆ? ಸರ್ಕಾರವು ಸಾಲ ಮನ್ನಾಗೆ ಸಂಬಂಧಿಸಿದಂತೆ 8,500 ಕೋಟಿ ರೂಪಾಯಿಗಳ ಪೈಕಿ ಕೇವಲ 1,932.60 ಕೋಟಿ ರೂಪಾಯಿಗಳನ್ನು ಏಕೆ ಬಿಡುಗಡೆ ಮಾಡಿದೆ? ಇನ್ನುಳಿದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?' ಎಂಬಿತ್ಯಾದಿ ಪ್ರಶ್ನೆಗಳನ್ನು ನಾನು ಕೇಳುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)**(ಸಹಕಾರ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಸಹಕಾರ ಇಲಾಖೆಯ ಮಂತ್ರಿಗಳು ಸದನದಲ್ಲಿ ಹಾಜರಿರಲಿಲ್ಲ ಹೀಗಾಗಿ ಉತ್ತರವನ್ನು ಈ ದಿನ ನೀಡುತ್ತೇನೆ ಎಂಬುದಾಗಿ ನಾನೇ ಮಾತನ್ನು ನೀಡಿದ್ದೆನು. ತಮಗೆ ಈಗಾಗಲೇ ತಿಳಿದಿರುವಂತೆ, ರೈತರ ಸಾಲ ಮನ್ನಾ ವಿಚಾರವಾಗಿ ನಮಗೆ ಬಹಳ ದೊಡ್ಡ ಬೇಡಿಕೆ ವಿರೋಧ ಪಕ್ಷದಿಂದಲೂ ಇತ್ತು. ಏನಾದರೂ ಮಾಡಿ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಬೇಡಿಕೆ ಇತ್ತು. ಸಾಲ ಮನ್ನಾ ಯೋಜನೆಯಲ್ಲಿ ಸುಮಾರು 22,27,506 ರೈತರು ಫಲಾನುಭವಿಗಳಾಗಿದ್ದಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 13,31,317 ರೈತರಿಗೆ 10,737 ಕೋಟಿ ರೂಪಾಯಿಗಳಷ್ಟು ಸಾಲವನ್ನು ಈಗಾಗಲೇ ಕೊಡಲಾಗಿತ್ತು. ಈಗ 1,932.60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಮೊತ್ತವನ್ನು ಬಿಡುಗಡೆ ಮಾಡಬೇಕು. ಆದರೆ DCC bankನವರು ಬಿಲ್‌ಗಳನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಇನ್ನುಳಿದ ಮೊತ್ತವನ್ನು ಬಿಡುಗಡೆ ಮಾಡಬೇಕು. ಬಿಲ್‌ಗಳನ್ನು ಸಲ್ಲಿಸಲು ಅವರಿಗೆ ಮೇ ಮಾಹೆಯವರೆಗೆ ಸಮಯಾವಕಾಶವಿರುತ್ತದೆ. ಅಲ್ಲಿಯವರೆಗೆ ಬ್ಯಾಂಕ್‌ನವರಿಗೆ ಕಾಲಮಿತಿ ಇದೆ. ನಿಗದಿತ ಅವಧಿಯೊಳಗೆ ಬಿಲ್‌ಗಳನ್ನು ಸರ್ಕಾರಕ್ಕೆ ಸಲ್ಲಿಸಿದಾಗ, ನಾವು ಕ್ರಮಬದ್ಧವಾಗಿ ಹಣವನ್ನು ಪಾವತಿಸುತ್ತೇವೆ. ರಾಜ್ಯದ 25 ಲಕ್ಷ ರೈತರಿಗೆ ಸಾಲ ಮನ್ನಾ ಮಾಡುವ ಬದ್ಧತೆ ನಮಗೆ ಇದೆ ಹಾಗೂ ಇದಕ್ಕೆ ನಾವು ಬದ್ಧರಾಗಿದ್ದೇವೆ. ಇದರಲ್ಲಿ ಯಾವುದೇ....

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆ ಏನೆಂದರೆ, ದಿನಾಂಕ 31/12/2017 ರೊಳಗಾಗಿ ಬಾಕಿಯಿರುವ ಸುಸ್ತಿ ಸಾಲವನ್ನು ರೈತರು ಮರು ಪಾವತಿ ಮಾಡಿರಬೇಕು ಎಂಬಂತಹ ಷರತ್ತನ್ನು ವಿಧಿಸಲಾಗಿದೆ. ದಿನಾಂಕ 31/12/2017 ಆಗಿ ಈಗ ಎರಡು ತಿಂಗಳುಗಳು ಆಗುತ್ತಾ ಬಂದಿದೆ. ನಾನು ನಿಮ್ಮನ್ನು ಕೇಳುತ್ತಿರುವುದೇನೆಂದರೆ, 22,27,506 ರೈತರಲ್ಲಿ ದಿನಾಂಕ 31/12/2017 ರೊಳಗಾಗಿ ಎಷ್ಟು ಜನ ರೈತರು ಸಾಲವನ್ನು ಮರು ಪಾವತಿಸಿದ್ದಾರೆ? ಏಕೆಂದರೆ ಈಗ ನಿಗದಿತ ಅವಧಿ ಮೀರಿರುವುದರಿಂದ ಈಗ ಮರು ಪಾವತಿ ಮಾಡುವುದಕ್ಕಾಗುವುದಿಲ್ಲ. ನಂತ್ತರದ ದಿನಾಂಕಗಳಲ್ಲಿ ಸಾಲವನ್ನು ಮರು ಪಾವತಿಸಿದ್ದಲ್ಲಿ, ಅದನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ನಿಗದಿತ ಅವಧಿಯಲ್ಲಿ ಎಷ್ಟು ಜನರು ಸಾಲವನ್ನು ಮರು ಪಾವತಿಸಿದ್ದಾರೆ ಹಾಗೂ ಇನ್ನೂ ಎಷ್ಟು ಜನ ಸಾಲವನ್ನು ಮರು ಪಾವತಿಸದೇ ಬಾಕಿ ಇಟ್ಟುಕೊಂಡಿದ್ದಾರೆ. ಲಿಖಿತ ಉತ್ತರದಲ್ಲಿ ನೀಡಿರುವ ಒಟ್ಟು ರೈತರ ಸಂಖ್ಯೆ 22,27,506 ಎಂಬುದೇನಿದೆ ಇದು ಎಲ್ಲಿಯೋ ಒಂದು ಕಡೆ ಸರಿಯಿಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ ದಿನಾಂಕ 31/12/2017 ರೊಳಗಾಗಿ ಸಾಲವನ್ನು ಮರು ಪಾವತಿಸದಿದ್ದಲ್ಲಿ ಅವರ ಸಾಲವನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲ. ನಿಗದಿತ ಅವಧಿ ಪೂರ್ಣಗೊಂಡು ಎರಡು ತಿಂಗಳುಗಳಾದರೂ ಸಹ ಸರ್ಕಾರಕ್ಕೆ ಮಾಹಿತಿಯನ್ನು ಸಂಗ್ರಹಿಸಲಿಕ್ಕೆ ಆಗಲಿಲ್ಲವೇ?

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ದಿನಾಂಕ 20/06/2017 ಕ್ಕೆ ಹೊರಬಾಕಿ ಇರುವ ಸಾಲವು ಸುಸ್ತಿ ಇದ್ದಲ್ಲಿ ದಿನಾಂಕ 20/06/2017 ಕ್ಕೆ ಬಾಕಿ ಇರುವ ಅಸಲು ಮತ್ತು ಬಡ್ಡಿ ಸೇರಿ 50,000/- ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವನ್ನು ಸಾಲ ಪಡೆದ ರೈತರು ದಿನಾಂಕ 31/12/2017 ರೊಳಗಾಗಿ ಮರುಪಾವತಿ ಮಾಡಿದ್ದಲ್ಲಿ, ಅಸಲು ಮತ್ತು ಬಡ್ಡಿ ಸೇರಿ 50,000/- ರೂಪಾಯಿಗಳ ವರೆಗಿನ ಸಾಲವು ಮನ್ನಾ ಆಗುತ್ತದೆ ಎಂಬುದಾಗಿ ತಿಳಿಸಲಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನಾನು ಅದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಯಾವುದೇ ಸದಸ್ಯರು ಒಂದಕ್ಕಿಂತ ಹೆಚ್ಚಿನ ಸಹಕಾರ ಸಂಸ್ಥೆ/ಸಹಕಾರ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರೆ ಒಂದು ಸಂಸ್ಥೆಯಿಂದ ಮಾತ್ರ ಸಾಲ ಮನ್ನಾ ಸೌಲಭ್ಯ ದೊರೆಯುತ್ತದೆ. ಸಾಲ ಮನ್ನಾ ಯೋಜನೆಯಡಿ 22,27,506 ಫಲಾನುಭವಿಗಳನ್ನು ಗುರುತಿಸಿದ್ದು, ಜಿಲ್ಲಾವಾರು ವಿವರಗಳು ನಮ್ಮ ಬಳಿ ಲಭ್ಯ ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರದ ಕ್ರಮ ಸಂಖ್ಯೆ 2(3) ರಲ್ಲಿನ ಅಂಶಗಳನ್ನು ಮಾನ್ಯ ಮಂತ್ರಿಗಳು ಓದಿದರು. ಅದರನ್ವಯ ದಿನಾಂಕ 31/12/2017 ರೊಳಗಾಗಿ ರೈತರು ಹೊರಬಾಕಿ ಇರುವ ಸುಸ್ತಿ ಸಾಲವನ್ನು ಮರುಪಾವತಿಸಿರಬೇಕು. ದಿನಾಂಕ 31/12/2017 ಮುಗಿದು ಈಗ ಎರಡು ತಿಂಗಳುಗಳು ಆಗುತ್ತಾ ಬಂದಿದೆ. ತಮ್ಮ ಬಳಿ ಇದರ ಮಾಹಿತಿ ಇದೆಯೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿನಾಂಕ 31/12/2017 ರೊಳಗಾಗಿ ರೈತರು ಸಾಲವನ್ನು ಮರು ಪಾವತಿಸದಿದ್ದರೆ, ಅಂತಹವರಿಗೆ ಸಾಲ ಮನ್ನಾ ಯೋಜನೆಯ ಫಲವನ್ನು ಕೊಡುತ್ತಿರೋ ಅಥವಾ ಇಲ್ಲವೋ? ಇಂತಹ ಎಷ್ಟು ಜನ ಇದ್ದಾರೆ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಸಾಲ ಮನ್ನಾ ಯೋಜನೆಯನ್ನು ಘೋಷಿಸಿದ್ದೇವೆ. ನಾವು 50,000/- ರೂಪಾಯಿಗಳ ಸಾಲ ಮನ್ನಾ ಯೋಜನೆಗೆ ಬದ್ಧರಾಗಿದ್ದೇವೆ. ರೈತರಿಗೆ ಮೆಚ್ಯೂರಿಟಿ ಅವಧಿ ಪೂರ್ಣಗೊಳ್ಳಬೇಕಲ್ಲವೇ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಿಗದಿತ ದಿನಾಂಕ 31/12/2017 ಈಗಾಗಲೇ ಮುಗಿದಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಿಗದಿತ ಅವಧಿಯಲ್ಲಿ ಸಾಲ ಮರು ಪಾವತಿ ಮಾಡಿದವರಿಗೆ ಸಾಲ ಮನ್ನಾ ಮಾಡಿದ್ದೇವೆ. ಇನ್ನೂ ಪಾವತಿಸದೇ ಇರುವವರ ಅವಧಿ ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹೇಳುವ ಪ್ರಕಾರ 22,27,506 ಫಲಾನುಭವಿಗಳನ್ನು ಈ ಯೋಜನೆಯಲ್ಲಿ ಗುರ್ತಿಸಲಾಗಿದೆ. ರೈತರಿಗೆ ದಿನಾಂಕ 31/12/2017 ರೊಳಗಾಗಿ ಸಾಲವನ್ನು ಮರು ಪಾವತಿಸಬೇಕೆಂದು ಹೇಳಲಾಗಿತ್ತು. ನಿಗದಿತ ಅವಧಿ ಪೂರ್ಣಗೊಂಡು ಈವರೆಗೆ ಒಂದೂವರೆ ತಿಂಗಳುಗಳಿಗಿಂತ ಹೆಚ್ಚಿನ ಅವಧಿಯಾಗಿದೆ. ತಮ್ಮ ಬಳಿ ಈ ಮಾಹಿತಿ ಇದೆಯೋ ಅಥವಾ ಇಲ್ಲವೋ? 22,27,506 ಫಲಾನುಭವಿಗಳ ಪೈಕಿ ಎಷ್ಟು ಜನ ಇನ್ನೂ ಸಾಲವನ್ನು ಮರು ಪಾವತಿಸಿಲ್ಲ? ನಿಗದಿತ ಅವಧಿಯಲ್ಲಿ ಸಾಲ ಮರು ಪಾವತಿಸದಿರುವವರಿಗೆ ಈ ಯೋಜನೆಯ ಸೌಲಭ್ಯವನ್ನು ನೀಡುತ್ತಿರೋ ಅಥವಾ ಇಲ್ಲವೋ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ದಯವಿಟ್ಟು ಕೇಳಿ. ದಿನಾಂಕ 20/06/2017 ಕ್ಕೆ ಹೊರ ಬಾಕಿ ಇರುವ ಎಲ್ಲಾ ರೈತರ 50,000/- ರೂಪಾಯಿಗಳಷ್ಟು ಇರುವ ಸಾಲವನ್ನು ಮನ್ನಾ ಮಾಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ 31/12/2017 ರೊಳಗಾಗಿ ಸಾಲವನ್ನು ಮರು ಪಾವತಿಸದೇ ಇರುವವರಿಗೂ ಸಹ ತಾವು ಸಾಲ ಮನ್ನಾ ಮಾಡುತ್ತೀರಾ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, I will get back to him on that point.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, 50,000/- ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತದ ಸಾಲ ಇದ್ದಲ್ಲಿ ಅದನ್ನು ಮರು ಪಾವತಿ ಮಾಡಬೇಕು ಎಂಬ ಷರತ್ತು ಇದೆ. ಇದನ್ನು ಪಾವತಿ ಮಾಡಿದ್ದಲ್ಲಿ ಸಾಲವನ್ನು ಮನ್ನಾ ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, 50,000/- ರೂಪಾಯಿಗಳಗಿಂತ ಹೆಚ್ಚಿನ ಮೊತ್ತದ ಸಾಲ ಇದ್ದಲ್ಲಿ ಅದನ್ನು ಮರು ಪಾವತಿ ಮಾಡಬೇಕು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, 50,000/- ರೂಪಾಯಿಗಳಗಿಂತ ಹೆಚ್ಚಿನ ಮೊತ್ತದ ಸಾಲವೇನಾದರೂ ಇದ್ದು, ಅದನ್ನು ಮರು ಪಾವತಿ ಮಾಡಿದ್ದಲ್ಲಿ ಮಾತ್ರ ಉಳಿದ 50,000 ರೂಪಾಯಿಗಳ ಮೊತ್ತದ ಸಾಲವನ್ನು ಮನ್ನಾ ಮಾಡಲಾಗುವುದು ಎಂದು ಸಚಿವರು ತಿಳಿಸುತ್ತಿದ್ದಾರೆ.

(ಮುಂದು)

(133) 1:20/20-12-2018 / ಸಿಎಸ್/ಕೆಎಸ್

**Sri D.K.SHIVAKUMAR:-** He (Capt. Ganesh Karnik) is asking a technical point. What he says is right. I will get back to him on that point. ಅವರು ಯಾವ ರೀತಿ ಒಪ್ಪಂದ ಮಾಡಿಕೊಂಡಿದ್ದಾರೆನ್ನುವುದನ್ನು ನೋಡಬೇಕಾಗುತ್ತದೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಯವರೆ, ದಿನಾಂಕ 31-12-2017ತನಕ ಎಷ್ಟು ರೈತರು ಹಣ ಮರುಪಾವತಿ ಮಾಡಿದ್ದಾರೆನ್ನುವ ಮಾಹಿತಿಯನ್ನು ಕೂಡ ನನಗೆ ಒದಗಿಸಿಕೊಡಬೇಕು.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವ ಮಾಹಿತಿಯನ್ನು ಒದಗಿಸಿಕೊಡಲಾಗುವುದು.

**ಪ್ರಶ್ನೆ ಸಂಖ್ಯೆ 9(65)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಕೆಲವೊಂದು ವಿಚಾರಗಳಿಗೆ ಕಾಲಾವಕಾಶ ನೀಡಬೇಕೆಂದು ಕೇಳಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದ ಅನುಬಂಧ 7ರಲ್ಲಿ ಒಂದೇ ಆಶ್ರಮಕ್ಕೆ 3 ಬಾರಿ 10 ಲಕ್ಷ ರೂಪಾಯಿಯ ಹಾಗೆ ರಂಬಾಪುರಿ ಆಶ್ರಮಕ್ಕೆ 30 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ. ಒಮ್ಮೊಮ್ಮೆ ದೇವಸ್ಥಾನಗಳಿಗೆ ರಿಪೇರಿ ಮತ್ತೊಂದಕ್ಕೆ ಹಣ ಕೇಳಿದರೂ ಸಹ ಸಿಗುವುದಿಲ್ಲ. ಅಲ್ಲಿ ಯಾವುದೇ ಆಶ್ರಮ ಇಲ್ಲ, ಶಾಲೆಗಳನ್ನು ನಡೆಸುತ್ತಿದ್ದಾರೆ, ಅದಕ್ಕೆ ಶಿಕ್ಷಣದ ಬಾಬ್ತಿನಿಂದ ಅನುದಾನ ನೀಡಿದರೆ ಅದಕ್ಕೆ ನಮ್ಮ ತಕರಾರೇನು ಇಲ್ಲ. ಆದರೆ ದೇವಾಲಯಗಳಿಗೆ ಸಲ್ಲಬೇಕಾದ ಹಣವನ್ನು ಶಿಕ್ಷಣ ಸಂಸ್ಥೆಗೆ ನೀಡಿರುವುದು ಸರಿಯಲ್ಲ. ಎಷ್ಟೋ ದೇವಾಲಯಗಳಲ್ಲಿನ ಪೂಜಾರಿಗಳಿಗೆ ಗೌರವಧನ ಸಿಗುತ್ತಿಲ್ಲ. ಯಾವುದೇ ಆದಾಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದೇ ಅವರು ಸೇವೆ ಮಾಡುತ್ತಿದ್ದಾರೆ. ದೇವಾಲಯಗಳಿಗೆ ಸಲ್ಲಬೇಕಾದ ಅನುದಾನದ ಸದ್ಬಳಕೆಯಾಗಬೇಕು. ಹಾಗೆಯೇ ಒಂದು ವಿಚಾರ ವೇದಿಕೆಗಾಗಿ ಹಾಲ್ ನಿರ್ಮಾಣ ಮಾಡುವುದಕ್ಕೆ ಅನುದಾನ ಪಡೆದಿದ್ದಾರೆ, ಅದು ಕೂಡ ದೇವಾಲಯದ ಕೆಲಸವಲ್ಲ. ಒಂದೊಂದು ಸಲ ಸಚಿವರ ಗಮನಕ್ಕೆ ಬಾರದ ಹಾಗೆ ಅಧಿಕಾರಿಗಳು ಆದೇಶಗಳನ್ನು ಮಾಡಿರುತ್ತಾರೆ. ದೇವಸ್ಥಾನದ ರಿಪೇರಿಗಳಿಗಾಗಿ 5 ಲಕ್ಷ ರೂಪಾಯಿಗಳನ್ನು ಕೇಳಿದ್ದರೆ ಸರ್ಕಾರ 2 ಲಕ್ಷ ರೂಪಾಯಿಗಳನ್ನು ನೀಡಿದೆ. ದಯಮಾಡಿ ಈ ರೀತಿಯ ತಪ್ಪುಗಳು ಸರ್ಕಾರದಿಂದ ಆಗಬಾರದು. ವಿಚಾರ ವೇದಿಕೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಅವರದ್ದೇ 'Head of Account' ನಿಂದ ಹಣ ಪಡೆಯಲಿ, ದೇವಾಲಯದ ಬಾಬ್ತಿನಿಂದ ಹಣ ಕೊಡಬಾರದು.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ**:- ಮಾನ್ಯ ಸಭಾಪತಿಯವರೆ, ಮಾನ್ಯ ರಮೇಶ್ ಬಾಬುರವರು ಪ್ರಸ್ತಾಪಿಸಿದ ವಿಚಾರದ ಬಗ್ಗೆ ಸದ್ಯಕ್ಕೆ ನನ್ನ ಬಳಿ ಮಾಹಿತಿಯಿಲ್ಲ. ಇದರ ಬಗ್ಗೆ ನಾನು ತನಿಖೆ ನಡೆಸುತ್ತೇನೆ. ಮತ್ತೇನಾದರೂ ವಿಚಾರಗಳಿದ್ದು, ಅದನ್ನು ನನ್ನ ಗಮನಕ್ಕೆ ತಂದರೆ ನಾನು ಅದನ್ನೆಲ್ಲ ಸರಿಪಡಿಸಿಕೊಡುತ್ತೇನೆ.

**ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

ಶ್ರೀ ಎಂ.ಆರ್.ಸೀತಾರಾಂ(**ಸಭಾನಾಯಕರು**):- ಮಾನ್ಯ ಸಭಾಪತಿಯವರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ 2ರಲ್ಲಿನ 6ನೇ ಪಟ್ಟಿಯ 110 ಪ್ರಶ್ನೆಗಳ ಪೈಕಿ 63 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು**:-ಮಂಡಿಸಲಾಯಿತು.

**<u>3. ಸಭಾಪತಿಯವರ ಅಪ್ಪಣೆ ಮೇರೆಗೆ</u>**

**ಅ)**ವಿಷಯ: ಬೆಳಗಾವಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳಿಗೆ ಕಳೆದ 4 ವರ್ಷಗಳಿಂದ ಪಿಂಚಣಿ ಬಿಡುಗಡೆ ಮಾಡದಿರುವ ಬಗ್ಗೆ.

**ಶ್ರೀ ಬಸವರಾಜ ಹೊರಟ್ಟಿ( ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ರಾಜ್ಯಸರ್ಕಾರದ ಎಲ್ಲಾ ಮಹಾನಗರ ಪಾಲಿಕೆಗಳಿಗೆ ಪ್ರತಿವರ್ಷ ಪಿಂಚಣಿ ಹಣವನ್ನು ತನ್ನ ಖಜಾನೆಯಿಂದ ನೀಡುತ್ತಿದೆ. ಆದರೆ ಬೆಳಗಾವಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳಿಗೆ ಮಾತ್ರ ಕಳೆದ ನಾಲ್ಕು ವರ್ಷಗಳಿಂದ ಪಿಂಚಣಿ ಹಣವನ್ನು ನೀಡಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರದಿಂದ ಬಿಡುಗಡೆ ಆಗಬೇಕಿರುವ 138 ಕೋಟಿ ಪಿಂಚಣಿ ಬಾಕಿ ಹಣದ ಸಂಬಂಧ ನೂರಾರು ಒತ್ತಾಯಗಳು ಹಾಗೂ ಹತ್ತಾರು ಪ್ರತಿಭಟನೆಗಳು ಅವಳಿ ನಗರಗಳಲ್ಲಿ ನಡೆದಿವೆ. ಹಲವಾರು ಮನವಿಗಳನ್ನು ಮುಖ್ಯ ಮಂತ್ರಿಯವರಿಗೆ ಸಲ್ಲಿಸಿದರೂ ಈ ಸಮಸ್ಯೆ ಕಗ್ಗಂಟಾಗಿ ಹಾಗೆಯೇ ಉಳಿದಿದೆ. ಕಳೆದ ಬಜೆಟ್ ಅಧಿವೇಶನದಲ್ಲಿ ಸರ್ಕಾರವೂ ಬಾಕಿ ಬಿಡುಗಡೆಯ ಬಗ್ಗೆ ಭರವಸೆ ನೀಡಿತ್ತು. ಆದರೆ ಅದು ಕೂಡ ಮರೀಚಿಕೆಯಾಗಿ ಉಳಿದಿದೆ. ಪಾಲಿಕೆಗೆ ಸರ್ಕಾರ ಈ ಹಣ ನೀಡದೆ ಇರುವುದರಿಂದ ಪ್ರತಿವರ್ಷ 36 ಕೋಟಿ ರೂಪಾಯಿಗಳಷ್ಟು ಹೊರೆ ಬೀಳುತ್ತಿದೆ. ವಾರ್ಷಿಕ ಎಸ್‌ಎಫ್‌ಸಿ(ಸಾಮಾನ್ಯ ಅನುದಾನ) ಹಣದಲ್ಲಿ ನಿವೃತ್ತರಿಗೆ ಪಾಲಿಕೆ ಪಿಂಚಣಿ ನೀಡುತ್ತಾ ಬಂದಿದೆ. ಹೀಗಾಗಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುತ್ತವೆ.

ಹುಬ್ಬಳ್ಳಿ ನಗರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ನೀಡಿದಾಗ ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರು ಹಣ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಇದು ಪತ್ರಿಕೆಗಳಲ್ಲಿ ಕೂಡಾ ಪ್ರಕಟವಾಗಿತ್ತು. ಆದರೆ ಇಲ್ಲಿಯವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ 15 ದಿನಗಳಿಗೊಮ್ಮೆ ಕುಡಿಯುವ ನೀರು ಬಿಡಲಾಗುತ್ತಿದೆ. ನಗರದಲ್ಲಿ ಸ್ವಚ್ಛತೆ ಇಲ್ಲ, ರಸ್ತೆಗಳು ಎಲ್ಲಾ ಹಾಳಾಗಿವೆ. ಅಲ್ಲಿರುವ ನೌಕರರಿಗೆ ವೇತನ ನೀಡಲು ಹಣ ಇರುವುದಿಲ್ಲ. ಇದರ ಸಂಬಂಧ ನಡೆಯುವ ಮುಷ್ಕರಗಳಿಂದ ಆಡಳಿತ ನಡೆಸಲು ತುಂಬಾ ತೊಂದರೆಯಾಗುತ್ತದೆ. ಈ ಕಾರಣಗಳಿಂದ ಹುಬ್ಬಳ್ಳಿ-ಧಾರವಾಡ ನಗರದಲ್ಲಿನ ಜನರನ್ನು 2ನೇ ದರ್ಜೆಯ ನಾಗರೀಕರಂತೆ ಕಾಣುತ್ತಿರುವುದು ಕಂಡುಬರುತ್ತಿದೆ. ಆದ್ದರಿಂದ ಈ ವಿಚಾರವನ್ನು ಸರ್ಕಾರವೂ ರಾಜಕೀಯವಾಗಿ ನೋಡದೇ ಅಭಿವೃದ್ಧಿಯ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗಳು ಇತ್ತೀಚೆಗೆ ಪಿಂಚಣಿ ಬಾಕಿ ಹಣ 138 ಕೋಟಿ ರೂಪಾಯಿಗಳ ಬಿಡುಗಡೆಗೆ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ಮೊಕದ್ದಮೆಯನ್ನು ಹೂಡಲು ಪಾಲಿಕೆಯ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿರುವುದು ತಿಳಿದುಬಂದಿರುತ್ತದೆ. ದಿನಾಂಕ 1-11-2017ರ ಬುಧವಾರದಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾಗಿರುತ್ತದೆ. ಸ್ಥಳೀಯ ಆಡಳಿತ ಸಂಸ್ಥೆ ಮತ್ತು ಸರ್ಕಾರದ ನಡುವೆ ನೇರ ಸಂಘರ್ಷ ಉಂಟಾಗಿದ್ದು ಇದರಿಂದ ಒಂದು ಬಗೆಯ ಬಿಕ್ಕಟ್ಟು ಉಂಟಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮ ನಿಜಕ್ಕೂ ಅಘಾತಕಾರಿಯಾಗಿದೆ. ಸರ್ಕಾರ ಈ ಕೂಡಲೇ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರದಿಂದ ಬಿಡುಗಡೆ ಆಗಬೇಕಾಗಿರುವ 138 ಕೋಟಿ ರೂಪಾಯಿಗಳ ಬಾಕಿ ಪಿಂಚಣಿ ಹಣವನ್ನು ತುರ್ತಾಗಿ ಬಿಡುಗಡೆ ಮಾಡಿ, ಈ ಬಿಕ್ಕಟ್ಟನ್ನು ಪರಿಹರಿಸಿ, ಅವಳಿ ನಗರದ ಅಭಿವೃದ್ಧಿಗೆ ಸರ್ಕಾರ ಸ್ಪಂದಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಶೂನ್ಯವೇಳೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆ ಮಾಡಬಾರದೆಂದಿದ್ದರೂ ಸಹ ಸರ್ಕಾರ ಪಿಂಚಣಿದಾರರಿಗೆ 138 ಕೋಟಿ ಬಾಕಿ ಹಣ ನೀಡಿ, ಪಾಲಿಕೆಗಳು ನ್ಯಾಯಾಲಯಕ್ಕೆ ಹೋಗದಂತೆ ತಡೆಯಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಈ ಅಧಿವೇಶನ ಮುಗಿಯುವುದರೊಳಗೆ ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಲಾಗುವುದು.

ಆ)ವಿಷಯ: ರಾಜ್ಯದ 9 ಜಿಲ್ಲೆಗಳಲ್ಲಿ ತೊಗರಿ ಬೇಳೆಯನ್ನು ಖರೀದಿಸಿ
ರೈತರಿಗೆ ಹಣ ಪಾವತಿಯಾಗದಿರುವ ಬಗ್ಗೆ.

**ಶ್ರೀ ಅಮರನಾಥ ಪಾಟೀಲ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದ 9 ಜಿಲ್ಲೆಗಳಲ್ಲಿ ತೊಗರಿ ಬೇಳೆಯನ್ನು ಖರೀದಿಸಿ ರೈತರಿಗೆ ಹಣ ಪಾವತಿಯಾಗದಿರುವ ಬಗ್ಗೆ ಕಲಬುರಗಿ ಜಿಲ್ಲೆ ಸೇರಿದಂತೆ 9 ಜಿಲ್ಲೆಗಳಲ್ಲಿ 3,15,468 ರೈತರು ತಮ್ಮ ಹೆಸರು ನೋಂದಾಯಿಸಿದ್ದು(ಕಲಬುರಗಿ, ಬೆಳಗಾವಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳು) ಈ ಪೈಕಿ 91 ಸಾವಿರ ರೈತರಿಂದ ಮಾತ್ರ ಪ್ರತಿ ಕ್ವಿಂಟಾಲ್‌ಗೆ ರೂ.6 ಸಾವಿರದಂತೆ ಒಟ್ಟು 16.50 ಲಕ್ಷ ಕ್ವಿಂಟಲ್ ತೊಗರಿ ಖರೀದಿಸಿದ್ದು, ತೊಗರಿ ಖರೀದಿಸಿ ಸುಮಾರು ಒಂದೂವರೆ ತಿಂಗಳಾದರೂ ಕೂಡ ರಾಜ್ಯದ 9 ಜಿಲ್ಲೆಗಳ ರೈತರಿಗೆ ನೀಡಬೇಕಿದ್ದ ರೂ990 ಕೋಟಿ ಹಣ ಇನ್ನೂ ರೈತರ ಕೈ ಸೇರಿರುವುದಿಲ್ಲ.

ಕಲಬುರಗಿ ಜಿಲ್ಲೆಯೊಂದರಲ್ಲೇ 6.69 ಲಕ್ಷ ಕ್ವಿಂಟಾಲ್ ತೊಗರಿಯನ್ನು 39,447 ರೈತರಿಂದ ಖರೀದಿಸಲಾಗಿದ್ದು ರೂ 401 ಕೋಟಿ ಹಣ ಪಾವತಿಸಬೇಕಾಗಿದೆ. ಈ ಕುರಿತು ಕಲಬುರಗಿ ಜಿಲ್ಲೆಯ ಜಿಲ್ಲಾಧಿಕಾರಿಗಳು ನಫೇಡ್‌ನಿಂದ ಹಣವೇ ಬಿಡುಗಡೆಯಾಗಿಲ್ಲ ಎಂದು ದೃಢೀಕರಿಸಿರುತ್ತಾರೆ. ಆದ್ದರಿಂದ ಈ ಕೂಡಲೇ ರೈತರಿಗೆ ಹಣ ಪಾವತಿಸಲು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಹಾಗೆಯೇ ಕನಿಷ್ಠ ಪ್ರತಿ ರೈತರಿಂದ 20 ಕ್ವಿಂಟಲ್ ತೊಗರಿ ಬೆಂಬಲ ಬೆಲೆಯಲ್ಲಿ ಸರ್ಕಾರ ಖರೀದಿ ಮಾಡಬಹುದು ಎಂದು ಕಾಯುತ್ತಿದ್ದ ರೈತರಿಗೆ ತೊಗರಿ ಖರೀದಿಯನ್ನು ಪ್ರತಿ ರೈತನಿಂದ ಕೇವಲ 10 ಕ್ವಿಂಟಲ್ ಮಾತ್ರ ಮಿತಿಗೊಳಿಸಿ ಸಹಕಾರ ಇಲಾಖೆಯ ಉಪಕಾರ್ಯದರ್ಶಿ ರವರು ಆದೇಶ ಹೊರಡಿಸಿರುತ್ತಾರೆ. ಹೀಗಾಗಿ ಮೊದಲೇ ತಮ್ಮ ತೊಗರಿ ಬೆಳೆಗೆ ಸೂಕ್ತ ಬೆಲೆ ಸಿಗದೇ ಕಂಗಾಲಾಗಿರುವ ರೈತರ ಮೇಲೆ ಸರ್ಕಾರ ಬರೆ ಎಳೆಯಲು ಮುಂದಾಗಿದೆ.

ಎರಡು ದಿನಗಳ ಹಿಂದೆ ಕಲಬುರಗಿ ಜಿಲ್ಲಾಧಿಕಾರಿಗಳ ಪ್ರಕಟಣೆಯಂತೆ ಫೆಬ್ರವರಿ 14ರಿಂದ ತೊಗರಿ ಖರೀದಿ ಕೇಂದ್ರಗಳು ಪುನರಾರಂಭವಾಗಿದ್ದು, ಪ್ರತಿ ರೈತನಿಂದ ಕೇವಲ 10 ಕ್ವಿಂಟಾಲ್ ತೊಗರಿ ಖರೀದಿ ಮಾಡಲು ಮುಂದಾಗಿರುವುದು ರೈತನ ಮೂಗಿಗೆ ತುಪ್ಪ ಸವರಿದಂತಾಗಿದೆ. ಈ ಹಿಂದೆ ಪ್ರತಿ ರೈತರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

20 ಕ್ವಿಂಟಲ್ ಖರೀದಿ ಮಾಡಿದ್ದು, ಈ ಮುಂದೆ ಪ್ರತಿ ರೈತರಿಂದ 10 ಕ್ವಿಂಟಲ್ ಖರೀದಿ ಮಾಡುವ ನಿರ್ಣಯ ಒಂದು ದೌರ್ಭಾಗ್ಯವೇ ಸರಿ. ಜಿಲ್ಲೆಯ ಇತಿಹಾಸದಲ್ಲಿ 140 ಖರೀದಿ ಕೇಂದ್ರ ಸ್ಥಾಪನೆ ಮಾಡುವುದರ ಮೂಲಕ ತೊಗರಿ ಖಣಜದ ರೈತರಲ್ಲಿ ಭರವಸೆ ಮೂಡಿಸಿದ್ದ ಸರ್ಕಾರ ಈಗ ಉಲ್ಟಾ ಹೊಡೆದಿರುವುದು ರೈತರಿಗೆ ನುಂಗಲಾಗದ ತುತ್ತಾಗಿಸಿದೆ.

ಆದ್ದರಿಂದ ತೊಗರಿ ಮಾರಾಟಕ್ಕಾಗಿ ತಮ್ಮ ಹೆಸರು ನೊಂದಾಯಿಸಿದ 2.15 ಲಕ್ಷ ರೈತರು ಬಾಕಿ ಉಳಿದಿದ್ದು, ಆತಂಕದಲ್ಲಿರುವ ರೈತರ ನೆರವಿಗೆ ಸರ್ಕಾರ ತನ್ನ ಅಭಯ ಹಸ್ತ ನೀಡಿ ಈ ಹಿಂದೆ 20 ಕ್ವಿಂಟಲ್ ಪ್ರತಿ ರೈತರಿಂದ ಖರೀದಿಸಿದ ಪ್ರಕಾರ ರೈತರು ಬೆಳೆದ ತೊಗರಿಯನ್ನು ಖರೀದಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಕೃಷಿ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಈ ಅಧಿವೇಶನ ಮುಗಿಯುವುದರೊಳಗೆ ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಲಾಗುವುದು.

. ...ಮುಂದು

(134)/20-2-2018/ಎಲ್ಎಂ/ಕೆಎಸ್/1-30

ಇ) ವಿಷಯ: **ಅಡಕೆ ಕ್ಯಾನ್ಸರ್‌ಕಾರಕ ಎಂಬ ಆರೋಪದಡಿ ನಿಷೇಧ ಭೀತಿ ಕುರಿತು ಪ್ರಕಟಗೊಂಡ ವರದಿ ಬಗ್ಗೆ.**

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):- ಮಾನ್ಯ ಸಭಾಪತಿಗಳೆ, ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ " ಅಡಕೆ ಕ್ಯಾನ್ಸರ್‌ಕಾರಕ ಎಂಬ ಆರೋಪದಡಿ ನಿಷೇಧದ ಭೀತಿ- ಸಂಸತ್ತಿನಲ್ಲಿ ಧ್ವನಿ ಎತ್ತದ ರಾಜ್ಯದ ಸಂಸದರು ಅಡಿಕೆ ಬೆಳೆಗಾರರಲ್ಲಿ ಮತ್ತೆ ಆತಂಕ" ಎಂಬ ವರದಿಯು ನಿನ್ನೆಯ ದಿನಪತ್ರಿಕೆ ಒಂದರಲ್ಲಿ ದೊಡ್ಡ ಸುದ್ದಿಯಾಗಿ ಪ್ರಕಟಗೊಂಡಿದ್ದು, ಈ ಸುದ್ದಿಯು ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾದ ಅಡಕೆಗೆ ಮತ್ತೊಂದು ಸಂಕಟ ಎದುರಾಗಿದೆ. ಔಷಧಿಯ ಗುಣಗಳನ್ನು ಹೊಂದಿರುವ ಅಡಕೆ ಕ್ಯಾನ್ಸರ್‌ಕಾರಕ ಎಂಬ ಆರೋಪ ಸಂಸತ್ತಿನಲ್ಲಿ ಮತ್ತೊಮ್ಮೆ ಪ್ರತಿಧ್ವನಿಸಿದೆ. ಅಧಿಕಾರಿಗಳು ಕೊಟ್ಟ ತಪ್ಪು ಮಾಹಿತಿಯನ್ನೇ ನಂಬಿ ಕೇಂದ್ರ ಸರ್ಕಾರ ಎರಡು ತಿಂಗಳ ಹಿಂದೆಯೇ ಈ ವಿಚಾರ ಪ್ರಸ್ತಾಪಿಸಿದ್ದರೂ ರೈತರ ಬೆನ್ನಿಗೆ ನಿಲ್ಲಬೇಕಾಗಿದ್ದ ರಾಜ್ಯದ ಸಂಸದರು ಈವರೆವಿಗೂ ತುಟಿ ಬಿಚ್ಚದಿರುವುದು ಅಚ್ಚರಿಯನ್ನು ಮೂಡಿಸಿದೆ.**

**ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು 22.12.2017ರಂದು ನೀಡಿದ ಲಿಖಿತ ಉತ್ತರದಲ್ಲಿ ಅಡಕೆ ಕ್ಯಾನ್ಸರ್‌ಕಾರಕ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬಿಹಾರದ ಶಿವಾನ್ ಸಂಸದರ ಲೋಕಸಭೆಯಲ್ಲಿ ಚುಕ್ಕೆಗುರುತ್ತಿಲ್ಲದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು ಸತತವಾಗಿ ಅಡಕೆ ಬಳಸುವುದು ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಉರಿಪೂರಿತ ದವಡೆಗಳಿಗೆ ಹಾನಿ ಉಂಟು ಮಾಡುತ್ತದೆ. ಇದರಲ್ಲಿ ಕ್ಯಾನ್ಸರ್‌ಕಾರಕ**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಅಂಶಗಳವೆ, ಅಲ್ಲದೆ ಅಡಕೆಯಿಂದ ತಯಾರಾಗುವ ಸುಗಂಧಪೂರಿತ ಅಡಕೆ ಉತ್ಪನ್ನಗಳ ತಯಾರಿ ಹಾಗೂ ಮಾರಾಟ ನಿಷೇಧಿಸುವಂತೆ ಎಲ್ಲಾ ರಾಜ್ಯಗಳಗೂ ಸೂಚನೆ ನೀಡಲಾಗಿದೆ. ಗುಟ್ಕಾ ಉತ್ಪಾದನೆ ಮತ್ತು ಮಾರಾಟವನ್ನು ನಿಯಂತ್ರಿಸುವ ಸಂಬಂಧ ಆಹಾರ ಸುರಕ್ಷತಾ ಮಾನದಂಡವನ್ನು ಅನುಷ್ಠಾನಗೊಳಸುವಂತೆ ಎಲ್ಲಾ ರಾಜ್ಯ ಸರ್ಕಾರಗಳಗೆ ಸೂಚಿಸಲಾಗಿದೆ ಎಂದು ಕೇಂದ್ರ ಸಚಿವರ ಉತ್ತರದಲ್ಲಿ ಉಲ್ಲೇಖವಾಗಿದೆ.**

**ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರವು ಬೆಳೆ ಹಾನಿಗೆ ಪರಿಹಾರ ನೀಡುವುದರ ಜೊತೆಗೆ ಅಡಕೆ ರೋಗ ತಗುಲಿ ಆದ ನಷ್ಟಕ್ಕೆ ಅಡಕೆ ಬೆಳೆಗಾರರಿಗೆ ರಾಜ್ಯ ಸರ್ಕಾರವು ಕಳೆದ ಬಾರಿ 108.79 ಕೋಟಿ ರೂ.ಗಳ ಪರಿಹಾರ ಬಿಡುಗಡೆ ಮಾಡಿರುತ್ತದೆ. ಅಲ್ಲದೆ ಅಡಕೆ ಬೆಲೆ ಧಾರಣೆ ಕುಸಿದಾಗ ಅಡಕೆ ಬೆಳೆಗಾರರ ರಕ್ಷಣೆಗೆ ಅಡಕೆ ಬೆಳೆಗಾರರ ಮಂಡಳ ರಚಿಸಬೇಕೆಂಬ ಬೇಡಿಕೆಯನ್ನು ಪರಿಗಣಿಸಿ ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ತಜ್ಞರ ವರದಿಯನ್ನು ತರಿಸಿಕೊಂಡಿದೆ.**

**ಭಾರತದಲ್ಲಿ ಅಡಕೆಯನ್ನು ಒಟ್ಟು ಅಡಕೆ ಪ್ರದೇಶದ ಸುಮಾರು 4.50 ಲಕ್ಷ ಹೆಕ್ಟೇರು ಪ್ರದೇಶದಲ್ಲಿ (ಅಂದರೆ ವಿಶ್ವದ 49% ಪ್ರದೇಶದಲ್ಲಿ ಹಾಗೂ 51% ಉತ್ಪಾದನೆ) ಕೃಷಿ ಮಾಡುವ ಮೂಲಕ ವಿಶ್ವದಲ್ಲಿಯೇ ಅತೀ ದೊಡ್ಡ ಅಡಕೆ ಉತ್ಪಾದಿಸುವ ರಾಷ್ಟ್ರವಾಗಿದೆ. ಕರ್ನಾಟಕ ರಾಜ್ಯವು 2.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭಾರತದ ಒಟ್ಟು 49% ಬೆಳೆಯಲಾಗುತ್ತಿದ್ದು, 4.58 ಲಕ್ಷ ಟನ್ ಉತ್ಪಾದನೆ ಮಾಡುವುದರೊಂದಿಗೆ ರಾಷ್ಟ್ರದಲ್ಲಿಯೇ ಅಗ್ರಸ್ಥಾನದಲ್ಲಿದೆ. ಕರ್ನಾಟಕ ರಾಜ್ಯದ 30 ಜಿಲ್ಲೆಗಳ ಪೈಕಿ ಸುಮಾರು 21 ಜಿಲ್ಲೆಗಳಲ್ಲಿ ಅಡಕೆ ಬೆಳೆಯನ್ನು ಬೆಳೆಸಲಾಗುತ್ತಿದೆ. ಅಡಕೆ ಬೆಳೆಯುವ 81%ಕ್ಕೂ ಹೆಚ್ಚು ಪ್ರದೇಶವು ಸಣ್ಣ ಮತ್ತು ಅತೀ ಸಣ್ಣ ಹಿಡುವಳ ರೈತರಿಂದ ಕೂಡಿದೆ.**

**1991ರಿಂದ ಕಳೆದ 20 ವರ್ಷಗಳಲ್ಲಿ ಭಾರತದಿಂದ ಅಡಕೆ ಉತ್ಪನ್ನಗಳ ರಫ್ತು ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಪ್ರಸ್ತುತ ವಿಶ್ವದ ನಲವತ್ತಕ್ಕೂ ಹೆಚ್ಚು ದೇಶಗಳಗೆ ಭಾರತ ಅಡಕೆ ಉತ್ಪಾದನೆಗಳನ್ನು ರಫ್ತು ಮಾಡಲಾಗುತ್ತಿದೆ. ಆದುದರಿಂದ ರಾಜ್ಯದ 23 ಜಿಲ್ಲೆಗಳಲ್ಲಿ ವಾಣಿಜ್ಯ ಬೆಳೆಯಾದ ಅಡಕೆ ಬಗ್ಗೆ ಉಂಟಾಗಿರುವ ಆತಂಕವನ್ನು ದೂರ ಮಾಡದೇ ಇದ್ದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಮತ್ತು ಅಡಕೆ ಬೆಳೆಗಾರರ ಮೇಲೆ ದೊಡ್ಡ ಪ್ರಮಾಣದ ಹೊಡೆತ ಬೀಳಲಿದೆ. ಆದ್ದರಿಂದ ಈ ವಿಷಯವನ್ನು ಅತ್ಯಂತ ಪ್ರಮುಖ ವಿಷಯವೆಂದು ಪರಿಗಣಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುವ ಮೂಲಕ ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕಾದದು** ಅತ್ಯಂತ ಮಹತ್ವವುಳ್ಳ ವಿಚಾರವಾಗಿದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು):** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಐವನ ಡಿ'ಸೋಜಾರವರು ಹೇಳರುವ ವಿಚಾರದ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿದ್ದೇವೆ. ಮತ್ತು ಇದರ ಬಗ್ಗೆ ಮೂರು-ನಾಲ್ಕು ಸಾರಿ ಮೀಟಿಂಗ್ ಮಾಡಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡಲಾಗಿದೆ. ಹಿಂದೆ ಅಡಕೆ ಬೆಲೆ ಕುಸಿದಾಗ ಪ್ರೋತ್ಸಾಹಧನ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡಲಾಗಿತ್ತು. ಅದಾದ ನಂತರ ಮೊನ್ನೆ ಪತ್ರಿಕೆಯಲ್ಲಿ ಈ ವಿಚಾರ ಬಂದಿರುವುದು ನಿಜ. ಇದರ ಬಗ್ಗೆ ಕೇಂದ್ರ ಸರ್ಕಾರ ಇನ್ನೊಮ್ಮೆ ಲ್ಯಾಬೋರೇಟರಿ ವರದಿಯನ್ನು ತೆಗೆದುಕೊಂಡು ಮರುಪರಿಶೀಲನೆ ಮಾಡುತ್ತೇವೆ ಎಂದು ಹೇಳದ್ದಾರೆ. ಇದರ ಬಗ್ಗೆ ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಿ ಕಳುಹಿಸಿದ್ದೇವೆ. ಅಡಕೆ ಬೆಳೆಗಾರರ ಮಂಡಳಿಯನ್ನು ರಚನೆ ಮಾಡಿದ್ದೇವೆ ಮತ್ತು ವಿಶ್ವವಿದ್ಯಾನಿಲಯದಿಂದಲೂ ವರದಿಯನ್ನು ತೆಗೆದುಕೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆ.

(ಈ) ವಿಷಯ: **ಗಿರಿಜನ ಆಶ್ರಮ ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದ ಶಿಕ್ಷಕರ ಬಗ್ಗೆ.**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 21 ಜಿಲ್ಲೆಗಳಲ್ಲಿ ಸುಮಾರು 118 ಗಿರಿಜನ ಆಶ್ರಮ ಶಾಲೆಗಳು ನಡೆಯುತ್ತಿದ್ದು, 14,035 ಗಿರಿಜನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಂತಹ ಶಾಲೆಗಳಲ್ಲಿ ಪವಕನಿ:ಸಿಬ್ಬಂದಿ:ಸಿ.ಆರ್.14/2000-01 ರಿಂದ ಸುಮಾರು 390 ಶಿಕ್ಷಕ/ಶಿಕ್ಷಕಿಯರು ಕಾಡುಗಳ ಮಧ್ಯೆ ಇರುವ ಇಂತಹ ಶಾಲೆಗಳಲ್ಲಿ ಕಡಿಮೆ ವೇತನಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟು ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರ ಇವರ ಸೇವೆಯನ್ನು ಪರಿಗಣಿಸದೆ 493 ಶಿಕ್ಷಕ ಹುದ್ದೆಗಳನ್ನು ಕೆ.ಪಿ.ಎಸ್.ಸಿ ಮುಖಾಂತರ ತುಂಬಿಕೊಳ್ಳಲು ಮುಂದಾಗಿದೆ. ಈಗ ನೇಮಕ ಮಾಡಿಕೊಳ್ಳುತ್ತಿರುವ 493 ಶಿಕ್ಷಕರು ನೇಮಕವಾಗಿ ಬಂದರೆ ಗುತ್ತಿಗೆ ಆಧಾರದ ಮೇಲೆ ಸುಮಾರು 15 ರಿಂದ 16 ವರ್ಷಗಳ ಧೀರ್ಘ ಸೇವೆ ಸಲ್ಲಿಸಿರುವ ಶಿಕ್ಷಕರು ತೊಂದರೆಗೆ ಒಳಗಾಗುತ್ತಾರೆ. ಅಲ್ಲದೆ ಕೆ.ಪಿ.ಎಸ್.ಸಿ ನೇಮಕಾತಿಯಲ್ಲಿ ಗುತ್ತಿಗೆ ಶಿಕ್ಷಕರಿಗೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ಮಾಡದಿರುವುದು ದುರಂತವೇ ಸರಿ. ಹಾಗಾಗಿ ಇವರು ಕೆ.ಪಿ.ಎಸ್.ಸಿ ಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ.

ಈ ಹಿಂದೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಈ ಶಿಕ್ಷಕರು ಅರ್ಜಿ ಸಲ್ಲಿಸಿದ್ದು ( ಅರ್ಜಿ ಸಂಖ್ಯೆ: 892-1019/2014) ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡುವಂತೆ ನ್ಯಾಯಾಲಯ ಆದೇಶಿಸಿದೆ. ಈ ಆದೇಶವನ್ನು ಪಾಲಿಸಲು 06 ತಿಂಗಳ ಕಾಲಾವಕಾಶವಿರುತ್ತದೆ. ಅದರ ಒಳಗೆ ಹೊಸ ನೇಮಕಾತಿಯನ್ನು ಮಾಡಿಕೊಂಡು ಈ ಶಿಕ್ಷಕರನ್ನು ಹೊರ ಹಾಕಿದರೆ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದಂತೆ ಆಗುತ್ತದೆ. ಇಂತಹ ಆಶ್ರಮ ಶಾಲೆಗಳಿಗೆ ಹೊಸ ನೇಮಕಾತಿ ಮಾಡಿಕೊಳ್ಳಲು ಸಿ ಆಂಡ್ ಆರ್ ಇಲ್ಲದಿದ್ದಾಗ ಈ ಶಾಲೆಗಳು ಕಾಡು ಪ್ರದೇಶದಲ್ಲಿ ಇರುವುದರಿಂದ ಸರ್ಕಾರಿ ಶಾಲಾ ಶಿಕ್ಷಕರು ನಿಯೋಜನೆ ಮೇಲೆ ಈ ಶಾಲೆಗಳಿಗೆ ಬರದೇ ಇದ್ದಾಗ ಗುತ್ತಿಗೆ ಆಧಾರದ ಶಿಕ್ಷಕರು ಈ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸದರಿಯವರು ಈ ಹುದ್ದೆಗಳಿಗೆ ಅರ್ಹತೆಯನ್ನು ಹೊಂದಿದ್ದು, ವಯೋಮಿತಿಯನ್ನು ಮೀರುತ್ತಿರುವುದರಿಂದ ಇವರಿಗೆ ಬೇರೆ ಕಡೆ ಕೆಲಸ ಸಿಗದೆ ಅತಂತ್ರವಾಗಿರುತ್ತಾರೆ.

ಆದ್ದರಿಂದ ಸದರಿ ಶಿಕ್ಷಕರು ತಮ್ಮ ಹುದ್ದೆಯ ಖಾಯಮ್ಮಾತಿಗಾಗಿ ದಿನಾಂಕ: 19-2-2018ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಆದ್ದರಿಂದ ಮಾನ್ಯ ಸಮಾಜ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲ್ಯಾಣ ಸಚಿವರು ಈ ಬಗ್ಗೆ ಗಮನಹರಿಸಿ ಈ ಗುತ್ತಿಗೆ ಆಧಾರದ ಶಿಕ್ಷಕರಿಗೆ ಸಾಮಾಜಿಕ ನ್ಯಾಯದಡಿ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಈ ಮೂಲಕ ಸಚಿವರನ್ನು ಆಗ್ರಹಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಈ ವಿಚಾರವನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತಂದು ಆದಷ್ಟು ಶೀಘ್ರವಾಗಿ ಉತ್ತರವನ್ನು ಕೊಡಿಸಲಾಗುತ್ತದೆ.

ಉ) ವಿಷಯ: **ಪದವಿ ಪೂರ್ವ ಕಾಲೇಜಿನ ಸಿಬ್ಬಂದಿಗಳಿಗೆ 15 ದಿನ ರಜೆ ಕಡಿತ ಮತ್ತು ಮೇ 15ರಿಂದ ಶಾಲೆ ಪ್ರಾರಂಭ ಕುರಿತು.**

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):-**ಮಾನ್ಯ ಸಭಾಪತಿಗಳೆ, "ಪದವಿ ಪೂರ್ವ ಕಾಲೇಜಿನ ಸಿಬ್ಬಂದಿಗಳಿಗೆ ಬೇಸಿಗೆ ರಜೆ 15ದಿನ ಕಡಿತ, ಮೇ 15ರಿಂದಲೇ ತರಗತಿ ಆರಂಭ" ಎಂಬ ವಿಷಯ ಇಂದಿನ ವಿಜಯ ಕರ್ನಾಟಕ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿರುವುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಮಂಡಳಿ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದಿದೆ. 15 ದಿನ ರಜೆ ಅವಧಿ ಕಡಿತಗೊಳಿಸಬೇಕೆಂಬ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ವಾರದೊಳಗೆ ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಈ ಹಿಂದೆ ಅಕ್ಟೋಬರ್ ಒಂದು ತಿಂಗಳ ರಜೆಯಲ್ಲಿ 5 ದಿನ ಕಡಿತಗೊಳಿಸಿದ್ದು, ಪುನ: ಬೇಸಿಗೆ ರಜೆಯಲ್ಲಿ 15 ದಿನಗಳನ್ನು ಕಡಿತಗೊಳಿಸಲಾಗುವುದು ಎಂಬ ವಿಷಯ ಪತ್ರಿಕೆಯಲ್ಲಿ ಪ್ರಕಟವಾಗಿರುವುದರಿಂದ ರಾಜ್ಯದ ಸುಮಾರು 25,000 ಉಪನ್ಯಾಸಕರುಗಳು ಆತಂಕಕ್ಕೆ ಒಳಗಾಗಿದ್ದಾರೆ.

ಸದ್ಯದ ಅಕ್ಟೋಬರ್ ತಿಂಗಳ ರಜೆಯಲ್ಲಿ ವಿಶ್ವಾಸ ಕಿರಣ ಯೋಜನೆಯಡಿ ಎಸ್.ಸಿ ಎಸ್.ಟಿ ವಿದ್ಯಾರ್ಥಿಗಳಿಗೆ 10 ದಿನಗಳ ವಿಶೇಷ ತರಬೇತಿಗಳನ್ನು ನಡೆಸಿ ಭೋಧನೆಯನ್ನು ಮಾಡಲಾಗುತ್ತಿದ್ದು, ಇದರ ಜೊತೆಗೆ ಪ್ರತಿ ರವಿವಾರ ಇಂಗ್ಲೀಷ್ ವಿಷಯದ ಬೋಧನೆ ಕೂಡ ಮಾಡಲಾಗುತ್ತಿದೆ. ಅದರಂತೆ 2 ತಿಂಗಳ ಬೇಸಿಗೆ ರಜೆಯಲ್ಲಿ ಕನಿಷ್ಠ 15 ದಿನಗಳ ವಾರ್ಷಿಕ ಪರೀಕ್ಷಾ ಕಾರ್ಯ ಹಾಗೂ 15 ದಿನಗಳ ಮೌಲ್ಯಮಾಪನ ಕಾರ್ಯ ಮಾಡುತ್ತಿರುವುದು ಸರ್ಕಾರಕ್ಕೆ ತಿಳಿದ ಸಂಗತಿ. ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಪದವಿ ಪೂರ್ವ ಇಲಾಖೆ ರಜೆ ದಿನ ಕಡಿತಗೊಳಿಸಿ ಆದೇಶ ಹೊರಡಿಸುವ ಪೂರ್ವದಲ್ಲಿ ಶಿಕ್ಷಣ ತಜ್ಞರ, ಪ್ರಾಂಶುಪಾಲರ ಹಾಗೂ ಉಪನ್ಯಾಸಕರ ಜೊತೆ ಚರ್ಚೆ ನಡೆಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ? ಈ ವಿಷಯ ಕುರಿತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಸ್ಪಷ್ಟವಾದ ನಿಲುವನ್ನು ಪ್ರಕಟಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿಕೊಡುತ್ತೇನೆ.

4. <u>ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ</u>

**ಅ) ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯು ಪ್ರಶಸ್ತಿಯ ಜೊತೆಗೆ**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ನೀಡುವ ನಟರಾಜನ ವಿಗ್ರಹ ಮಾದರಿಯನ್ನು ಬದಲಾಯಿಸಿರುವ ಬಗ್ಗೆ.**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ: 6-2-2018 ರಂದು ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಂಡಿಸುತ್ತಿದ್ದೇನೆ.

( ಹೇಳಿಕೆಯನ್ನು ಲಗತ್ತಿಸಲಾಗಿದೆ)

ಆ) **ವನ್ಯಜೀವಿಗಳ ರಕ್ಷಣೆ ಕುರಿತು.**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ: 8-2-2018ರಂದು ಮಾನ್ಯ ಸದಸ್ಯರಾದ ಸಂದೇಶ ನಾಗರಾಜ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಅರಣ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಂಡಿಸುತ್ತಿದ್ದೇನೆ.

**( ಹೇಳಿಕೆಯನ್ನು ಲಗತ್ತಿಸಲಾಗಿದೆ)**

ಸಭಾಪತಿಯವರು:- ಧನ್ಯವಾದಗಳು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಗಳೆ, ನಮ್ಮ ಆಪ್ತ ಸಹಾಯಕರಿಗೆ ವೇತನ ಕೊಡುವ ಬಗ್ಗೆ ಎಂಟು ದಿನಗಳ ಹಿಂದೆ ಪ್ರಸ್ತಾಪಿಸಿದ್ದೆ. ಇದುವರೆಗೆ ಸಂಬಳವನ್ನು ಕೊಟ್ಟಿರುವುದಿಲ್ಲ. 6 ತಿಂಗಳಿಂದ ವೇತನವನ್ನು ಕೊಟ್ಟಿರುವುದಿಲ್ಲ. ನಾನು ವಿಷಯವನ್ನು ಪ್ರಸ್ತಾಪ ಮಾಡಿಯೇ ಎಂಟು ದಿನಗಳಾದವು. ಯಾವಾಗ ಕೊಡುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಶೀಘ್ರದಲ್ಲಿಯೇ ಕೊಡುತ್ತೇವೆ ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ನಾಳೆ ವಿಚಾರಿಸಿ ನಾನು ಹೇಳುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ನಾಳೆ ಹೇಳುವುದಲ್ಲ, ಸಂಬಳವನ್ನು ಕೊಡಿಸಬೇಕು. ಪಿಎ ಗಳಿಗೆ ಸಂಬಳ ಕೊಡಲು ಏನು ತೊಂದರೆ? ನಾಳೆ ಸಂಬಳವನ್ನು ಕೊಡಿಸಬೇಕು.

**ಶ್ರೀ ಎಂ.ಆರ್.ಸೀತಾರಾಂ:-** ತಿಳಿದುಕೊಂಡು ನಾಳೆ ಹೇಳುತ್ತೇನೆ.

**ಸಭಾಪತಿಯವರು:-**ನಾಳೆ ಹೇಳುತ್ತೇನೆ ಎಂದು ಸಭಾನಾಯಕರು ಹೇಳುತ್ತಿದ್ದಾರೆ. ಇಲ್ಲಿಗೆ ಶೂನ್ಯವೇಳೆ ಮುಕ್ತಾಯವಾಗುತ್ತದೆ. ಈಗ ವರದಿಯನ್ನು ಒಪ್ಪಿಸುವುದು.

5. **ವರದಿಗಳನ್ನೊಪ್ಪಿಸುವುದು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಪರಿಶೀಲನಾ ಸಮಿತಿ):- ಮಾನ್ಯ ಸಭಾಪತಿಗಳೆ, ಪರಿಶೀಲನಾ ಸಮಿತಿಯ ಅಧ್ಯಕ್ಷನಾದ ನಾನು ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ " ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2017"ಕ್ಕೆ ಸಂಬಂಧಪಟ್ಟಂತೆ ರಚಿಸಲಾದ ಪರಿಶೀಲನಾ ಸಮಿತಿಯ ವರದಿಯನ್ನು ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 217ರ ರೀತ್ಯಾ ಸದನಕ್ಕೆ ಒಪ್ಪಿಸುತ್ತೇನೆ.**

**ಸಭಾಪತಿಯವರು:- ವರದಿಯನ್ನು ಒಪ್ಪಿಸಲಾಯಿತು.**

**(ಮುಂದು)**

(135) 20-02-2018 BSD-GR (01-40)

ಶ್ರೀ ಬಸವರಾಜ ರಾಯರೆಡ್ಡಿಃ- ಮಾನ್ಯ ಸಭಾಪತಿಯವರೇ, ದಯಮಾಡಿ ಮಧ್ಯಾಹ್ನ ಚರ್ಚೆಗೆ ತೆಗೆದುಕೊಳ್ಳಬೇಕು.

ಸಭಾಪತಿಯವರುಃ- ಇಲ್ಲ, ಇಂದು ವರದಿ ಕೊಟ್ಟಿರುವುದರಿಂದ ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಬಸವರಾಜ ರಾಯರೆಡ್ಡಿಃ- ಮಾನ್ಯ ಸಭಾಪತಿಯವರೇ, ನನ್ನ ಒಂದು ಮನವಿ ಏನೆಂದರೆ, ನನಗೆ ಗೊತ್ತಾದ ಮಟ್ಟಿಗೆ ದಿನಾಂಕ 23ರಂದು ಅಧಿವೇಶನ ಕೊನೆಗೊಳ್ಳಬಹುದು.

ಸಭಾಪತಿಯವರುಃ- ಆ ವಿಷಯ ಬೇಡ, ನಾಳೆ ಅಜೆಂಡಾದಲ್ಲಿ ಹಾಕಿಕೊಂಡು ಪ್ರಶ್ನೋತ್ತರ ಅವಧಿ ಮುಗಿದ ನಂತರ ತೆಗೆದುಕೊಳ್ಳುತ್ತೇನೆ. ಇವತ್ತು ತೆಗೆದುಕೊಳ್ಳಲು ಸದಸ್ಯರು ತಯಾರಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿಃ- ಆಯಿತು.

ಆ) ಶ್ರೀ ಎನ್.ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರ)ಃ- ಮಾನ್ಯ ಸಭಾಪತಿಯವರೇ, 2016-17ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 86, 87, 88 ಹಾಗೂ 89ನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಇ) ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ)ಃ- ಮಾನ್ಯ ಸಭಾಪತಿಯವರೇ, 2017-18ನೇ ಸಾಲಿನ ಸಾರ್ವಜನಿಕ ಉದ್ಯಮಗಳ ಸಮಿತಿಯ 133ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಸಭಾಪತಿಯವರುಃ- ವರದಿಯನ್ನೊಪ್ಪಿಸಲಾಯಿತು.

**6. ಅರ್ಜಿಗಳನ್ನೊಪ್ಪಿಸುವುದು**

ಅ) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಃ- ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1) ಲೋಕೋಪಯೋಗಿ ಇಲಾಖೆಯ ರಸ್ತೆಯ ಅಂಚಿನಲ್ಲಿರುವ ಖಾಸಗಿಯವರ ಪಟ್ಟಾ ಸ್ಥಳಗಳನ್ನು ಭೂಸ್ವಾಧೀನ ಪ್ರಕ್ರಿಯೆಗೂ ಒಳಪಡಿಸದೇ ಅಭಿವೃದ್ಧಿಗೂ ಅವಕಾಶ ನೀಡದೇ ಇರುವುದರಿಂದ ಪಟ್ಟಾ ಜಮೀನುದಾರರಿಗೆ ತೊಂದರೆಯಾಗುತ್ತಿರುವುದನ್ನು ಸರಿಪಡಿಸಿ ನ್ಯಾಯ ಒದಗಿಸುವ ಬಗ್ಗೆ

(2) ಕಂದಾಯ ಇಲಾಖೆಯಿಂದ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಂದಾವರ ಗ್ರಾಮದಲ್ಲಿರುವ ಸರ್ಕಾರಿ ಜಮೀನಿನಲ್ಲಿ ನಿವೇಶನ ರಹಿತರಿಗೆ ನಿವೇಶನವನ್ನು ಒದಗಿಸುವ ಬಗ್ಗೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಸಭಾಪತಿಯವರುಃ- ಅರ್ಜಿಯನ್ನೊಪ್ಪಿಸಲಾಯಿತು.

ಆ) ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) (ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರ ಪರವಾಗಿ)ಃ- ಮಾನ್ಯ ಸಭಾಪತಿಯವರೇ, ಮಾಣಿಲ ಗ್ರಾಮದ ಮದಕದ ಮೂಲೆಯಿಂದ ಕನ್ನಡಗುಳ ಕೊಟೇಲುಗೆ ಹಾದು ಹೋಗುವ ಸಾರ್ವಜನಿಕ ರಸ್ತೆಗೆ ಮದಕ ಮೂಲೆ ಎಂಬಲ್ಲಿ ಕೆ.ಎಂ. ವಿಷ್ಣು ಭಟ್ ಅವರು ಸಾರ್ವಜನಿಕ ರಸ್ತೆಗೆ ಗುಂಡಿ ತೋಡಿ, ಮಳೆ ನೀರಿನ ಚರಂಡಿಗೆ ಕಲ್ಲು ಮಣ್ಣಿನಿಂದ ಮುಚ್ಚಿ ರಸ್ತೆ ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡಿರುವುದನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಬಗ್ಗೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಇ) ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ)ಃ- ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಯಡಿಯೂರು ಹೋಬಳಿ, ಸಿಂಗಟಹಳ್ಳಿ ಗ್ರಾಮದ ಸರ್ವೆ ನಂ. 91ರ ಜಮೀನು ಮತ್ತು ಸಾರ್ವಜನಿಕರ ರಸ್ತೆಗೆ ಅಡ್ಡಲಾಗಿ ಸಾರ್ವಜನಿಕ ರಸ್ತೆಯಲ್ಲಿ ನಿರ್ಮಿಸಿರುವ ತಡೆಗೋಡೆ ಹಾಗೂ ಗೇಟ್‌ನ್ನು ತೆರವುಗೊಳಿಸುವ ಬಗ್ಗೆ ಬಗ್ಗೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಸಭಾಪತಿಯವರುಃ- ಅರ್ಜಿಯನ್ನೊಪ್ಪಿಸಲಾಯಿತು.

ಈಗ ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ 3-15ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 44 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ 3 ಗಂಟೆ 15 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

136/20.2.2018/ಪಿಕೆ/ಎಂಡಿ/3.30

**(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 3 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು. ಉಪಸಭಾಪತಿಗಳಾದ ಮಾನ್ಯ ಮರಿತಿಬ್ಬೇಗೌಡರು ಪೀಠವನ್ನಲಂಕರಿಸಿದರು)**

**ಉಪ ಸಭಾಪತಿಯವರು:-** ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಮಧ್ಯಾಹ್ನ ಮೊದಲಿಗೆ ನಿಯಮ 68ರ ಅಡಿಯಲ್ಲಿನ ವಿಚಾರ ಚರ್ಚೆ ಆಗಬೇಕಿತ್ತು. ಆದರೆ ಮಾನ್ಯ ಗೃಹ ಸಚಿವರು ಕೆಳಮನೆಯಲ್ಲಿದ್ದು,

ಅವರು ಬರುವುದು ತಡವಾಗುತ್ತದೆ ಎನ್ನುವ ಸಂದೇಶ ಬಂದಿರುವುದರಿಂದ ನಿಯಮ 68ರ ಬದಲಾಗಿ ನಿಯಮ 330ರ ಅಡಿ ಇರುವ ವಿಷಯವನ್ನು ಮೊದಲು ತೆಗೆದುಕೊಳ್ಳೋಣ. ಸಂಬಂಧಪಟ್ಟ ಮಾನ್ಯ ಸಚಿವರೂ ಕೂಡ ಸದನದಲ್ಲಿ ಇದ್ದಾರೆ. ಆನಂತರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಲಾಗುವುದು. ತದನಂತರ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಸಂಬಂಧಿಸಿದ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ.

**ಶ್ರೀ ಪುಟ್ಟಣ್ಣ:-**ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಅಡಿ ನಮ್ಮದೊಂದು ವಿಷಯ ಇತ್ತು. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

**ಉಪ ಸಭಾಪತಿಯವರು:-** ತಾವು ಎತ್ತಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಬಂದಿದೆ. ಅದರ ಜೆ಼ರಾಕ್ಸ್ ಕಾಪಿ ಸಿದ್ಧಗೊಳ್ಳುತ್ತಿರುವುದರಿಂದ ನಂತರ ತೆಗೆದುಕೊಳ್ಳಲಾಗುತ್ತದೆ. ದಯವಿಟ್ಟು ಕುಳಿತುಕೊಳ್ಳಿ.

**<u>ನಿಯಮ 330ರ ಮೇರೆಗೆ</u>**

ವಿಷಯ: ರಾಜ್ಯದಲ್ಲಿರುವ ಎಲ್ಲಾ ಮಾದರಿಯ ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷಾ ಬೋಧನೆಯನ್ನು ಕಡ್ಡಾಯಗೊಳಿಸಿದ್ದು, ಈ ಬಗ್ಗೆ ಖಚಿತಪಡಿಸಿಕೊಳ್ಳಲು ಸಮಿತಿಯನ್ನು ರಚಿಸಿ ನಿಯಮ ಉಲ್ಲಂಘನೆ ಮಾಡುವ ಶಾಲೆಗಳಿಗೆ ದಂಡ ವಿಧಿಸುವುದರ ಜೊತೆಗೆ ಮಾನ್ಯತೆ ರದ್ದುಪಡಿಸುವ ಬಗ್ಗೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಎಲ್ಲಾ ಮಾದರಿಯ ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬೋಧಿಸಬೇಕು ಎನ್ನುವ ವಿಚಾರದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಮೊದಲನೆಯದಾಗಿ ನಾನು ಸಚಿವರನ್ನು ಅಭಿನಂದಿಸುತ್ತೇನೆ. ಭಾಷೆಯ ಬಗೆಗೆ ಅವರು ಅಪಾರವಾದ ಕಾಳಜಿಯನ್ನಿಟ್ಟುಕೊಂಡು, ಖಾಸಗಿ ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯನ್ನು ಒಂದು ಭಾಷೆಯನ್ನಾಗಿ ಬೋಧನೆ ಮಾಡಬೇಕು ಎನ್ನುವ ಆದೇಶವನ್ನು ಹೊರಡಿಸಿದ್ದಾರೆ. ಅದಕ್ಕೋಸ್ಕರ ಸಮಸ್ತ ನಾಡಿನ ಜನರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಅದನ್ನು ಅನುಷ್ಠಾನಕ್ಕೆ ಕೊಡುವ ದಿಸೆಯಲ್ಲಿ ಮಾಡಿರುವ ಪ್ರಯತ್ನ ಸಾಲದು ಎನ್ನುವುದು ನನ್ನ ಆತಂಕ. ವಾಸ್ತವವಾಗಿ ಏನಾಗಿದೆ ಎಂದರೆ, ಇತ್ತೀಚಿನ ವರ್ಷಗಳಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಿವೆ. ಒಂದು CBSE or ICSE School ಪ್ರಾರಂಭವಾದರೆ ಕನಿಷ್ಠ 20-25 ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತವೆ. ಅವರು ಬಹಳ ವ್ಯವಸ್ಥಿತವಾಗಿ ಶಾಲೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕೊಡುತ್ತಾರೆ. ಹತ್ತಾರು ವಾಹನಗಳ ಮೂಲಕ ದೂರದ ಊರುಗಳಿಂದ ಮಕ್ಕಳನ್ನು ಕರೆಸುವ ವ್ಯವಸ್ಥೆ ಮಾಡುತ್ತಾರೆ, ಹೆಚ್ಚಿನ ಶುಲ್ಕವನ್ನು ಗೊತ್ತು ಮಾಡಿ ಶಾಲೆ ಪ್ರಾರಂಭ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆ. ಇವತ್ತು ಇಂಗ್ಲಿಷ್‌ನ ಬಗೆಗಿನ ವ್ಯಾಮೋಹದಿಂದ ಬಹಳ ಜನ CBSE, ICSE ಶಾಲೆಗಳಿಗೆ ಪ್ರವೇಶ ಕೊಡಿಸುವ ಒಂದು ಪರಂಪರೆ, ಹೊಸ ಪದ್ಧತಿ ನಮ್ಮಲ್ಲಿ ಪ್ರಾರಂಭವಾಗಿದೆ. ಈ ಶಾಲೆಗಳು ಪ್ರಾರಂಭವಾದಂತೆಲ್ಲಾ ಎಲ್ಲೋ ಒಂದು ಕಡೆ ಕನ್ನಡ ಶಾಲೆಗಳು ಮುಚ್ಚಿ ಹೋಗುವಂತಹ ಸಂದರ್ಭಗಳು ಬರುತ್ತಿದೆ.

ನಾನು ಕಳೆದ ಕೆಲವು ದಿನಗಳ ಹಿಂದೆ, ಹತ್ತು ಸಾವಿರ ಕನ್ನಡ ಶಾಲೆಗಳು ಮುಚ್ಚುತ್ತಿವೆ ಎನ್ನುವ ವಿಷಯವನ್ನು ಪತ್ರಿಕೆಗಳಲ್ಲಿ ಬಂದಿದ್ದನ್ನು ಓದಿದ್ದೇನೆ. ಅದು ಸಹಜ ಕೂಡ. ಇವತ್ತು ಕನ್ನಡದ ಶಾಲೆಗಳಿಗೆ, ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆ ತೀರ ಕ್ಷೀಣವಾಗುತ್ತಿದೆ. ಎಲ್ಲೋ ದೂರದಲ್ಲಿರುವ ಶಿಕ್ಷಕರು census ಮಾಡುವ ಸಂದರ್ಭದಲ್ಲಿ ಕಷ್ಟಪಟ್ಟು ಮಕ್ಕಳನ್ನು ಕರೆತರಬೇಕಾದ ಸಂದರ್ಭ ಇದೆ. ಆದರೆ, ಅಲ್ಲೊಂದು-ಇಲ್ಲೊಂದು ಹೊಸ ವ್ಯವಸ್ಥೆ ಪ್ರಾರಂಭವಾಗಿದೆ. SDMC committee ಯವರೇ ಹೆಚ್ಚಿನ ಮುತುವರ್ಜಿ ವಹಿಸಿ, ಎಲ್‌ಕೆಜಿ-ಯುಕೆಜಿ ಇಂಗ್ಲಿಷ್ ಶಾಲೆಯ ಮಾದರಿಯಲ್ಲಿ ಕನ್ನಡ ಶಾಲೆಗಳಲ್ಲೂ ಪ್ರಾರಂಭ ಮಾಡಿ, ಎಲ್‌ಕೆಜಿ-ಯುಕೆಜಿ ಯಲ್ಲೇ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಮೂರು ಭಾಷೆಗಳನ್ನು ಕಲಿಸುತ್ತಿರುವ ಉದಾಹರಣೆ ನಮ್ಮ ಮಂಡ್ಯ ಜಿಲ್ಲೆಯ ಒಂದು ಶಾಲೆಯಲ್ಲಿ ಇದೆ. ಇದು 8-10 ವರ್ಷಗಳ ಹಿಂದೆ ಪ್ರಾರಂಭವಾಯಿತು. ಈಗ ಸುಮಾರು 100ಕ್ಕೂ ಹೆಚ್ಚು ಕನ್ನಡ ಶಾಲೆಗಳಲ್ಲಿ ಮೇಲುಸ್ತುವಾರಿ ಸಮಿತಿಗಳ ಆಶ್ರಯದಲ್ಲಿ ನರ್ಸರಿ-1, ನರ್ಸರಿ-2 ಶಾಲೆಗಳು ನಡೆಯುತ್ತಿವೆ. ಎಲ್ಲೆಲ್ಲಿ ನರ್ಸರಿ 1 ಮತ್ತು 2 ಪ್ರಾರಂಭವಾಗಿದೆಯೋ ಅಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದೆ, ವಿಸ್ತಾರವಾಗಿದೆ ಮತ್ತು ಶಾಲೆಗಳು ಉಳಿಯುವಂತಹ ಪರಿಸ್ಥಿತಿ ಕೂಡ ಬಂದಿದೆ. ಇನ್ನೊಂದು ಕಡೆ, ಇಂಗ್ಲಿಷ್ ಬಗೆಗಿನ ಮಹತ್ವ ಹೆಚ್ಚಾದ ಹಿನ್ನೆಲೆಯಲ್ಲಿ CBSE, ICSE ಶಾಲೆಗಳು ದೊಡ್ಡ ಸಂಖ್ಯೆಯಲ್ಲಿ ಏನು ಪ್ರಾರಂಭವಾಗುತ್ತಿದೆಯೋ ಅದರಿಂದ ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಾ, ಕನ್ನಡ ಕಲಿಯುವ ವಾತಾವರಣ ಇಲ್ಲವಾಗುತ್ತಿದೆ. ಆ ಕಾರಣಕ್ಕಾಗಿ ನಮ್ಮೆಲರ ಕೂಗು ಏನಿತ್ತು ಎಂದರೆ, ಅಂತಹ ಖಾಸಗಿ ಶಾಲೆಗಳು ಬರಲಿ, ಅದಕ್ಕೆ ನಮ್ಮ ವಿರೋಧ ಇಲ್ಲ, ಆದರೆ ಅಲ್ಲಿಯೂ ಕೂಡ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು ಎನ್ನುವುದು. ಭಾಷಾ ತಜ್ಞರು ಮತ್ತು ಮಕ್ಕಳ ತಜ್ಞರು, ಈಗಿನ ಪೀಳಿಗೆಯ ಮಕ್ಕಳಿಗೆ ಮೂರು ಭಾಷೆ ಕಲಿಯುವ ಶಕ್ತಿ-ಸಾಮರ್ಥ್ಯ ಇದೆ ಎಂದು ಹೇಳುತ್ತಾರೆ. ಮೂರು ಭಾಷೆಗಳನ್ನು ಕಲಿಸುವ ವ್ಯವಸ್ಥೆ ಮಾಡಿ. ಎರಡು ಭಾಷೆಗಳನ್ನು ಕಲಿಸುವ ವಿಷಯ ಬಂದಾಗ ಅದಕ್ಕೆ ವಿರೋಧ ಬರುತ್ತದೆ. ಅದು ಸಂವಿಧಾನಕ್ಕೆ ವಿರೋಧ ಎಂದು ಕೋರ್ಟ್‌ಗೆ ಹೋಗುತ್ತಾರೆ. ಮೂರು ಭಾಷೆಗಳನ್ನು ಮಾಡಿ ಅದರಲ್ಲಿ ಒಂದು ಭಾಷೆಯಾಗಿ ಕನ್ನಡವನ್ನು ಕಡ್ಡಾಯ ಮಾಡಬೇಕು. ಇನ್ನೊಂದು ಭಾಷೆಯಾಗಿ ಇಂಗ್ಲಿಷ್ ಇದ್ದೇ ಇರುತ್ತದೆ, ಮತ್ತೊಂದು ಭಾಷೆ ವಿದ್ಯಾರ್ಥಿಗಳ ಆಯ್ಕೆಯ ಭಾಷೆ ಇರುತ್ತದೆ. ಅವರು ತಮ್ಮ ಸ್ವಂತ ಭಾಷೆಯನ್ನಾದರೂ ಕಲಿಯಲಿ, ಸಂಸ್ಕೃತವನ್ನಾದರೂ ಕಲಿಯಲಿ ಅಥವಾ ಬೇರೆ ಯಾವುದನ್ನಾದರೂ ಕಲಿಯಲಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಚಿವರು, ಈ ನೀತಿಯನ್ನು ಅನುಷ್ಠಾನಕ್ಕೆ ತರದೇ ಇದ್ದಾಗ ದಂಡ ಹಾಕಬೇಕಾದ ಮೊತ್ತ ಕೇವಲ ರೂ.೫೦೦ ಅನ್ನು ನಿಗದಿ ಮಾಡಿದ್ದಾರೆ. ಕನ್ನಡ ಭಾಷೆಯನ್ನು ಬೋಧನೆ ಮಾಡದೇ ಹೋದರೆ ರೂ. ೫೦೦ ದಂಡ ಹಾಕುತ್ತೇವೆ ಎಂದು ಹೇಳುವುದಾದರೆ ಅವರು ರೂ. ೫೦೦ಅನ್ನು ಬಹಳ ಸುಲಭವಾಗಿ ಕಟ್ಟಿಬಿಡುತ್ತಾರೆ. ಇಷ್ಟು ಮೊತ್ತ ಸಾಕಾಗುವುದಿಲ್ಲ. ನೀವು ಶಾಲೆಗಳಿಗೆ ಮಾನ್ಯತೆ ಕೊಡುವ ಸಂದರ್ಭದಲ್ಲಿ ಷರತ್ತು ವಿಧಿಸಬೇಕು. ಶಾಲೆಯ ಮಾನ್ಯತೆಯನ್ನು ನವೀಕರಿಸುವ ಸಂದರ್ಭದಲ್ಲಿ ಅಥವಾ ಪ್ರತಿ ಶಾಲೆಗಳಿಗೆ ಏನು 1 ವರ್ಷ, 3 ವರ್ಷ ಅಥವಾ 5 ವರ್ಷಕ್ಕೊಮ್ಮೆ ನವೀಕರಣ ಮಾಡಬೇಕಾಗಿರುತ್ತದೆಯೋ, ಆ ಸಂದರ್ಭದಲ್ಲಿ ಸರ್ಕಾರ ಷರತ್ತು ಹಾಕಬೇಕು. ಆಗ ಮಾತ್ರ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬೋಧಿಸುವ ಕೆಲಸ ಆಗುತ್ತದೆ. ಮತ್ತೆ, ತಾವೇನು ರೂ. ೫೦೦ ದಂಡ ಹಾಕುವುದನ್ನು ನಿಗದಿ ಮಾಡಿದ್ದೀರೋ ಅದು ಸಾಲದು. ಶಿಕ್ಷಕರು ಮೌಲ್ಯಮಾಪನ ಮಾಡುವಾಗ erratic mistake ಆದರೆ ಅವರಿಗೆ ಒಂದೆರಡು ಲಕ್ಷ ದಂಡ ಹಾಕುತ್ತೀರಿ, ಜೈಲು ಎನ್ನುತ್ತೀರಿ. ಹೀಗಿರುವಾಗ, ಒಂದು ಭಾಷೆಯನ್ನೇ ಬೋಧನೆ ಮಾಡದೇ ಇರುವಂತಹ ಸಂದರ್ಭ ಬಂದಾಗ ಕೇವಲ ರೂ.೫೦೦ ದಂಡ ಹಾಕುವುದು ಯಾವ ನ್ಯಾಯ? ಇದನ್ನು ಯಾರು ಒಪ್ಪುತ್ತಾರೆ? ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಬೋಧಿಸಬೇಕು ಎನ್ನುವ ನಿಮ್ಮ ಆಶಯ ಚೆನ್ನಾಗಿದೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳು ಬೇಕಾಗಿಲ್ಲ ಎಂದು ಹೇಳುವುದಕ್ಕಾಗದೇ ಇರುವಂತಹ ಈ ಸಂದರ್ಭದಲ್ಲಿ NEET (National Eligibility cum Entrance Test), SLET (State Level Eligibility *Test)* ಪರೀಕ್ಷೆಗಳನ್ನು ಎದುರಿಸಬೇಕಾದ ಪರಿಸ್ಥಿತಿ ಇರುವಾಗ ಇಂಗ್ಲಿಷ್ ಮಾಧ್ಯಮವನ್ನು ಒಪ್ಪೋಣ. ಇದರ ಜೊತೆಜೊತೆಗೆ ಕನ್ನಡ ಕಲಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡೋಣ.

ಯಾವುದೇ ಭಾಷೆಯ ಮಗುವಾಗಿರಲಿ, ಕನ್ನಡ ನೆಲದ ಮೇಲೆ ಕನ್ನಡ ಭಾಷೆ ಕಲಿಯಬೇಕು ಎನ್ನುವ ನಿಮ್ಮ ಆಶಯ ಸರಿ ಇದೆ. ಆ ಆಶಯ ಅನುಷ್ಠಾನಕ್ಕೆ ಬರಬೇಕು ಎನ್ನುವುದಾದರೆ ನೀವು ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ತ್ರಿಭಾಷ ಸೂತ್ರವನ್ನು ಅಳವಡಿಸಿಕೊಳ್ಳದೇ ಹೋದರೆ ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವ ವ್ಯವಸ್ಥೆ ಆಗುವುದೇ ಇಲ್ಲ. ನಾನು ಈಗಾಗಲೇ ಹಲವಾರು CBSE, ICSE ಶಾಲೆಗಳ ಮ್ಯಾನೇಜ್‌ಮೆಂಟ್‌ನವರ ಜೊತೆ ಮಾತನಾಡಿದ್ದೇನೆ. ಅವರು, ನಾವು ಕನ್ನಡ ಕಲಿಸುವುದಕ್ಕೆ ಆಗುವುದಿಲ್ಲ, ನಾವು ಕೋರ್ಟ್‌ಗೆ ಹೋಗುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

(ಮುಂದು . . .)

**137/20.02.2018/ಬಿಕೆಪಿ/ಎಕೆ/3-50).**

**ಶ್ರೀ ಶರಣಪ್ಪ ಮಟ್ಟೂರ(ಮುಂದು.. . )**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈಗಾಗಲೇ ಈ ವಿಚಾರದಲ್ಲಿ ಹಿಂದೆಯೂ ಸಹ ಕಡ್ಡಾಯ ಮಾಡಿದ್ದನ್ನು ಸುಪ್ರೀಂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದ್ದರು. ಅದರಲ್ಲಿ ಸುಪ್ರೀಂ ಕೋರ್ಟ್ ಸಹ ಭಾಷೆಯ ವಿಚಾರದಲ್ಲಿ 'choice' ಎನ್ನುವ ಶಬ್ದವನ್ನು ಉಪಯೋಗ ಮಾಡಿಕೊಟ್ಟಿದ್ದಾರೆ. ಹೀಗಾಗಿ, ಈ ಗೊಂದಲ ಉದ್ಭವಿಸಿದೆ. ಅದಕ್ಕೋಸ್ಕರ ಆದಾದ ಮೇಲೆಯೂ ಕೂಡ ನಾವು ಕೆಲವು ತಿದ್ದುಪಡಿಗಳನ್ನು ತಂದು ಕನ್ನಡವನ್ನು ಕರ್ನಾಟಕದಲ್ಲಿ ಕಡ್ಡಾಯ ಮಾಡಿ, ಕಡ್ಡಾಯವಾಗಿ ಕಲಿಸಬೇಕು ಮತ್ತು ತ್ರಿ ಭಾಷಾ ಸೂತ್ರದಲ್ಲಿ ತರುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**(ವಿರೋಧ ಪಕ್ಷದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸದಸ್ಯರು ವಕೀಲರು ಸಹ ಇದ್ದಾರೆ. ಈ penalty clause ಏನಿದೆ, ಅದು 500 ರೂಪಾಯಿ ಇರಬಹುದು, ಒಂದು ಲಕ್ಷ ಇರಬಹುದು, ಅದು ಯಾವುದೇ ಇರಬಹುದು. ಅಕ್ರಮ ಮಾಡಿದ್ದಕ್ಕೆ penalty ಹಾಕಿದರೆ ಅದು ಸಕ್ರಮವಾಗುತ್ತದೆ. ಅವನು ಪ್ರತಿವರ್ಷ 500 ರೂಪಾಯಿ, 1 ಲಕ್ಷ ರೂಪಾಯಿಗಳ ದಂಡವನ್ನು ಕಟ್ಟಿಕೊಂಡು ಹೋಗುತ್ತಾನೆ. ಹಾಗಾಗಿ, penalty ಹಾಕುವುದು ಒಂದು ಭಾಗವಾದರೆ ಅದರ ಜೊತೆಗೆ ಶಾಲೆಯ ಮಾನ್ಯತೆಯನ್ನು ರದ್ದು ಮಾಡುತ್ತೇವೆನ್ನುವುದನ್ನು ಸಹ ಸೇರಿಸಬೇಕು. ಇಲ್ಲವೆಂದರೆ, ಈ ವರ್ಷ ಅವನು ಕನ್ನಡ ಕಲಿಸಲಿಲ್ಲ. ಅವನಿಗೆ 1 ಲಕ್ಷ ರೂಪಾಯಿಗಳ ದಂಡವನ್ನು ಹಾಕಿದರೆ. ಅದನ್ನು ಅವನು ಕಟ್ಟುತ್ತಾನೆ. ಮತ್ತೆ ಮುಂದಿನ ವರ್ಷವೂ 1 ಲಕ್ಷ ರೂಪಾಯಿಗಳನ್ನು ಕೊಡುತ್ತಾನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮೊದಲ ಬಾರಿ ದೂರು ಬಂದಾಗ 1 ಲಕ್ಷ ರೂಪಾಯಿಗಳ ದಂಡವನ್ನು ಕೊಡುವಂತಹದ್ದು ಇರಬೇಕು. ಎರಡನೇ ಬಾರಿಯೂ ಸಹ ಅದೇ ತಪ್ಪನ್ನು ಮಾಡಿದಾಗ 2 ಲಕ್ಷ ರೂಪಾಯಿಗಳ ದಂಡವನ್ನು ಕೊಡುವಂತಹದ್ದು ಇರಬೇಕು. 3ನೇ ಬಾರಿ ತಪ್ಪು ಮಾಡಿದಾಗ ಅವರ ಶಾಲೆಯ ಮಾನ್ಯತೆಯನ್ನು ರದ್ದು ಮಾಡಬೇಕು. ಏಕೆಂದರೆ, ತಕ್ಷಣವೇ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಿಕ್ಕೆ ಹೋದರೆ, ಕೋರ್ಟ್‌ಗಳು ಮಧ್ಯ ಪ್ರವೇಶ ಮಾಡಿ, ಅದಕ್ಕೆ ತಡೆಯಾಜ್ಞೆಯನ್ನು ಕೊಡುತ್ತವೆ. ಅದಕ್ಕೆ ಕಾರಣ ಏನೆಂದರೆ, ಮಕ್ಕಳ ಭವಿಷ್ಯವನ್ನು ರಕ್ಷಣೆ ಮಾಡಬೇಕಾಗುತ್ತದೆ. ಆ ಉದ್ದೇಶದಿಂದ ಅವರುಗಳಿಗೆ ಮೂರು ಅವಕಾಶಗಳನ್ನು ಕೊಡಬೇಕು. ಈ N.D.P.S (Narcotic Drugs and Psychotropic Substances) Act ಮತ್ತು ಕೆಲವು ಕಾನೂನಿನಲ್ಲಿ ಆ ರೀತಿಯಲ್ಲಿ ಅವಕಾಶ ಇದೆ. ಮೊದಲ ತಪ್ಪಿಗೆ ಇಷ್ಟು ದಂಡ, ಎರಡನೇ ಬಾರಿ ಮಾಡಿದ ತಪ್ಪಿಗೆ ಇಷ್ಟು ದಂಡ ವಿಧಿಸುವುದರ ಜೊತೆಗೆ ಮೂರನೇ ಬಾರಿಗೆ ಕಡ್ಡಾಯವಾಗಿ ಅವರಿಗೆ ಜೈಲು ಶಿಕ್ಷೆಯನ್ನೇ ವಿಧಿಸುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಕುಮಾರಸ್ವಾಮಿಯವರ ಮತ್ತು ಮಾನ್ಯ ಶ್ರೀ ಯಡಿಯೂರಪ್ಪನವರ ಸರ್ಕಾರದ ಅವಧಿಯಲ್ಲಿ ಎಲ್ಲಾ ಶಾಲೆಗಳಲ್ಲಿಯೂ ಕನ್ನಡವನ್ನು ಕಲಿಸಬೇಕೆಂದು ಕಡ್ಡಾಯ ಮಾಡಿ, ಒಂದು ಆದೇಶ ಮಾಡಿದ್ದರು. ಆದರೆ, ಅದು ಜಾರಿಯಾಗಿರಲಿಲ್ಲ. ಆದರೆ, ತಾವು ಬಂದ ಮೇಲೆ ಇದನ್ನು ಜಾರಿ ಮಾಡಬೇಕೆಂದು ಹೇಳಿ ತೀರ್ಮಾನ ಮಾಡಿ ನಿಯಮ ರೂಪಿಸಿ ಆದೇಶವನ್ನು ಜಾರಿ ಮಾಡಿದ್ದೀರಿ. ತಮಗೆ ಅಭಿನಂದಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ತಪ್ಪು ಮಾಡಿದವರಿಗೆ ದಂಡವನ್ನು ಹಾಕುವುದರಿಂದ ಏನೂ ಉಪಯೋಗವಾಗುವುದಿಲ್ಲ. ಈ ವಿಚಾರದಲ್ಲಿ Act ಅನ್ನು ತಿದ್ದುಪಡಿ ಮಾಡಬೇಕು. ಕರ್ನಾಟಕದಲ್ಲಿ ಯಾವುದೇ ಶಾಲೆ ಇರಲಿ, ಯಾರದ್ದೇ ಇರಲಿ, ಅದು ಸಂದೇಶ್ ನಾಗರಾಜ್‌ರವರದ್ದಾಗಲಿ, ಪುಟ್ಟಣ್ಣರವರದ್ದಾಗಲಿ, ಎಲ್ಲರಿಗೂ ಕಾನೂನು ಅನ್ವಯಿಸಬೇಕು. ನಾನು ಈ ವಿಚಾರದಲ್ಲಿ ಹೇಳುವುದೇನೆಂದರೆ ಇಂಗ್ಲೀಷ್ ಮಾಧ್ಯಮವನ್ನು ಭೋಧಿಸತಕ್ಕಂತಹ ಶಾಲೆಗಳಲ್ಲಿ ಎರಡನೆಯ ಭಾಷೆಯಾಗಿ ಕನ್ನಡವನ್ನು ಭೋದಿಸಬೇಕು. ಕನ್ನಡ ಮಾಧ್ಯಮದಲ್ಲಿ ಓದುವಂತಹ ಮಕ್ಕಳಿಗೂ ಕೂಡ ಎರಡನೆಯ ಭಾಷೆಯಾಗಿ ಇಂಗ್ಲೀಷ್ ಮಾಡಿ. ನೀವು ಉರ್ದು ಶಾಲೆ ಮಾಡುತ್ತೀರಾ, ಅಲ್ಲಿ ಎರಡನೆಯ ಭಾಷೆ ಮಾಡಿ. ನೀವು ಇದಕ್ಕೆ ಕಡ್ಡಾಯವಾಗಿ ಕಾನೂನನ್ನು ರೂಪಿಸಿ, ಅದನ್ನು ಜಾರಿ ಮಾಡಿದರೆ ಮಾತ್ರ ಇದು effective ಆಗಿ ಜಾರಿಗೆ ಬರುತ್ತದೆ. ಇಲ್ಲವೆಂದರೆ, ನಾವು ಏನು ಮಾಡಿದರೂ ಕೂಡ ಈಗ 1 ಲಕ್ಷ, 2 ಲಕ್ಷ, 5 ಲಕ್ಷ ರೂಪಾಯಿಗಳ ದಂಡಕ್ಕೆ ಅವರು ಯಾವುದೇ ರೀತಿಯಲ್ಲಿ ತಲೆ ಕೆಡಿಸಿಕೊಳ್ಳುವುದಿಲ್ಲ. ದಂಡವನ್ನು ಕಟ್ಟುತ್ತಾರೆ, ಮತ್ತೆ, ಅದೇ ತಪ್ಪನ್ನು ಮಾಡುತ್ತಾ ಹೋಗುತ್ತಿರುತ್ತಾರೆ. ಅದಕ್ಕೋಸ್ಕರ ನಾನು ಈ ವಿಚಾರದಲ್ಲಿ ಹೆಚ್ಚು ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಕನ್ನಡವನ್ನು ಎಲ್ಲಾ ಶಾಲೆಗಳಲ್ಲೂ ಕಲಿಸಬೇಕೆಂದು ಮಾನ್ಯ ಸಚಿವರು ಉತ್ಸುಕರಾಗಿದ್ದಾರೆ.

ಆದ್ದರಿಂದ, ಈ ವಿಚಾರದಲ್ಲಿ ನನ್ನ ವಿನಂತಿ ಏನೆಂದರೆ, ಮಾಧ್ಯಮವಾರು ಅಂದರೆ ಇಂಗ್ಲೀಷ್ ಮಾಧ್ಯಮದಲ್ಲಿ ಓದುವವರಿಗೆ ಕನ್ನಡವನ್ನು ಎರಡನೆಯ ಭಾಷೆಯಾಗಿ, ಕನ್ನಡ ಮಾಧ್ಯಮದಲ್ಲಿ ಓದುವವರಿಗೆ ಇಂಗ್ಲೀಷನ್ನು ಎರಡನೆಯ ಭಾಷೆಯಾಗಿ ಮಾಡಬೇಕು. ಉರ್ದು ಭಾಷೆಯಲ್ಲಿ ಓದುವವರಿಗೆ ಎರಡನೆಯ ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕು. ಏಕೆಂದರೆ, ನಮ್ಮ ಮಾನ್ಯ ಶ್ರೀಕಂಠೇಗೌಡರವರು ತ್ರಿ ಭಾಷಾ ಸೂತ್ರವನ್ನು ಹೇಳಿದ್ದಾರೆ. ಮೂರನೆಯ ಭಾಷೆಯಾಗಿ ಹಿಂದಿ ಇರಲಿ. ಇದನ್ನು ಒಂದನೆಯ ತರಗತಿಯಿಂದಲೇ ಮಾಡಬೇಕು. ಕಲಿಸುತ್ತಿದ್ದಾರೆಂದು ಹೇಳಿ 5ನೆಯ ತರಗತಿಯಿಂದಲೋ, 8ನೆಯ ತರಗತಿಯಿಂದಲೋ ಮಾಡುವುದಲ್ಲ. ಇದನ್ನು ಒಂದನೆಯ ತರಗತಿಯಿಂದಲೇ ಪ್ರಾರಂಭ ಮಾಡಬೇಕು, ಒಂದನೆಯ ತರಗತಿಯಿಂದಲೇ ಕಲಿಸಬೇಕು. ಆಗ ಇದು ಅನುಕೂಲವಾಗುತ್ತದೆ. ಅದಕ್ಕೆ ದಯಮಾಡಿ ಈ

ಸಂಬಂಧ ಒಂದು ಕಾಯಿದೆ ರೂಪಿಸಿ, ಜಾರಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಚಾರದಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ನನಗೆ ಅನಿಸುತ್ತಿದೆ. ಕಡ್ಡಾಯವಾಗಿ ಕನ್ನಡ ಕಲಿಕೆಯಾಗಬೇಕೆನ್ನುವುದು ಮಾನ್ಯ ಸಚಿವರ ಮನಸ್ಸಿನಲ್ಲಿದೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರವಾಗಿ ಸಲಹೆಗಳನ್ನು ಕೊಡಬೇಕು.

ಶ್ರೀ ಕೆ.ಬಿ.ಶಾಣಪ್ಪ:– ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ದಂಡದ ವಿಚಾರ ನಡೆಯುವುದಿಲ್ಲ. ನೀವು ದಂಡ ವಿಧಿಸುತ್ತೇನೆಂದು ಹೇಳಿದರೆ, ಅವರು 5 ಲಕ್ಷ, 10 ಲಕ್ಷ ದಂಡ ಹಾಕಿದರೂ ಸಹ ಅವರು ದಂಡವನ್ನು ಕಟ್ಟಲಿಕ್ಕೆ ತಯಾರಿರುತ್ತಾರೆ. ಏಕೆಂದರೆ, ಒಬ್ಬ ಹುಡುಗನಿಂದಲೇ ಆ 5 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಅದಕ್ಕೋಸ್ಕರ ಇದನ್ನು ಕಡ್ಡಾಯ ಮಾಡಲಿಕ್ಕೆ ಏನು ಕಾನೂನು ಬಿಗಿ ಮಾಡುತ್ತೀರಿ, ಮಾಡಿ. 1983ರ ಕಾನೂನು ಏನಿದೆ, ಅದಕ್ಕೆ ತಿದ್ದುಪಡಿಯನ್ನು ಮಾಡಿ ಕಾನೂನನ್ನು ಜಾರಿ ಮಾಡಬಹುದು, so that they may not go to the court also. ಆಗ ಎಲ್ಲವೂ ಸರಿ ಹೋಗುತ್ತದೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಕೆ.ಟಿ.ಶ್ರೀಕಂಠೇಗೌಡರವರು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀಯುತ ರಾಮಚಂದ್ರಗೌಡರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು, ಶ್ರೀಯುತ ಪುಟ್ಟಣ್ಣನವರು, ಶ್ರೀಯುತ ಶರಣಪ್ಪ ಮಟ್ಟೂರರವರು, ಶ್ರೀಯುತ ಧರ್ಮಸೇನರವರು ಸರ್ಕಾರ ಮಾಡಿರುವ ಕೆಲಸಕ್ಕೆ ಅಭಿನಂದನೆ ಸಲ್ಲಿಸುವುದರ ಜೊತೆಗೆ ಕೆಲವೊಂದು ಸಂಶಯಗಳನ್ನು ವ್ಯಕ್ತ ಮಾಡಿದ್ದಾರೆ. ತಮಗೆ ಗೊತ್ತಿರುವಂತೆ ನಮ್ಮ ಸರ್ಕಾರ ಬಂದ ಮೇಲೆ 2015 ರಲ್ಲಿ. . . ಈ ವಿಚಾರದಲ್ಲಿ ಶ್ರೀಯುತ ಯಡಿಯೂರಪ್ಪನವರು ಮತ್ತು ಶ್ರೀಯುತ ಕುಮಾರಸ್ವಾಮಿಯವರು ಆಸೆಯನ್ನು ಇಟ್ಟುಕೊಂಡಿದ್ದರು ಎಂದು ಶ್ರೀಮಾನ್ ಪುಟ್ಟಣ್ಣನವರು ಮಾತನಾಡುತ್ತಾ ಹೇಳಿದರು. ಕೇವಲ ಆಸೆಯನ್ನು ಇಟ್ಟುಕೊಂಡಿದ್ದರೆ ಯಾವುದೇ ಕಾನೂನನ್ನು ಜಾರಿ ಮಾಡಲಿಕ್ಕೆ ಆಗುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಆ ವಿಚಾರ ಬೇಡ.

**ಶ್ರೀ ತನ್ವೀರ್ ಸೇಠ್:–** ನಾನು ಇಲ್ಲಿ ಮಾತನಾಡಿದ್ದನ್ನೇ ಹೇಳುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಆ ಸರ್ಕಾರ, ಈ ಸರ್ಕಾರದ ವಿಚಾರವನ್ನು ಹೇಳುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ:-** ಆ ವಿಚಾರ ಬೇಡ.

**ಶ್ರೀ ತನ್ವೀರ್ ಸೇಠ್:-** ನಾನು ಈ ವಿಚಾರವಾಗಿ ಏನೂ ಮಾತನಾಡಲಿಕ್ಕೆ ಹೋಗುವುದಿಲ್ಲ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಈಗ ಏನು ಮಾಡುತ್ತಿದ್ದಾರೆ, ಅದನ್ನು ಮಾತ್ರ ಸಚಿವರು ಹೇಳಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ 2015 ರಲ್ಲಿ ಕನ್ನಡವನ್ನು ಕಡ್ಡಾಯ ಮಾಡಬೇಕೆಂದು ವಿಧೇಯಕವನ್ನು ತಂದ ಮೇಲೆ ಇದೇ ಸದನದಲ್ಲಿ ವಿಧೇಯಕವನ್ನು ಅಂಗೀಕಾರ ಮಾಡಿಕೊಟ್ಟಿದ್ದೇವೆ. ತದನಂತರ ಅದಕ್ಕೆ ನಿಯಮಾವಳಿಗಳನ್ನು ರೂಪಿಸಬೇಕಾಗಿತ್ತು. ಅದಕ್ಕೆ ಕರಡು ನಿಯಮಾವಳಿಗಳನ್ನು ರೂಪಿಸಿ, ಈ ಸಂಬಂಧ ಬಂದಂತಹ ಕೆಲವು ಸಲಹೆಗಳನ್ನೂ ಸಹ ತೆಗೆದುಕೊಂಡಿದ್ದೇವೆ.

ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವಂತೆ ಖಾಸಗಿ ಶಾಲೆಗಳು, ಅದರಲ್ಲೂ C.B.S.E., I.C.S.E. ಶಾಲೆಗಳು ನಮ್ಮ ಶಿಕ್ಷಣ ಕಾಯಿದೆಯಿಂದ ಹೊರಗಡೆ ಇದ್ದವು. ಆಕ್ಷೇಪಣಾ ಪತ್ರಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಯಾವುದೇ ಅಧಿಕಾರ ಆ ಶಾಲೆಗಳ ಮೇಲೆ ನಡೆಯಲಿಕ್ಕೆ ಸಾಧ್ಯವಿರಲಿಲ್ಲ. ಕಳೆದ ವರ್ಷ ನಾನು ತಂದಂತಹ ಮಸೂದೆಗೆ ಅಂಗೀಕಾರ ಕೊಡುವಂತಹ ಸಂದರ್ಭದಲ್ಲಿ ನಮ್ಮ ಮೂಲ ಕಾಯಿದೆಯ ಸೆಕ್ಷನ್ 1 ಕ್ಕೆ ತಿದ್ದುಪಡಿಯನ್ನು ತಂದು, ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲಾ ಮಾದರಿಯ ಶಾಲೆಗಳು ಅಂದರೆ, ಖಾಸಗಿ ಶಾಲೆಗಳು, ಯಾವುದೇ ಸಂಯೋಜಿತ ಶಾಲೆಗಳು, C.B.S.E., I.C.S.E. ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು, ಈ ಎಲ್ಲಾ ಶಾಲೆಗಳು ನಮ್ಮ ಶಿಕ್ಷಣ ಇಲಾಖೆಯ ಅಧಿನಿಯಮದಡಿಯಲ್ಲಿ ಬರತಕ್ಕದ್ದು ಎಂದು ಹೇಳಿ ನಾವು ಈಗಾಗಲೇ ತಿದ್ದುಪಡಿಯನ್ನು ತಂದಿದ್ದೇವೆ. ಎರಡನೆಯದಾಗಿ, ಇವತ್ತು ಪರೀಕ್ಷೆಗಳಲ್ಲಿ ನಡೆಯುವಂತಹ ಅಕ್ರಮಗಳನ್ನು ತಡೆಗಟ್ಟುವಲ್ಲಿ ಅಧಿನಿಯಮಗಳ ಕೆಲವೊಂದು ಕಂಡಿಕೆಗಳಿಗೆ ತಿದ್ದುಪಡಿಯನ್ನು ತಂದು ದಂಡವನ್ನು ಜಾಸ್ತಿ ಮಾಡಿದ್ದೇವೆ. ಆದರೆ, ಈ ಕಾಯಿದೆಯನ್ನು 2015 ರಲ್ಲಿ ತಂದಂತಹ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿ ಅಲ್ಲಿಂದ ಕೆಲವೊಂದು ನಿರ್ದೇಶನ ಬಂದಂತಹ ಸಂದರ್ಭದಲ್ಲಿ ನಾನು ಮತ್ತೊಮ್ಮೆ ತಿದ್ದುಪಡಿ ತರಲಿಕ್ಕೆ ಸಾಧ್ಯವಾಗಿಲ್ಲ. ಆದರೆ, ಇವತ್ತು ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುವಂತಹ ಕೆಲಸ ಮಾಡಿದ್ದೇವೆ. ಸಲಹೆಗಳು ಬಂದಂತಹ ಹಿನ್ನೆಲೆಯಲ್ಲಿ ಒಂದನೆಯ ತರಗತಿಯಿಂದ ಈ ವರ್ಷ ಪ್ರಾರಂಭ ಮಾಡಬೇಕು, ಕ್ರಮಬದ್ಧವಾಗಿ 2025-26ನೇ ಸಾಲಿನವರೆಗೂ, 10ನೇ ತರಗತಿಯವರೆಗೂ ನಾವು ಮುಟ್ಟಬೇಕೆಂದು ನಾವು ಕೆಲಸ ಮಾಡಿದ್ದೇವೆ. ಇದರ ಜೊತೆಗೆ ನಮಗೆ ಮತ್ತೊಂದು ವಿಚಾರ ಬಂದಂಥಹದ್ದು ಏನೆಂದರೆ, ಮಧ್ಯದಲ್ಲಿ ಯಾವುದಾದರೂ ಮಗು ಬಂದು ಶಾಲೆಗೆ ಸೇರಿಕೊಂಡಂತಹ ಸಂದರ್ಭದಲ್ಲಿ ಅದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರ ರಾಜ್ಯದ ಮಗು ಆಗಿರಬಹುದು, ಅಥವಾ ಹೊರ ರಾಷ್ಟ್ರದ ಮಗು ಆಗಿರಬಹುದು, ಅಂತಹ ಮಗುವಿನ ವಿಷಯವಾಗಿ ಏನು ಮಾಡುತ್ತೀರಿ ಎನ್ನುವ ಪ್ರಶ್ನೆ ಬಂತು. ನಾವು ಈಗಾಗಲೇ ಹೇಳಿರುವಂತೆ ಆ ಮಗು ಕನ್ನಡವನ್ನು ಪ್ರಥಮ ಭಾಷೆಯಾಗಿ ಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಲೇಬೇಕೆನ್ನುವುದನ್ನು ನಾವು ಮಾಡಿದ್ದೇವೆ. ಮಧ್ಯದಲ್ಲಿ ಬಂದು ಸೇರುವ ಮಗುವಿಗೆ ಒಂದನೆಯ ತರಗತಿಯ ಪಠ್ಯಪುಸ್ತಕಗಳನ್ನು ಕೊಡಬೇಕೆನ್ನುವುದಕ್ಕೆ ತಿದ್ದುಪಡಿಯನ್ನು ತಂದು ಮಾಡಿದ್ದೇವೆ. ಎರಡನೆಯದಾಗಿ, ದಂಡ ಹಾಕುವಂತಹದ್ದು, ಅದು ಆ ಒಂದು ಸಂಸ್ಥೆಗೆ ಕಪ್ಪು ಚುಕ್ಕೆಯನ್ನು ಇಟ್ಟಂತಾಗುತ್ತದೆ. ದಂಡದ ಪ್ರಮಾಣ ಎಷ್ಟಿದೆ ಎನ್ನುವುದಲ್ಲ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ಒಂದು ಸಂಶಯವನ್ನು ವ್ಯಕ್ತ ಮಾಡಿದರು. ದಂಡ ಕಟ್ಟುವುದಾದರೆ, ದಂಡವನ್ನು ಕಟ್ಟಿ ಅದನ್ನು ಸಕ್ರಮಗೊಳಿಸಿಕೊಂಡು ಮುಂದೆ ಹೋಗುತ್ತಾರೆಂದು ಹೇಳಿದರು. Helmet ಧರಿಸದೇ ಇದ್ದಂತಹ ಸಂದರ್ಭದಲ್ಲಿ ದಂಡ ಹಾಕಿದಾಗ ಅದನ್ನು ಕಟ್ಟಿಕೊಂಡು ಹಾಗೆ ಮುಂದೆ ಹೋದಂತಾಗುತ್ತದೆಂದು ಹೇಳಿದರು. ಈಗಾಗಲೇ ಈ ವಿಚಾರದಲ್ಲಿ ಕೆಲವು ತಿದ್ದುಪಡಿಗಳನ್ನು ಸಿದ್ಧಪಡಿಸಿದ್ದೇನೆ. ಮಾನ್ಯತೆಯನ್ನು ರದ್ದು ಮಾಡುವಂತಹ ವಿಚಾರವನ್ನು ತೆಗೆದುಕೊಂಡರೆ C.B.S.E., I.C.S.E. ಶಾಲೆಗಳ ಮಾನ್ಯತೆಯನ್ನು ನವೀಕರಣ ಮಾಡುವಂತಹ ಅವಕಾಶಗಳು ನಮ್ಮ ಸರ್ಕಾರಕ್ಕೆ ಇಲ್ಲ. ಅ ಕಾರಣಕ್ಕೋಸ್ಕರ N.O.C. ಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕೆನ್ನುವ ವಿಚಾರದಲ್ಲಿ ನಾವು ಈಗಾಗಲೇ ಕಾನೂನು ಪರಿಣಿತರೊಂದಿಗೆ ಚರ್ಚೆ ಮಾಡಿದ್ದೇವೆ.

ಎರಡನೆಯದಾಗಿ, ಇದರ ಜೊತೆಗೆ C.B.S.E., I.C.S.E. ಶಾಲೆಗಳಲ್ಲಿ ದ್ವಿಭಾಷಾ ಸೂತ್ರವನ್ನು ಮಾತ್ರ ಇಟ್ಟುಕೊಂಡಿರುತ್ತಾರೆ. ಆ ಕಾರಣಕ್ಕೋಸ್ಕರ C.B.S.E. ಮತ್ತು I.C.S.E. ಬೋರ್ಡ್‌ಗಳಿಗೂ ಕೂಡ ರಾಜ್ಯದಿಂದ ನಾವು ಈಗಾಗಲೇ ಪತ್ರಗಳನ್ನು ಬರೆದಿದ್ದೇವೆ. ನಮ್ಮ ರಾಜ್ಯ ಸರ್ಕಾರದ ಶಿಕ್ಷಣ ಕಾಯಿದೆಗೆ ತಿದ್ದುಪಡಿಯನ್ನು ತಂದಿರುವಂತಹ ಹಿನ್ನೆಲೆಯಲ್ಲಿ ಇದನ್ನು ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಂಡು ತರಬೇಕೆನ್ನುವುದಾಗಿದೆ. ಮಾತೃ ಭಾಷೆ ಯಾವುದು ಇರಬೇಕು ಅಥವಾ ಭಾಷಾ ಅಲ್ಪಸಂಖ್ಯಾತರ ಮಾತೃ ಭಾಷೆ ಯಾವುದು ಇದೆ, ಅದನ್ನು ಅವರಿಗೆ ಪ್ರಥಮ ಭಾಷೆಯನ್ನಾಗಿ ಕೊಟ್ಟು ದ್ವಿತೀಯ ಭಾಷೆ ಕಡ್ಡಾಯವಾಗಿ ಕನ್ನಡ ಇರಬೇಕು. ಕನ್ನಡ ಮಾಧ್ಯಮದಲ್ಲಿ ಇರುವವರಿಗೆ ಕನ್ನಡ ಭಾಷೆ ಪ್ರಥಮ ಭಾಷೆಯಾಗಿರಬೇಕೆನ್ನುವುದನ್ನು ನಾವು ಈಗಾಗಲೇ ಮಾಡಿಕೊಂಡು ಬಂದಿದ್ದೇವೆ. ನಾವು ಆಲೋಚನೆ ಮಾಡಿರುವ ಪದವನ್ನು ನಾವು ಇಲ್ಲಿ ಏತಕ್ಕೆ ಬಳಕೆ ಮಾಡುತ್ತಿದ್ದೇವೆಂದರೆ ಇದನ್ನು ನಾವು ಈಗಾಗಲೇ ಸಿದ್ದಪಡಿಸಿಕೊಂಡು ಜಾರಿ ಮಾಡುವಲ್ಲಿ ನಾವು ಕೊಟ್ಟಿದ್ದೇವೆ.

ಮುಂದು. . .



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್ (ಮುಂದು):-**

ಕೆಲವು ತಕರಾರುಗಳು ಬಂದಂತಹ ಸಂದರ್ಭದಲ್ಲಿ ಆ ತಕರಾರುಗಳನ್ನು ನಿವಾರಣೆ ಮಾಡಿಕೊಂಡು ಖಂಡಿತವಾಗಿ 2018-19ನೇ ಸಾಲಿನಿಂದ ಕನ್ನಡವನ್ನು ಕಡ್ಡಾಯವಾಗಿ ಎಲ್ಲಾ ಶಾಲೆಗಳಲ್ಲಿಯೂ ಬೋಧನೆ ಮಾಡುವ ವ್ಯವಸ್ಥೆಯನ್ನು ಪ್ರಾರಂಭಿಸಲಾಗುವುದು. ಎರಡನೆಯದಾಗಿ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಅವರು ಬಹಳ ಸ್ಪಷ್ಟವಾದಂತಹ ಒಂದು ಮಾತನ್ನು ಹೇಳಿದರು. ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಕನ್ನಡ ಭಾಷೆಯ ಕಲಿಕೆಯನ್ನು ನಾಲ್ಕನೆಯ ತರಗತಿಯಿಂದ ಪ್ರಾರಂಭ ಮಾಡಲಾಗುತ್ತದೆ. ಇದನ್ನು ಒಂದನೆಯ ತರಗತಿಯಿಂದ ಮಾಡಬೇಕೆಂದು ಹೇಳಿದರು. ರಾಜ್ಯದಲ್ಲಿ ಆಂಗ್ಲಭಾಷಾ ಕಲಿಕೆಯನ್ನು ಒಂದನೆಯ ತರಗತಿಯಿಂದಲೇ ಪರಿಚಯಿಸುವಂತಹ ಸಂದರ್ಭದಲ್ಲಿ ಕೆಳಮನೆಯಲ್ಲಿ ಮಾತನಾಡುತ್ತಾ ನಾನು ಎಲ್ಲಾ ಶಾಲೆಗಳಲ್ಲಿಯೂ ಒಂದನೆಯ ತರಗತಿಯಿಂದ ಕನ್ನಡ ಬೋಧನೆ ಮಾಡುತ್ತೇವೆಂದು ಹೇಳಿದ್ದೆನು. ಖಂಡಿತವಾಗಿಯೂ ಇದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ನಾವು ಹಿಂಜರಿಯುವುದಿಲ್ಲ.

ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರು ಹಾಗೂ ಶ್ರೀ ಶರಣಪ್ಪ ಮಟ್ಟೂರ ಅವರು 'ದುರಂತ' ಎನ್ನುವ ಪದವನ್ನು ಬಳಕೆ ಮಾಡಿದರು. ಭಾಷೆಯ ವಿಚಾರದಲ್ಲಿ ಎಲ್ಲರಿಗೂ ಅಭಿಮಾನವಿದೆ. ಆದರೆ ಎಲ್ಲೋ ಒಂದು ಕಡೆಯಲ್ಲಿ ಆಂಗ್ಲಭಾಷೆಯಲ್ಲಿ ವ್ಯಾಸಂಗ ಮಾಡಿದರೆ ಉದ್ಯೋಗಗಳು ದೊರೆಯುತ್ತವೆ ಎಂಬ ಭಾವನೆ ಬೇರೂರಿದೆ. ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ವ್ಯಾಸಂಗಕ್ಕಾಗಿ N.E.E.T (National Eligibility-cum-Entrance Test) ಪರೀಕ್ಷೆ ಅಥವಾ C.E.T. (Common Entrance Test) ಪರೀಕ್ಷೆ ಆಗಿರಬಹುದು, ಇವೆರಡೇ ಬಹಳ ಪ್ರಮುಖವಾದ ಶ್ರೇಣಿಗಳಾಗಿರುವುದೆಂಬ ಭಾವನೆ ಬಂದು ಬಿಟ್ಟಿದೆ. ಸಮಾಜದಲ್ಲಿ ಗೌರವವಾಗಿ ಬದುಕಬಲ್ಲಂತಹ ಯಾವುದೇ ಉದ್ಯೋಗವಿದ್ದರೂ ಸಹ ಒಳ್ಳೆಯದು ಎಂಬುದನ್ನು ನಮ್ಮ ಮಕ್ಕಳಿಗೆ ಮನವರಿಕೆ ಮಾಡುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ. ದಂಡ ಹೆಚ್ಚಿಸುವಂತಹ ವಿಷಯವನ್ನು ಬದಿಗಿರಿಸಿ, ಕನ್ನಡ ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸುವುದಕ್ಕೆ ಏನೆಲ್ಲಾ ಪ್ರಾತಿನಿಧ್ಯವನ್ನು ನೀಡಬೇಕೋ ಅದಕ್ಕೆ ಸರ್ಕಾರ ಮುಂದಾಗಿದೆ. ಮುಂದೆ ಅಧಿಕಾರದಲ್ಲಿ ನಾವಿರುತ್ತೇವೆಯೋ, ನೀವಿರುತ್ತೀರೋ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಸೆಕ್ಷನ್ 128-ಎ ಇರುವ ನಮ್ಮ ಮೂಲ ಕಾಯಿದೆಗೆ ತಿದ್ದುಪಡಿಯನ್ನು ತರಬೇಕು. ತರಾತುರಿಯಲ್ಲಿ ಮಾಡುವುದು ನಮ್ಮ ಇಚ್ಛೆಯಲ್ಲ. ಕಡ್ಡಾಯವಾಗಿ ಇದನ್ನು ಜಾರಿಗೊಳಿಸಬೇಕು. ಮಾನ್ಯ ಪುಟ್ಟಣ್ಣನವರು ಹೇಳಿದಂತೆ ಖಾಸಗಿ ಸಂಸ್ಥೆಯವರಿಗೆ ಎಷ್ಟೇ ದಂಡವನ್ನು ವಿಧಿಸಿದರೂ ಕಟ್ಟಲು ಅವರು ತಯಾರಿರುತ್ತಾರೆ. ಆದರೆ ಅದರ ಹೊರೆಯನ್ನು ವಿದ್ಯಾರ್ಥಿಗಳ ಮೇಲೆ ಹಾಕುತ್ತಾರೆ. ಅಂತಹದ್ದನ್ನು ಮಾಡಲು ನಮಗೆ ಮನಸ್ಸಿಲ್ಲ. ಒಂದು ಸಂಸ್ಥೆಗೆ ರೂ.200/-ಗಳ ದಂಡವನ್ನು ವಿಧಿಸಲಾಗಿದೆ ಎಂದರೂ ಸಹ ಅದು ಆ ಸಂಸ್ಥೆಯ ಮೇಲೆ ಒಂದು ಕಪ್ಪುಚುಕ್ಕೆಯಾಗಿಯೇ ಉಳಿಯುತ್ತದೆ. ದಂಡದ ಪ್ರಮಾಣ ಎಷ್ಟಿರಬೇಕು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದು ಬೇಡ. ಕನ್ನಡ ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸುವುದಕ್ಕೆ ನಮ್ಮ ಸರ್ಕಾರ ಮುಂದಾಗಿದೆ. ಎಲ್ಲರೂ ಸೇರಿ ನಮ್ಮ ರಾಜ್ಯದಲ್ಲಿರುವ ಎಲ್ಲಾ ಮಕ್ಕಳಿಗೆ ಕನ್ನಡ ಬೋಧನೆಯ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕಾಗಿದೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವರ್ಗಾವಣೆ ಇತ್ಯಾದಿ ಎಂದು ಹೇಳಿದರು. ಕೇಂದ್ರದ ಕೇಂದ್ರೀಯ ಶಾಲೆಗಳಿಗೆ ಮಾತ್ರ ಅದು ಅನ್ವಯಿಸುತ್ತದೆ. ನಮ್ಮ ರಾಜ್ಯದಲ್ಲಿಯೇ ಬಹಳಷ್ಟು ಜನ ಸಿ.ಬಿ.ಎಸ್.ಇ./ಐ.ಸಿ.ಎಸ್.ಇ. ಶಿಕ್ಷಣ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತಿರುವ ಕೇಂದ್ರೀಯ ವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಮಾತ್ರ ವರ್ಗಾವಣೆಯಾದಾಗ ತೊಂದರೆಯುಂಟಾಗುತ್ತದೆ. ಅವರು ನಮ್ಮ ರಾಜ್ಯಕ್ಕೆ ಬಂದ ಮೇಲೆ ಖಾಸಗಿಯಾಗಿ ಬೇಕಾದರೆ ಅವರ ಭಾಷೆಯನ್ನು ಕಲಿಸಿಕೊಳ್ಳಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇರುವುದಿಲ್ಲ. ರಾಜ್ಯದಲ್ಲಿ ನಮ್ಮವರೂ ಸಹ ಫ್ಯಾಷನ್‌ಗೆ ಸಿ.ಬಿ.ಎಸ್.ಇ ಸಿಸ್ಟಮ್ ಎಲ್ಲಾ ಮಾಡಿಬಿಟ್ಟಿದ್ದಾರೆ. ಅವರಾದರೂ ಕಡ್ಡಾಯವಾಗಿ ಕನ್ನಡ ಕಲಿಕೆಯನ್ನು ಮಾಡಬೇಕಲ್ಲವೆ?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಬಂದಂತಹ ಆಕ್ಷೇಪಣೆಗಳಿಗೆ ಪರಿಹಾರವನ್ನು ಹುಡುಕುವಂತಹ ಸಂದರ್ಭದಲ್ಲಿ ಕೆಲವು ಮಕ್ಕಳು ಹೊರರಾಜ್ಯಗಳಿಂದ, ಹೊರದೇಶಗಳಿಂದ ಬಂದಂತಹವರಾಗಿರುತ್ತಾರೆ. ಇಂದು ಕರ್ನಾಟಕದಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗಿರುವುದರಿಂದ ಬೇರೆ ರಾಜ್ಯಗಳಿಂದಲೂ ಹಾಗೂ ಬೇರೆ ದೇಶಗಳಿಂದಲೂ ವಿದ್ಯಾಭ್ಯಾಸಕ್ಕಾಗಿ ನಮ್ಮ ರಾಜ್ಯಕ್ಕೆ ಬರುವ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ. ಆ ಕಾರಣದಿಂದಾಗಿ ಮಕ್ಕಳನ್ನು ಆರನೇ ತರಗತಿಗೆ, ಎಂಟನೇ ತರಗತಿಗೆ, ಒಂಬತ್ತನೇ ತರಗತಿಗೆ ಪ್ರವೇಶವನ್ನು ತೆಗೆದುಕೊಂಡರೂ ಸಹ ಕನ್ನಡ ಭಾಷೆಯನ್ನು ಅವರಿಗೆ ಪರಿಚಯಿಸುವ ನಿರ್ಣಯವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಇದನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭ ಮಾಡಬೇಕೆಂದು ಕೊಂಡಾಗ ಕೆಲವು ತಕರಾರುಗಳು, ಆಕ್ಷೇಪಣೆಗಳು ಬಂದವು. ಈಗಾಗಲೇ ನಾವು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಿಂದ ಒಂದನೇ ತರಗತಿಯಿಂದ ಕಡ್ಡಾಯವಾಗಿ ಕನ್ನಡ ಕಲಿಸುವುದರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಶಾಲಾ ಮುಖ್ಯಸ್ಥರನ್ನು ಕರೆಸಿಯೂ ಸಹ ನಾವು ಮಾತನಾಡಿದ್ದೇವೆ. ನ್ಯಾಯಾಲಯಕ್ಕೆ ಹೋಗುತ್ತೇವೆಂದು ಅವರು ಹೇಳಿರುವುದು ಅನೇಕ ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಅವರು ನ್ಯಾಯಾಲಯಕ್ಕೆ ಹೋದರೂ ಸಹ ಅವರಿಗೆ ಈ ವಿಷಯದಲ್ಲಿ ಯಾವುದೇ ಲಾಭವಾಗುವುದಿಲ್ಲ. ಜ್ಞಾನ ಆಯೋಗದವರು ನೀಡಿರುವ ವರದಿಯಲ್ಲಿರುವಂತೆ ದ್ವಿಭಾಷಾ ಸೂತ್ರವನ್ನು ಒಪ್ಪಿಕೊಳ್ಳಬೇಕು ಎನ್ನುವುದನ್ನು ಸರ್ಕಾರ ಇನ್ನೂ ಚರ್ಚೆಗೆ ತೆಗೆದುಕೊಂಡಿರುವುದಿಲ್ಲ. ನಮ್ಮ ರಾಜ್ಯದಲ್ಲಿ ಈಗಾಗಲೇ ತ್ರಿಭಾಷಾ ಸೂತ್ರ ಇರುವುದರಿಂದ ಯಾವುದೇ ರೀತಿಯ ಬದಲಾವಣೆಯನ್ನು ಮಾಡುವಂತಹ ಸಂದರ್ಭ ನಮ್ಮ ಮುಂದೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಷೆಯ ಬಗ್ಗೆ ಪ್ರೀತಿ, ಅಭಿಮಾನ ಇದ್ದರೆ ಮಾತ್ರ ಭಾಷೆಯನ್ನು ಕಲಿಯಲು ಸಾಧ್ಯ. ಇದನ್ನು ನಮ್ಮ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಲ್ಲಿಯೂ ತರುವ ಪ್ರಯತ್ನವನ್ನು ನಮ್ಮ ರಾಜ್ಯ ಸರ್ಕಾರ ಆಲೋಚನೆ ಮಾಡುತ್ತಿದೆ ಎಂದು ಏನು ಹೇಳಿದ್ದೇವೆಯೋ, ಅದಕ್ಕೆ ನಾನು ಬಹಳ ಜವಾಬ್ದಾರಿಯಿಂದ ಸದನದಲ್ಲಿ ಉತ್ತರವನ್ನು ಕೊಡುತ್ತಿದ್ದೇನೆ. ಪರಿಶೀಲನೆ ಅಷ್ಟೇ ಅಲ್ಲ, ತಿದ್ದುಪಡಿಗೆ ನಾವು ಈಗಾಗಲೇ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೇವೆ. ರಾಜ್ಯದ ಯಾವುದೇ ಶಾಲೆಯು ಇದನ್ನು ಉಲ್ಲಂಘನೆ ಮಾಡಿದರೆ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮುಂದಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ಸ್ಪಷ್ಟೀಕರಣ ಬೇಕು. 1983ನೇ ಇಸವಿಯ ಕಾಯಿದೆ ಸೆಕ್ಷನ್ 128ರ ಅಡಿಯಲ್ಲಿ ದಂಡ ವಿಧಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರವನ್ನು ಸರ್ಕಾರ ಮಾಡಿದೆ. ಪ್ರಾಥಮಿಕ ಶಾಲೆಗಳಿಗೆ ಆಯಾ ಜಿಲ್ಲೆಗಳ ಉಪ ನಿರ್ದೇಶಕರು ಸಕ್ಷಮ ಪ್ರಾಧಿಕಾರದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಪ್ರೌಢಶಾಲೆಗಳಿಗೆ ಆಯಾ ವಿಭಾಗಮಟ್ಟದ ನಿರ್ದೇಶಕರು ಸಕ್ಷಮ ಪ್ರಾಧಿಕಾರದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು. ಹೆಸರಿಗೆ ಕನ್ನಡ ಶಾಲೆಗಳು; ಇಂಗ್ಲಿಷ್ ಬೋಧನೆಯೂ ಇದೆ. ನಮ್ಮ ಅಧಿಕಾರಿಗಳು ಅದಕ್ಕೆ adjust ಆಗಿ ಬಿಟ್ಟಿರುತ್ತಾರೆ. ಸತ್ಯ ಗೊತ್ತಿದ್ದರೂ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಸಕ್ಷಮ ಪ್ರಾಧಿಕಾರಗಳಿಗೆ ಕನ್ನಡ ಭಾಷೆಯ ಲೇಖಕರು, ಭಾಷೆಯ ಬಗ್ಗೆ ಕಾಳಜಿ ಇರುವಂತಹ ವಿದ್ವಾಂಸರು ಅಂತಹವರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ಮಾಡಬೇಕು. ಬಿ.ಇ.ಓ. ಗಳು ಶಾಲೆಗಳ ಮಾಹಿತಿಯನ್ನು ತಂದಾಗ ಎಲ್ಲಾ ಸರಿಯಾಗಿದೆ ಎಂದು ಬರೆದುಕೊಂಡು ಬರುತ್ತಾರೆ. ಸುಮ್ಮನೆ ಇಲ್ಲದ ತಲೆನೋವನ್ನು ಏಕೆ ಮೈಮೇಲೆ ಎಳೆದುಕೊಳ್ಳಬೇಕು ಎಂದು ಅವರು ದಂಡವನ್ನೂ ವಿಧಿಸುವುದಿಲ್ಲ, ದೂರನ್ನೂ ಕೊಡುವುದಿಲ್ಲ. ಆದ್ದರಿಂದ ಸಕ್ಷಮ ಪ್ರಾಧಿಕಾರಕ್ಕೆ ಕನ್ನಡ ಭಾಷಾ ಕಳಕಳಿ ಇರುವಂತಹವರನ್ನು ಸದಸ್ಯರನ್ನಾಗಿ ನಾಮಕರಣ ಮಾಡದೆ ಹೋದರೆ, ಅದನ್ನು ಪತ್ತೆ ಹಚ್ಚುವುದಕ್ಕೆ ಹೋಗುವುದಿಲ್ಲ. ಅನುಷ್ಠಾನವೂ ಸರಿಯಾದ ರೀತಿಯಲ್ಲಿ ಆಗುವುದಿಲ್ಲ. ಪ್ರಾಧಿಕಾರಕ್ಕೆ ಅಧಿಕಾರೇತರರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು ಹಾಗೂ ದಂಡ ಮತ್ತು ಮಾನ್ಯತೆ ಇವೆರಡನ್ನೂ ಶಿಕ್ಷೆಯಲ್ಲಿ ಸೇರಿಸಬೇಕು. ಈ ಎರಡೂ ಕೆಲಸಗಳಾಗಬೇಕು.

**ಸಭಾಪತಿಯವರು:-** ಮುಂದಿನ ಸರದಿ ಶ್ರೀ ವಿ.ಎಸ್.ಉಗ್ರಪ್ಪನವರದು. ತಾವು ತಡವಾಗಿ ಬಂದಿದ್ದೀರೆಂದು ಸ್ಪಷ್ಟೀಕರಣ ಕೇಳಲು ಮಾತ್ರ ಅವಕಾಶ ನೀಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಒಂದು ಕವಿಯ ನಾಣ್ಣುಡಿಗಳು ಜ್ಞಾಪಕವಾಗುತ್ತಿದೆ.

ಮಕ್ಕಳಿಗೆ ತಂದ್ಯ ಬಾಲ್ಯದೊಳು ಲಕ್ಕರೆಯ ವಿದ್ಯೆ ನೇರ್ಪಡಿದ್ದೊಡೆ ಕೊಂದಂ।
ಲಕ್ಕಧನವಿರಲು ಕೆಡಗಂ ಚಿಕ್ಕಂದಿನ ವಿದ್ಯೆ ಪರಗು ಚೂಡಾರತ್ನ॥

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಕವಿ ಹೇಳುತ್ತಾನೆ. ಆ ಚಿಕ್ಕಂದಿನ ವಿದ್ಯೆ ಯಾವ ರೀತಿ ಇರಬೇಕು ಎಂದು ಸಾಕಷ್ಟು ಚರ್ಚೆಗಳಾಗಿದೆ. ನಾನು ಅದನ್ನು ಹೆಚ್ಚು ಲಂಬಿಸಲಿಕ್ಕೆ ಹೋಗುವುದಿಲ್ಲ. ಭಾಷೆಯ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ನಮ್ಮ ಸಂವಿಧಾನದ ಆರ್ಟಿಕಲ್ 350(ಎ) ನಲ್ಲಿ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ಇರಬೇಕು ಎಂದು ಹೇಳಲಾಗಿದೆ. Article 350A says about ***"Facilities for instruction in mother-tongue at primary stage."*** It reads thus,

> *"It shall be the endeavour of every State and of every local authority within the State to provide adequate facilities for instruction in the mother-tongue at the primary stage of education to children belonging to..."*

ಇಲ್ಲಿ ಬೇರೆ ಬೇರೆ categories ಬಗ್ಗೆ ಹೇಳುತ್ತಾರೆ. ಅದರಲ್ಲಿ linguistic minorities ಎಂಬುದಕ್ಕೆ ಹೆಚ್ಚು ಒತ್ತನ್ನು ಕೊಡಲಾಗಿದೆ. ಇದು ಸಂವಿಧಾನದ ಆಶಯವಾಗಿದೆ. ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಶಿಕ್ಷಣವನ್ನು ನೀಡಿದಾಗ ಆಗುವ ಪರಿಣಾಮ ಬೇರೊಂದು ಭಾಷೆಯಲ್ಲಿ ಶಿಕ್ಷಣವನ್ನು ನೀಡಿದಾಗ ಆಗುವ ಸಾಧ್ಯತೆ ಇಲ್ಲ. In this 21st century, the world has become a small village. ಹಾಗಾಗಿ ಬೇರೆ ಬೇರೆ ಭಾಷೆಗಳ ಅವಶ್ಯಕತೆ ಇದೆ ಅಥವಾ ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಮಗುವಿನ ಬೆಳವಣಿಗೆ ಆಗಬೇಕಾದರೆ ಮಾತೃಭಾಷೆಯಲ್ಲಿ ಆಗಬೇಕೆಂಬುದು ಸಂವಿಧಾನದ ಆಶಯವಾಗಿದೆ. ಇದು ರಾಜ್ಯದ ಜನತೆಯ ಆಶಯವೂ ಆಗಿದೆ. ಸ್ವಾತಂತ್ರ್ಯ ಬಂದು 70 ವರ್ಷಗಳಾಯಿತು. ಇನ್ನೂ ಎಷ್ಟು ವರ್ಷಗಳಾಗಬೇಕು. ಸಂವಿಧಾನದ ಆಶಯಗಳ ರೀತ್ಯಾ yes, this is our policy. ಇದು State List ನಲ್ಲಿ ಬರತಕ್ಕಂತಹ ಶಿಕ್ಷಣ. Central List ನಲ್ಲಿ ಬರತಕ್ಕಂತಹ ಶಿಕ್ಷಣವಿದ್ದು, ಇದಕ್ಕೆ ರಾಜ್ಯ ಸರ್ಕಾರ ಕಡ್ಡಾಯವಾಗಿ ಒಂದು ನೀತಿಯನ್ನು ರೂಪಿಸಬೇಕು.

(...ಮುಂದು)

(140)20.02.2018-04.10-ಎಂವಿ-ಆರ್‌ಎನ್

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು):-**

ಇದರ ಜೊತೆಗೆ ಸುಪ್ರೀಂ ಕೋರ್ಟ್‌ನ Judgment ನಲ್ಲಿ it is a choice of parents ಎಂದು ಇತ್ತೀಚೆಗೆ ತೀರ್ಪು ಕೊಟ್ಟಿದೆ. ಬಹುಶಃ ಇದನ್ನು over come ಮಾಡುವುದಕ್ಕೆ, National Policy ಯನ್ನು evolve ಮಾಡುವುದಕ್ಕೆ, ಕೇಂದ್ರ ಸರ್ಕಾರ ಅಗತ್ಯವಿದ್ದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ, ರಾಜ್ಯ ಸರ್ಕಾರ ಒಂದು resolution ಮಾಡಿ, ಕೇಂದ್ರದ ಮೇಲೆ ಒತ್ತಾಯ ಮಾಡಿದಾಗ ಮಾತ್ರ ಈ ರಾಷ್ಟ್ರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರತಕ್ಕಂಥ ಮಾತೃಭಾಷೆಯ ಹಿನ್ನೆಲೆಯಲ್ಲಿ ಆ ಶಿಕ್ಷಣವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡುವಂಥದ್ದಕ್ಕೆ ಸಾಧ್ಯತೆ ಇದೆ. ಏಕೆಂದರೆ, ಅನೇಕ ಜನ, ಅನೇಕ ರೀತಿಯಲ್ಲಿ ಮಾತನಾಡುತ್ತಾರೆ. ಕೆಲವು ಜಿಲ್ಲೆಗಳಲ್ಲಿ ಮಾತ್ರ ಕನ್ನಡವನ್ನು ಮಾತನಾಡುವುದು ಸರಿಯೆಂದು ಮಾನ್ಯ ಕೇಂದ್ರದ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಬಹುಶಃ ಕನ್ನಡವನ್ನು ಯಾವ ರೀತಿ ಮಾತನಾಡಬೇಕು ಎಂಬುದು, ಒಬ್ಬೊಬ್ಬರು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿ ಮಾತನಾಡುತ್ತಾರೆ. ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ, ಮಾತೃಭಾಷೆಯಲ್ಲಿ ಶಿಕ್ಷಣವನ್ನು ಕೊಡುವುದರ ಮೂಲಕ ಮಗುವಿನ ಬೆಳವಣಿಗೆ ಮತ್ತು ಅದರ ಬೌದ್ಧಿಕ ಶಕ್ತಿಯನ್ನು ಹೆಚ್ಚು ಮಾಡುವಂತಹ ಸಾಧ್ಯತೆ ಇದೆ. ಇದನ್ನು ವಿಳಂಬ ಮಾಡದೆ, ರಾಜ್ಯ ಸರ್ಕಾರ ಒಂದು ನೀತಿಯನ್ನು ರೂಪಿಸಬೇಕು ಮತ್ತು National Policy ಯನ್ನು evolve ಮಾಡುವುದಕ್ಕೆ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಎರಡೂ ಸದನಗಳಲ್ಲಿ ಒಂದು resolution ಮಾಡಿ. National Policy ಯನ್ನು evolve ಮಾಡುವುದಕ್ಕೆ ಒತ್ತಾಯ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರು ಹೇಳಿದಂತಹ ವಿಷಯ. ನಾವು ಈಗ ಸಕ್ಷಮ ಪ್ರಾಧಿಕಾರದ ವಿಚಾರದಲ್ಲೂ ಕೂಡ ಈಗಾಗಲೇ ನೋಟಿಫಿಕೇಶನ್ ಮಾಡಿದ್ದೇವೆ. ನಾಲ್ಕು ವಿಭಾಗ ಮಟ್ಟದಲ್ಲಿ ಯಾರ್ಯಾರು, ಎಲ್ಲೆಲ್ಲಿ, ಯಾವುದನ್ನು ಮಾಡಬೇಕು. ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ಯಾರು, ಪ್ರೌಢಶಿಕ್ಷಣಕ್ಕೆ ಯಾರು ಎಂದು. ಅದರ ಜೊತೆಗೆ ಅವರು ಕೊಟ್ಟಂತಹ ಒಂದು ಸಲಹೆ. ಇದಕ್ಕೆ ಸರ್ಕಾರಿ ರಹಿತವಾದಂತಹ ಕನ್ನಡದ ಅಭಿಮಾನದ ಹಿನ್ನೆಲೆ ಇರುವಂತಹವರನ್ನು ಸದಸ್ಯರನ್ನಾಗಿ ಮಾಡಬೇಕೆಂದು...

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಕನ್ನಡ ಸಾಹಿತ್ಯ ಪರಿಷತ್ತಿನವರು ಸಹ ಆಗಬಹುದು.

**ಉಪಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರೇ, ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಲಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರು ತಮ್ಮ ಸಲಹೆಯನ್ನೇನು ಕೊಟ್ಟಿದ್ದಾರೆ, ಅದನ್ನು ಯಾವ ರೀತಿ ಅನುಷ್ಠಾನ ಮಾಡಬೇಕಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಅಂದರೆ, ಕನ್ನಡ ಸಾಹಿತ್ಯ ಪರಿಷತ್ತಿನವರನ್ನು ತೆಗೆದುಕೊಳ್ಳಬೇಕೆ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರನ್ನು ಜೊತೆಗೆ ತೆಗೆದುಕೊಳ್ಳಬೇಕೊ ಎಂಬುದನ್ನು ಪರಿಶೀಲನೆ ಮಾಡಿ, ನಾವು ನಿಮ್ಮ ಸಲಹೆಯನ್ನು ಯಾವ ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೊ ಆಗ ತೆಗೆದುಕೊಳ್ಳೋಣ. ಮಾನ್ಯ ಉಗ್ರಪ್ಪನವರು ಮಾತನಾಡಿದಂತಹ ವಿಚಾರವನ್ನು ನಾನು ಒಪ್ಪುತ್ತೇನೆ. ಸಂವಿಧಾನದ ಅನುಸೂಚಿ 21ರ ಅಡಿಯಲ್ಲಿ ಭಾಷಾ ಅಲ್ಪಸಂಖ್ಯಾತರ ಶಾಲೆಗಳನ್ನು ಪ್ರಾರಂಭ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹ ಅಧಿಕಾರವನ್ನು ಆಯಾಯ ರಾಜ್ಯಗಳಿಗೆ ಕೊಟ್ಟಿದೆ. ಎರಡನೆಯದಾಗಿ ಆರ್ಟಿಕಲ್ 350(ಎ) ಪ್ರಕಾರ ಅವರು ಏನು ಹೇಳಿದ್ದಾರೆ, ಅದನ್ನು ನಾನು ಕೂಡ ಒಪ್ಪುತ್ತೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ನಮಗೆ ಹಿನ್ನಡೆಯಾಗಿದ್ದರೂ ಕೂಡ ನಾವು ಆ ಪದ್ಧತಿಯನ್ನು ಎಲ್ಲೂ ಕೂಡ ಬಿಟ್ಟಿಲ್ಲ. ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷೆಯಲ್ಲೇ ಅನುಮತಿಯನ್ನು ನೀಡುತ್ತಿರುವಂಥದ್ದು, ಅದು ಆಗಿದ್ದರೂ ಕೂಡ ಇವತ್ತಿನ ದಿವಸ ನಮ್ಮ ಸದಸ್ಯರು ಮಾತನಾಡುತ್ತಿರುವಂಥದ್ದು, ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವಂತಹ ನಿರ್ಣಯವನ್ನು ರಾಜ್ಯ ಸರ್ಕಾರ ಏನು ತೆಗೆದುಕೊಂಡಿದೆ, ಅದನ್ನು ಅನುಷ್ಠಾನ ಮಾಡುವಂತಹ ಸಂದರ್ಭದಲ್ಲಿ ನಾವು ರಾಜ್ಯ ಸಂಯೋಜಿತ ಶಾಲೆಗಳಿಗೆ ಮಾಡುವುದರಲ್ಲಿ ನಮಗೆ ಯಾವುದೇ ಅಭ್ಯಂತರವಿಲ್ಲ, ಅದು ನಮ್ಮ ಕೈಯಲ್ಲೆ ಇದೆ. ಆದರೆ, ಐಸಿಎಸ್‌ಇ ಮತ್ತು ಸಿಬಿಎಸ್‌ಇ ಅಂತರರಾಷ್ಟ್ರೀಯ ಸಂಯೋಜಿತ ಶಾಲೆಗಳಲ್ಲಿ ನಮ್ಮ ಮೂಲ ಕಾಯಿದೆಗೆ ತಿದ್ದುಪಡಿ ತಂದು, ನಾವು ಈಗಾಗಲೇ ಅವರನ್ನು ನಮ್ಮ ಅಡಿಯಲ್ಲಿ ತಂದಂತಹ ಸಂದರ್ಭದಲ್ಲಿ, ಆ ಶಾಲೆಗಳಲ್ಲಿ ಕನ್ನಡ ಬೋಧನೆಯನ್ನು ಕಡ್ಡಾಯವಾಗಿ ಮಾಡುವುದಕ್ಕೆ ಈಗಾಗಲೇ ಪ್ರಸ್ತಾಪ ತಂದಿದ್ದು, ಯಾವುದೇ ರೀತಿಯಿಂದಲೂ ಸಹ ಸಂವಿಧಾನದ ಉಲ್ಲಂಘನೆ ಆಗಿಲ್ಲ ಮತ್ತು ನಮ್ಮ ರಾಜ್ಯದ ಅಧಿಕಾರ ಏನಿದೆ, ಅದನ್ನು ಮೊಟಕು ಮಾಡುವಂತಹ ಕೆಲಸವನ್ನು ನಾವು ಎಲ್ಲೂ ಸಹ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದ ಶಿಕ್ಷಣ ನೀತಿಯನ್ನು ಈಗಾಗಲೇ ಸಿದ್ಧಪಡಿಸಿದ್ದೇವೆ, ಅದನ್ನು ಈಗ ಪ್ರಕಟ ಮಾಡಬೇಕಾಗಿದೆ. ಅದರಲ್ಲಿ ನಾವು ಎಲ್ಲಾ ಅಂಶಗಳನ್ನು ತಂದಿದ್ದೇವೆ. ಇವತ್ತಿನ ದಿವಸ ಕೇಂದ್ರದ ಶಿಕ್ಷಣ ನೀತಿ ಆಗಬೇಕೆಂದು ಹೇಳಿದಾಗ, ಪ್ರಸ್ತುತ ಯಾರು ಸರ್ಕಾರದಲ್ಲಿ ಇದ್ದಾರೆ ಅವರು ಕೊಟ್ಟಿರುವುದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೆ ಅಥವಾ ಇಲ್ಲವೆ ಎಂಬುದರ ಚರ್ಚೆಯನ್ನು ಸಹ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರಕ್ಕೆ ಇರುವಂತಹ ಅಧಿಕಾರ, ಅದನ್ನು ನಾನು dilute ಮಾಡುವುದಕ್ಕೆ ಮಾಡಿಕೊಳ್ಳುವಂಥದ್ದಕ್ಕೆ ನಾವು ತಯಾರಿಲ್ಲ. ಆ ಕಾರಣದಿಂದ ರಾಜ್ಯ ಸರ್ಕಾರ ಶಿಕ್ಷಣ ನೀತಿಯನ್ನು ತರುವುದಕ್ಕೆ ಮುಂದಾಗಿದೆ. ನಾವು ನಮ್ಮ ಭಾಷೆಯ ಉಳಿವು ಮತ್ತು ಅಭಿವೃದ್ಧಿ ಮಾಡುವುದಕ್ಕೆ ಬದ್ಧರಾಗಿದ್ದೇವೆ. ಈಗಾಗಲೇ ಏನು ಸಲಹೆಗಳು ಬಂದಿವೆ, ಅಂತಹ ಸಲಹೆಗಳನ್ನು ಮುಂದಿಟ್ಟುಕೊಂಡು, ಕೇವಲ ದಂಡ ಹಾಕುವುದಷ್ಟೇ ಅಲ್ಲ, ನಾವು ಆ ಸಂಯೋಜನೆಯನ್ನು ಹಿಂದಕ್ಕೆ ಪಡೆಯುವುದು ಮತ್ತು ಎನ್‌ಓಸಿ ಯನ್ನು ರದ್ದು ಮಾಡುವುದು ಆಗಿರಬಹುದು ಅಥವಾ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಬೋರ್ಡ್‌ಗೆ ಸ್ಪಷ್ಟವಾಗಿ ನಮ್ಮ ರಾಜ್ಯದ ನಿಲುವನ್ನು ಪ್ರಕಟ ಮಾಡುವುದು ಸಹ ಆಗಿರಬಹುದು. ನಾವು ಅದನ್ನು ಖಂಡಿತವಾಗಿ ಮಾಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಕನ್ನಡ ಭಾಷೆ ಅಥವಾ ಮಾತೃಭಾಷೆ ಎಂದು ಹೇಳುವುದಕ್ಕಿಂತ, ರಾಜ್ಯಭಾಷೆ ಎಂದು ಹೇಳಿದರೆ ಒಳ್ಳೆಯದಾಗುವುದಿಲ್ಲವೆ?

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಆಯಿತು, ಅದನ್ನು ನೋಡೋಣ. ಏಕೆಂದರೆ, ಸಂವಿಧಾನದ ಅನುಸೂಚಿ 21ರ ಅಡಿಯಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಅವರದೇ ಆದಂತಹ ಭಾಷೆಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆ. ಉರ್ದು ಭಾಷೆ ಆಗಿರಬಹುದು, ತೆಲುಗು ಭಾಷೆ ಆಗಿರಬಹುದು ಮತ್ತು ಮರಾಠಿ ಭಾಷೆ ಆಗಿರಬಹುದು. ಈಗ ಗಡಿಭಾಗದ ಶಾಲೆಗಳು ಏನಿವೆ, ಅಲ್ಲಿರುವಂತಹ ಶಾಲೆಗಳಿಗೆ ಸಂವಿಧಾನದಲ್ಲೆ ಅವರಿಗೆ ಅಧಿಕಾರ ಕೊಟ್ಟಿರುವಂತಹ ಸಂದರ್ಭದಲ್ಲಿ, ಕನ್ನಡವನ್ನು ಒಂದು ಭಾಷೆಯಾಗಿ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದಕ್ಕೆ ಅದನ್ನು ಇಲ್ಲಿ ಉಲ್ಲೇಖ ಮಾಡಿದ್ದು. ಆ ಕಾರಣದಿಂದ ಇದನ್ನು ಅನುಷ್ಠಾನ ಮಾಡುವಂಥದ್ದರಲ್ಲಿ ಸರ್ಕಾರ ಬದ್ಧತೆಯಿಂದ ಪ್ರಯತ್ನ ಮಾಡುತ್ತಿದೆ. ಈ ಸದನದ ಮೂಲಕ ಮತ್ತು ಮಾಧ್ಯಮದ ಮೂಲಕ ರಾಜ್ಯದ ಪ್ರತಿಯೊಬ್ಬರು ಕೂಡ ಈ ಭಾಷೆಯ ಅಭಿಮಾನ್ನದಲ್ಲಿ ಮುಂದಾಗಬೇಕು ಮತ್ತು ನಮ್ಮ ಜೊತೆ ಕೈಜೋಡಿಸಬೇಕೆಂದು ಮನವಿ ಮಾಡಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮಂತ್ರಿಗಳ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನೆ ಮಾಡುವುದಕ್ಕೆ ಹೋಗಲಿಲ್ಲ. ನಮ್ಮ ಸಂವಿಧಾನದಲ್ಲಿ concurrent list, State list and Central listನಲ್ಲಿ ಏನೆಲ್ಲಾ ಇದೆಯೆಂದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. ಆದರೆ, ನಾನು ಯಾವುದಕ್ಕೆ ಅಮೆಂಡ್‌ಮೆಂಟ್‌ನ ಪ್ರಶ್ನೆಯನ್ನು ಹೇಳಿದೆ ಎಂದರೆ, ಈಗ ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್ ಇದೆ. ಯಾವ ಭಾಷೆಯನ್ನು ತೆಗೆದುಕೊಳ್ಳಬೇಕು ಎನ್ನುವಂಥದ್ದಕ್ಕೆ ತೀರ್ಮಾನ ಮಾಡುವುದು ಸರ್ಕಾರ ಅಲ್ಲ, ಅವರ ಪೋಷಕರು ಎಂದು ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ನಲ್ಲಿ ಇದೆ. ಅದನ್ನು annul ಮಾಡಬೇಕೆನ್ನುವ ಹಾಗೆ ಇದ್ದರೆ, ultimately ಸಂವಿಧಾನದ ತಿದ್ದುಪಡಿ ಆಗಬೇಕಾಗುತ್ತದೆ. ಆಗ ಮಾತ್ರ ಮಾತೃಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಶಿಕ್ಷಣವನ್ನು primary livel ನಲ್ಲಿ ಕೊಡುವುದಕ್ಕೆ ಅವಕಾಶ ಇದೆ. ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ ರಾಜ್ಯ ಸರ್ಕಾರಗಳಿಗೆ ಆಗುವುದಿಲ್ಲ. ಅದನ್ನು ಕೇಂದ್ರ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಮಾಡಬೇಕಾಗಿರುವಂತಹ ಹಿನ್ನೆಲೆಯಲ್ಲಿ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು National Policy, evolve ಮಾಡುವುದಕ್ಕೆ ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ ಮತ್ತು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯುವುದಕ್ಕೂ ಸಹ ಪತ್ರ ಬರೆದಿದ್ದೇನೆ ಎಂದು ಹೇಳಿ ನಾಲ್ಕಾರು ಬಾರಿ ಸಾರ್ವಜನಿಕವಾಗಿ ಹೇಳಿದ್ದಾರೆ. ಹಾಗಾಗಿ ನಾನು ಸರ್ಕಾರಕ್ಕೆ ಕೇಳುವುದಕ್ಕೆ ಬಯಸುತ್ತೇನೆ. ಈಗಲೂ ಸಹ ಈ ವಿಚಾರದ ಹಿನ್ನೆಲೆಯಲ್ಲಿ, National Policy, evolve ಮಾಡುವುದಕ್ಕೆ ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ನ ಹೊರಗಡೆ ಬರುವುದಕ್ಕೆ, ಅದನ್ನು annul ಮಾಡುವುದಕ್ಕೆ ಸಂವಿಧಾನಕ್ಕೆ ತಿದ್ದುಪಡಿ ಮಾಡಿಯಾದರೂ ಸಹ, ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಸಿಗುವುದಕ್ಕೆ ಸರ್ಕಾರ ಒತ್ತಡ ತರುವುದು ಸೂಕ್ತ ಮತ್ತು ಸಮಂಜಸ, ಆ ದಿಕ್ಕಿನಲ್ಲಿ ಸರ್ಕಾರ ಏನು ಮಾಡುತ್ತದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟ್‌ನ ಆದೇಶದ ನಂತರ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಈಗಾಗಲೇ ಪತ್ರಗಳನ್ನು ಬರೆದಿದ್ದಾರೆ. ಇದರ ಜೊತೆಗೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೂ ಕೂಡ ಪತ್ರವನ್ನು ಬರೆದಿದ್ದಾರೆ. ನಮ್ಮ ಸ್ಥಳೀಯವಾದಂತಹ ಭಾಷೆಗಳ ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಮತ್ತು ಈ ಭಾಷೆಯ ಉಳಿವಿಗಾಗಿ ನಾವು ನಮ್ಮ ನಮ್ಮ ರಾಜ್ಯಗಳಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹೇರಬೇಕು. National Language Policy ಯನ್ನು ತರುವುದಕ್ಕೆ, ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು, ಸಂವಿಧಾನದ ತಿದ್ದುಪಡಿಗೆ ಅನುವು ಮಾಡಿಕೊಡುವಂಥದ್ದಕ್ಕೆ ಪ್ರಯತ್ನ ಆಗುತ್ತಿರುವುದು ಒಂದು ಕಡೆ ಇದೆ. ನಾನು ಪ್ರಸ್ತಾಪ ಮಾಡಿರುವುದು ಶಿಕ್ಷಣದ ನೀತಿಯ ವಿಚಾರದಲ್ಲಿ. ಅದನ್ನು ಯಾವ ರೀತಿ ಮಾಡಬೇಕು ಎಂಬುದು ಒಂದು. ಎರಡನೆಯದಾಗಿ, ಈಗಾಗಲೇ ಸುಪ್ರೀಂ ಕೋರ್ಟ್ ತೀರ್ಪನ್ನು ಕೊಟ್ಟಿರುವಂಥದ್ದು. ಮಗುವಿನ ಶೈಕ್ಷಣಿಕ ಬೆಳವಣಿಗೆಗೆ ಯಾವ ಶಾಲೆ ಅಥವಾ ಯಾವ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುವಂತಹ ಅಧಿಕಾರವನ್ನು ಆ ಪೋಷಕರಿಗೆ ಕೊಟ್ಟಿದೆ ಎಂದು. ಮಾತೃಭಾಷೆಯ ವಿಚಾರದಲ್ಲಿ ಎಲ್ಲೂ ಉಲ್ಲೇಖ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೆ ಕೊಡಬೇಕೆಂಬ ನಿಯಮವನ್ನು ಹಾಕಿಕೊಂಡಿದ್ದೇವೆ ಮತ್ತು ಅದರಂತೆ ನಡೆಯುತ್ತಿದ್ದೇವೆ. ಇದನ್ನು ಉಲ್ಲಂಘನೆ ಮಾಡಿದಂತಹವರ ಮೇಲೂ ಸಹ ಕ್ರಮ ತೆಗೆದುಕೊಳ್ಳುವುದು ಸಹ ಆಗಿದೆ. ನನಗೆ ನಿಜಕ್ಕೂ ಸಹ ಆಶ್ಚರ್ಯವಾಗುತ್ತದೆ. ಆ ಕ್ಷೇತ್ರ ಪ್ರತಿನಿಧಿಸುವಂತಹ ಎಲ್ಲ ನಮ್ಮ ಸದಸ್ಯರು. ನಮ್ಮ ಇಲಾಖೆಯಲ್ಲಿ ಇರುವಂತಹ ಎಲ್ಲಾ ಅಧಿಕಾರಿಗಳು,...

**ಸಭಾಪತಿಯವರು**:- ಮಾನ್ಯ ಸಚಿವರೇ, ಮಾನ್ಯ ಸದಸ್ಯರಾದ ಉಗ್ರಪ್ಪನವರು ಹೇಳುತ್ತಿರುವುದು ಏನೆಂದರೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಏನಿಲ್ಲ National Language Policy ವಿಚಾರದಲ್ಲಿ, ಸರ್ಕಾರದಿಂದ ಈಗಾಗಲೇ ಪತ್ರ ಬರೆದಿದ್ದೇವೆ. ಅದರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆದರೆ, ರಾಜ್ಯದಲ್ಲಿ ಎಲ್ಲೂ ಸಹ ನಾವು dilute ಮಾಡಿಕೊಳ್ಳುವುದಕ್ಕೆ ಹೋಗಿಲ್ಲ ಎಂದು ಹೇಳುತ್ತೇನೆ.

**ಸಭಾಪತಿಯವರು**:- ನಿಯಮ 330ರ ಅಡಿಯಲ್ಲಿನ ಚರ್ಚೆ ಇಲ್ಲಿಗೆ ಮುಕ್ತಾಯಗೊಂಡಿದೆ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

**8 ಗಮನ ಸೆಳೆಯುವ ಸೂಚನೆ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಂವಿಧಾನದ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಬಗ್ಗೆ.**

~~~~~~~~~~

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಬಗ್ಗೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌ ಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ,

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

**(ಮುಂದು...)**

(141)

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)(ಮುಂದು):-** ಮಾನ್ಯ ಸಭಾಪತಿಯವರೇ, ಜೊತೆಗೆ, ಇದಕ್ಕೆ ತಿದ್ದುಪಡಿಗಳು ಆಗಬೇಕಾಗಿದೆ. ಸಚಿವ ಸಂಪುಟದ ಮುಂದೆ ಕೂಡ ತೆಗೆದುಕೊಂಡು ಹೋಗುವುದಕ್ಕೆ ಈಗಾಗಲೇ ಪ್ರಯತ್ನಗಳನ್ನು ಮಾಡಿದ್ದೇವೆ. ಇತ್ತೀಚೆಗೆ ಒಂದು ರಿಟ್ ಅಪೀಲ್‌ನಲ್ಲಿ ನ್ಯಾಯಾಲಯ ನೀಡಿದಂತಹ ತೀರ್ಪಿನ ಅನ್ವಯ ಅದಕ್ಕೂ ಕೂಡ ಎಲ್ಲೆಲ್ಲಿ ಮಾಹಿತಿಯ ಕೊರತೆಗಳಿತ್ತು ಅದನ್ನು ಕೂಡ ನೀಡುವಂಥದ್ದಕ್ಕೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಉಪ ಪ್ರಶ್ನೆಗಳೇನಾದರೂ ಇದ್ದರೆ ಕೇಳಬಹುದು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇದರಲ್ಲಿ ಸರ್ಕಾರದ ನಿರ್ಧಾರ ಏನಿದೆ?

**ಉಪ ಸಭಾಪತಿಯವರು:-** ಶ್ರೀ ಪುಟ್ಟಣ್ಣನವರೇ ತಾವು ಈ ವಿಷಯದ ಬಗ್ಗೆ ಸ್ಪಷ್ಟೀಕರಣ ಮಾತ್ರ ಕೇಳಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಹಾಗಾದರೆ, ನಾನು ಮಾತನಾಡುವುದೇ ಬೇಡ.

**ಉಪ ಸಭಾಪತಿಯವರು:-** ಈಗ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ...

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~~~~~~

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಸದಸ್ಯರ ಸ್ಥಾನದಲ್ಲಿದ್ದಾಗ ಯಾವ ರೀತಿ ಪ್ರಶ್ನೆ ಕೇಳುತ್ತಿದ್ದೀರಿ? ಅಂತಹ ಸಂದರ್ಭದಲ್ಲಿ ನಾವು ಸಭಾಪತಿ ಸ್ಥಾನದಲ್ಲಿ ಕುಳಿತಿದ್ದಾಗ ತಮ್ಮನ್ನು ಸಮಾಧಾನ ಮಾಡಲು ಆಗುತ್ತಿರಲಿಲ್ಲ. ಆದರೆ, ನಾನು ಮಾತನಾಡಲು ಶುರು ಮಾಡಿದ ತಕ್ಷಣ ಸ್ಪಷ್ಟೀಕರಣ ಮಾತ್ರ ಕೇಳಬೇಕು ಎಂದು ಹೇಳಿದರೆ ಹೇಗೆ? ಈ ಬಗ್ಗೆ ತಾವೇ ಹೇಳಬೇಕು.

**ಉಪ ಸಭಾಪತಿಯವರು:-** ನಮಗೆ ಸಮಯದ ಅಭಾವವಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇದೊಂದು ಪ್ರಮುಖ ವಿಚಾರವಾಗಿದೆ. ತಾವು ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕು. ತಾವೂ ಕೂಡ ನಮ್ಮ ಪರ ಮಾತನಾಡಬೇಕು.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ ಇವತ್ತಿನ ದಿವಸದ ಕಾರ್ಯಕಲಾಪ ಪಟ್ಟಿಯಲ್ಲಿನ ಇನ್ನೂ ಬಹಳಷ್ಟು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ಆದುದರಿಂದ, ನಮಗೆ ಸಮಯದ ಅಭಾವವಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಮಾತನಾಡುವಂತಹ ಸಂದರ್ಭದಲ್ಲಿ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಅರ್ಧದಷ್ಟು ಸಮಯ ತೆಗೆದುಕೊಂಡಿರುವುದಿಲ್ಲ. ಕೇವಲ ಕಾಲು ಭಾಗ ಸಮಯ ತೆಗೆದುಕೊಂಡಿದ್ದೇನೆ. ಉಳಿದ ಸಮಯದಲ್ಲಿ ತಾವು ಬ್ಯಾಟಿಂಗ್ ಮಾಡಿ.

**ಉಪ ಸಭಾಪತಿಯವರು:-** ತಾವು ಈ ವಿಷಯದ ಬಗ್ಗೆ ಸ್ಪಷ್ಟೀಕರಣ ಮಾತ್ರ ಕೇಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿರಬಹುದು ಅಥವಾ ಮಂತ್ರಿಗಳಿರಬಹುದು ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದರಲ್ಲಿ ನನಗೆ ಆಕ್ಷೇಪಣೆಗಳಿರುವುದಿಲ್ಲ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, ಈ ಉತ್ತರ ಸರ್ಕಾರಕ್ಕೆ ಸರಿಯೆನಿಸಿದೆಯೇ ಎಂದು ನನಗೆ ಗೊತ್ತಿರುವುದಿಲ್ಲ. ಸರ್ಕಾರ ಮಾಡುತ್ತಿರುವುದಕ್ಕೆ ಮತ್ತು ಇಲ್ಲಿ ಉತ್ತರ ಕೊಟ್ಟಿರುವುದಕ್ಕೆ ಹೋಲಿಕೆ ಇದೆಯೇ? ತಾರತಮ್ಯ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಸರ್ಕಾರಕ್ಕೆ ಆಯಾ ಭಾಷೆ ಮತ್ತು ಮತೀಯ ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಕಂಡೀಷನ್ ಹಾಕಿದ್ದಾರೆ ಅದು ಸರಿಯಿದೆಯೇ? ಇದಕ್ಕೆ ಅವರ ಆತ್ಮಸಾಕ್ಷಿ ಒಪ್ಪುತ್ತದೆಯೇ? ಈ ವಿಷಯದಲ್ಲಿ ಸಂವಿಧಾನ ಏನು ಹೇಳುತ್ತದೆ? ಸಂವಿಧಾನದಲ್ಲಿ ಕಂಡೀಷನ್ ಹಾಕಿ ಎಂದು ಹೇಳುತ್ತದೆಯೇ? ಯಾವುದೇ ಕಂಡೀಷನ್ ಅನ್ನು ಸರ್ಕಾರದವರು ಹಾಕುವ ಆಗಿಲ್ಲ. ಅದಕ್ಕೆ ಭಾರತ ಸರ್ಕಾರದ ನ್ಯಾಷನಲ್ ಕಮೀಷನ್ ಆಫ್ ಮೈನಾರಿಟಿ ಅಂಡ್ ಎಜುಕೇಷನ್ ಸೊಸೈಟಿ ಇವರೂ ಕೂಡ ಸರ್ಕಾರದವರು ಯಾವುದೇ ಕಂಡೀಷನ್ ಹಾಕುವ ಆಗಿಲ್ಲವೆಂದು ಹೇಳುತ್ತಾರೆ. ಆದರೆ, ಶೇಕಡ 25 ರಷ್ಟು ವಿದ್ಯಾರ್ಥಿಗಳು ಬೇಕು ಎಂದು ಹೇಳಿದರೆ 2001ರ ಸೆನ್ಸೆಕ್ಸ್ ಪ್ರಕಾರ ಕನ್ನಡ-41, ತಮಿಳು-18, ತೆಲುಗು-15.47, ಉರ್ದು-12.90, ಹಿಂದಿ-3.41,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಲೆಯಾಳಂ-2.95, ಮರಾಠಿ-2.2, ಕೊಂಕಣಿ-0.71 ಇತರೆ -3.18 ರಷ್ಟು ಇದೆ. 2011 ರಲ್ಲಿ ಕನ್ನಡ-41.54, ತಮಿಳು-18.43, ತೆಲುಗು-15.77, ಉರ್ದು-12.9, ಹಿಂದಿ-2.22, ಮಲೆಯಾಳಂ-2.95, ಮರಾಠಿ-3.41, ಕೊಂಕಣಿ-0.71, ಇತರೆ-3.18 ರಷ್ಟು ಇದೆ. ಶೇಕಡ 25 ರಷ್ಟು ವಿದ್ಯಾರ್ಥಿಗಳನ್ನು ಎಲ್ಲಿಂದ ತರುವುದು? ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ತರುವುದಕ್ಕೆ ಆಗುತ್ತದೆಯೇ? ಮತೀಯ ಅಲ್ಪಸಂಖ್ಯಾತರ ಬಗ್ಗೆ ಹೇಳುವುದಾದರೆ 2011ರಲ್ಲಿದ್ದಂತೆ ಹಿಂದು-78, ಇಸ್ಲಾಂ-13.9, ಕ್ರಿಶ್ಚಿಯನ್-5.6, ಜೈನ್ಸ್-0.97 ರಷ್ಟು ಇದೆ. ನಾನು ಬೆಂಗಳೂರಿನ ಅಂಕಿ-ಅಂಶಗಳನ್ನು ಮಾತ್ರ ಹೇಳುತ್ತಿದ್ದೇನೆ. ಇಂತಹ ಸಮುದಾಯಗಳಲ್ಲಿ ಶೇಕಡ 25 ರಷ್ಟು ವಿದ್ಯಾರ್ಥಿಗಳನ್ನು ಎಲ್ಲಿಂದ ತರುವುದಕ್ಕೆ ಸಾಧ್ಯವಿದೆ? ಈ ರೀತಿ ನಿಯಮ ಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರ ಎಲ್ಲಿದೆ? ಈ ವಿಷಯ ಸಚಿವ ಸಂಪುಟದಲ್ಲಿ ತೀರ್ಮಾನವಾಗಿರಬಹುದು ಅಥವಾ ಮಾನ್ಯ ಸಚಿವರೇ ಮಾಡಿರಬಹುದು ಈ ರೀತಿ ಮಾಡುವುದಕ್ಕೆ ಅಧಿಕಾರ ಎಲ್ಲಿದೆ? ಸಂವಿಧಾನದಲ್ಲಿ ಇದಕ್ಕೆ ಅವಕಾಶವಿದೆಯೇ? ಈ ಬಗ್ಗೆ ನಾನು ಹೇಳುವುದೇನೆಂದರೆ, ಅದಕ್ಕಂತಲೇ ಭಾರತ ಸರ್ಕಾರದವರು ನ್ಯಾಷನಲ್ ಮೈನಾರಿಟಿ ಕಮೀಷನ್ ಅನ್ನು ಅವರು ಮಾಡಿದ್ದಾರಲ್ಲವೇ? ಅದರಲ್ಲಿ ಅವರು ಏನು ಹೇಳುತ್ತಾರೆಂದರೆ, ಯಾವುದು ಅಲ್ಪಸಂಖ್ಯಾತ ಸಂಸ್ಥೆ ಇರುತ್ತದೆ, ಅದರಲ್ಲಿ ನಾಲ್ಕನೇ ಮೂರರಷ್ಟು ವಿದ್ಯಾರ್ಥಿಗಳು ಇರಬೇಕು ಮತ್ತು ಅವರೇ ಅಧಿಕಾರ ನಡೆಸುತ್ತಿರಬೇಕು ಎನ್ನುವ ಎರಡು ಅಂಶಗಳು ಮಾತ್ರ ಇರುವುದು. ಇದೇ ರೀತಿಯಲ್ಲಿ ಬಹಳಷ್ಟು ಜನ ಪರ್ಸೆಂಟೇಜ್‌ಗಳನ್ನು ಹಾಕಿದ್ದರು.

(ಮುಂದು)

(142) 20.02.2018/ವೈಎಲ್-ವಿಕೆ/4.30

ಶ್ರೀ ಪುಟ್ಟಣ್ಣ(ಮುಂದು):-

ನನ್ನ ಹತ್ತಿರ ಜೆರಾಕ್ಸ್ ಪ್ರತಿಗಳಿದ್ದು, ಅದನ್ನು ಮಾನ್ಯ ಸಚಿವರಿಗೂ ಒದಗಿಸುತ್ತೇನೆ. ಅದೇ ರೀತಿಯಲ್ಲಿ 05.02.2018 ಮತ್ತು 06.02.2018ರ ಆದೇಶದ ಪ್ರತಿಗಳು ನನ್ನ ಹತ್ತಿರ ಇದೆ. ಇದೇ ರೀತಿಯಾಗಿ ಶೇಕಡ 50, 25 ಎಂಬುದಾಗಿ ನಮೂದಿಸಿದ್ದಾರೆ. ಅದೆಲ್ಲದಕ್ಕೂ ಸಹ National Commission ರವರು ನೀವು ಮಾಡುವ ಹಾಗಿಲ್ಲ ಎಂದು ಆದೇಶವನ್ನು ನೀಡಿದ್ದಾರೆ. ಒಂದು ವೇಳೆ ಮಾಡಿದರೆ ಆ ಪ್ರದೇಶದಲ್ಲಿರುವ ಶೇಕಡಾವಾರು ಆಧಾರದ ಮೇಲೆ ಮಾಡಬಹುದು, ರಾಜ್ಯದ ಶೇಕಡಾವಾರಿನಿಂದ ತೆಗೆದುಕೊಳ್ಳುವ ಹಾಗಿಲ್ಲ. ಮಕ್ಕಳನ್ನು ಸೇರಿಸುವ ಅಧಿಕಾರ ಇರುವುದು ಅವರ ತಂದೆ ತಾಯಿಗಳಿಗೆ ಬಿಟ್ಟ ವಿಚಾರ. ಶೇಕಡಾವಾರನ್ನು ನಿಗದಿಗೊಳಿಸಿ, ಅಷ್ಟು ಮಕ್ಕಳನ್ನು ಸೇರಿಸಿದರೆ ಮಾತ್ರ ಕೊಡುತ್ತೇವೆ ಎಂದು ಹೇಳುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಇದರಲ್ಲಿ ಸಂಪೂರ್ಣವಾದ ಆದೇಶವಿದೆ. Government of India, National Commission for Minority Educational

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Institutions (NCMEI) ನ full Bench 2010ನೇ ಸಾಲಿನಲ್ಲಿ 3 ಜನರು ಸೇರಿ ಶೇಕಡ 75 ರಷ್ಟಕ್ಕೆ ಹೊರಡಿಸಿರುವ ಆದೇಶಗಳಿದ್ದು, ಇದರಲ್ಲಿ ಸಂಪೂರ್ಣವಾಗಿ ತಿಳಿಸಲಾಗಿದೆ. ಶೇಕಡ 75 ರಷ್ಟಕ್ಕೆ ಆದೇಶವನ್ನು ಹೊರಡಿಸಿದ ಮೇಲೆಯೂ ಸಹ 2014ನೇ ಸಾಲಿನಲ್ಲಿ ಹೇಗೆ ಶೇಕಡ 25 ರಷ್ಟಕ್ಕೆ ಆದೇಶವನ್ನು ಹೊರಡಿಸಲಾಗಿದೆ? ಇದು ಸರಿಯೇ? ಈಗಾಗಲೇ ಶೇಕಡ 75 ರಷ್ಟಕ್ಕೆ ಇರುವುದನ್ನು ತೆಗೆಯುವುದಕ್ಕೆ ಹೊರಟ್ಟಿದ್ದಾರೆ ಅದಕ್ಕೆ ನನ್ನ ಆಕ್ಷೇಪವೇನೂ ಇಲ್ಲ. ಆದರೆ, ಕರ್ನಾಟಕದಲ್ಲಿ ಒಂದು ಅರ್ಜಿಯನ್ನು ವಿಲೇವಾರಿ ಮಾಡಲಿಲ್ಲ. ಏಕೆ ಮಾಡಲಿಲ್ಲ? ಅರ್ಜಿಯನ್ನು ಕೊಡುವುದಿಲ್ಲವೆಂದು ತಿರಸ್ಕರಿಸಬೇಕಾಗಿತ್ತು. ಏಕೆ ತಿರಸ್ಕರಿಸಲಿಲ್ಲ? ವಿಲೇವಾರಿ ಮಾಡಲಿಲ್ಲ. 90 ದಿವಸದೊಳಗೆ ಅರ್ಜಿಯನ್ನು ವಿಲೇವಾರಿ ಮಾಡಲಿಲ್ಲವೆಂದರೆ, ಅವರಿಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ಕೊಟ್ಟಿದೆ ಎಂಬರ್ಥ ಬರುತ್ತದೆ ಎಂಬುದಾಗಿ National Commission ಆದೇಶ ನೀಡಿದೆ. ಇಂತಹ ಪರಿಸ್ಥಿತಿಗಳಲ್ಲಿ ಅವರನೆಲ್ಲಾ ತಿರುಗಿಸಿ, ಅಲೆದಾಡಿಸಿ, ಸುತ್ತಾಡಿಸಿದರೆ ಅದು ಎಷ್ಟರಮಟ್ಟಿಗೆ ಸರಿ. ಇದರಿಂದ ಎಲ್ಲರೂ ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆಯನ್ನು ತರುತ್ತಾರೆ. ಈ ರೀತಿ ಏಕೆ ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೆ ಏನು ಅಧಿಕಾರ ಇದೆ, ಏನು ಸಹಾಯ ಮಾಡುವುದಕ್ಕಾಗುತ್ತದೆಯೋ ಅದನ್ನು ಮಾಡಲಿ. ಅದನ್ನು ಬಿಟ್ಟು ಈ ರೀತಿ ಏಕೆ ಮಾಡಬೇಕು. ಅಧಿಕಾರಿಗಳು ಹೇಳುವ ಹಾಗೆ ಕೇಳುತ್ತಾರೆಯೇ? 2014ನೇ ಸಾಲಿನಲ್ಲಿದ್ದ ಅಧಿಕಾರಿಗಳು ಶೇಕಡ 25 ರಷ್ಟು ತಂದು ಆದೇಶ ಮಾಡಿದ್ದಾರೆ. ಈ ರೀತಿ ಆದೇಶವನ್ನು ತರುವ ಹಾಗೆ ಇರಲಿಲ್ಲ. ಹಿಂದೆ ಇದ್ದ ಸಚಿವರಿಗೆ ಮತ್ತು ಸರ್ಕಾರಕ್ಕೆ ವಂಚಿಸಿ ಅವರ ಕಣ್ಣು ಮುಚ್ಚಿಸಿ ಈ ರೀತಿ ಆದೇಶವನ್ನು ಹೊರಡಿಸಿದ್ದಾರೆ. ಇದು ತಪ್ಪು ಎಂದು ಮಾನ್ಯ ಸಚಿವರ ಗಮನಕ್ಕೆ ಈಗ ಬಂದಿದೆ ಅಲ್ಲವೇ? ಹಾಗಿದ್ದಲ್ಲಿ ಇದನ್ನು ಯಾವಾಗ ಸರಿಪಡಿಸುತ್ತಾರೆ. ಈ ಆದೇಶವನ್ನು ಹಿಂಪಡೆಯಬೇಕು. ನಮಗೆ ಏನು ಸಹಾಯ ಮಾಡುವುದು ಬೇಡ. ಸಂವಿಧಾನದ ಪ್ರಕಾರ ಏನಿದೆ ಅದನ್ನು ನೀಡಲಿ. ಭಾರತ ಸರ್ಕಾರದ ಆದೇಶ ಏನಿದೆ ಅದರ ಪ್ರಕಾರ ಪಾಲನೆ ಮಾಡಲಿ. ದಯವಿಟ್ಟು ಇವತ್ತು ಮಾಡಲಿ ಅಥವಾ ನಾಳೆ ಮಾಡಲಿ ಇದನ್ನು ಖಡಾಖಂಡಿತವಾಗಿ ಹಿಂಪಡೆಯಬೇಕು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಚಿವರು ಮಾಡಿದರೂ ಸಹ ಕಾರ್ಯದರ್ಶಿಯವರು ಅದರ ಪರ ಇದ್ದರೂ ಸಹ ಕೆಲವು ಕಡತಗಳನ್ನು issue ಮಾಡುವುದಕ್ಕಾಗುತ್ತಿಲ್ಲ. ಏತಕ್ಕೆ issue ಮಾಡುವುದಕ್ಕಾಗುತ್ತಿಲ್ಲ? ಅದಕ್ಕಾಗಿ ದಯವಿಟ್ಟು ನನಗೆ ಖಡಾಖಂಡಿತವಾದ ಉತ್ತರಬೇಕು. ರಾಜ್ಯದ ಜನತೆಯನ್ನು ಸರ್ವೋಚ್ಛ ನ್ಯಾಯಾಲಯಕ್ಕೆ, ಉಚ್ಛ ನ್ಯಾಯಾಲಯಕ್ಕೆ ತಿರುಗಿಸುವುದಲ್ಲ. Reasonable ಆಗಿ ಮಾನ್ಯ ಸಚಿವರು ಯಾವುದೇ ಷರತ್ತನ್ನು ಹಾಕುವ ಹಾಗೆ ಇಲ್ಲ. ದಯವಿಟ್ಟು ಯಾವಾಗ issue ಮಾಡುತ್ತಾರೆ ಎಂಬುದನ್ನು ಹೇಳಬೇಕು. ತಾವು ಹೇಳಿದ ಹಾಗೆ ಸ್ವಲ್ಪ ಸಮಯದಲ್ಲಿಯೇ ಪ್ರಶ್ನೆಯನ್ನು ಕೇಳಿ ನೀವು ಕೊಟ್ಟಂತಹ ಸಮಯದೊಳಗೆ ನನ್ನ ಮಾತನ್ನು ಮುಗಿಸಿದ್ದೇನೆ. ಉಳಿದಂತೆ ನೀವು ಸಹ ಮಾತನಾಡಬೇಕೆಂದು ಹೇಳಿದ್ದೇನೆ. ನಮ್ಮ ಪರವಾಗಿ ಅಂದರೆ, ನ್ಯಾಯ ಹಾಗೂ ಸಂವಿಧಾನಗಳ ಪರವಾಗಿ ನೀವು ಮಾತನಾಡಿ, ಈ ಸಮಸ್ಯೆಯನ್ನು ಬಗೆಹರಿಸಬೇಕು. ಮಾನ್ಯ ಸಚಿವರು ಸಹ ಇದರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪರವಾಗಿದ್ದಾರೆ. ಅದರಲ್ಲಿ ಎರಡನೆ ಮಾತಿಲ್ಲ. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಸಹ ಇದರ ಪರವಾಗಿದ್ದಾರೆ. ದಯವಿಟ್ಟು ಕಾಲಮಿತಿಯನ್ನು ನಿಗದಿ ಮಾಡಿ, ಇವತ್ತು ಮಾಡುತ್ತಾರೆಯೋ, ನಾಳೆ ಮಾಡುತ್ತಾರೆಯೋ ಎಂಬ ತೀರ್ಮಾನ ಮಾಡಿ ದಯವಿಟ್ಟು ಹೇಳಬೇಕು.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೊಸ ಅಲ್ಪಸಂಖ್ಯಾತರ......

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಸ್ಪಷ್ಟೀಕರಣವನ್ನು ಅಷ್ಟೇ ಕೇಳಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುವುದಿಲ್ಲ. ನಾನು ಹೇಳುವುದೇನೆಂದರೆ, ಶೇಕಡ 25 ರಷ್ಟು ವಿದ್ಯಾರ್ಥಿಗಳು ಆ ಭಾಷೆಯವರೇ ಆಗಿರಬೇಕೆಂಬುದಾಗಿ ಸಂವಿಧಾನದಲ್ಲಿ ಎಲ್ಲಿಯೂ ಉಲ್ಲೇಖಿಸಿಲ್ಲ. ಜೊತೆಗೆ National Commission ನಲ್ಲಿಯೂ ಹೇಳಿಲ್ಲ. ನ್ಯಾಯಾಲಯದಲ್ಲಿಯೂ ಶೇಕಡ 25 ರಷ್ಟು ಎಂದು ಎಲ್ಲಿಯೂ ತೀರ್ಪು ನೀಡಿಲ್ಲ. ಈ ರೀತಿ ಇರುವಾಗ ಶೇಕಡ 25 ರಷ್ಟು ಎಂದು ಏಕೆ ಇಟ್ಟಿದ್ದಾರೆ? ಅದನ್ನು ತೆಗೆದು ಹಾಕಲಿ. ಆದಷ್ಟು ಬೇಗ ಇದರ ಬಗ್ಗೆ ನಿರ್ಣಯವನ್ನು ಕೈಗೆತ್ತಿಕೊಳ್ಳಲಿ ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಂದಿರತಕ್ಕಂಥ ವಿಚಾರ ಬಹಳ ಗಂಭೀರವಾಗಿದ್ದು, ಅನೇಕ ಬಾರಿ ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಿದೆ. ನಾನು ಈಗಾಗಲೇ ಎರಡು ಬಾರಿ ಈ ವಿಚಾರದ ಬಗ್ಗೆ ಈ ಸದನದ ಗಮನವನ್ನು ಸೆಳೆದಿದ್ದೇನೆ. ಆದರೆ, ಇದುವರೆಗೂ ಎಲ್ಲಿಯೋ ಒಂದು ಕಡೆ Management ನಿಂದ ಅರ್ಜಿ ತೆಗೆದುಕೊಳ್ಳುತ್ತಾರೆ. ಆದರೆ, ಉತ್ತರ ಕೊಡುವುದಕ್ಕೆ National Commission ರವರು ಅಡ್ಡ ಬರುವುದಿಲ್ಲ. Article 30 ರ ಪ್ರಕಾರ ಅದು ಅವರಿಗೆ ಮೂಲಭೂತವಾಗಿರತಕ್ಕಂಥ ಹಕ್ಕು. It is guaranteed in the Constitution. ಯಾರೇ ಅಲ್ಪಸಂಖ್ಯಾತರಿದ್ದರೂ, ಭಾಷಾ ಅಲ್ಪಸಂಖ್ಯಾತರು ಅಥವಾ ಮತೀಯ ಅಲ್ಪಸಂಖ್ಯಾತರಿಗೆ ಸಂಸ್ಥೆಯನ್ನು ಪ್ರಾರಂಭ ಮಾಡುವ ಅಧಿಕಾರ ಸಂವಿಧಾನಬದ್ಧವಾಗಿದೆ. ಸಂವಿಧಾನದಲ್ಲಿ ಅಧಿಕಾರವಿದ್ದಾಗ ಶೇಕಡ 25 ರಷ್ಟು ಇದ್ದರೆ ಮಾತ್ರ ಅಲ್ಪಸಂಖ್ಯಾತರು ಸಂಸ್ಥೆಯನ್ನು ನಡೆಸಬಹುದೆಂದು ಹೇಳುವುದಾದರೆ, ಆ ಹಕ್ಕನ್ನು ನೀಡಿರುವವರ್ಯಾರು? ಯಾವ ಉದ್ದೇಶಕ್ಕಾಗಿ ಹಾಕಿದ್ದಾರೆ? ಈಗ ನ್ಯಾಷನಲ್ ಜನಗಣತಿ ಬಗ್ಗೆ ಹೇಳಿದ್ದಾರೆ. 2011ರ ಜನಗಣತಿ ಪ್ರಕಾರ ಕ್ರಿಶ್ಚಿಯನ್ ಅಲ್ಪಸಂಖ್ಯಾತರನ್ನು ತೆಗೆದುಕೊಂಡರೆ, ರಾಜ್ಯದಲ್ಲಿರುವುದು ಕೇವಲ ಶೇಕಡಾ 4.6 ರಷ್ಟು, ದೇಶದಲ್ಲಿರುವುದು ಶೇಕಡಾ 2.6 ರಷ್ಟು ಮಾತ್ರ. ಸಂಸ್ಥೆಯನ್ನು ಪಾರಂಭ ಮಾಡುವಾಗ ದೇಶದಲ್ಲಿ ಶೇಕಡಾ 2 ರಷ್ಟಿದ್ದು, ರಾಜ್ಯದಲ್ಲಿ 4 ರಷ್ಟಿದೆ. ಆದರೆ, ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ

ಶೇಕಡಾ 25 ರಷ್ಟು ಮಾಡಲಾಗಿದೆ. ಇದು ಯಾವ ನ್ಯಾಯ? ಹಾಗಾಗಿ ಇದು ಸರಿಯಾದ ಆದೇಶವಾಗಿಲ್ಲ ಎಂದು ಹೇಳುವುದು ನನ್ನ ವಾದ ಇದೆ. ಇದರಿಂದಾಗಿ ಸಂಸ್ಥೆಗಳಿಗೆ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಆರ್‌ಟಿಐ ಅಡಿಯಲ್ಲಿ ಸೀಟು ಕೊಡಬೇಕೆಂದು ಹೇಳುತ್ತಾರೆ. ಅಲ್ಪಸಂಖ್ಯಾತ ಎಂದು ಮಾನ್ಯತೆ ಕೊಡದೇ ಇದ್ದರೆ, ಅವರಿಗೆ ಆರ್‌ಟಿಐ ಅಡಿಯಲ್ಲಿ ಸೀಟು ಕೊಡಬೇಕೆಂಬ ಅನಿರ್ವಾಯತೆ ಇದೆ. ಆರ್‌ಟಿಐ ಅಡಿಯಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿನಾಯಿತಿ ಇದೆ. ಹಾಗಾಗಿ ಎಲ್ಲಿಯೋ ಒಂದು ಕಡೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಇದು ಜ್ವಲಂತವಾದ ಸಮಸ್ಯೆಯಾಗಿದ್ದು, ಅದು ಪ್ರತ್ಯೇಕವಾಗಿ ಕರ್ನಾಟಕ ರಾಜ್ಯದಲ್ಲಿದೆ. ಹಾಗಾಗಿ ನಾವು ಅನೇಕ ಬಾರಿ ಹೇಳಿದ್ದೇವೆ. ಮೊದಲು ಶೇಕಡ 75 ರಷ್ಟಿರುವುದನ್ನು ತೆಗೆದು ಶೇಕಡ 25 ರಷ್ಟು ಮಾಡಲಾಗಿದೆ. ಯಾವ ಮಾನದಂಡದ ಮೇಲೆ ಶೇಕಡ 75 ರಷ್ಟು ಇರುವುದನ್ನು ಶೇಕಡ 25 ರಷ್ಟು ಎಂದು ಮಾಡಲಾಗಿದೆ ಅಥವಾ ಶೇಕಡ 75 ರಷ್ಟು ಯಾವ ಮಾನದಂಡದ ಮೇಲೆ ಮಾಡಲಾಗಿದೆ. ಅದನ್ನಾದರೂ ಹೇಳಬೇಕಲ್ಲವೇ? ಕೊಟ್ಟ ಅರ್ಜಿಗೆ ಆಗುವುದಿಲ್ಲವೆಂದು ತಿರಸ್ಕಾರ ಮಾಡಲಿ. ಅದನ್ನು ಸಹ ಮಾಡುವುದಿಲ್ಲ. ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಮಾನ್ಯತೆ ಕೊಡಲಿಲ್ಲವೆಂದರೆ, ನ್ಯಾಯಾಲಯದ ಮೊರೆ ಹೋದರೆ ನ್ಯಾಯಾಲಯ ex-parte stay ಕೊಡುತ್ತದೆ. ಆಯಿತು. Admit ಮಾಡಿ, it is deemed to be permitted ಎಂದು ಹೇಳುತ್ತಾರೆ. ಹಾಗಾಗಿ ಈ ವಿಚಾರದಲ್ಲಿ ನಾನು ಪುಟ್ಟಣ್ಣನವರ ಪರವಾಗಿ ಇದ್ದೇನೆ. ಇದು ಬೇಕೆಂದು drag ಮಾಡುವುದಾದರೆ, ಅದು ಸರಿಯಾದ ಕ್ರಮವಲ್ಲ ಅಥವಾ ನಿಮ್ಮ ಹತ್ತಿರ ಏನಾದರೂ reasonable ground or bar ಇದೆ, ಮಾಡುವುದಕ್ಕಾಗುವುದಿಲ್ಲ ಅಥವಾ ಸಂವಿಧಾನಕ್ಕೆ ವಿರೋಧವಾಗಿದೆ ಎಂದು ಮಾನ್ಯ ಸಚಿವರು ಹೇಳುವುದಾದರೆ, you please convince us.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾದ ವಿಷಯವನ್ನು ಎತ್ತಿದ್ದಾರೆ. ನಮ್ಮ ಸ್ನೇಹಿತರಾದ ಮಾನ್ಯ ಐವನ್ ಡಿ'ಸೋಜಾರವರು ಮಾತನಾಡುವಾಗ, ಆ ವಿಚಾರ ನನ್ನ ಮನಸ್ಸಿಗೆ ಬಂತು. ಅಲ್ಪಸಂಖ್ಯಾತ ಸಮುದಾಯಗಳಿಗೆ ಅವರ ಆಸಕ್ತಿಗೆ ಅನುಗುಣವಾಗಿ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಖಂಡಿತವಾಗಿಯೂ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ನಾನು ಎಲ್ಲಿಯೋ ಓದಿದ್ದ ನೆನಪು ಇದೆ. TMA Pai case ಆದಾಗ what is the minority character ಎಂಬುದು ವಿವರಿಸುವುದಕ್ಕೆ ಹೊರಟಿದ್ದಾರೆ ಮತ್ತು ಅಲ್ಪಸಂಖ್ಯಾತ ಸಂಸ್ಥೆಗಳನ್ನು ಪ್ರಾರಂಭ ಮಾಡಬೇಕಾದರೆ, ಟ್ರಸ್ಟ್ ಅಥವಾ ಸೊಸೈಟಿಯನ್ನು ಪ್ರಾರಂಭ ಮಾಡುತ್ತಾರೆ. ಅವರು objectives ನಲ್ಲಿ mention ಮಾಡುತ್ತಾರೆ. ನಮ್ಮ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕಾಗಿ ಈ ರೀತಿಯ ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನಾನು ಅದನ್ನು ನೋಡಿದ್ದೇನೆ. ಸಂವಿಧಾನದಲ್ಲಿಯೂ ಇದು ಚರ್ಚೆಯಾಗಿದೆ. ಹಾಗಾಗಿ ಯಾವಾಗ ಒಂದು ಸಂಸ್ಥೆ ಒಂದು

ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಆ ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಒಂದು Trust Deed ಮಾಡಿಕೊಂಡು ನೋಂದಾಯಿಸಿಕೊಂಡ ಮೇಲೆ ನಮ್ಮ ಸಮುದಾಯದ ಮಕ್ಕಳನ್ನು ತೆಗೆದುಕೊಳ್ಳಬೇಕೆಂದು ಷರತ್ತನ್ನು ಹಾಕಬಾರದು ಯಾರನ್ನು ಬೇಕಾದರೂ ತೆಗೆದುಕೊಳ್ಳಬಹುದೆಂದು ಹೇಳುವುದು ಯಾವ ನ್ಯಾಯ? ಇದು TMA Pai case ಗೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯದಲ್ಲಿ ಚರ್ಚೆಯಾಗಿದೆ. ಆದಾದ ಮೇಲೆ direction ಕೊಟ್ಟಿದ್ದಾರೆ. Percentage fix ಮಾಡಬೇಕೆಂದು ಹೇಳಿದ್ದಾರೆ. ಯಾವಾಗ ನಿಮ್ಮ ಸಮುದಾಯದ......

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ TMA Pai case judgement ಪ್ರತಿ ಇದೆ. Mislead ಮಾಡುವುದು ಬೇಡ. ಸುಮ್ಮನೆ ಏತಕ್ಕೆ ದಾರಿ ತಪ್ಪಿಸುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ruling ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಈ ರೀತಿ ಹೇಳುತ್ತಿದ್ದೇನೆಂದರೆ,

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ, ಮಾನ್ಯ ಐವನ್ ಡಿ'ಸೋಜಾರವರೆ, ಮಾನ್ಯ ಸದಸ್ಯರು ಮಾತನಾಡಲಿ ಕುಳಿತುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ತೋರಿಸಬೇಕು ಎಂದು ಹೇಳುವುದಾದರೆ, ನಾನು ತಂದು ತೋರಿಸುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರುಗಳು ಚರ್ಚೆ ಮಾಡುವಾಗ ಇದು ನನ್ನ ಮನಸ್ಸಿಗೆ ಬಂದಿರುವ ವಿಚಾರವಾಗಿದೆ. ಏಕೆಂದರೆ, ಸಂಸ್ಥೆಗಳನ್ನು ಪ್ರಾರಂಭ ಮಾಡಬೇಕಾದರೆ, ನಾವು ನಮ್ಮ ಸಮುದಾಯದ ಶೈಕ್ಷಣಿಕ ಹಿತಾಸಕ್ತಿಗಾಗಿ ಈ ಸಂಸ್ಥೆಯನ್ನು ಪ್ರಾರಂಭ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಶೈಕ್ಷಣಿಕ ಅಭಿವೃದ್ಧಿಗೆ ಗಮನಕೊಡಬೇಕೋ, ಬೇಡವೋ? ಹಾಗೆ ಹೇಳಿಕೊಂಡು Minority Institution ಎಂದು ನೋಂದಾಯಿಸಿಕೊಂಡು, ನಂತರ admission ಮಾಡಿಕೊಳ್ಳುವಾಗ ಯಾವುದೇ ಷರತ್ತನ್ನು ಹಾಕಬೇಡಿ ಎಂದರೆ ಹೇಗೆ? ಹಾಗಾಗಿ ಇದನ್ನು ಗಮನಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇದನ್ನು ಗಮನಿಸಬೇಕು. ಎರಡನೆಯದಾಗಿ ಶೇಕಡ 75 ರಷ್ಟು ಅಥವಾ ಶೇಕಡ 25 ರಷ್ಟು ಎಂಬುದಾಗಿ ಯಾವ ಶೇಕಡಾವಾರನ್ನು ನಿಗದಿಗೊಳಿಸಿದ್ದಾರೆ ಎಂಬುದರ ಬಗ್ಗೆ ದಾಖಲಾತಿ ಬೇಕಲ್ಲವೇ? How did you

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

arrive at 25 percent? ಸುಮ್ಮ ಸುಮ್ಮನೆ ಮಾಡುವುದಕ್ಕಾಗುತ್ತದೆಯೇ? ಹಾಗಾಗಿ ನನಗೆ ಅನ್ನಿಸುತ್ತದೆ. ಈ ರೀತಿ ಉತ್ತರ ಕೊಡುವುದಕ್ಕಿಂತ ಇನ್ನೂ ಗಂಭೀರವಾಗಿ ಆಲೋಚನೆ ಮಾಡಿಕೊಂಡು, ಸಂವಿಧಾನದಲ್ಲಿ ಯಾವ ಅವಕಾಶವನ್ನು ಕಲ್ಪಿಸಿದೆ ಎಂಬುದನ್ನು ನೋಡಬೇಕಾಗುತ್ತದೆ. ಮತೀಯ ಅಲ್ಪಸಂಖ್ಯಾತ ಅಥವಾ ಭಾಷಾ ಅಲ್ಪಸಂಖ್ಯಾತರಾಗಿರಬಹುದು, ಅವರು ಅವರ ಸಮುದಾಯಕ್ಕೆ ಏನು ಶೈಕ್ಷಣಿಕ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಮಾಡಿಕೊಂಡಿದ್ದಾರೆ ಆ ಸಂವಿಧಾನದ provision ನ್ನು ಉಪಯೋಗಿಸಿಕೊಂಡು ಅದನ್ನು ದುರುಪಯೋಗ ಮಾಡಬಾರದು. ಅದರ ಕಡೆಯೂ ಗಮನಕೊಡಬೇಕೆಂದು ವಿನಂತಿಸುತ್ತೇನೆ.

(ಮುಂದು) . . .

(143)/20.02.2018/4.40/ಎಸ್‌ಕೆ-ವಿಕೆ

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು)**:-ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ ೩೦ ರಡಿ based on religion and language ಮೇಲೆ minority status ನ್ನು ಕೊಡುವಂತಹದ್ದಕ್ಕೆ ಅವಕಾಶ ಇದೆ. ಇಲ್ಲಿ minority status ನ್ನು ತೆಗೆದುಕೊಂಡಂತಹ ಭಾಷೆ ಅಥವಾ ಮತೀಯ ಅಲ್ಪಸಂಖ್ಯಾತರು. ಆ ವರ್ಗದ ಜನರ ಹಿತವನ್ನು ಕಾಪಾಡಬೇಕಾಗಿರುವಂಥದ್ದು. ಸಂವಿಧಾನದ ಅನುಚ್ಛೇದ ೩೦ ಇರತಕ್ಕಂತಹ ಆಶಯ. ನಾನು ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದು, language or religion basis ಮೇಲೆ minority status ಏನು ಸಿಕ್ಕಿದೆ. ಆ ಎರಡರ ಮಧ್ಯೆ discriminate ಮಾಡತಕ್ಕಂತಹ attitude ಇಲಾಖೆಯಾಗಲಿ, ಮತ್ತೊಬ್ಬರಾಗಲಿ ಇರುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ. Religious minority ಆಗಿರಲಿ language basis ಮೇಲೆ minority ಆಗಿರಲಿ minority means minority. So, they are entitled for all sorts of facilities. Whatever the facilities Government decides it to give, ಆದರೆ ಇಲ್ಲಿ ಒಂದು ಏನೆಂದರೆ, ಅಲ್ಪಸಂಖ್ಯಾತರ ಸಂಸ್ಥೆಗಳಲ್ಲಿ ಸಂವಿಧಾನದ ಅನುಚ್ಛೇದ ೩೦ ರಡಿ ಯಾವ ಉದ್ದೇಶವಿದೆ ಅದಕ್ಕೆ adhere ರಾಗಿದ್ದಾರಾ? ಇದರ ಬಗ್ಗೆ ಸರ್ಕಾರ ಯೋಚನೆ ಮಾಡುವಂತಹದು ಸೂಕ್ತ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಮಾನ್ಯ ಸರ್ವೋಚ್ಛ ನ್ಯಾಯಾಲಯ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಆ ratio ಅಲ್ಪಸಂಖ್ಯಾತರಿಗೆ ಇರಲಿ, ಬೇರೆಯವರಿಗೂ ratio maintain ಮಾಡಿ, admissions ಮಾಡಿಕೊಳ್ಳುತ್ತಿದ್ದಾರೆಯೇ? ಮಾಡಿಕೊಳ್ಳದೇ ಇದ್ದರೆ ಯಾವುದಾದರೂ ಸಂಸ್ಥೆ ಮೇಲೆ ಇಲ್ಲಿಯವರೆಗೂ ಕ್ರಮ ಜರುಗಿಸಿದ್ದಾರೆಯೇ? ಕ್ರಮವನ್ನು ತೆಗೆದುಕೊಂಡಿದ್ದರೆ ಯಾವ ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯವಿಟ್ಟು, ಹೇಳಬೇಕು. ಅಂತಿಮವಾಗಿ, ಇಲ್ಲಿ ಕೆಲವು ಮಾನ್ಯ ಮಂತ್ರಿಗಳ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಆದೇಶ ಇದ್ದರೂ ಸಹ ಕೆಲವು ಕಡೆ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲವೆಂದು ಉತ್ತರದಲ್ಲಿ ಆ ರೀತಿ ಹೇಳಿದ್ದಾರೆ. ಇದನ್ನು ಏಕೆ ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. **"ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ರೀತಿಯ ಸಂವಿಧಾನದ ಮೂಲಭೂತ ಹಕ್ಕಿನ ವಿರೋಧಿಯಾಗಿ ನಡೆದುಕೊಳ್ಳುತ್ತಿದ್ದಾರೆಯೇ ತಿಳಿಸಿ. ಅದರ ಜೊತೆಗೆ ಕೆಲವು ಸಂಸ್ಥೆಗಳಿಗೆ ಶಿಕ್ಷಣ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಿದ್ದರು. ಅಧಿಕಾರಿಗಳು ಅಂತಹ ಸಂಸ್ಥೆಗಳಿಗೆ ಅಡ್ಡಗಾಲು ಹಾಕಿ, ಸರ್ಕಾರಿ ಆದೇಶ ಹೊರಡಿಸುತ್ತಿಲ್ಲ"** ಎಂದು ಹೇಳಿ ಇಲ್ಲಿ ಪ್ರಶ್ನೆ ಮಾಡಿದ್ದಾರೆ. ದಯವಿಟ್ಟು, ಆ ರಾಜ್ಯದ ಹಿತದೃಷ್ಟಿಯಿಂದ ಮತ್ತು ಜನರ ಹಿತದೃಷ್ಟಿಯಿಂದ ಸರ್ಕಾರದ ಆದೇಶವಾಗಲಿ, ಮಾನ್ಯ ಮಂತ್ರಿಗಳಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ ನಿರ್ದಿಷ್ಟವಾಗಿ ಯಾವುದಾದರೂ ಸರ್ಕಾರದ ಆದೇಶವಿದ್ದರೆ, ಯಾರಾದರೂ ಅದನ್ನು ಧಿಕ್ಕರಿಸಿದ್ದರೆ, ಯಾರು ಧಿಕ್ಕರಿಸಿದ್ದಾರೆಂದು ಸ್ಪಷ್ಟವಾಗಿ ಹೇಳುವಂತಹ ಅವಶ್ಯಕತೆ ಇದೆ. ಯಾರಾದರೂ ದಿಕ್ಕರಿಸಿದ್ದಾರೆಯೇ? ಧಿಕ್ಕರಿಸಿದರೆ, ಅವನು ಎ ನೋ, ಬಿ ನೋ ಅಥವಾ ಸಿ ನೋ. with reasoning ಸಂವಿಧಾನದ ಆಶಯಗಳ ರೀತ್ಯಾ ಇಲ್ಲ ಎಂದು ಹೇಳಿ ಧಿಕ್ಕಾರಿಸಿದ್ದಾರೆಯೇ? ಅದಕ್ಕೆ reasoning ಕೊಟ್ಟಿದ್ದಾರೆಯೇ? ಕೊಡಲಿಲ್ಲ ಎಂದು ಹೇಳಿದರೆ, ಎಲ್ಲೋ ಒಂದು ವೇಳೆ ಧಿಕ್ಕರಿಸಿದ್ದರೆ, ಅಂಥವರ ಮೇಲೆ ಕ್ರಮ ಜರುಗಿಸುವಂಥದ್ದಕ್ಕೆ ಬಹುಶಃ ಸರ್ಕಾರ ಎಲ್ಲೋ ಒಂದು ಕಡೆ ಮನಸ್ಸು ಮಾಡಬೇಕೆಂದು ನಾನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ಬಹುಶಃ ಇದರ ಜೊತೆಗೆ ಇತ್ತೀಚೆಗೆ ಕೆಲವು Minority status ಮೇಲೆ ಸಂಸ್ಥೆಗಳನ್ನು ಪ್ರಾರಂಭ ಮಾಡಿದರೆ, ಕೆಲವು ಸೌಲಭ್ಯಗಳು ಮತ್ತು ವಿನಾಯಿತಿಗಳು ಸಿಗಬಹುದು ಎಂದು ಹೇಳಿ Minority status ಅಡಿ ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಬಹುಶಃ ಆ status ಅನ್ನು ಕೊಡವಂಥದ್ದಕ್ಕೆ ಮತ್ತು ಇವುಗಳನ್ನು ಕಾನೂನಿನ ಚೌಕಟ್ಟಿನಲ್ಲಿ, ಸಂವಿಧಾನದ ಅಡಿಯಲ್ಲಿ ಯಾವ ರೀತಿಯ ಸಂಸ್ಥೆಗಳಿಂದ ಸಮಾಜಕ್ಕೆ ಅಥವಾ ಆ ವರ್ಗಕ್ಕೆ ಉಪಯೋಗವಾಗಬೇಕು ಮತ್ತು ಬೇರೆಯವರಿಗೆ ಯಾವ ರೀತಿ ಉಪಯೋಗವಾಗಬೇಕು ಎನ್ನುವಂಥದ್ದಕ್ಕೆ ಸ್ಪಷ್ಟವಾದ ನೀತಿಯನ್ನು ಸರ್ಕಾರ ರೂಪಿಸುವಂತಹ ಸೂಕ್ತ, ಆ ದಿಕ್ಕಿನಲ್ಲಿ ಯಾವುದಾದರೂ ನೀತಿಯನ್ನು ರೂಪಿಸುವಂಥದ್ದಕ್ಕೆ ಸರ್ಕಾರ ಯೋಚನೆ ಮಾಡುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**ಉಪಸಭಾಪತಿಯವರು:-** ಮಾನ್ಯ ಸಚಿವರು. ಮಾನ್ಯ ಪುಟ್ಟಣ್ಣನವರೇ, ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ಅಲ್ಪಸಂಖ್ಯಾತರ ಶಾಲೆಗಳಿಗೆ ಮಾನ್ಯತೆ ನೀಡುವಂಥದ್ದು ಅಥವಾ

ಅಲ್ಪಸಂಖ್ಯಾತರ ಸಂಸ್ಥೆ ಎಂದು ಘೋಷಣೆ ಮಾಡುವ ಅಧಿಕಾರ ಆ ರಾಜ್ಯದ ಸರ್ಕಾರಗಳಿಗೆ ಇದ್ದಂಥದ್ದು. ತದನಂತರ *National Commission* for *Minority Educational Institutions* ಏನಿದೆ, ಅಲ್ಲಿ ಕೆಲವೊಂದು ಹಿಂದಿನ ಕೆಲವು ವರ್ಷಗಳಲ್ಲಿ, ತಪ್ಪು ಆದಂತಹ ಪ್ರಕರಣಗಳಿಗೆ ಅವರು ಸರಿಪಡಿಸುವಂತಹದ್ದಕ್ಕೆ ಮುಂದಾಗಿ, ತದ ನಂತರ ನ್ಯಾಯಾಲಯದ ಮುಂದೆ ಹೋದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯ ಆ ರಾಜ್ಯ ಸರ್ಕಾರಗಳಿಗೆ ಇದ್ದಂತಹ ಅಧಿಕಾರವನ್ನು ಮೊಟಕು ಮಾಡಿದಂತಹ ಒಂದು ನಿರ್ದೇಶನ ತಮ್ಮೆಲ್ಲರ ಮುಂದೆ ಇದೆ. T.M.A.Pai Foundation & Ors vs State Of Karnataka ಪ್ರಕರಣ ನ್ಯಾಯಾಲಯದ ಮುಂದೆ ಹೋದಂತಹ ಸಂದರ್ಭದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಬಹಳ ಸ್ಪಷ್ಟವಾಗಿ ಸಂವಿಧಾನದ ಅನುಚ್ಛೇದ 31 ರ ಪ್ರಕಾರ, ಆ ಸಂಸ್ಥೆಗಳಿಗೆ ಯಾವುದೇ ನಿರ್ಬಂಧನೆಗಳನ್ನು ನೀವು ಏರಬಾರದು. ಯಾವುದೇ ವಿದ್ಯಾರ್ಥಿಗಳ ಸಂಖ್ಯೆಯಾಗಿರಬಹುದು, ಯಾವುದೇ ಬೋಧಕ ವರ್ಗಗಳ ಸಂಖ್ಯೆ ಆಗಿರಬಹುದು ಅವರು ನಡೆಸುವಂತಹ ಶಾಲೆಗಳನ್ನು ಮಾನ್ಯತೆ ನೀಡವಂತಹದ್ದು ಆ ಸರ್ಕಾರಗಳು ಮಾಡಬೇಕು ಎಂದು ಒಂದು ಕಡೆಯಲ್ಲಿ ಹೇಳಿದೆ. ಅಷ್ಟಾಗಿದ್ದರೂ ಕೂಡ ನಮ್ಮ ರಾಜ್ಯದಲ್ಲಿ ಈ ಹಿಂದೆ 2010 ರಲ್ಲಿ ಇದಕ್ಕಾಗಿ ಒಂದು ಹೊಸ ನಿಯಮಾವಳಿಗಳನ್ನು ರೂಪಿಸಿ, ಶೇಕಡ 75 ರಷ್ಟು ಆಯಾಯ ಸಮುದಾಯದ ಮಕ್ಕಳು ಇರಬೇಕು. ಅಲ್ಪಸಂಖ್ಯಾತರ ಆಡಳಿತ ಮಂಡಳಿಯಲ್ಲಿರುವಂತಹ ಯಾವ ಜಾತಿ, ಯಾವ ವರ್ಗದವರು ಆ ಆಡಳಿತ ಮಂಡಳಿಯಲ್ಲಿ ಇರುತ್ತಾರೆ. ಆ ವರ್ಗದ ಮಕ್ಕಳು ಹೆಚ್ಚಾಗಿ ಇರಬೇಕು. ಏಕೆಂದರೆ ಆ ವರ್ಗದ ಶೈಕ್ಷಣಿಕ ಅಭಿವೃದ್ಧಿಗೆ ಪ್ರಾರಂಭ ಮಾಡಿರುವಂತಹ ಸಂಸ್ಥೆ ಎಂದು ಪರಿಗಣಿಸಿ, ಶೇಕಡ 75 ರಷ್ಟು ಆ ವರ್ಗದ ಮಕ್ಕಳ ಇದ್ದರೆ ಮಾತ್ರ ನಾವು ಕೊಡುತ್ತೇವೆ ಎನ್ನುವುದನ್ನು ಆ ಹಿಂದಿನ ಸರ್ಕಾರ ಮಾಡಿತ್ತು.

**ಉಪಸಭಾಪತಿಯವರು:-** ಅದನ್ನು against to Supreme Court Order ಮಾಡಲಾಗಿತ್ತು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಹೌದು. ತದನಂತರ ನಮ್ಮ ಸರ್ಕಾರ ಬಂದಂತಹ ಸಂದರ್ಭದಲ್ಲಿ ಆ Rullings ಏನಿದೆ, ನಾವು ಮಾಡಿಕೊಂಡಂತಹ ಒಂದು ಪದ್ಧತಿಯನ್ನು ಮುಂದಿಟ್ಟುಕೊಂಡು, National Commission for Minorities ನವರ ಜೊತೆಗೆ ನಾವು ಚರ್ಚೆ ಮಾಡಿ ಇದು misuse ಆಗುವಂತಹದು ಸರಿಯಲ್ಲ, ಏಕೆಂದರೆ ಮಾನ್ಯ ಉಗ್ರಪ್ಪನವರು ಹೇಳಿದರು. Article 30(1) ಏನಿದೆ. ಅದನ್ನು violation ಆಗುವಂತಹದು ಆಗಬಾರದು. Violation ಆಗಿದ್ದರೆ, ಎಷ್ಟು ಸಂಸ್ಥೆಗಳ ಮೇಲೆ ನೀವು ಕ್ರಮ ತೆಗೆದುಕೊಂಡಿರುವ ಪ್ರಶ್ನೆ ಕೂಡ ಕೇಳಿದ್ದಾರೆ. 2014ನೇ ಸಾಲಿನಲ್ಲಿ ನಮ್ಮ ಅಧಿಸೂಚನೆ ಹೊರಡಿಸುವಂತಹ ಸಂದರ್ಭದಲ್ಲಿ ಶೇಕಡ 75 ರಷ್ಟು ಇದ್ದದ್ದು, ಶೇಕಡ 25 ರಷ್ಟಕ್ಕೆ ಇಳಿಸಿರುವಂತಹದು ನಿಜ. ಅಲ್ಲಿಂದ ಇಲ್ಲಿಯವರೆಗೂ ನಮ್ಮಲ್ಲಿ ಎಷ್ಟು ಪ್ರಕರಣಗಳು ಬಾಕಿ ಇತ್ತು. ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಶೀಲಿಸಿ, ನಾವು ಕ್ರಮ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಆಯಾ ರಾಜ್ಯಗಳಿಗೆ ಇದ್ದಂತಹ ಅಧಿಕಾರ ಮೋಟಕು ಮಾಡಿದಂತಹ ಸಂದರ್ಭದಲ್ಲಿ ನಾವು ಅದರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಿರಲಿಲ್ಲ. ಇತ್ತೀಚೆಗೆ ಮತ್ತೆ National Commission for Minorities ನವರು ಆ ರಾಜ್ಯಗಳು, it's a State subject ಅದನ್ನು ನೀವು ಮಾಡಬೇಕು ಎಂದು ಹೇಳಿದಂತಹ ಸಂದರ್ಭದಲ್ಲಿ ಡಿಸೆಂಬರ್ 30 ನೇ ತಾರೀಖು 60 ಸಂಸ್ಥೆಗಳಿಗೆ ನಮ್ಮ ಸರ್ಕಾರದಿಂದ ಅಲ್ಪಸಂಖ್ಯಾತರಿಗೆ ಸ್ಥಾನಮಾನಗಳನ್ನು ಕೊಟ್ಟು, ಮಾನ್ಯತೆ ಕೊಟ್ಟಿರುವಂತಹ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಈಗ ನಮ್ಮ ಮುಂದೆ ಪ್ರಕರಣ ಯಾವುದು? ಇಲ್ಲಿ ಸಚಿವರು, ಮುಖ್ಯಮಂತ್ರಿಗಳು, ಅಧಿಕಾರಿಗಳು ಈ ಪದಗಳು ಬಳಕೆಯಾಗಿ ನಿರ್ಲಕ್ಷ್ಯ ತೋರುವಂತಹ ಅಧಿಕಾರಿಗಳು ಯಾರು ಎಂಬುದು ಕೂಡ ಇಲ್ಲಿ ಪ್ರಸ್ತಾಪವಾಗಿದೆ. ಇತ್ತೀಚೆಗೆ, ನಾನು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಂತಹ ಸಂದರ್ಭದಲ್ಲಿ National Commission for Minorities ನವರು ನೀಡಿರುವಂತಹ ಒಂದು ಅಲ್ಪಸಂಖ್ಯಾತರ ಸ್ಥಾನಮಾನ ಕೊಟ್ಟಂತಹ certificate fake ಆಗಿದೆ ಎಂಬ ಕಾರಣಕ್ಕಾಗಿ, ರಾಜ್ಯದ ಆರು ಸಂಸ್ಥೆಗಳ ಮೇಲೆ ನಾವು ಕ್ರಿಮಿನಲ್ ಮೊಕದ್ದಮೆ ಹೂಡಿ, ಆ ಮಾನ್ಯತೆಯನ್ನು ನಾವು ಕೊಟ್ಟಂತಹ ಎನ್‌ಓಸಿಗಳನ್ನು withdraw ಮಾಡಿ, ಮಾಧ್ಯಮದಲ್ಲಿ ಸುಮಾರು ಹತ್ತು ಸಾವಿರ ಮಕ್ಕಳ ಭವಿಷ್ಯ ಏನಾಗುತ್ತದೆಂಬುದು ಕೂಡ ಪ್ರಶ್ನೆ ನಮ್ಮ ಮುಂದೆ ಬಂದಿತ್ತು. ಅದನ್ನ ನ್ಯಾಯಾಲಯದ ಮುಂದೆ ಹೋಗಿ, ತಡೆಯಾಜ್ಞೆ ತಂದು, ನಮ್ಮ ಮುಂದೆ ಮತ್ತೆ ಬಂದಂತಹ ಸಂದರ್ಭದಲ್ಲಿ ನಮ್ಮ ಸ್ಪಷ್ಟವಾದಂತಹ ಅಭಿಪ್ರಾಯಗಳನ್ನು ನ್ಯಾಯಾಲಯದ ಮುಂದೆ ಕೊಟ್ಟಂತಹ ಸಂದರ್ಭದಲ್ಲಿ, ನ್ಯಾಯಾಲಯ ಅದನ್ನು ಇತ್ಯರ್ಥ ಮಾಡಿ, ನಿರ್ದೇಶನ ಎಂದು ಕೊಟ್ಟಿದೆ. ನಿರ್ದೇಶನವನ್ನು ಕೊಟ್ಟಿರುವಂತಹ ಹಿನ್ನೆಲೆಯಲ್ಲಿ ನಮ್ಮಲ್ಲಿ ಪ್ರಸ್ತುತ ಇರುವಂತಹ ನಿಯಮಾವಳಿ ಪ್ರಕಾರ ಶೇಕಡ 25 ರಷ್ಟು ಆ ಸಮುದಾಯದ ಮಕ್ಕಳು ಇರಬೇಕು ಎನ್ನುವುದು ಈಗ ಇರುವಂತಹದು. ಆ ಕಾರಣದಿಂದ, ಇದನ್ನು ಮತ್ತೆ ನಾನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗುವಂತಹದ್ದಕ್ಕೂ ನಾನು ಈಗಾಗಲೇ ಇಟ್ಟುಕೊಂಡಿದ್ದೇನೆ. ನ್ಯಾಯಾಲಯದ ಆದೇಶದ ಮೇರೆಗೆ ಅದನ್ನು ಆದೇಶ ಮಾಡಿರುವಂತಹದು ನಿಜ. ಅದನ್ನು ಖಂಡಿತವಾಗಿಯೂ ಅದರ ಮೇಲೆ ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ, ಇವತ್ತು Commission for Minorities ಆಗಿರಬಹುದು, ಸಂವಿಧಾನದ ಆಶಯಗಳಾಗಿರಬಹುದು, Minorities Status ಕೊಡುವಂತಹದ್ದಕ್ಕೆ ಏನೆಲ್ಲಾ ಇದೆ. ಅದೇ ಸಮುದಾಯಕ್ಕೆ ಸೇರಿರುವ ನಾನು, ನನ್ನಲ್ಲಿ ಆ ಉತ್ಸಾಹವಿದೆ ಎಂದು ಹೇಳಿಕೊಳ್ಳುವುದಿಲ್ಲ. ನಾವು ನಿಯಮಾವಳಿಗಳನ್ನು ರೂಪಿಸುವಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಇದು misuse ಆಗಬಾರದು. ನಾವು ನೀಡುವಂತಹ ಮಾನ್ಯತೆ ಕೊಟ್ಟ ತಕ್ಷಣ ಏನೆಲ್ಲಾ ಕೊಡುತ್ತೇವೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು...)

**ಶ್ರೀ ತನ್ವೀರ್ ಸೇಠ್ (ಮುಂದು):-**

ಸರ್ಕಾರದಿಂದ ಅವರಿಗೆ ನಾವು ಯಾವುದೇ ರೀತಿಯ ಸೌಕರ್ಯಗಳನ್ನು ಕೊಡುವುದಕ್ಕಾಗುತ್ತಿಲ್ಲ. ನಾವು ಕೊಟ್ಟೂ ಇಲ್ಲ; ಅಂತಹ ಉದ್ದೇಶಗಳು ಇಲ್ಲ, ಆದರೆ, RTE (Right to Education) ಕಾಯಿದೆ ಅಡಿಯಲ್ಲಿ ಕೇಂದ್ರ ಸರ್ಕಾರದ ಮಕ್ಕಳ ಹಕ್ಕು ಕಾಯ್ದೆ ಏನಿದೆ ಅದರ ಅಡಿಯಲ್ಲಿ ರಿಯಾಯಿತಿ ಮಾತ್ರ ಕೊಟ್ಟಿದ್ದಾರೆ. ಆ ರಿಯಾಯಿತಿ ಪಡೆಯುವುದಕ್ಕೆ ಪದೇ ಪದೇ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತೆಗೆದುಕೊಂಡು ಬರುತ್ತಿದ್ದಾರೆ. ನಾವು ಎಲ್ಲಾ CBSE (Central Board of Secondary Education), ICSE (Indian Certificate of Secondary Education) ಅಥವಾ ನಮ್ಮ ರಾಜ್ಯದ ಸಂಯೋಜಿತ ಶಾಲೆಗಳನ್ನು ನಾವು ನವೀಕರಣ ಮಾಡುವಂತಹ ಸಂದರ್ಭದಲ್ಲಿಯೂ RTE ಅಡಿಯಲ್ಲಿ ನೀವು ಕಡ್ಡಾಯವಾಗಿ ರಾಜ್ಯ ಸರ್ಕಾರಕ್ಕೆ ಶೇ.25 ರಷ್ಟು ಸೀಟ್‌ಗಳನ್ನು ಬಿಟ್ಟುಕೊಡತಕ್ಕದ್ದು ಎನ್ನುವುದನ್ನು ಆದೇಶದಲ್ಲೇ ಬರೆದು ಕಳುಹಿಸುತ್ತಿದ್ದೇವೆ. ಆದರೆ, ಮಾನ್ಯತೆ ಪಡೆದಂತಹ ಶಾಲೆಗಳು ನಮಗೆ ರಿಯಾಯಿತಿ ಕೊಡಿ ಎಂದು ಪದೇ ಪದೇ ನಮ್ಮ ಹತ್ತಿರ ಬರುತ್ತಿರುವುದರಿಂದ ಇದಕ್ಕೆ ಸ್ಪಷ್ಟವಾದಂತಹ ಒಂದು ನಿಲುವನ್ನು ನಾವು ತೆಗೆದುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ, ನಾವು ನಮ್ಮ ರಾಜ್ಯದ ಅಡ್ವೋಕೇಟ್ ಜನರಲ್‌ರವರು ಹಾಗೂ ಕಾನೂನು ಇಲಾಖೆಯಿಂದಲೂ ಸಹ ಮಾಹಿತಿ ಪಡೆದುಕೊಂಡಿದ್ದೇವೆ. ಅದಕ್ಕೆ ಸ್ಪಷ್ಟವಾದಂತಹ ನಿಲುವನ್ನು ರಾಜ್ಯ ಸರ್ಕಾರ ಪ್ರಕಟ ಮಾಡುತ್ತದೆ. ಈ ಒಂದು ಪ್ರಕರಣದಲ್ಲಿ ತಾವೇನು ಹೇಳುತ್ತಿದ್ದೀರಿ, ಆ ವಿಚಾರದಲ್ಲಿ ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ, ಇತ್ಯರ್ಥ ಮಾಡುವಂಥದ್ದಕ್ಕೂ ಕೂಡ ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರಲ್ಲಿ ನನ್ನ ಮನವಿ ಇರುವುದೇನು ಗೊತ್ತೆ? ಇದರ ಬಗ್ಗೆ ಅವರಿಗೆ ಸಂಪೂರ್ಣವಾದ ಅರಿವು ಇತ್ತು ಅಲ್ಲವೇ?

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಈಗ ತಾವು ಮಾತನಾಡಬೇಕೆ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ನಾನು ಹೆಚ್ಚು ಸಮಯ ಮಾತನಾಡುವುದಿಲ್ಲ. ನಾನು ಅವರಿಗೆ clarification... ಅವರು ಒಂದು ಎಂದು ಹೇಳಿದರು. ಈಗ ಇದರ ಬಗ್ಗೆ ಮಾನ್ಯ ಸಚಿವರಿಗೆ ಗೊತ್ತಿರುತ್ತದೆ. ಮುಂದಿನ ದಿನಗಳಲ್ಲಿ ಚುನಾವಣೆ ಬರುತ್ತಿದೆ. ಚುನಾವಣೆ ಅನೌನ್ಸ್ ಆಗುತ್ತದೆ. ಈ ಚುನಾವಣೆ ಅನೌನ್ಸ್ ಆದಲ್ಲಿ ಮುಂದೆ ಇವರೇನು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಒಟ್ಟಾರೆಯಾಗಿಯಾದರೂ ಕೂಡ ಅದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಏಕೆಂದರೆ, ಈಗ ಸಂವಿಧಾನಾತ್ಮಕವಾಗಿ ಇರತಕ್ಕಂಥ ಹಕ್ಕು ಎಲ್ಲರಿಗೂ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗಬೇಕಲ್ಲವೇ? ಇದೆಲ್ಲವೂ ತಮಗೆ ಗೊತ್ತಿರುವುದರಿಂದ ಹಾಗೂ ಎಲ್ಲಾ ಇಲಾಖೆಗಳ ಅಭಿಪ್ರಾಯವನ್ನು ಪಡೆದುಕೊಂಡಿರುವುದರಿಂದ, ದಯವಿಟ್ಟು ಅದು ಒಂದು ಎಂದು ನೀವು ಹೇಳಬೇಡಿ. ಇದಕ್ಕೂ ಸಹ ಒಂದು ತೀರ್ಮಾನವನ್ನು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಆಗದೇ ಇರುವಂತಹ ರೀತಿಯಲ್ಲಿ ತೆಗೆದುಕೊಂಡು, ಎಷ್ಟು ಸಮಯದಲ್ಲಿ ಮಾಡುವುದಕ್ಕೆ ಆಗುತ್ತದೆಯೋ ಮಾಡಿ. ಏಕೆಂದರೆ, ಈಗ ಸಮಯವಿಲ್ಲ. ಈಗ ಚುನಾವಣೆ ಅನೌನ್ಸ್ ಆದಲ್ಲಿ, ತಾವೇನೂ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಯಾವ ಕಾಲಮಿತಿಯಲ್ಲಿ ತೀರ್ಮಾನ ಮಾಡುತ್ತೀರಿ ಎಂದಷ್ಟೇ ನಾನು ಕೇಳುತ್ತಿರುವುದು.

**ಶ್ರೀ ತನ್ವೀರ್ ಸೇಠ್:-** ಈಗಾಗಲೇ ನಾವು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.. .

**ಶ್ರೀ ತನ್ವೀರ್ ಸೇಠ್:-** ನಾವು ಯಾವುದೇ ಕಾರ್ಯ ಮಾಡಬೇಕಾದರೂ ಸಹ ಹಿನ್ನೆಲೆಯನ್ನು ನೋಡಬೇಕಾಗುತ್ತದೆ.

**9. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ರವಿಯವರು ಘನತೆವೆತ್ತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಸುಮಾರು 1 ಗಂಟೆ 15 ನಿಮಿಷಗಳ ಕಾಲ ಮಾತನಾಡಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಾಡುವುದು ಇದೊಂದು "ದೇವರ ಪೂಜೆಯಲ್ಲಿ ಮಂಗಳಾರತಿ ಮಾಡಿದಂತೆ " ಅಷ್ಟೆ, ಇನ್ನೇನೂ ಇಲ್ಲ. This is a ritual, ಸರ್ಕಾರಕ್ಕೆ ಒಂದು ritual. "ಹಾದಿಯಲ್ಲಿ ಹೋಗುವಂತಹ ದಾಸಯ್ಯ ಹಾಡಿದ್ದೇ ಹಾಡೋ ದಾಸಯ್ಯ ಎನ್ನುತ್ತಾರಲ್ಲಾ ಹಾಗೆ, ಊದಿದ್ದೇ ಊದೋ ಶಂಖ ಎನ್ನುವಂಥ ಖದರಿನಲ್ಲಿ" ಘನತೆವೆತ್ತ ರಾಜ್ಯಪಾಲರು, ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ, ಇದು ನನ್ನ ಸರ್ಕಾರವೆಂದು ಹೇಳುವಂಥದ್ದು ಒಂದು ಪದ್ಧತಿಯಾಗಿದೆ, ಇದು ನಿಜ. He is the head of the Government. ಅವರು ಇದು ನನ್ನ ಸರ್ಕಾರವೆಂದು ಹೇಳುವುದರಲ್ಲಿ ತಪ್ಪೇನು ಇಲ್ಲ. ನಾನು point by point ಹೋಗುವುದಿಲ್ಲ. ಇತ್ತೀಚೆಗೆ ಕೇಂದ್ರ ಸರ್ಕಾರಿ ನೌಕರರ ವೇತನಕ್ಕೆ ಸಮಾನ ವೇತನ ಈ ಬಾರಿ ನೀಡಬೇಕು ಎನ್ನುವ ನಿರೀಕ್ಷೆಯನ್ನು ನಮ್ಮ ರಾಜ್ಯ ಸರ್ಕಾರದ ನೌಕರರು ಇಟ್ಟುಕೊಂಡಿದ್ದರು. 6ನೇ ವೇತನ ಆಯೋಗ ಕೂಡ ಈಗಾಗಲೇ ಒಂದು ವಿಚಾರವನ್ನು ಸರ್ಕಾರದ ಮುಂದಿಟ್ಟಿದ್ದಾರೆ. 6ನೇ ವೇತನ ಆಯೋಗವನ್ನು ಮಂಡನೆ ಮಾಡುತ್ತಾರೆ, ನಮಗೆ ಜನವರಿಯಿಂದಲೋ ಅಥವಾ ಹಿಂದಿನ ದಿನಾಂಕದಿಂದ ಸಂಬಳ ಜಾಸ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತದೆಂದು ನಮ್ಮ ಎಲ್ಲಾ ಸರ್ಕಾರದ ಅಧಿಕಾರಿ/ನೌಕರರು ಖುಷಿಯಾಗಿದ್ದರು. ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಏಪ್ರಿಲ್ ಒಂದನೇ ತಾರೀಖಿನಿಂದ ಅದನ್ನು ಜಾರಿಗೆ ತರಲಾಗುವುದೆಂದು ಹೇಳುತ್ತಿದ್ದಾರೆ. ಈ 6ನೇ ವೇತನ ಆಯೋಗದ ವರದಿಯು ಪೋಲೀಸ್ ಇಲಾಖೆಗೆ ಅನ್ವಯಿಸುವುದಿಲ್ಲ. ಪೋಲೀಸ್ ಇಲಾಖೆಗೆ ಯಾವುದೋ ಒಂದು ಬೇರೆ ವರದಿ ಇದೆ. ಆ ವರದಿ ಆಧಾರದ ಮೇಲೆ ನಾವು ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಇದರ ಬಗ್ಗೆ ಹೇಳಿದರೆ ಒಳ್ಳೆಯದಾದೀತು. ಇವತ್ತು ರಾಜ್ಯದಲ್ಲಿನ ಸರ್ಕಾರಿ ಅಧಿಕಾರಿಗಳ ಬಗ್ಗೆ ಮಾತನಾಡುತ್ತಾ, ಈ ವಿಷಯ ಏಕೆ ಪ್ರಸ್ತಾಪಿಸಿದೆನೆಂದರೆ, ರಾಜ್ಯ ಸರ್ಕಾರದಲ್ಲಿ ಸುಮಾರು ಶೇ.35 ರಷ್ಟು ಹುದ್ದೆಗಳು ಖಾಲಿ ಇವೆ. ಇಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು, ಇವರು ಹೇಗೆ ಸರ್ಕಾರವನ್ನು ನಡೆಸುತ್ತಾರೆ? ಇವತ್ತಿನ "ಈ ಸಂಜೆ" ದಿನ ಪತ್ರಿಕೆಯಲ್ಲಿ "ಪಾಲಿಕೆ ಶಾಲೆಗಳ ಅಧೋಗತಿ" ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟವಾಗಿರುವ ವರದಿಯಲ್ಲಿ ಬೆಂಗಳೂರು ನಗರ ಕಾರ್ಪೋರೇಷನ್ ಶಾಲೆಗಳಲ್ಲಿ ಶೇ.58 ಅಧ್ಯಾಪಕರುಗಳು ಇಲ್ಲ. ಅಲ್ಲೆಲ್ಲಾ ನಮ್ಮ ಬಡ ವರ್ಗದ ಮಕ್ಕಳು ಓದುತ್ತಿದ್ದಾರೆ. ನಾವು ಯಾವಾಗಲೂ ಬಡವರ ಬಗ್ಗೆ ಮಾತನಾಡುತ್ತಿರುತ್ತೇವೆ. ಬಡವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವಂಥ ಸಂದರ್ಭದಲ್ಲಿ ನೂರಕ್ಕೆ ಐವತ್ತೆಂಟರಷ್ಟು ಅಧ್ಯಾಪಕರು ಶಾಲೆಗಳಲ್ಲಿ ಇಲ್ಲದಿದ್ದರೆ, ಅವರು ಶಾಲೆಗಳನ್ನು ಹೇಗೆ ನಡೆಸುತ್ತಾರೆ? ಈಗ ಇಂತಹ ಪರಿಸ್ಥಿತಿ ಏಕೆ ಬಂದಿದೆ? ರಾಜ್ಯದಲ್ಲಿ ಒಟ್ಟಾರೆ ಶೇ.35ರಷ್ಟು ಖಾಲಿ ಹುದ್ದೆಗಳಿವೆ. ಯಾವಾಗ ಆ ಹುದ್ದೆಗಳನ್ನು ತುಂಬುತ್ತೀರಿ? ಇದು ವಿದ್ಯಾರ್ಥಿಗಳ ಸಮಸ್ಯೆ. ನಮ್ಮ ರಾಜ್ಯದಲ್ಲಿ 40,000 ಸರ್ಕಾರಿ ಶಾಲೆಗಳ ಕಟ್ಟಡಗಳು ಶಿಥಿಲವಾಗಿವೆ. ನಾವು ವಿದ್ಯಾಭ್ಯಾಸದ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ನಾವು ಮಾತನಾಡದಿರುವಂತಹ ವಿಚಾರಗಳೇ ಇಲ್ಲ. ಆದರೆ, ಎಲ್ಲಾ ವಿಚಾರಗಳನ್ನು ಸದನದಲ್ಲಿ ಮಾತನಾಡುತ್ತೇವೆ. ಕರ್ನಾಟಕ ರಾಜ್ಯದಲ್ಲಿ 40,000 ಸರ್ಕಾರಿ ಶಾಲೆಗಳು ಆಗಲೋ-ಈಗಲೋ ಬೀಳುವಂತಹ ಸ್ಥಿತಿಯಲ್ಲಿ ಇವೆ. ಬಹಳಷ್ಟು ಶಾಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಒಂದೇ ಒಂದು ಕೊಠಡಿ ಇರುತ್ತದೆ. ಕೆಲವು ಕಡೆ, ಎರಡು ಕೊಠಡಿಗಳು ಇರುತ್ತವೆ. ಸುಮಾರು ಐದು sections ಗೆ ಇಬ್ಬರು ಅಧ್ಯಾಪಕರು ಇರುತ್ತಾರೆ. ನಮ್ಮ ರಾಜ್ಯದಲ್ಲಿ ಆಡಳಿತ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ, ನಿಜ ಚೆನ್ನಾಗಿದೆ. ಏಕೆಂದರೆ, ದೂರು ಕೊಡುವವರು ಯಾರು ಇಲ್ಲ. ಈ ವರ್ಷದ ಆಯವ್ಯಯದಲ್ಲಿ 40,000 ಸರ್ಕಾರಿ ಶಾಲೆಗಳ ದುರಸ್ಥಿ ಬಗ್ಗೆ ಒಂದು ಮಾತನ್ನು ಹೇಳಿಲ್ಲ, ಅದರ ಬಗ್ಗೆ ಉಲ್ಲೇಖ ಇಲ್ಲ. ಶಾಲೆಗಳ ದುರಸ್ಥಿಗೆ ವಿಶೇಷ ಅನುದಾನ ಬಿಡುಗಡೆ ಆಗಬೇಕಾಗಿತ್ತು. ಸಮರೋಪಾದಿಯಲ್ಲಿ ಶಾಲೆಗಳ ದುರಸ್ಥಿ ಕಾರ್ಯ ಆಗಬೇಕಾಗಿತ್ತು, ಆದರೆ ಆಗಿಲ್ಲ. ಇವತ್ತಿನ ದಿವಸ ರಸ್ತೆಗಳು ಗುಂಡಿಯಲ್ಲಿವೆಯೋ ಅಥವಾ ಗುಂಡಿಯಲ್ಲಿ ರಸ್ತೆಗಳು ಇದ್ದಾವೋ ನಮಗೆ ಗೊತ್ತಿಲ್ಲ. ಇತ್ತೀಚೆಗೆ ಅನೇಕ ಕಡೆಗಳಲ್ಲಿ ಹೊಸ ಹೊಸದಾಗಿ 1 ಕಿಲೋ ಮೀಟರ್‌ಗೆ 39 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ನಮಗೆ ರಸ್ತೆಗಳು ಬೇಕೇ ಬೇಕು. ಬೆಂಗಳೂರಿನ ಒಳಗೆ ಬರತಕ್ಕಂಥ ಎಲ್ಲಾ ರಸ್ತೆಗಳನ್ನು ಸಿಮೆಂಟ್ ರಸ್ತೆಗಳನ್ನಾಗಿ ಮಾಡಬೇಕೆಂದು ಮಾಡುತ್ತಿದ್ದಾರೆ. ಅದು ನನಗೆ ಸಂತೋಷವಾದ ವಿಚಾರ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಲಿ. On an average, 1 ಕಿಲೋ ಮೀಟರ್‌ಗೆ 39 ಕೋಟಿ ರೂಪಾಯಿಗಳು ಖರ್ಚು ಮಾಡಿ ರಸ್ತೆಗಳನ್ನೇನು ನಿರ್ಮಿಸುತ್ತಿದ್ದಾರೆ, ನಮ್ಮಲ್ಲಿ planning ಇಲ್ಲದೆಯೇ ರಸ್ತೆಗಳನ್ನು ಮಾಡಿಬಿಡುತ್ತಾರೆ. ಒಂದು ಅಡಿ ಆಳಕ್ಕೆ ಕಾಂಕ್ರೀಟ್‌ನ್ನು ರಸ್ತೆಗೆ ಹಾಕುತ್ತಿದ್ದಾರೆ. ನಾನು ಪ್ರತಿದಿವಸ ಓಡಾಡುತ್ತಿದ್ದೇನೆ. ಇದಕ್ಕೆ ಸುಮಾರು 60 ಕೋಟಿ ರೂಪಾಯಿಗಳಷ್ಟು ಬೇಕಾದರೂ ಖರ್ಚು ಮಾಡಬಹುದು. ಏನೂ ತೊಂದರೆ ಇಲ್ಲ. ಮಾನ್ಯ ಲೋಕೋಪಯೋಗಿ ಸಚಿವರ ಮೇಲೆ ಇದರ ಜವಾಬ್ದಾರಿ ಇದೆ. It all depends upon him.

**(ಮುಂದು. . . )**

**(145)20.02.2018/ಎಂಎಂ/ಬಿಎನ್‌ಎಸ್/5.00**

**ಶ್ರೀ ರಾಮಚಂದ್ರಗೌಡ (ಮುಂದು):-**

ಅವರು ಬೇಕು ಎಂದರೆ ಸುಮಾರು 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. 9 ಇಂಚು ಇರುವುದನ್ನು 18 ಇಂಚು ಮಾಡುತ್ತಾರೆ.

**ಶ್ರೀ ಕೆ.ಬಿ. ಶಾಣಪ್ಪ:-** ಅದು tax payers' money ಅಲ್ಲವೇ?

**ಶ್ರೀ ರಾಮಚಂದ್ರಗೌಡ:-** ಅದು ಅವರಿಗೆ ಗೊತ್ತಿಲ್ಲ. ತೆರಿಗೆದಾರನು ಪ್ರತಿ ದಿವಸ ಬೀಡಿಯನ್ನು ಸೇದುತ್ತಾನೆ, ಬೀಡಿ ಮೇಲೆ ತೆರಿಗೆ ಕೊಡುತ್ತಾನೆ. ಪ್ರತಿ ದಿವಸ ಸಿಗರೇಟ್ ಸೇದುತ್ತಾನೆ, ಅದರ ಮೇಲೆ ತೆರಿಗೆ ಕೊಡುತ್ತಾನೆ. ಪ್ರತಿ ದಿವಸ ಹೆಂಡ ಕುಡಿಯುತ್ತಾನೆ, ಅದರ ಮೇಲೆ ತೆರಿಗೆ ಕೊಡುತ್ತಾನೆ. ಅವನು ತೆರಿಗೆ ಕೊಡದಿರುವ ಜಾಗವೇ ಇಲ್ಲ. ಸಿನಿಮಾ ಥಿಯೇಟರ್‌ಗೆ ಹೋದರೆ ಟಿಕೆಟ್ ಮೇಲೆ ತೆರಿಗೆಯನ್ನು ಕಟ್ಟಬೇಕು. ಒಂದು ಗಾದೆ ಮಾತಿದೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೇ.68 ರಿಂದ 70ರಷ್ಟು ಜನರು ಸಂಪಾದನೆ ಮಾಡಿರುವುದೆಲ್ಲಾ ಇವರಿಗೇ ಬರುತ್ತದೆ. ನೀವು ಎಲ್ಲಿಗೇ ಹೋದರೂ ಎಲ್ಲಾ ಕಡೆಯೂ ತೆರಿಗೆ ಇದೆ.

**Sri RAMACHANDRA GOWDA** :- He means to say that it is a Commission Government. ಇಷ್ಟು ಹಣವನ್ನು ಖರ್ಚು ಮಾಡಿ ರಸ್ತೆಗಳನ್ನು ಮಾಡುತ್ತಾರೆ. ಇವತ್ತು ರಸ್ತೆಗಳನ್ನು ಮಾಡಿಕೊಂಡು ಹೋದರೆ ಮುಂದಿನ ವಾರ ಅವುಗಳನ್ನು ಅಗೆದುಕೊಂಡು ಬರುತ್ತಾರೆ. ರಸ್ತೆಗಳನ್ನು ಮಾಡುವುದಕ್ಕೆ ಮುಂಚೆ ಸಾಧಾರಣವಾಗಿ ಬೆಂಗಳೂರಿನ ಸುತ್ತಲೂ ರೆವಿನ್ಯೂ ಸೈಟುಗಳನ್ನು ಮಾಡುತ್ತಿದ್ದಾರೆ. ರೆವಿನ್ಯೂ ಸೈಟುಗಳನ್ನು ಮಾಡುವವನಿಗೆ ಮೊದಲು ಮೋರಿಯನ್ನು ಮಾಡಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿದೆ, ವಿದ್ಯುತ್ತನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಗೊತ್ತಿದೆ, ಎಲ್ಲಿ ಪೈಪ್ ಹಾಕಬೇಕೆಂದು ಗೊತ್ತು. ಇಲಾಖೆಯ Planning Engineers ಗೆ ರಸ್ತೆಯನ್ನು ಯಾವಾಗ ಮಾಡಬೇಕು, ಮೋರಿಯನ್ನು ಯಾವಾಗ ಮಾಡಬೇಕು, ವೈರ್ ಅನ್ನು ಯಾವಾಗ ಎಳೆಯಬೇಕೆನ್ನುವುದು ಗೊತ್ತಾಗುವುದಿಲ್ಲವೇ? Lack of planning ಇರಬೇಕಾಗುತ್ತದೆ. ಸರ್ಕಾರ ಎಂದರೆ, planning is also part of the Government. We have failed there. ಮಾನ್ಯ ಸಿದ್ದರಾಮಯ್ಯನವರು ಎಲ್ಲಾ ಭಾಗ್ಯಗಳನ್ನು ಕೊಡುವುದರಲ್ಲಿ ಸಿದ್ಧಹಸ್ತರು. ಎಲ್ಲಾ ಭಾಗ್ಯಗಳನ್ನೂ ಕೊಡುತ್ತಿದ್ದಾರೆ. I am really happy about it. ಯಾವ ಭಾಗ್ಯದ ಬಗ್ಗೆಯೂ ನನ್ನ ಆಕ್ಷೇಪವಿಲ್ಲ, ವಿರೋಧವಿಲ್ಲ. ಎಲ್ಲಾ ಭಾಗ್ಯವನ್ನೂ ಕೊಡುತ್ತಿದ್ದಾರೆ, ಕೊಡಲಿ. ಆದರೆ ಬೆಂಗಳೂರಿನಲ್ಲಿ ನಮಗೆ ಉತ್ತಮ ನೈರ್ಮಲ್ಯ ಪರಿಸರ ಭಾಗ್ಯವನ್ನು ಕೊಡಲಿಲ್ಲ. ಬೆಂಗಳೂರಿಗೆ ದಿನವೂ ಎಷ್ಟು ವಾಹನಗಳು ಬರುತ್ತಿವೆ ಎಂದರೆ, ಅದು ಏಕೆ ಬರುತ್ತಿದ್ದಾರೋ ನನಗಂತೂ ಗೊತ್ತಿಲ್ಲ. ಇಲ್ಲಿಂದ ನಮ್ಮ ಮನೆಗೆ ಹೋಗಬೇಕಾದರೆ ಒಂದು ಗಂಟೆ ಬೇಕಾಗುತ್ತದೆ. ಸೈಕಲ್ ಮೇಲೆ ಹೋಗುವುದಾದರೆ 10 ನಿಮಿಷದಲ್ಲಿ ಹೊರಟು ಹೋಗುತ್ತೇವೆ. ನಡೆದುಕೊಂಡು ಹೋದರೆ 20 ನಿಮಿಷದಲ್ಲಿ ಹೋಗುತ್ತೇವೆ. ಮಾಲಿನ್ಯ ಭಾಗ್ಯದ ಜೊತೆಗೆ ಬೆಂಗಳೂರಿನಲ್ಲಿ ತಿಪ್ಪೇಗುಂಡಿಗಳ ಭಾಗ್ಯವೂ ಬಂದಿದೆ. ಮಾಲಿನ್ಯ ಭಾಗ್ಯ ಇಲ್ಲ. ಎಲ್ಲಿ ನೋಡಿದರಲ್ಲಿ ಕಸದ ರಾಶಿ ಕಾಣುತ್ತದೆ. ಹೇಳುವವರು ಕೇಳುವವರು ಯಾರೂ ಇಲ್ಲ. ನಿಜ ಹೇಳುವುದಾದರೆ, ನನ್ನ ಮನೆಯ ಪಕ್ಕದಲ್ಲಿ ಪೋಲೀಸ್ ಸ್ಟೇಷನ್ ಇದೆ. ಆ ಪೋಲೀಸ್‌ನವರು ಯಾವ್ಯಾವ ಗಾಡಿಗಳನ್ನೋ ತಂದು ಇಡುತ್ತಾರೆ, ಕಸ ಗುಡಿಸುವವರಿಲ್ಲ, ಹೇಳುವವರಿಲ್ಲ, ಕೇಳುವವರಿಲ್ಲದೇ ತಿಪ್ಪೆಗುಂಡಿಯಾಗಿ ಬಿಟ್ಟಿದೆ. ನಾನು ಯಾರಿಗೆ ಹೇಳಲಿ? ಬಸವೇಶ್ವರ ನಗರದಲ್ಲಿ ನನ್ನ ಮನೆಯ ಪಕ್ಕದಲ್ಲಿಯೇ ಹೀಗಿದೆ. ಅದೆಷ್ಟು ಗಾಡಿಗಳೋ, ಕಿತ್ತು ಹೋಗಿರುವಂತಹವು, ಬಿಟ್ಟು ಹೋಗಿರುವಂತಹವು, ಕದ್ದು ಹೋಗಿರುವಂತಹವು, ಅಲ್ಲಿಗೆ ಬಂದಿರುವವರ ಗಾಡಿಗಳವೆ. ಅಲ್ಲಿ ಯಾರೂ ಹೇಳುವವರು ಕೇಳುವವರಿಲ್ಲದೇ ತಿಪ್ಪೇಗುಂಡಿಯಾಗಿದೆ. ಬೆಂಗಳೂರು I.T. (Information Technology) city ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಅಲ್ಲ ಇದು ತಿಪ್ಪೇಗುಂಡಿಯ ಪಟ್ಟಣವಾಗಿದೆ. ಇಲ್ಲಿ ಸ್ವಚ್ಛ ಪರಿಸರ ನಿರ್ಮಾಣದ ಕೆಲಸ ಮಾಡುವುದರಲ್ಲಿ ಸರ್ಕಾರ ಸೋತಿದೆ.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಸ ವಿಲೇವಾರಿ ಮಾಡುವುದರ ಬಗ್ಗೆ ಈ ಸಮಸ್ಯೆ ಯಾವಾಗಿನಿಂದ ಪ್ರಾರಂಭವಾಯಿತೆಂದು ಹೇಳಿ.

**ಉಪಸಭಾಪತಿಯವರು:-** ಶ್ರೀಮತಿ ಮೋಟಮ್ಮನವರೇ, . .

**ಶ್ರೀ ರಾಮಚಂದ್ರಗೌಡ:-** ಯಾವಾಗಲಾದರೂ ಆಗಿರಬಹುದು. ಇದರಲ್ಲಿ ನಮ್ಮದೂ ತಪ್ಪಿರಬಹುದು, ನಿಮ್ಮದೂ ತಪ್ಪಿರಬಹುದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀಮತಿ ಮೋಟಮ್ಮ:-** ಕಸ ತೆಗೆಯುವುದರಲ್ಲಿಯೇ ಬಂದಿತು. ಆ ಕಾಂಟ್ರ್ಯಾಕ್ಟ್‌ಗೆ ಎಲ್ಲಿ ತೊಂದರೆಯಾಯಿತೋ ಅಲ್ಲಿಂದಲೇ ಸಮಸ್ಯೆ ಪ್ರಾರಂಭವಾಯಿತು.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಅದಲ್ಲ. ಮಾನ್ಯ ಮುಖ್ಯಮಂತ್ರಿಯವರು ಅನೇಕ 'ಭಾಗ್ಯ'ಗಳನ್ನು ಕೊಡುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಮೋಟಮ್ಮನವರೇ, ತಾವು ಸಮಾಧಾನ ಮಾಡಿಕೊಳ್ಳಬೇಡಿ. . . .

**ಉಪಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, . . .

**ಶ್ರೀ ಪುಟ್ಟಣ್ಣ:-** ನಾನು ಅವರು ಇವರು ಎಂದು ಹೇಳುತ್ತಿಲ್ಲ. ಇದು ನಡೆಯುತ್ತಲೇ ಇದೆ.

**ಶ್ರೀಮತಿ ಮೋಟಮ್ಮ:-** ಎಲ್ಲಿ ಎಡವಿದ್ದೇವೆ ಎಂಬುದನ್ನು ಹೇಳಿ.

**ಶ್ರೀ ಪುಟ್ಟಣ್ಣ:-** ಅದು ಹಿಂದೆಯೂ ಇತ್ತು, ಈಗಲೂ ಇದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರಲ್ಲವೇ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಯಾರಾದರೂ ತೆಗಳುವವರಿದ್ದರೆ ಆನಂದ ಪಡಬೇಕು. ವಿಲೇವಾರಿ ಮಾಡುವವರು ಯಾರು? ಅವರನ್ನು ಕಂಟ್ರೋಲ್ ಮಾಡುವವರು ಯಾರು? ಅದಕ್ಕೆಲ್ಲಾ ನಾನು ಉತ್ತರ ಕೊಡಬೇಕೇ? ಯಾವಾಗಿನಿಂದ ಬಂತು ಎಂದು ನೀವೇ ಉತ್ತರ ಕೊಡಬೇಕು. ನಾನು ಹೀಗಿದೆ ಎಂದು ಹೇಳಿದ್ದೇನೆ. ಅದನ್ನು ಸರಿಮಾಡಿಕೊಳ್ಳುವ ಜವಾಬ್ದಾರಿ ನಿಮ್ಮದು. ಮಾಡಿದರೆ ಮಾಡಬಹುದು ಇಲ್ಲದಿದ್ದರೆ ಜನರು ಉತ್ತರ ಕೊಡುತ್ತಾರೆ ಅಷ್ಟೇ. ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ. ಇವತ್ತು ಬೆಂಗಳೂರಿನಲ್ಲಿ ಸುಮಾರು 37 ಕೆರೆಗಳನ್ನು ಅಭಿವೃದ್ಧಿ ಮಾಡಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಅಭಿವೃದ್ಧಿಯಾಗಿದೆ ಎಂದರೆ ಕೆರೆ ಒತ್ತುವರಿಯನ್ನು ಬಿಡಿಸಿಕೊಂಡಿದ್ದೀರಾ? ಅಥವಾ ಅದರಲ್ಲಿ ಹೂಳೆತ್ತಿದ್ದೀರಾ? ಅಥವಾ ಕೆರೆಯಲ್ಲಿ ದುರ್ವಾಸನೆಯಿಲ್ಲದಿರುವ ನೀರಿದೆಯೇ? ಏನು ಮಾಡಿದ್ದೀರಿ? ನೀವು ಮಾಡಲಾಗಿದೆಯೆಂದು ಹೇಳುತ್ತೀರಿ. ಅದರ ಸುತ್ತಲೂ ಬೇಲಿ ಹಾಕಿಸಿದರೆ ಎಲ್ಲವೂ ಕ್ಲೀನ್ ಆಗಿ ನಮ್ಮ ವಶದಲ್ಲಿದೆಯೆಂದಾಯಿತು. ಬೇಲಿ ಹಾಕುವುದು ಮುಖ್ಯವಲ್ಲ. ಸುಮಾರು 10,472 ಎಕರೆ ಒತ್ತುವರಿಯಾಗಿದೆಯೆಂದು ಸರ್ಕಾರದ ವರದಿ ಇದೆ. 10,472 ಎಕರೆ ಜಮೀನು ಬೆಂಗಳೂರು ನಗರದಲ್ಲಿ ಕೆರೆ ಅಂಗಳದಲ್ಲಿ ಒತ್ತುವರಿಯಾಗಿದೆಯೆಂದು ವರದಿ ಬಂದ ಮೇಲೆ ಆ ಒತ್ತುವರಿಯನ್ನು ಬಿಡಿಸಿಕೊಳ್ಳುವಂತಹ ಕೆಲಸವನ್ನು ಮಾಡಿದ್ದೀರಾ? ಆ ಪೈಕಿ ಎಷ್ಟು ಒತ್ತುವರಿಯನ್ನು ಬಿಡಿಸಿಕೊಂಡಿದ್ದೀರಿ ಈ ಜಾಗವನ್ನು denotify ಮಾಡಲು ಮುಂದಾಗಿದ್ದ, ಇಂತಹ ಸರ್ಕಾರವನ್ನು ಏನು ಮಾಡಬೇಕು? ನನಗೆ ಇದರ ಬಗ್ಗೆ ಗೊತ್ತಿಲ್ಲ, ಮಾಹಿತಿ ಬಂದಿದೆ. ಈ ಒತ್ತುವರಿಯಾಗಿದ್ದ ಜಾಗವನ್ನು denotify ಮಾಡಿ ಅವರಿಗೆ ಕೊಡಬೇಕೆಂಬ ಒಂದು ಉದ್ದೇಶವಿತ್ತು ಎಂದು ನನಗೆ ಮಾಹಿತಿ ಬಂದಿದೆ. ಇದಕ್ಕೆ ಸರ್ಕಾರ ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕಾಗಿದೆ. denotify ಮಾಡಬೇಕೆಂದು ಇದ್ದರಾ, ಇಲ್ಲವಾ, ಏಕೆ, ಹೇಗೆ ಬಂತು ಎನ್ನುವ ವಿಚಾರವನ್ನು ತಿಳಸಬೇಕು.

ಅಂತರ್ಜಲದ ಬಗ್ಗೆ ನಾನು ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. Point by point ಎರಡೇ ನಿಮಿಷ ಹೇಳುತ್ತೇನೆ. ಅಂತರ್ಜಲವನ್ನು ವೃದ್ಧಿ ಮಾಡಬೇಕೆಂದು ಸರ್ಕಾರದಲ್ಲಿ ಎಲ್ಲರಿಗೂ ಆಸೆ ಇದೆ. ಆದರೆ, what is the method? ಮಾಡುವಂತಹ ಕ್ರಮ ಏನು? ಅದಕ್ಕಾಗಿ ಏನು Master Plan ಮಾಡಿದ್ದೀರಾ? ಬೆಂಗಳೂರಿನಲ್ಲಿ 2000 ಅಡಿಗೆ ಹೋದರೂ ನೀರು ಬರುವುದಿಲ್ಲ. ನನಗೆ ಮಾಜಿ ಸಚಿವರೊಬ್ಬರು ಅವರಿಗೆ ಮಾಡುವುದಕ್ಕಾಗುವುದಿಲ್ಲ, ತಮ್ಮ ಮಕ್ಕಳು ಬೇಡವೆಂದು ಹೇಳಿದ್ದಾರೆಂದು ಸುಮಾರು 10 ಎಕರೆಯಷ್ಟು ಜಮೀನನ್ನು ಕೊಟ್ಟಿದ್ದರು. ನಾನು ಸುಮ್ಮನಿರದೇ ತೋಟವನ್ನು ಮಾಡಲು ಹೋಗಿ ಐದು ಬೋರ್‌ವೆಲ್‌ಗಳನ್ನು ತೆಗೆಸಿದೆ. ಆದರೆ ನೀರು ಬರಲಿಲ್ಲ. ನಂತರ ಎರಡು ಬೋರ್‌ವೆಲ್ ತೆಗೆಸಿದೆ ಅದರಲ್ಲಿ ನೀರು ಬಂದಿತು. ಮತ್ತೊಂದು ಬೋರ್‌ವೆಲ್ ತೆಗೆಸಿದರೆ ಅರ್ಧಂಬರ್ಧ ನೀರು ಬಂದಿತು. ನನಗೇ ಹೀಗಾದರೆ, ರೈತನಾದವನು ಹೇಗೆ ಬೋರ್‌ವೆಲ್ ಹಾಕಿಸುತ್ತಾನೆ, ಹೇಗೆ ನೀರನ್ನು ತೆಗೆದುಕೊಳ್ಳುತ್ತಾನೆ? ಏನು ವ್ಯವಸಾಯ ಮಾಡುತ್ತಾನೆ? ಒಂದು ಬೋರ್‌ವೆಲ್ ಹಾಕುವವರು ಸಾಧಾರಣವಾಗಿ 800 ಅಡಿಯವರೆಗೂ ಹಾಕುತ್ತಾರೆ. 900 ಅಡಿಯ ಮೇಲೆ ನಾವು ಹಾಕುವುದಿಲ್ಲ ಎಂದು ಹೇಳುತ್ತಾರೆ. ಅವರು ಹಣವನ್ನು ಕೊಡುವರೋ ಇಲ್ಲವೋ ಎಂಬ ಹೆದರಿಕೆ ಒಂದು ಕಡೆಯಾದರೆ, ನೀರು ಬರುವುದೋ ಇಲ್ಲವೋ ಎಂಬ ಅನುಮಾನ ಇನ್ನೊಂದು ಕಡೆ ಇರುತ್ತದೆ. 1100-1200 ಅಡಿ ತೆಗೆಯಬೇಕಾದರೆ ಒಂದು ಅಡಿಗೆ 300 ರೂಪಾಯಿಗಳನ್ನು ಕೊಟ್ಟರೆ ಹಾಕುತ್ತೇನೆ ಎಂದು ಹೇಳುತ್ತಾನೆ. ನನ್ನದೊಂದು ಸಲಹೆ ಇದೆ. ಬೆಂಗಳೂರು ನಗರದಲ್ಲಿ ಸುಮಾರು 13 ಟಿ.ಎಂ.ಸಿ. ಯಷ್ಟು ಮಳೆಯಾಗುತ್ತದೆ. ಬಹುಶಃ ಈ ವರದಿ ಹಳೆಯ ಬೆಂಗಳೂರಿನದಾಗಿರಬಹುದು. ಇತ್ತೀಚಿನ ಬೆಂಗಳೂರಿನ ಮಾಹಿತಿ ಆದರೆ ಇನ್ನೂ ಜಾಸ್ತಿಯಾಗುತ್ತದೆ. ಹೊಸ ಬೆಂಗಳೂರು ಎಂದರೆ ಬೆಂಗಳೂರು ಯದ್ವಾತದ್ವಾ ಹೇಳುವವರು ಕೇಳುವವರಿಲ್ಲದ ಹಾಗೆ ಬೆಳೆದುಕೊಂಡಿದೆ. ನನ್ನ ಮಾಹಿತಿ ಇರುವುದು ಹಳೆಯ ಬೆಂಗಳೂರಿನದ್ದಾಗಿದೆ. ಹಿಂದೆ 63 ಜನ ಕಾರ್ಪೋರೇಟರ್‌ಗಳಿದ್ದಂತಹ ಸಂದರ್ಭದಲ್ಲಿ ಸುಮಾರು 13 ಟಿ.ಎಂ.ಸಿ. ಅಷ್ಟು ಮಳೆ ನೀರು ಬೆಂಗಳೂರಿನಲ್ಲಿ ಬೀಳುತ್ತಿತ್ತು. ಈಗ ಬೆಂಗಳೂರಿನಲ್ಲಿ ಮನೆ ಕಟ್ಟುವವರು rain water harvesting ಮಾಡಬೇಕೆಂದು ಹೇಳುತ್ತೀರಿ. ಬೆಂಗಳೂರಿನ ಮನೆಗಳಲ್ಲಿ rain water harvesting ಮಾಡಿದರೆ ಏನಾಗುತ್ತದೆ? ನಿಮಗೆ ಯಾರು ಸಲಹೆ ಮಾಡಿದರೋ ನನಗೆ ಗೊತ್ತಿಲ್ಲ. ಅದು ಏನಾಗುತ್ತದೆ?

(ಮುಂದು . . .

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)**:- ಮಾನ್ಯ ಸಭಾಪತಿಯವರೆ, ಇದನ್ನು 2010ನೇ ಸಾಲಿನಲ್ಲಿಯೇ ಕಡ್ಡಾಯ ಮಾಡಲಾಗಿದೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಕಡ್ಡಾಯ ಎಂದು ಮಾಡಿದ್ದಾರೆ. ತಪ್ಪು ನಾವೇ ಮಾಡಿರಬಹುದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾರಾದರೆ ನನಗೆ ಏನು? ಇವತ್ತಿನ ದಿವಸವಾದರೂ ಅದನ್ನು ಸರಿ ಮಾಡಿಕೊಳ್ಳಬೇಕಲ್ಲವೇ?

**ಶ್ರೀ ಕೆ.ಬಿ.ಶಾಣಪ್ಪ (ನಾಮ ನಿರ್ದೇಶಿತರು)**:- ಮಾನ್ಯ ರಾಮಚಂದ್ರಗೌಡರವರೇ, ನೀವಾದರೂ ಇದನ್ನು ಸರಿಪಡಿಸಬಹುದಿತ್ತಲ್ಲವೇ?

**ಶ್ರೀ ಕೃಷ್ಣ ಬೈರೇಗೌಡ**:- ಮಾನ್ಯ ಸಭಾಪತಿಯವರೆ, ಈಗ ಮಾಡಿರುವುದನ್ನು ಸರಿ ಮಾಡಿದ್ದೇವೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೆ, rain water harvest ಮಾಡುವುದೆಂದರೆ, ನೀರು ಭೂಮಿಗೆ ಹೋಗುವ ಹಾಗೆ ಮಾಡಬೇಕು. 1997ರಲ್ಲಿ ನಮ್ಮ ಮನೆಯ ಗೃಹ ಪ್ರವೇಶ ಮಾಡಿದಾಗಲೇ rain water harvest ಮಾಡಲು ಸಹ ವ್ಯವಸ್ಥೆ ಮಾಡಿದ್ದೇನೆ. ಆ ನೀರನ್ನು ಉಪಯೋಗಿಸುವುದಿಲ್ಲ. ನೀರು ಭೂಮಿಗೆ ಹೋಗುವ ಹಾಗೆ 40 ಅಡಿ ಬಾವಿಯನ್ನು ತೆಗೆದು ಬಿಟ್ಟಿದ್ದೇವೆ. ನೀರು ಭೂಮಿಗೆ ಹೋಗುತ್ತಿರುತ್ತದೆ. ನಾನು ಸಲಹೆ ನೀಡುವುದೇನೆಂದರೆ, ಇವತ್ತಿನ ದಿವಸ ಬಾವಿಗಳಿಗೆ ಸಿಮೆಂಟ್ ರಿಂಗ್‌ಗಳನ್ನು ಮಾಡುತ್ತಿದ್ದಾರೆ. ರೈತರು ಅವರ ಜಮೀನಿನಲ್ಲಿ ಕನಿಷ್ಟ ಒಂದೊಂದು ಎಕರೆಗೆ ಅಥವಾ ಎರಡೆರಡು ಎಕರೆಗೆ ಎರಡೂವರೆ ಅಡಿ ಅಥವಾ ಮೂರೂವರೆ ಅಡಿ diameter ಇರುವಂತಹ ಬಾವಿಗಳನ್ನು ತೆಗೆದು, ಆ ಮಳೆ ನೀರನ್ನು ಬಾವಿಗೆ ಹೋಗುವುದಕ್ಕೆ ಬಿಡಬೇಕು. ನೀರನ್ನು ಅದರೊಳಗೆ ಬಿಟ್ಟರೆ ಭೂಮಿಗೆ ಚಾರ್ಜ್ ಆಗುವುದು. ಇಲ್ಲದೇ ಇದ್ದರೆ ಭೂಮಿಗೆ ನೀರು ಚಾರ್ಜ್ ಆಗುವುದಿಲ್ಲ. ನಮ್ಮ ತೋಟದಲ್ಲಿ ಒಂದು ಹೊಂಡವನ್ನು ಮಾಡಿದ್ದೇನೆ. ಅದರಲ್ಲಿ ಸುಮಾರು 2 ಲಕ್ಷ ಲೀಟರ್ ನೀರು ನಿಲ್ಲುತ್ತದೆ. ಆ ನೀರನ್ನು ನಾವು ಉಪಯೋಗಿಸುವುದಿಲ್ಲ. ಆ ನೀರು ಭೂಮಿಗೆ ಹೋಗುತ್ತದೆ. Rain water harvesting ಎಂದರೆ ನೀರನ್ನು ಬಳಸುವುದಕ್ಕಲ್ಲ. ಆ ನೀರು ಭೂಮಿಗೆ ಚಾರ್ಜ್ ಆಗಬೇಕು. ಭೂಮಿಗೆ ಚಾರ್ಜ್ ಆಗದೇ ಇದ್ದರೆ, ಅದನ್ನು ಮನೆಯೊಳಗೆ ಕಟ್ಟಿಕೊಂಡು ಅವನೇನು ನೀರನ್ನು ಉಪಯೋಗಿಸುತ್ತಾನೆಯೇ ಅಥವಾ ಏನಾದರೂ ಮಾಡುತ್ತಾನೆಯೇ? ಏನು ಮಾಡುವುದಿಲ್ಲ. ಏನು ಆಗುವುದಿಲ್ಲ. ಏನೂ ಆಗದೇ ಇರುವ ಕೆಲಸ ಇದು. 30 X 40 ಅಡಿ ನಿವೇಶನದ ಮನೆಯಲ್ಲಿ ತೋಟವನ್ನು ಮಾಡಿ ಒಂದು ಗಿಡವನ್ನು ಬೆಳೆಸಿರುವುದಿಲ್ಲ. ಅವನು ಗಿಡ ಮತ್ತು ಮರವನ್ನು ಎಲ್ಲಿ ಹಾಕುತ್ತಾನೆ. ಯಾವ ಗಿಡಕ್ಕೆ ನೀರು ಹಾಕುತ್ತಾನೆ. ಪರಿಸರವಾದಿಗಳು ಮರವನ್ನು ತಬ್ಬಿಕೊಳ್ಳುತ್ತಾರೆಯಲ್ಲವೇ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಮನೆಯಲ್ಲಿ ಒಂದು ಮರ ಕೂಡ ಇರುವುದಿಲ್ಲ. ನಾನು ಇದನ್ನು ತಮಾಷೆಗೆ ಹೇಳುವುದಿಲ್ಲ. It has become a fashion.

ಕಳೆದ ವರ್ಷ 7,37,000 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ನಡೆಸಲಾಗಿದೆ ಎಂದು ಹೇಳಿದ್ದಾರೆ. ತಾವು ಹೇಳಿರುವ ಮಾತುಗಳಾಗಿದ್ದು, ಈ ಕೌಶಲ್ಯ ತರಬೇತಿಯಲ್ಲಿ 10,770 ಜನರು ಭಾಗವಹಿಸಿದ್ದರು. 1,566 ಜನರಿಗೆ ವಿವಿಧ ಶ್ರೇಣಿಯ ಹುದ್ದೆಗಳನ್ನು ಸೃಜಿಸಲಾಗಿದೆ ಎಂದು ಹೇಳಿದ್ದಾರೆ. 10,770 ಜನರಿಗೆ ಕೌಶಲ್ಯ ತರಬೇತಿಯನ್ನು ಕೊಡಲಾಗಿದೆ. 10,770 ಅಭ್ಯರ್ಥಿಗಳಿಗೆ ಉದ್ಯೋಗವನ್ನು ನೀಡಲಾಗಿದೆ ಎಂದು ಹೇಳಲಾಗಿದೆ. 1,566 ವಿವಿಧ ಶ್ರೇಣಿಯ ಹುದ್ದೆಗಳನ್ನು ಸೃಜಿಸಲಾಗಿದೆ ಎಂದು ಹೇಳಿದ್ದಾರೆ. ಇದು ಒಪ್ಪುವಂತಹ ವಿಚಾರವಾಗಿದೆ. I appreciate it. 7,37,000 ಜನರಲ್ಲಿ ತಾವು 10,770 ಜನರಿಗೆ ಕೆಲಸವನ್ನು ನೀಡಿದ್ದೀರಿ, not even 50,000 among the trained have been employed. ನಾನು ಹೇಳುವುದೇನೆಂದರೆ, ಜುಲೈ ತಿಂಗಳಿನಲ್ಲಿ ಸಮಾಜ ಕಲ್ಯಾಣ ಇಲಾಖೆಯವರು ವಿದ್ಯಾರ್ಥಿ ನಿಲಯಗಳ 'ಅಡಿಗೆ ಸಹಾಯಕ' ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದರು. ಅಡಿಗೆ ಮಾಡುವ ಕೆಲಸಕ್ಕೆ ಪದವಿಯನ್ನು ಮಾಡಿರುವವರು ಎಷ್ಟು ಜನ ಬಂದಿದ್ದರು?

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಿ. ಮಾನ್ಯ ರಾಮಚಂದ್ರಗೌಡರವರು ಚೆನ್ನಾಗಿ ಮಾತನಾಡುತ್ತಿದ್ದಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರೆ, ನೀವು ಸ್ವಲ್ಪ ದೊಡ್ಡಣ್ಣ ಆಗಬೇಕು. 7,37,000 ಜನರಿಗೆ ಕೌಶಲ್ಯ ತರಬೇತಿಯನ್ನು ಕೊಟ್ಟು, ಕೇವಲ 10,770 ಜನರಿಗೆ ಮಾತ್ರ ಕೆಲಸವನ್ನು ಕೊಟ್ಟರೆ ಹೇಗೆ? ಎಷ್ಟು ಜನ ಪದವಿ ಮಟ್ಟದವರು ಅಂದರೆ ಬಿ.ಕಾಂ., ಬಿ.ಎ., ಎಂ.ಎ., ಇಂಜಿನಿಯರಿಂಗ್ ಮಾಡಿದವರು ವಿದ್ಯಾರ್ಥಿ ನಿಲಯದಲ್ಲಿ ಅಡಿಗೆ ಸಹಾಯಕರ ಹುದ್ದೆಗಳಿಗೆ ಅರ್ಜಿ ಹಾಕಿದ್ದರು? ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ಮಾಡಿದವರು ಹಾಸನದಲ್ಲಿ ಅಡಿಗೆ ಸಹಾಯಕರ ಹುದ್ದೆಗೆ ಸಂದರ್ಶನಕ್ಕೆ ಬಂದಿದ್ದರು. ಉದಾಹರಣೆಗೆ, ಮಂಡ್ಯ ಜಿಲ್ಲೆಯಲ್ಲಿ ಇದೇ ಇಲಾಖೆಯಿಂದ ಸೆಕ್ಯೂರಿಟಿ ಗಾರ್ಡ್ ಹುದ್ದೆಗೆ ಕರೆದ ಸಂದರ್ಶನದಲ್ಲಿ ಹಾಜರಾದವರ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುವುದಾದರೆ, ಮದ್ದೂರಿನಿಂದ ಎಂ.ಎಸ್.ಅಕ್ಷಯ್, ಬಿ.ಇ., ಕೆ.ಆರ್.ಪೇಟೆಯಿಂದ ಸುಮಾ, ಹುಣಸೂರಿನ ಮಧುಕುಮಾರ್, ಎಂ.ಎ., ಕೆ.ಸಿ.ದೇವರಾಜು, ಎಂ.ಎ., ವಿದ್ಯಾಭ್ಯಾಸವನ್ನು ಮಾಡಿದ್ದಾರೆ. ಮದ್ದೂರಿನ ಸಿದ್ಧರಾಜು ಎಂ.ಎ., ಮಳವಳ್ಳಿಯ ಅನಿಲ್ ಕುಮಾರ್, ಕೆ.ಆರ್.ನಗರದ ಶೋಭಾ, ಎಂ.ಕಾಂ., ಇವರೆಲ್ಲಾ ಪದವೀಧರರಾಗಿದ್ದು, ಸೆಕ್ಯೂರಿಟಿ ಗಾರ್ಡ್ ಹುದ್ದೆಯ ಸಂದರ್ಶನಕ್ಕೆ ಬಂದಿದ್ದವರು. ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಇದರಿಂದಲೇ ಗೊತ್ತಾಗುತ್ತದೆ. ನಮ್ಮ ಸರ್ಕಾರದಲ್ಲಿ ಶೇಕಡಾ 35 ರಷ್ಟು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು, ಇಷ್ಟೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನರು ಬೆಂಗಳೂರಿನಲ್ಲಿ ಅಡಿಗೆ ಮನೆಯ ಹುದ್ದೆಗೆ, ಸೆಕ್ಯೂರಿಟಿ ಗಾರ್ಡ್ ಹುದ್ದೆಗೆ, ಬೀದಿಯಲ್ಲಿ ಕಸ ಗುಡಿಸುವ ಕೆಲಸಕ್ಕೂ ಸಹ ಸೇರಿದ್ದಾರೆ. ಒಂದು ಕಾಲದಲ್ಲಿ ಈ ಹುದ್ದೆಗಳಿಗೆ ಒಂದೇ ವರ್ಗದವರು ಎಂದು ಇತ್ತು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಕೆಲವು ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಈ ಕೆಲಸಗಳೇ ಶೇಕಡಾ 30 ಕ್ಕಿಂತ ಇನ್ನು ಹೆಚ್ಚಾಗಿ ಖಾಲಿ ಇದೆ. ಶೇಕಡಾ 30ರಷ್ಟು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಈ ರೀತಿಯ ಪರಿಸ್ಥಿತಿ ಇದೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೆ, ಕಳೆದ ಆಯವ್ಯಯದಲ್ಲಿ ಹೇಳಿರುವಂತೆ ಸ್ನಾತಕೋತ್ತರ ಪದವಿಯನ್ನು ಮಾಡಿರುವ ಅಂಗವಿಕಲರಿಗೆ ಕೆ.ಎ.ಎಸ್., ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಭಾಗವಹಿಸಲು ತರಬೇತಿ ನೀಡುವ ಸಲುವಾಗಿ "ಸ್ಪರ್ಧಾ ಚೇತನ" ಯೋಜನೆಯನ್ನು ಸರ್ಕಾರವು ತಂದು ಎರಡು ವರ್ಷಗಳಾಗಿವೆ. ಈ ತರಬೇತಿಯನ್ನು ಪಡೆಯುವ ಸಲುವಾಗಿ ಸುಮಾರು 5 ಸಾವಿರ ಅಂಗವಿಕಲರು ಕಾಯುತ್ತಿದ್ದಾರೆ. ಆದರೆ ಈ ಯೋಜನೆಯು ಇನ್ನೂ ಜಾರಿಗೆ ಬಂದಿಲ್ಲ. ಅಂಗವಿಕಲರಿಗಾಗಿ ಕೆ.ಎ.ಎಸ್., ಬ್ಯಾಂಕಿಂಗ್ ಪರೀಕ್ಷೆಗಳಿಗೆ ಭಾಗವಹಿಸಲು ತರಬೇತಿಯನ್ನು ಕೊಡುತ್ತೇವೆ. ನಾವು ಎಲ್ಲವನ್ನೂ ಮಾಡುತ್ತೇವೆ ಎಂದು ಹೇಳಲಾಗಿತ್ತು. ಇದುವರೆವಿಗೂ ಅದರ ಬಗ್ಗೆ ಮಾತನಾಡುವವರೂ ಇಲ್ಲ, ಕೇಳುವವರೂ ಇಲ್ಲ. ಇದರಲ್ಲಿ ಏನಾಗುತ್ತದೆ ಎಂದರೆ ನಮ್ಮ ಅಧಿಕಾರಿಗಳಿಗೆ ಕೆಲಸ ಅಧಿಕವಾಗಿ ಇರುತ್ತದೆ. ಅವರ ಕೆಲಸ ಮಾಡುವಾಗ ಅವರಿಗೆ ಬೇರೆ ಕೆಲಸದ ಬಗ್ಗೆ ಯೋಚನೆಯನ್ನೇ ಮಾಡುವುದಕ್ಕೆ ಆಗುವುದಿಲ್ಲ. ಬೇರೆ ಕೆಲಸದ ಬಗ್ಗೆ ಯೋಚನೆ ಮಾಡುವುದಕ್ಕೆ ಹೋಗುವಾಗ ನಮ್ಮಂಥವರ ದೂರವಾಣಿ ಕರೆ ಹೋಗುತ್ತದೆ. ನಾನು ನಿಮ್ಮಂಥವರದ್ದು ಎಂದು ಏಕೆ ಹೇಳಬೇಕು? ನಮ್ಮಂಥವರದ್ದು ದೂರವಾಣಿ ಕರೆ ಹೋಗುತ್ತದೆ ಎಂದೇ ಹೇಳುತ್ತೇನೆ. ದೂರವಾಣಿ ಕರೆ ಹೋಗಿ ಕೆಲಸ ಅಲ್ಲಿಯೇ ನಿಂತು ಹೋಗುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸುಮ್ಮನೆ ನಾನು ಕೆಲವು ನಿದರ್ಶನಗಳನ್ನು ಕೊಡುತ್ತಿದ್ದೇನೆ. ನಾನು ವಿವರವಾಗಿ ಮಾತನಾಡುವ ಪರಿಸ್ಥಿತಿ ಬೇಡ ಎಂದು ಬಿಟ್ಟುಬಿಟ್ಟಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಮುಳುಗಡೆಯಾಗುತ್ತಿರುವ ರೈತರ ಜಮೀನುಗಳಿಗೆ ಪರಿಹಾರವನ್ನು ನೀಡಲು ಸರ್ಕಾರವು ಹಣದ ಕೊರತೆಯನ್ನು ಎದುರಿಸುತ್ತಿದೆ. 51,149 ಕೋಟಿ ರೂಪಾಯಿಗಳಿಗೆ ಅನುಮೋದನೆಯನ್ನು ನೀಡಿ, ಕಳೆದ 5 ವರ್ಷಗಳಿಂದ 6,996 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೆ ಈ ಆಯವ್ಯಯದಲ್ಲಿ ಯಾವುದೇ ಹಣವನ್ನು ನೀಡಲಾಗಿಲ್ಲ. ಜಲಾಶಯವನ್ನು ಕಟ್ಟಲಾಗಿದ್ದು, ಜಲಾಶಯದ ನೀರು ಬಳಸುವವರು ಯಾರು? ಅದರ ಉಪಯೋಗ ಯಾರಿಗೆ? ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ 51,149 ಕೋಟಿ ರೂಪಾಯಿಗಳಿಗೆ ಅನುಮೋದನೆ ಮಾಡಿರುವ ದುಡ್ಡನ್ನು ರೈತರಿಗೆ ಕೊಡಬೇಕೆಂದು ಇದ್ದು, ಇದರಲ್ಲಿ ಕೇವಲ 6,996 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಉಳಿದ ಹಣ ಅಲ್ಲಿಯೇ ಇದೆ. ಇನ್ನೂ ಆ ಹಣವನ್ನು ಕೊಟ್ಟೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಒಂದಲ್ಲ ಒಂದು ಕಾರಣವನ್ನು ಕೊಡುತ್ತಿದ್ದಾರೆ. ಒಂದು ಮಾತನ್ನು ಹೇಳುತ್ತೇನೆ. ಜಲಾಶಯವನ್ನು ಕಟ್ಟುವ ಸಂದರ್ಭದಲ್ಲಿ, ನಮ್ಮ neighbouring states ಜನರು ಎಷ್ಟು ಬುದ್ಧಿವಂತರು ಇದ್ದಾರೆ ಎಂದರೆ, ಎಲ್ಲಿ ನೀರು ಬರುತ್ತದೆ ಎಂದು ಗೊತ್ತಾಗುತ್ತದೋ, ಆ ಜಾಗಗಳನ್ನು ಅವರು ಕೊಂಡುಕೊಂಡು ಬಿಟ್ಟರು. ನಮ್ಮ ರಾಜ್ಯದ ರೈತರಿಗೆ ನೀರು ಸಿಗಲೇ ಇಲ್ಲ. ಹೊರ ರಾಜ್ಯದಿಂದ ಬಂದು ಭೂಮಿಯನ್ನು ಕೊಂಡುಕೊಂಡವರಿಗೆ ಅಲ್ಲಿ ನೀರು ಸಿಕ್ಕಿತು. ನಾನು differentiate ಮಾಡುವುದಿಲ್ಲ. ಅವರು ಸಹ ಮನುಷ್ಯರೇ, ಆದರೆ ನಮ್ಮ ರಾಜ್ಯದಲ್ಲಿರುವವರು ಹೇಗೆ ಬೇಸ್ತು ಬಿದ್ದರು ಎಂದು ಹೇಳುತ್ತಿದ್ದೇನೆ. ನಂತರ ಅವರು ಕಾಂಟ್ರಾಕ್ಟ್‌ಗಳನ್ನು ತೆಗೆದುಕೊಳ್ಳುತ್ತಾರೆ ಹಾಗೂ ಕೆಲವು ಜಾಗಗಳನ್ನು ಕೊಂಡುಕೊಳ್ಳುತ್ತಾನೆ. ಅವನ ಭೂಮಿಯ ಮೇಲೆ ಕಾಲುವೆ ಬರುವಾಗ, ತನ್ನ ಜಾಗದಲ್ಲಿ ಕಾಲುವೆ ಬರುತ್ತಿದೆ ಎಂದು ಅವನು ನ್ಯಾಯಾಲಯಕ್ಕೆ ಹೋಗುತ್ತಾನೆ, ಮತ್ತೆ ಕೆಲಸವನ್ನು ನಿಲ್ಲಿಸಿಬಿಡುತ್ತಾನೆ. ಎಂತಹ ದುಸ್ಥಿತಿ ಬಂದಿದೆ ಎಂದರೆ ನಮ್ಮ ಇಲಾಖೆಗೆ ಮತ್ತು ಹೊರಗಡೆ ರಾಜ್ಯದವರಿಗೆ ಒಂದು ರೀತಿಯ understanding ಇದೆ.

(ಮುಂದು)

**ಶ್ರೀ ರಾಮಚಂದ್ರಗೌಡ(ಮುಂದು)**

ಈ ರೀತಿಯ ಒಡಂಬಡಿಕೆಯಿಂದಾಗಿ ನಮ್ಮ ರಾಜ್ಯದ ಜನರು ಗೋಳೋ ಎಂದು ಹೇಳುತ್ತಿದ್ದಾರೆ. ಸಮಯದ ಅಭಾವದಿಂದಾಗಿ ನಾನು ಈ ವಿಚಾರದಲ್ಲಿ ಸವಿಸ್ತಾರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಗಣಿಗಾರಿಕೆಯ ವಿಚಾರವಾಗಿ ಮಾತನಾಡುವುದಾದರೆ ...

**ಉಪಸಭಾಪತಿಯವರು:-** ನಿಮಗೆ ಮಾತನಾಡಲು ಇನ್ನು ಎಷ್ಟು ಸಮಯ ಬೇಕು? ನೀವು ಮಾತನಾಡಲು ಪ್ರಾರಂಭಿಸಿ ಅರ್ಧ ಗಂಟೆಗಳಾಗಿದೆ. ಹೀಗಾಗಿ ಇನ್ನೂ ಎಷ್ಟು ಸಮಯಾವಕಾಶ ಬೇಕಾಗುತ್ತದೆ?

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ನಿಲ್ಲಿಸಿ ಬಿಡಲೇ?

**ಉಪಸಭಾಪತಿಯವರು:-** ಹಾಗೇನೂ ಇಲ್ಲ. ಆದರೆ ಇನ್ನೂ ಬಹಳಷ್ಟು ಸದಸ್ಯರು ಮಾತನಾಡುವವರಿದ್ದಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಇರಲಿ, ನಾನು ಅರ್ಧಗಂಟೆಗಳಿಂದ ಮಾತನಾಡುತ್ತಿಲ್ಲ, ಕೇವಲ 10 ನಿಮಿಷಗಳಾಗಿವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:-** ನೀವು ಮಾತನಾಡಲು ಪ್ರಾರಂಭಿಸಿ ಅರ್ಧ ಗಂಟೆಗಳಾಗಿದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಕೈಯ್ಯಲ್ಲೆ ಗಡಿಯಾರವಿದೆ, ನಾನು ಸದನದ ಗಡಿಯಾರವನ್ನು ನೋಡುವುದಿಲ್ಲ.

**ಉಪಸಭಾಪತಿಯವರು:-** ಆಯಿತು ಮಾತನಾಡಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಜನರು ನನಗೆ, when people are watching you, why are you watching your wrist? ಎಂಬ ಮಾತನ್ನು ಹೇಳಿದರು. ಗಣಿಗಾರಿಕೆಗೆ ಸಂಬಂಧಪಟ್ಟಂತೆ ಜಿಲ್ಲಾ ಖನಿಜ ಪ್ರತಿಷ್ಠಾನ (DMF) ಇದರಲ್ಲಿ ಒಟ್ಟು ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನವಿದೆ. ಕಳೆದ ಸಾಲಿನಲ್ಲಿ ಇದರಲ್ಲಿ 397 ಕೋಟಿ ರೂಪಾಯಿಗಳು ಸಂಗ್ರಹವಾಗಿದೆ. ಈ ಹಣದಿಂದ ಗಣಿ ಬಾಧಿತ ಪ್ರದೇಶಗಳಲ್ಲಿ ಕುಡಿಯುವ ನೀರು, ಮಾಲಿನ್ಯ ನಿಯಂತ್ರಣ, ಅಲ್ಲಿನ ಜನರಿಗೆ ಆರೋಗ್ಯ, ಶಿಕ್ಷಣ, ಪೌಷ್ಠಿಕ ಆಹಾರ, ವಿದ್ಯುತ್ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಯಾವ ಜಾಗದಲ್ಲಿ ಗಣಿಗಾರಿಕೆ ನಡೆಯುತ್ತದೆಯೋ, ಆ ಗಣಿಗಾರಿಕೆಯಿಂದ ಎಷ್ಟು ಹಣ ಸಂಗ್ರಹವಾಗುತ್ತದೆಯೋ, ಆ ಹಣವನ್ನು ಅಲ್ಲಿನ ಅಭಿವೃದ್ಧಿಗಾಗಿ ಬಳಸಬೇಕು. ಗಣಿಗಾರಿಕೆಯ ಭಾಗದಲ್ಲಿರುವವರಿಗೆ ಯಾವ ರೀತಿಯ ತೊಂದರೆಗಳಾಗುತ್ತಿವೆ ಎಂದರೆ, ಅಲ್ಲಿನ ಜನರಿಗೆ ಕುಡಿಯಲು ನೀರಿಲ್ಲ, ವಿದ್ಯಾಭ್ಯಾಸವಿಲ್ಲ, ಓಡಾಡಲು ರಸ್ತೆಗಳಿಲ್ಲ, ಅಲ್ಲಿನ ಪ್ರದೇಶದಲ್ಲೆಲ್ಲಾ ಧೂಳು ಇದೆ, ಅಲ್ಲಿನ ಮಾಲಿನ್ಯ ಕೆಟ್ಟು ಹೋಗಿದೆ. ಇಂತಹ ತೊಂದರೆಗಳನ್ನು ನಿವಾರಿಸಲು ಆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಗಣಿಗಾರಿಕೆಯಿಂದ ಸಂಗ್ರಹವಾದ 397 ಕೋಟಿ ರೂಪಾಯಿಗಳಿಂದ ಯಾವುದೇ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿಲ್ಲ. ಹಣ ಸಂಗ್ರವಾಗಿದೆ ಆದರೆ, ಆ ಹಣ ಯಾವುದೇ ರೀತಿಯ ಉಪಯೋಗಕ್ಕೆ ಬರಲಿಲ್ಲ.

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸಾಧನೆ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಸರ್ಕಾರವು ಹೇಳಿಕೊಂಡಿದೆ. ಆದರೆ ಕೆಲವು ಕಡೆಗಳಲ್ಲಿ ವಿದ್ಯುತ್ ಸಂಪರ್ಕವೇ ಇಲ್ಲ. ಎಲ್ಲಾ ಹಳ್ಳಿಗಳಿಗೂ, ಗ್ರಾಮಗಳಿಗೂ ವಿದ್ಯುತ್ ಸಂಪರ್ಕವನ್ನು ಒದಗಿಸುವುದಾಗಿ ಸರ್ಕಾರವು ಹೇಳಿದೆ. ಯಾವ್ಯಾವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ ಎಂಬ ಬಗ್ಗೆ ನಾನು ಹೇಳುತ್ತೇನೆ. ನಾನು ಈ ಹಿಂದೆ ಕೊಡಗು ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿ ಕೆಲಸವನ್ನು ನಿರ್ವಹಿಸಿದ್ದೇನೆ. ಆಗ ನಾನು ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದೇನು. ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಕಾಡು-ಮೇಡಿನ ಜನಗಳು ದೂರ ದೂರ ಪ್ರದೇಶಗಳಲ್ಲಿ ವಾಸಿಸುತ್ತಾರೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಹಳ್ಳಿಗಳಗೂ ಬೆಳಕನ್ನು ಕೊಟ್ಟಿದ್ದಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನಾನು ನಿಮ್ಮ ಊರಿಗೂ ಸಹ ಬಂದಿದ್ದೇನು. ನಾನು ಯಾವ ಊರಿಗೆ ವಿದ್ಯುತ್ ಸಂಪರ್ಕವಿಲ್ಲ ಎಂಬ ಬಗ್ಗೆ ಹೇಳುತ್ತಿದ್ದೇನೆ. ನಾನು ಕೊಡಗು ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದಾಗ, ಅಲ್ಲಿ 35 ಜನ ವಸತಿ ಪ್ರದೇಶ ಅಂದರೆ ಗ್ರಾಮಗಳಲ್ಲ, ಇವುಗಳಿಗೆ ದೀನ ದಯಾಳ ಉಪಾಧ್ಯಾಯ ಇವರ ಹೆಸರಿನಲ್ಲಿ ವಿದ್ಯುಚ್ಛಕ್ತಿ ಸಂಪರ್ಕವನ್ನು ನೀಡಿದ್ದೇನು. ಆದರೆ ಇವತ್ತಿನ ದಿವಸ ಕೊಡಗು ಜಿಲ್ಲೆಯಲ್ಲಿನ 66 ಜನ ವಸತಿ ಪ್ರದೇಶಗಳಿಗೆ ಇನ್ನೂ ವಿದ್ಯುತ್ ಸಂಪರ್ಕವಿಲ್ಲ. ಈ ಬಗ್ಗೆ ನಾನು ಇಲಾಖೆಯ ಮಂತ್ರಿಗಳನ್ನು ಇವತ್ತಿನ ದಿವಸ ಬೆಳಗ್ಗೆ ಕೇಳಿದಾಗ, ಅವರು ಈ ಅಂಶವನ್ನು ಒಪ್ಪಿಕೊಂಡಿದ್ದಾರೆ. ಗ್ರಾಮಗಳು ಹಾಗೂ ಜನ ವಸತಿ ಪ್ರದೇಶಗಳು ಬೇರೆ ಬೇರೆಯಾಗಿವೆ. 68 ಜನ ವಸತಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಬಂದ ಬರಗಾಲದಿಂದಾಗಿ ತೆಂಗಿನ ತೋಟ ಒಣಗಿದೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ನಾನು ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವನಾಗಿರುವುದರಿಂದ, ವಿದ್ಯುತ್ ಸಂಪರ್ಕವಿಲ್ಲದ ಗ್ರಾಮಗಳ ಮಾಹಿತಿಯನ್ನು ಮಾನ್ಯ ಸದಸ್ಯರು ನನಗೆ ನೀಡಿದರೆ ನಾನು ನೋಡುತ್ತೇನೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಗ್ರಾಮಗಳು ಬೇರೆ, ಜನ ವಸತಿ ಪ್ರದೇಶಗಳು ಬೇರೆ. ಜನರು ಎಲ್ಲೆಲ್ಲೋ ವಾಸ ಮಾಡುತ್ತಿರುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ವಿದ್ಯುತ್ ಸಂಪರ್ಕವಿಲ್ಲದ ಪ್ರದೇಶಗಳ ಮಾಹಿತಿಯನ್ನು ಮಾನ್ಯ ಸದಸ್ಯರು ನನಗೆ ನೀಡಿದರೆ ನಾನು ಖಂಡಿತವಾಗಿಯೂ ಸಹ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಉಸ್ತುವಾರಿ ಸಚಿವನಾಗಿರುವುದರಿಂದ ಅದು ನನ್ನ ಜವಾಬ್ದಾರಿಯಾಗಿರುತ್ತದೆ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರು ತಮಗೆ ಮಾಹಿತಿಯನ್ನು ಕಳುಹಿಸಿ ಕೊಡುತ್ತಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಕಳೆದ ನಾಲ್ಕು ವರ್ಷಗಳಿಂದ ಬಂದ ಬರಗಾಲದಿಂದಾಗಿ ತೆಂಗಿನ ತೋಟಗಳು ಹಾನಿಗೊಳಗಾಗಿವೆ. ಕಳೆದ ವರ್ಷ ಸ್ವಲ್ಪ ಮಳೆಯಾಗಿದೆ. ನಾನು ಇನ್ನು ಐದು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರಿಗೆ ನನ್ನ ಮೇಲೆ ಏಕೆ ಸಿಟ್ಟು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು**:- ನೀವು ಮಾತನಾಡಿ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ದಿನಾಂಕ 06/10/2016 ರಲ್ಲಿ ತೆಂಗು ನೀರಾ ನೀತಿಯನ್ನು ಜಾರಿಗೊಳಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಇಲಾಖೆಯ ಮಂತ್ರಿಗಳು ಇವತ್ತಿನ ದಿವಸದ ಬೆಳಗ್ಗೆ ಉತ್ತರವನ್ನು ನೀಡಿದ್ದಾರೆ.

**ಉಪಸಭಾಪತಿಯವರು**:- ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡುತ್ತಾರೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ನೀರಾ ವ್ಯಾಖ್ಯಾನಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 32 ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ, ಆದರೆ ಇದು ಇನ್ನೂ ಅನುಷ್ಠಾನಗೊಂಡಿಲ್ಲ. ಕಳೆದ ಸಾಲಿನ ಆಯವ್ಯಯದಲ್ಲಿ ನೀರಾ ತೆಗೆಯುವವರಿಗಾಗಿ ನೀಡಲು ಮೂರು ಕೋಟಿ ರೂಪಾಯಿಗಳನ್ನು ಮೀಸಲಿರಿಸಿದ್ದರು. ಹೀಗೆ ಮೀಸಲಿರಿಸಿದ್ದ ಮೂರು ಕೋಟಿ ರೂಪಾಯಿಗಳು ಖರ್ಚಾಗಲಿಲ್ಲ. ಈ ವಿಚಾರವು ಮಾನ್ಯ ಇಲಾಖೆಯ ಮಂತ್ರಿಗಳಿಗೆ ಗೊತ್ತಾಗಲಿಲ್ಲ. ಆದರೆ ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಈ ಬಗ್ಗೆ ಒಂದೇ ಒಂದು ಪದವನ್ನೂ ಸಹ ಪ್ರಸ್ತಾಪ ಮಾಡಿಲ್ಲ. ರಾಜ್ಯದ ಸಾಲ ಎರಡು ಲಕ್ಷ ಕೋಟಿ ರೂಪಾಯಿಗಳನ್ನು ಮೀರಿದೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ರಾಜ್ಯದ ಸಾಲ 2,48,000 ಕೋಟಿ ರೂಪಾಯಿಗಳಷ್ಟು ಆಗಿದೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ವೇಗ್ ಆಗಿ ಮಾತನಾಡುತ್ತಿದ್ದೇನೆ. ರಾಜ್ಯಕ್ಕೆ ಇವತ್ತಿನ ದಿವಸ 2,48,000 ಕೋಟಿ ರೂಪಾಯಿಗಳಷ್ಟು ಸಾಲದ ಹೊರೆ ಇದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಪ್ರಸಕ್ತ ಸಾಲನ್ನು ಒಳಗೊಂಡು ರಾಜ್ಯಕ್ಕೆ ಇವತ್ತಿನ ದಿವಸ 2,86,789 ಕೋಟಿ ರೂಪಾಯಿಗಳಷ್ಟು ಸಾಲದ ಹೊರೆ ಇದೆ.

**Sri K.B.SHANAPPA:-** Hon'ble Chairman the burden of loan per head amounts to Rs.48,000.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಈಗಿನ ಆಯವ್ಯಯದ ಗಾತ್ರ 2,09,000 ಕೋಟಿ ರೂಪಾಯಿಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಆಯವ್ಯಯದ ಗಾತ್ರ 2,09,000 ಕೋಟಿ ರೂಪಾಯಿಗಳಾಗಿದ್ದು, ರಾಜ್ಯದ ಸಾಲದ ಹೊರೆ 2,82,609 ಕೋಟಿ ರೂಪಾಯಿಗಳಾಗಿವೆ.

**ಶ್ರೀ ಕೆ.ಬಿ.ಶಾಣಪ್ಪ**:- ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಹೀಗಿರುವಾಗ ಮುಂದೆ ಅಧಿಕಾರಕ್ಕೆ ಬರುವ ಸರ್ಕಾರ ಏನು ಮಾಡಬೇಕು? ಇವರು ಮಾಡಿರುವ ಸಾಲವನ್ನು ತೀರಿಸುತ್ತಲೇ ಇರಬೇಕು.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಸಾಲ ಮಾಡದೇ ಇದ್ದರೆ ಅಭಿವೃದ್ಧಿ ಹೊಂದಲು ಆಗುವುದಿಲ್ಲ. ಸಾಲವನ್ನು ಮಾರಬಾರದೆಂದು ನಾನು ಹೇಳುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ**:- ಮಾನ್ಯ ಸಭಾಪತಿಯವರೇ, ಮುಂದೆ ಅಧಿಕಾರಕ್ಕೆ ಬರುವ ಯಾವುದೇ ಪಕ್ಷದ ಸರ್ಕಾರವು, ಮಾಡಿರುವ ಸಾಲವನ್ನು ತೀರಿಸಲು ಐದು ವರ್ಷಗಳ ಕಾಲ ಆಡಳಿತವನ್ನು ನಡೆಸಬೇಕಾಗುತ್ತದೆ. How to spend money, when there is no revenue? ಬಂದ ಆದಾಯವನ್ನೆಲ್ಲಾ ಸಾಲ ತೀರಿಸಲು ಕೊಡಬೇಕಾಗುತ್ತದೆ.

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ಪ್ರಸ್ತುತ ಮಂಡಿಸಿರುವ ಆಯವ್ಯಯವು ಇತಿ-ಮಿತಿಯಲ್ಲಿದೆ. ಸಾಲವು ಶೇಕಡಾ 20 ರೊಳಗೆ ಇದೆ. ರಾಜ್ಯವು ಪ್ರಗತಿ ಹೊಂದಲು ಸಾಲವು ಅನಿವಾರ್ಯವಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ**:- ಮಾನ್ಯ ಸಭಾಪತಿಯವರೇ, ಸಾಲಗಳನ್ನು ತೀರಿಸುವಂತಹ ಯೋಜನೆಗಳನ್ನು ಮಾಡಬೇಕಾಗುತ್ತದೆ. A proper plan has to be made to repay the loan.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಉಪನಾಯಕರೇ, ಕಾನೂನಿನಲ್ಲಿ, The Karnataka Fiscal Responsibility Act ಎಂಬುದನ್ನು ನಾವು ಜಾರಿಗೆ ತಂದಿದ್ದೇವೆ. ಆ ಕಾಯ್ದೆಯಲ್ಲಿನ ಅಂಶಗಳ ಬಗ್ಗೆ ಎರಡೂ ಸದನಗಳಲ್ಲಿ ಚರ್ಚೆಯಾಗಿದೆ. ಯಾವಾಗಲೂ ಸಹ ಅಭಿವೃದ್ಧಿ ಹೊಂದುವ ರಾಜ್ಯಗಳಲ್ಲಿ ಸಾಲಗಳನ್ನು ಇತಿ-ಮಿತಿಯಲ್ಲಿ ಮಾಡಬೇಕು ಎನ್ನುವ ಷರತ್ತನ್ನು ನಾವು ವಿಧಿಸಿದ್ದೇವೆ. ಇಂತಹ ಷರತ್ತನ್ನು ನಮ್ಮ ಸರ್ಕಾರವು ಎಲ್ಲಿಯಾದರೂ ಮೀರಿದೆಯೇ? ನಿಮ್ಮ ಸರ್ಕಾರವು ಅಧಿಕಾರದಲ್ಲಿದ್ದಾಗ ಸಾಲವನ್ನು ಮಾಡಿರಲೇ ಇಲ್ಲವೇ? ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಹಾಗೂ ವಿರೋಧ ಪಕ್ಷದಲ್ಲಿದ್ದಾಗ ಮತ್ತೊಂದು ರೀತಿಯಲ್ಲಿ ಮಾತನಾಡುತ್ತಾರೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷವು ಅಧಿಕಾರದಲ್ಲಿದ್ದಾಗ 46,119 ಕೋಟಿ ರೂಪಾಯಿಗಳಷ್ಟು ಸಾಲವನ್ನು ಮಾಡಿತ್ತು. ಆದರೆ ಇಂದಿನ ಸರ್ಕಾರ 1,33,000 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವನ್ನು ಮಾಡಿದೆ.

**ಉಪಸಭಾಪತಿಯವರು:-** ಮಾನ್ಯ ಪುಟ್ಟಸ್ವಾಮಿ, ಉಗ್ರಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ರಾಜ್ಯದ ಪ್ರಗತಿಯ ಬಗ್ಗೆ ನಿಮ್ಮ ಸಲಹೆಗಳೇನಾದರೂ ಇದ್ದರೆ ಅವುಗಳನ್ನು ಕೊಡಿ.

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರವರು ಈ ವಿಷಯದ ಬಗ್ಗೆ ಇನ್ನೂ ಪೂರ್ಣಗೊಳಿಸಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರವರು ಹೇಳುತ್ತಿರುವ ವಿಷಯಕ್ಕೆ ಪೂರಕವಾಗಿ ನಾನು ಒಂದಂಶವನ್ನು ಹೇಳಬಯಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿ.ಎಸ್.ಉಗ್ರಪ್ಪನವರು ಸಾಲವನ್ನು ಮಾಡಿಕೊಂಡು ಹೋಗುತ್ತಿರಬೇಕೆಂದು ಹೇಳುತ್ತಾರೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ರಾಜಕಾರಣಿಗಳ ಪ್ರವೃತ್ತಿ ಏನಾಗಿದೆ ಎಂದರೆ, ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಮತ್ತು ವಿರೋಧ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಮಾತನಾಡುವುದು. ಇದು ಎಷ್ಟರ ಮಟ್ಟಿಗೆ ಸಮಂಜಸವಾದುದ್ದು?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಹಾಗೆಯೇ ಮಾಡುತ್ತಾರೆ.

**ಉಪಸಭಾಪತಿಯವರು:-** ಎಲ್ಲಾ ಪಕ್ಷದವರು ಹಾಗೆಯೇ ಮಾಡುವುದು.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಅಧಿಕಾರದಲ್ಲಿರುವಾಗ ಕಳೆದ ಸರ್ಕಾರ ಮಾಡಿದ್ದಕ್ಕಿಂತ ಮೂರರಷ್ಟು ಹೆಚ್ಚು ಸಾಲವನ್ನು ಮಾಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ರೈತರ ಸಾಲ ವಿಚಾರ . . . ಒಂದು ನಿಮಿಷ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಟಿ.ಬಿ.ಜಯಚಂದ್ರರವರು ಇದೇ ಮಾತನ್ನು ಹೇಳಿದರು. ಶ್ರೀ ಬಿ.ಎಸ್.ಯಡಿಯೂರಪ್ಪನವರು ಹಾಗೂ ಶ್ರೀ ಜಗದೀಶ್ ಶೆಟ್ಟರ್‌ನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ . . .

**ಉಪಸಭಾಪತಿಯವರು:-** ಈಗ ಆ ವಿಚಾರಗಳೆಲ್ಲವನ್ನು ಪ್ರಸ್ತಾಪಿಸುವುದು ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, 2009 ನೇ ಸಾಲಿನಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಅಧಿಕಾರದಲ್ಲಿದ್ದಾಗ, ರೈತರ ಸಾಲ ಮನ್ನಾ ಮಾಡಿ ಎಂದು ಕೇಳಿದಾಗ, ನನಗೆ ನೋಟುಗಳನ್ನು ಮುದ್ರಣ ಮಾಡಲು ಯಂತ್ರವಿಲ್ಲ, ಏನೇ ಆದರೂ ಕೇಂದ್ರ ಸರ್ಕಾರವು ರೈತರ ಸಾಲವನ್ನು ಮನ್ನಾ ಮಾಡಬೇಕೆಂಬುದಾಗಿ ಹೇಳಿದರು. ವಿರೋಧ ಪಕ್ಷದವರು ಈಗ ಸರ್ಕಾರದ ಸಾಲದ ಬಗ್ಗೆ ಹೇಳುತ್ತಿದ್ದಾರೆ. ಈ ಹಿಂದಿನ ಭಾರತೀಯ ಜನತಾ ಪಕ್ಷದ ಸರ್ಕಾರವು ಅಧಿಕಾರದಲ್ಲಿದ್ದಾಗ ಸಾಲವನ್ನು ತೆಗೆದುಕೊಂಡಿದೆ. ಈಗ ನಮ್ಮ ಸರ್ಕಾರವೂ ಸಹ ಸಾಲವನ್ನು ತೆಗೆದುಕೊಂಡಿದೆ. ಆದರೆ ನೀವು ತೆಗೆದುಕೊಂಡ ಸಾಲ ಕಡಿಮೆ ಅಥವಾ ಜಾಸ್ತಿನೋ ಅದು ಬೇರೆ ವಿಚಾರ. ಇದರ ಜೊತೆಗೆ ನಾವು-ನೀವುಗಳೆಲ್ಲರೂ ಸೇರಿಕೊಂಡು ಒಂದು ಕಾಯ್ದೆಯನ್ನು ಜಾರಿಗೆ ತಂದಿದ್ದೇವೆ. ಸದರಿ ಕಾಯ್ದೆಯ ಗರಿಷ್ಠ ಮಿತಿಯನ್ನು ಮೀರಿ ನಮ್ಮ ಸರ್ಕಾರ ಏನಾದರೂ ಸಾಲವನ್ನು ಮಾಡಿದೆಯೇ?

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ಶ್ರೀಕಂಠೇಗೌಡರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರೇ, 2013 ನೇ ಸಾಲಿನಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಟಿ.ಬಿ.ಜಯಚಂದ್ರರವರು ಇದೇ ಟೀಕೆಯನ್ನು ಮಾಡಿದ್ದರು.

**ಉಪಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ ಆ ವಿಚಾರಗಳೆಲ್ಲವನ್ನೂ ಇಲ್ಲಿ ಪ್ರಸ್ತಾಪಿಸುವುದು ಬೇಡ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮಂಡಿಸಿದ ಆಯವ್ಯಯದ ಗಾತ್ರ ವಿಸ್ತಾರವಾಗಿದೆ. ಆದರೆ ರಾಜ್ಯ ಸರ್ಕಾರವು ಮಾಡಿರುವ ಸಾಲ 46 ಸಾವಿರ ಕೋಟಿ ರೂಪಾಯಿಗಳಾಗಿದೆ. ಸಹಜವಾಗಿ ಬೆಳವಣಿಗೆಯಾಗಬೇಕು. ರಾಜ್ಯವು 46 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವನ್ನು ಮಾಡಿ ಇಷ್ಟು ದೊಡ್ಡ ಗಾತ್ರದ ಆಯವ್ಯಯವನ್ನು ಮಂಡಿಸಲು ಇವರೇ ಆಗಬೇಕೇ? ಆ ಸಂದರ್ಭದಲ್ಲಿ ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟಿ.ಬಿ.ಜಯಚಂದ್ರ ರವರು ವಿರೋಧ ಪಕ್ಷದಲ್ಲಿದ್ದರು. ಆದರೆ ಈಗ ಅಧಿಕಾರದಲ್ಲಿರುವ ನಿಮ್ಮ ಸರ್ಕಾರವು 1,46,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ಮಾಡಿದೆ.

(ಮುಂದು)

(148) 20-02-2018 ಸಿಎಸ್:ಜಿಆರ್ 05:30

**ಶ್ರೀ ವಿ.ಎಸ್.ಉಗ್ರಪ(ನಾಮ ನಿರ್ದೇಶಿತರು):-ಮಾನ್ಯ** ಸಭಾಪತಿಯವರೆ, ಭಾರತೀಯ ಜನತಾ ಪಕ್ಷದ ಆಡಳಿತಾವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಸಾಲ ಮಾಡಿದ್ದರೋ ಇಲ್ಲವೋ? ಜನತಾಪರಿವಾರದ ಆಡಳಿತಾವಧಿಯಲ್ಲಿಯೂ ಸಾಲ ಮಾಡಿದ್ದಾರೆ, ಭಾರತೀಯ ಜನತಾ ಪಕ್ಷದ ಆಡಳಿತಾವಧಿಯಲ್ಲಿಯೂ ಸಹ ಸರ್ಕಾರ ಸಾಲ ಮಾಡಿದೆ. ನಮ್ಮ ಆಡಳಿತಾವಧಿಯಲ್ಲಿಯೂ ಸಹ ರಾಜ್ಯದ ಹಿತದೃಷ್ಟಿಯಿಂದ ಸಾಲ ಮಾಡಲಾಗಿದೆ ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರು ನೀವು ಸಾಲ ಮಾಡಲಿಲ್ಲವೇ ಎಂದು ವಿರೋಧ ಪಕ್ಷಗಳನ್ನು ಕೇಳುತ್ತಿದ್ದಾರೆ. ಅವರಿಗೆ ಮುಂದೆ ವಿರೋಧ ಪಕ್ಷವಾಗಿ ಕೂರುವ ಆಸೆಯೇ? ಶ್ರೀಮತಿ ಮೋಟಮ್ಮನವರು 5 ವರ್ಷ ಹಿಂದಿನ ಸರ್ಕಾರ ಏನು ಮಾಡಿತು ಎಂದು ಕೇಳುತ್ತಾರೆ, ಮಾನ್ಯ ಉಗ್ರಪ್ಪನವರು ಎದ್ದು ಕುಣಿಯುತ್ತಾರೆ, ಹಿಂದಿನ ಸರ್ಕಾರಗಳು ಸಾಲವನ್ನೇ ಮಾಡಿರಲಿಲ್ಲವೇ ಎಂದು ಕೇಳುತ್ತಾರೆ, ಹಾಗಾದರೆ ಸರ್ಕಾರದವರ ಆಸೆಯೇನು?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಿದ್ದೇವೆ. ಕಾಲಕ್ಕೆ ತಕ್ಕ ಹಾಗೆ ತಾಳ ಹಾಕುತ್ತಿಲ್ಲ. ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ ಎನ್ನುವ ರೀತಿಯಲ್ಲಿ ಪುಟ್ಟಣ್ಣನವರ ಪಕ್ಷ ಇದೆ. ಹಾಗಾಗಿ ಅವರು ಕಾಲಕ್ಕೆ ತಕ್ಕ ಹಾಗೆ ಕುಣಿಯುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ ನಾವು ಕುಣಿಯುತ್ತಿದ್ದೇವೆ, ಅವರು ನಮ್ಮ ಕಡೆಗೆ ಅಂದರೆ ಮುಂದಿನ ದಿನಗಳಲ್ಲಿ ವಿರೋಧ ಪಕ್ಷದ ಕಡೆಗೆ ನೆಗೆಯುತ್ತಾರೆ. ಮಾನ್ಯ ರಾಮಚಂದ್ರಗೌಡರು ಯಾರು ತಪ್ಪು ಮಾಡಿದರೂ ಸಹ ತಪ್ಪು ತಪ್ಪೇ ಎಂದು ಹೇಳುತ್ತಿದ್ದಾರೆ. ಹಿಂದಿನ ಸರ್ಕಾರ ಮಾಡಿತ್ತು ಎಂದರೆ ಅವರು ತಪ್ಪು ಮಾಡಿದ್ದರಿಂದಲೇ ಈಗ ವಿರೋಧ ಪಕ್ಷದಲ್ಲಿದ್ದಾರೆ, ಅದೇ ತಪ್ಪನ್ನು ಸರ್ಕಾರವೂ ಮಾಡಬೇಕೆ? ಹಾಗಾಗಿ ಮಾಡಿರುವ ತಪ್ಪನ್ನು ಸರ್ಕಾರ ಸಮರ್ಥನೆ ಮಾಡಿಕೊಳ್ಳಬಾರದು.

**ಉಪಸಭಾಪತಿಯವರು:-** ಮಾನ್ಯ ರಾಮಚಂದ್ರಗೌಡರು ಆ ವಿಚಾರವನ್ನು ಹೇಳಲೇ ಇಲ್ಲ. ಹೇಳುವುದಕ್ಕೆ ಪ್ರಾರಂಭಿಸಿದ್ದರು.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೇ, ಯಾವುದೇ ರಾಜ್ಯದಲ್ಲಾದರೂ financial discipline ಅನ್ನು ಯಾವ ರೀತಿ ಇಡಬೇಕೆನ್ನುವುದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಸರ್ಕಾರ ತೋರಿಸಿಕೊಟ್ಟಿದೆ. Financial discipline ಜೊತೆಗೆ ನಮಗೆ ಇತಿಮಿತಿ ಇರುವ 25% ಅವಕಾಶ ಇದ್ದರೆ ನಾವು 20% ಮಾತ್ರ ಹೋಗುತ್ತೇವೆ. ನಮ್ಮ ಆಯವ್ಯಯದ ಗಾತ್ರಕ್ಕೆ ಅನುಗುಣವಾಗಿ ನಾವು ಹೋಗಬೇಕಾಗುತ್ತದೆ.

**ಉಪಸಭಾಪತಿಯವರು:–** ಸಕ್ಕರೆ ಚೆನ್ನಾಗಿದೆ ಎಂದು ಹಗಲೆಲ್ಲಾ ಕಳ್ಳತನ ಮಾಡಬಹುದು ಎನ್ನುವುದು ನಿಮ್ಮ ಅರ್ಥ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನಾವು ಹಾಸಿಗೆ ಎಷ್ಟಿರುತ್ತದೆ, ಅಷ್ಟಕ್ಕೆ ಮಾತ್ರ ಕಾಲನ್ನು ಚಾಚಬೇಕು. ಹಿಂದಿನ ಸರ್ಕಾರಗಳು ಮಾಡಿರುವುದನ್ನು ಕಂಪೇರ್ ಮಾಡುವುದಕ್ಕೆ ಹೋಗಬಾರದು. ಆದಷ್ಟು ಸಾಲವನ್ನು ಕಡಿಮೆ ಮಾಡಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಹಾಸಿಗೆಯ ಉದ್ದಗಲ ಎಷ್ಟಿರಬೇಕೆನ್ನುವುದರ ಬಗ್ಗೆ ಸರ್ಕಾರವೇ ಕಾನೂನನ್ನು ಮಾಡಿಕೊಂಡು ಅದರ ಇತಿಮಿತಿಯಲ್ಲಿಯೇ ನಾವು ಕಾಲನ್ನು ಚಾಚುತ್ತಿದ್ದೇವೆ. ಜನರ ಸೇವೆಯನ್ನು ಮಾಡಿ ಮುಂದೆಯು ಅಧಿಕಾರಕ್ಕೆ ಬರಬೇಕೆನ್ನುವ ದೃಷ್ಟಿಯಿಂದ ಸಾಲ ಮಾಡಿದ್ದೇವೆ, ಅದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರಿಗೆ ಎಲ್ಲವೂ ಗೊತ್ತಿದೆ. ಎಲ್ಲವನ್ನು ಇತಿಮಿತಿಯಲ್ಲಿ ಮಾಡಿದ್ದಾರೆ. ಆದರೆ ಈ ಸಾಲಿನ ಬಜೆಟ್‌ಗಿಂತ ಸಾಲವೇ ಹೆಚ್ಚಾಗಿದೆ. ಇದು “ಮೂಗಿಗಿಂತ ಮೂಗುತಿ ಭಾರ” ಎನ್ನುವ ಹಾಗೆ ಆಗಿದೆ. ಅದು ಆಗಬಾರದೆಂದು ನಾನು ಹೇಳುತ್ತಿದ್ದೇನೆ. ಇಲ್ಲಿ ಸರ್ಕಾರ ಸಾಲ ಮಾಡಿದೆ ಎನ್ನುವ ಆರೋಪವನ್ನು ನಾನು ಮಾಡುತ್ತಿಲ್ಲ. ಆದರೆ ಸಾಲ ಮಾಡಿ ತುಪ್ಪ ತಿನ್ನಬಾರದು. ಸಾಲ ಮಾಡಿ ಅದರ ಮೇಲೆ ದುಡಿಯಬೇಕು. ಯಾರು ದುಡಿಯುತ್ತಿದ್ದಾರೆ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಸಾಲ ಕೊಡಿಸಿ, ದೇಶ ಬಿಟ್ಟು ಹೋಗುವುದನ್ನು ತಡೆದರೆ ನಮ್ಮ ದೇಶ ಎಲ್ಲಾ ರೀತಿಯಲ್ಲಿಯೂ ಉದ್ಧಾರ ಆಗುತ್ತದೆ. ಸಾಲ ಮಾಡಿ ದೇಶ ಬಿಟ್ಟು ಹೋಗುವುದನ್ನು ತಡೆದರೆ ಈ ದೇಶದ ಕಾನೂನು ಇಂಪ್ರೂವ್ ಆಗುತ್ತದೆ. ಸಾಲ ಕೊಟ್ಟು ಅವರು ಅದರಿಂದ ತಪ್ಪಿಸಿಕೊಂಡು ಓಡಿ ಹೋಗುವುದಕ್ಕೂ ಅವಕಾಶ ಮಾಡಿಕೊಡಲಾಗುತ್ತಿದೆ. ಶ್ರೀ ಲಲಿತಾ ಮೋದಿ, ಶ್ರೀ ವಿಜಯಮಲ್ಯ ಅವರು ದೇಶ ಬಿಟ್ಟು ಹೋಗುವುದಕ್ಕೆ ಯಾರು ಅವಕಾಶ ನೀಡಿದರು ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಗಳೇ, ಇದೆಲ್ಲ ಇವರ ಸರ್ಕಾರ ಕೇಂದ್ರದಲ್ಲಿದ್ದಾಗ ಆಗಿದ್ದು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, " ಕೋತಿ ತಿಂದು ಮೇಕೆ ಬಾಯಿಗೆ ಒರೆಸಿತು" ಎನ್ನುವ ಹಾಗೆ ಇವರ ಅಧಿಕಾರವಧಿಯಲ್ಲಿ ಆಗಿರುವುದನ್ನು ನಮಗೆ ಹೇಳುತ್ತಿದ್ದಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, that is a different subject. We will speak on that. 2 ಲಕ್ಷ ರೂಪಾಯಿಗಳಷ್ಟು ಸರ್ಕಾರ ಸಾಲ ಮಾಡಿದೆ, ಸಾಲ ಮಾಡಲಿ, ಆದರೆ ಅದರಿಂದ ದುಡಿಯುವ ಕೈಗಳಿಗೆ ಕೆಲಸವನ್ನು ನೀಡಬೇಕು. ಸಾಲ ಮಾಡಿ ಬರಿ ತುಪ್ಪವನ್ನು ತಿನ್ನಬಾರದು, ಸಾಲ ಮಾಡಿ ದುಡಿಯಿರಿ. 'ಕೈ ಕೆಸರಾದರೆ, ಬಾಯಿ ಮೊಸರಾಗುತ್ತದೆ'. ಬಸವಾದಿ ಶರಣರು ಏನು ಹೇಳುತ್ತಾರೆಂದರೆ 'ಕಾಯಕ', 'ದಾಸೋಹ', 'ಪ್ರಸಾದ' ಎನ್ನುವ ಮೂರು ಪದಗಳ ಬಳಕೆಯನ್ನು ಮಾಡುತ್ತಾರೆ. ಬಸವಣ್ಣನವರು ನಮ್ಮ ನಾಡಿನಲ್ಲಿ ಹುಟ್ಟಿದ್ದು ನಮ್ಮೆಲ್ಲರ ಭಾಗ್ಯ. ಸ್ವತಃ ದುಡಿಯದೇ ಇನ್ನೊಬ್ಬರ ದುಡಿಮೆಯಲ್ಲಿ ತಿನ್ನುವುದು 'ಕೂಳು', ಸ್ವತಃ ದುಡಿದು ಎಲ್ಲವನ್ನೂ ನಾನೇ ಮಾಡಿ ಗಳಿಸಿದ್ದೇನೆ ಎಂದು ತಿನ್ನುವುದು 'ಊಟ', ಸ್ವತಃ ದುಡಿದು, ಅದಕ್ಕೆ ದೇವರ ಕೃಪೆ ಎಂದು ಸ್ಮರಿಸಿ ತಿನ್ನುವುದೇ 'ಪ್ರಸಾದ'. ಮನುಷ್ಯ ಹುಟ್ಟುವಾಗ ತಿನ್ನಲು ಒಂದು ಹೊಟ್ಟೆ ತಂದರೆ ದುಡಿಯಲು ಎರಡು ಕೈಗಳನ್ನು ಪಡೆದಿರುತ್ತಾನೆ. ಆ ಕೈಗಳಿಗೆ ಕೆಲಸ ಕೊಡಬೇಕು. ದಾಸೋಹ ಎಂದು ಅನ್ನ ನೀಡುವುದಲ್ಲ, ದುಡಿಯುವ ಕೈಗಳಿಗೆ ಕೆಲಸವನ್ನು ಮಾಡುವಂತಹ ಶಕ್ತಿ ನೀಡುವುದೇ ದಾಸೋಹ. ಸುಮ್ಮನೆ ಕುಳಿತವನಿಗೆ ಊಟ ನೀಡುವುದು ದಾಸೋಹವಲ್ಲ. ಸರ್ಕಾರದ ಎಲ್ಲಾ ಯೋಜನೆಗಳು ಸಹ ಬಸವಣ್ಣನವರ ತತ್ವಕ್ಕೆ ಮತ್ತು ಕಲ್ಯಾಣ ರಾಜ್ಯ ಸ್ಥಾಪನೆಗೆ ಸಂಪೂರ್ಣವಾಗಿ ತದ್ವಿರುದ್ಧವಾಗಿವೆ. ಇದರಿಂದ ದುಡಿಯುವ ಶಕ್ತಿ ಇರುವ ಸಮಾಜ ಆಲಸ್ಯ ಎನ್ನುವ ಕೂಪಕ್ಕೆ ಬಿದ್ದಿದೆ. ಸಮಾಜದಲ್ಲಿನ youth force ಆಲಸ್ಯದಿಂದ what next ಎಂದು ಕುಳಿತಿದ್ದಾರೆ. ಕೆಲಸ ಇಲ್ಲದೆ ಎಲ್ಲಿ ಹೋಗೋಣ, ಎನ್ನುವ ಯೋಚನೆ ಮಾಡಿಕೊಂಡು ಎಲ್ಲೋ ಒಂದು ಕಡೆ ಬಜ್ಜಿ ತಿಂದುಕೊಂಡು ಕುಳಿತಿರುತ್ತಾರೆ. ಸರ್ಕಾರದ ಭಾಗ್ಯಗಳ ಅನುಷ್ಠಾನದ ಅಂತಿಮ ಪರಿಣಾಮ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಮಾರಕವಾಗಿದೆ ಎನ್ನುವುದೇ ಒಂದು ದೌರ್ಭಾಗ್ಯ. ಇಷ್ಟಾದರೂ ಕೂಡ ಸನ್ಮಾನ್ಯ ರಾಜ್ಯಪಾಲರು ಅನೇಕ ವಿಚಾರಗಳನ್ನು ಸದನಲ್ಲಿ ಪ್ರಸ್ತಾಪ ಮಾಡಿದ್ದಾರೆ, ಒಳ್ಳೆಯದನ್ನು ನಾವು ಸ್ವೀಕರಿಸಿ, ಕೆಟ್ಟದ್ದನ್ನು ಸರ್ಕಾರಕ್ಕೆ ಬಿಟ್ಟು, ಮಾನ್ಯ ರಾಜ್ಯಪಾಲರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಕೊನೆಯದಾಗಿ ಒಂದೇ ಒಂದು ವಿಚಾರ ಏನೆಂದರೆ ದಿನಾಂಕ 21-11-2017ರಲ್ಲಿ ಶ್ರೀಮತಿ ವೀಣಾ ಅಚ್ಚಯ್ಯನವರು ಕೇಳಿದಂತಹ ಪ್ರಶ್ನೆಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ವ್ಯಾಪ್ತಿಯ ಕೊಡಗು ಜಿಲ್ಲೆಯಲ್ಲಿನ ಎಲ್ಲಾ ಗ್ರಾಮ ಮತ್ತು ಉಪಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. 68 ಜನವಸತಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿರುತ್ತದೆ ಎಂದು ಮಾನ್ಯ ಸಚಿವರು ನವೆಂಬರ್ ತಿಂಗಳಿನಲ್ಲಿ ಉತ್ತರ ನೀಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತರಾಂ(ಸಭಾನಾಯಕರು):–**ಮಾನ್ಯ ಸಭಾಪತಿಯವರೆ, ಇದು ನಾವೇ ನೀಡಿರುವ ಉತ್ತರ, ಆನಂತರದಲ್ಲಿ ಎಲ್ಲವನ್ನು ಸರಿಪಡಿಸಲಾಗಿದೆ. ಈಗ ಏನಾದರೂ ಆಗಿಲ್ಲದಿದ್ದರೆ ಅದರ ಮಾಹಿತಿ ನೀಡಿದರೆ ಸರಿಪಡಿಸಲಾಗವುದು.

**ಉಪಸಭಾಪತಿಯವರು:–** 68 ವಸತಿ ಪ್ರದೇಶಗಳಿಗೆ ಇನ್ನೂ ವಿದ್ಯುತ್ ಸಂಪರ್ಕ ಇನ್ನೂ ದೊರಕಿರದಿದ್ದರೆ ಸಚಿವರಿಗೆ ಮಾಹಿತಿ ಕೊಡಿ ಅವರು ಸರಿಪಡಿಸುತ್ತಾರೆ.

(ಮುಂದು)

(149)/20-2-2018/ಎಲ್ಎಂ/ಜಿಆರ್/5–40

**ಶ್ರೀ ಲಹರ್ ಸಿಂಗ್ ಸಿರೋಯಿೊ(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೆ, ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು, ಮಾನ್ಯ ಸದಸ್ಯರಾದ ರಾಮಚಂದ್ರಗೌಡರು ಹೇಳಿದ ಹಾಗೆ it is a ritual to extend our vote of thanks to the Governor. ಗೌರವಾನ್ವಿತ ರಾಜ್ಯಪಾಲರು ಅಥವಾ His Excellency ಎಂದು ಕರೆಯುತ್ತೇವೆ. Constitutional post ನಲ್ಲಿ ಕೆಲಸ ಮಾಡುವವರು ನಡವಳಿಕೆ ಹಿಂದೆ ಹೇಗೆ ಇತ್ತು ಇವತ್ತು ಹಾಗೆಯೇ ಇದೆಯೇ ಎನ್ನುವುದನ್ನು ಈಗ ನಾವು ಯೋಚನೆ ಮಾಡಬೇಕಾಗಿದೆ. ಅದರ ಬಗ್ಗೆ ನಾವು ಹೆಚ್ಚಿಗೆ ಮಾತನಾಡುವುದಿಲ್ಲ, ಅದು ಯಾವುದು ರೆಕಾರ್ಡ್‌ಗೆ ಹೋಗಬಾರದು. ಏಕೆಂದರೆ ಯಾವುದೊ ಒಂದು ಕಡತ ಹೋಗುತ್ತದೆ ಮತ್ತೆ ವಾಪಸ್ ಬರುತ್ತದೆ, ಮತ್ತೆ ಹೋಗಿ ಪಾಸ್ ಆಗಿ ಬರುತ್ತದೆ. ಇದೆಲ್ಲವನ್ನು ಯೋಚನೆ ಮಾಡಬೇಕು. ಮಾನ್ಯ ರಾಜ್ಯಪಾಲರಿಗೆ ನಾವು ಪ್ರತಿ ವರ್ಷ ಧನ್ಯವಾದಗಳನ್ನು ಅರ್ಪಿಸುತ್ತೇವೆ. Constitutional post ನಲ್ಲಿ ಇರುವವರು ರಾಜ್ಯಪಾಲರಿಗೆ ಹೇಗೆ ಧನ್ಯವಾದಗಳನ್ನು ಅರ್ಪಿಸಬೇಕು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಈಗ ಇಲ್ಲಿ ಮಾನ್ಯ ಸಚಿವರಾದ ಕೃಷ್ಣ ಭೈರೇಗೌಡರು ಇದ್ದಾರೆ, ಮಾನ್ಯ ಸಚಿವರಾದ ಪ್ರಿಯಾಂಕ ಖರ್ಗೆಯವರು ಇದ್ದರು ಈಗ ಎದ್ದು ಹೋಗಿದ್ದಾರೆ. ಅವರ ಜೊತೆ ಮಾತನಾಡಬೇಕಾಗಿತ್ತು. ಶ್ರೀಮತಿ ಜಯಮಾಲರವರು ಈಗ ಸದನದಲ್ಲಿ ಇಲ್ಲ. ಶ್ರೀಮತಿ ಜಯಮಾಲರವರು ಕನ್ನಂಬಾಡಿ ಕಟ್ಟೆಯ ಬಗ್ಗೆ ಮಾತನಾಡುತ್ತಾ ತುಂಬಾ ಚೆನ್ನಾಗಿ articulate ಮಾಡಿದ್ದಾರೆ. ಅದನ್ನು ಕೇಳಿ ನನಗೂ ಕಣ್ಣಲ್ಲಿ ನೀರು ಬಂತು. ನಮ್ಮ ರಾಜಸ್ಥಾನದ ದುರ್ದೈವ ಎಂದರೆ, ಈ ರಾಜಸ್ಥಾನದಲ್ಲಿ ಇಲ್ಲಿಯ ಕಾಂಗ್ರೆಸ್ ಅಥವಾ ಬೇರೆ ಪಾರ್ಟಿಯಲ್ಲಿ ಇರುವಂತಹ ನಾಯಕರು ಅಲ್ಲಿ ಇಲ್ಲ. ಅಲ್ಲಿಯ ಶ್ರೀಮಂತ ಕುಟುಂಬದವರು ಪುಡಾರಿಗಳ ಸಹಾಯದಿಂದ ಬಡ ರೈತರ ಸಾವಿರಾರು ಎಕರೆ ಜಮೀನನ್ನು ಹೊಡೆದುಕೊಂಡರು. ನಾನು ಬಿಕಾನೇರ್‌ಗೆ ಹೋದಾಗ ಅಲ್ಲಿಯ ರೈತರು ಕಣ್ಣಿರು ಹಾಕುತ್ತಿದ್ದರು. ಶ್ರೀಮತಿ ಜಯಮಾಲರವರು ಮಾಡಿರುವಂತಹ articulate ಅಲ್ಲಿಯು ಮಾಡಿದ್ದರೆ ಅಲ್ಲಿಯ ಶ್ರೀಮಂತರು ರೈತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನನ್ನು ಹೊಡೆದುಕೊಳ್ಳಲು ಅವಕಾಶವಾಗುತ್ತಿರಲಿಲ್ಲ. ಈಗ ಅದು ಕೋರ್ಟ್‌ನಲ್ಲಿ ಇದೆ, ಆ ರೈತರ ಜಮೀನು ಅವರಿಗೆ ವಾಪಸ್ ಸಿಗಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ನಾನು ಎರಡನೆ ಬಾರಿಗೆ ಎಂ.ಎಲ್.ಸಿ., ಆಗಿದ್ದೇನೆ. ಇದಕ್ಕೆ ಅವರ ಕೃಪೆಯು ಇದೆ, ಜೆಡಿಎಸ್‌ನವರ ಮತ್ತು ನಮ್ಮವರ ಕೃಪೆಯು ಇದೆ. ಅದಕ್ಕಾಗಿ ನಾನು ಆ ಪಕ್ಷ ಈ ಪಕ್ಷ ಎಂದು ಮಾತನಾಡದೆ ಪಕ್ಷಾತೀತವಾಗಿ ಮಾತನಾಡುತ್ತೇನೆ. ಏಕೆಂದರೆ comfort level ನಲ್ಲಿ ಇರುವುದಕ್ಕೆ ನಮಗೆ exchequer ನಿಂದ ಸಂಬಳ ಕೊಡುತ್ತಾರೆ, ನಮ್ಮನ್ನು ಕಾಪಾಡುತ್ತಾರೆ. ಆದ್ದರಿಂದ ಪ್ರಾಮಾಣಿಕವಾಗಿ ಇರುವ ವಿಚಾರವನ್ನು ನಾನು ಮಾತನಾಡುತ್ತೇನೆ. When I started to going through the Governor's Address, ಸರ್ಕಾರ ಅನೇಕ ಭಾಗ್ಯಗಳನ್ನು ಕೊಡುತ್ತಿದೆ ಎನ್ನುವುದು ಕಂಡು ಬರುತ್ತಿದೆ. ಈ ಭಾಗ್ಯಗಳ ಬಗ್ಗೆ ನಮಗೆ ಇರುವ ಬೇಸರ ಏನು ಎಂದರೆ, ಕಳೆದ 70 ವರ್ಷಗಳಿಂದ ಜನರು ಸರ್ಕಾರ ಕೊಡುವ ಭಿಕ್ಷೆಗಳ ಮೇಲೆ, ಈ ಭಾಗ್ಯಗಳ ಮೇಲೆಯೇ ಬದುಕಬೇಕಾ? ಎಲ್ಲ ಪಕ್ಷದವರು ಸೇರಿ ಇದರ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಕುಟುಂಬದವರಿಗೆ ಒಳ್ಳೆಯ ಅನುಕೂಲಗಳು ಬೇಕು, ನಮ್ಮ ಮಕ್ಕಳು ಹೊರದೇಶಕ್ಕೆ ಹೋಗಿ ಮಜಾ ಮಾಡಬೇಕು, ದೊಡ್ಡ-ದೊಡ್ಡ ಕ್ಲಬ್‌ಗಳಿಗೆ ಹೋಗಬೇಕು, ಐಷಾರಾಮಿ ವಾಹನಗಳು ಇರಬೇಕು ಇದರ ಬಗ್ಗೆಯೇ ನಾವು ಯೋಚನೆ ಮಾಡುತ್ತೇವೆ. ಆದರೆ ನಾವು ರೈತರ ಬಗ್ಗೆ, ಬಡವರ ಬಗ್ಗೆ ಯೋಚನೆ ಮಾಡುತ್ತಿದ್ದೇವೆಯೇ ಎನ್ನುವುದನ್ನು ಯೋಚಿಸಬೇಕು. ದಿ.ದೇವರಾಜ ಅರಸುರವರ ಬಗ್ಗೆ ಸದನದಲ್ಲಿ ಈ ಹಿಂದೆಯೂ ಸಹ ಹೇಳಿದ್ದೇನೆ. ಪ್ರಪಂಚದಲ್ಲಿ ಬಡವರು ಮತ್ತು ಶ್ರೀಮಂತರು ಎನ್ನುವ ಎರಡು ಜಾತಿಗಳು ಮಾತ್ರ ಇವೆ. Have's and have not's ಗಳ ಬಗ್ಗೆ ದಿ. ದೇವರಾಜ ಅರಸುರವರ ಜನ್ಮಶತಾಬ್ಧಿಯ ಸಂದರ್ಭದಲ್ಲಿ ನಾನು ಇಲ್ಲಿ ಪ್ರಸ್ತಾಪ ಮಾಡಿದೆ. ಒಂದು ಜಾತಿಯವರು ಶ್ರೀಮಂತರಾದರೆ ಯಾವ ಕಾರಣಕ್ಕೆ ಅವರಿಗೆ ಉನ್ನತ ಮಟ್ಟದ ಸೌಕರ್ಯಗಳು ಸಿಗಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಬೇರೆ ಜಾತಿಯಲ್ಲಿ ಬಡವರು ಹುಟ್ಟುತ್ತಾರೆ ಅವರ ಬಗ್ಗೆ ನಾವು ಯೋಚನೆ ಮಾಡದೆ ಇದ್ದರೆ, ಸುಮಾರು 70 ವರ್ಷಗಳಿಂದ ಹಾಕಿಕೊಂಡು ಬಂದಿರುವ ಯೋಜನೆಗಳು ಪೂರ್ತಿಯಾಗುವುದಿಲ್ಲ. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಈ ಸದನಕ್ಕೆ ಬಹಳ ಗೌರವವಿದೆ. ಈ ಸದನಕ್ಕೆ 110 ವರ್ಷಗಳ ಇತಿಹಾಸವಿದೆ. ಈ ಸದನದಲ್ಲಿ ನಾನು ಹೇಳಿರುವ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಇಡೀ ದೇಶಕ್ಕೆ ಗೈಡ್‌ಲೈನ್ಸ್ ಕೊಡುವಂತಹ ಕೆಲಸವಾಗಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣದ ಎರಡನೇ ಪುಟದಲ್ಲಿ law and order, communal harmony ಬಗ್ಗೆ ಪ್ರಸ್ತಾಪವಿದೆ. In the fourth paragraph, it reads thus:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

> "Various initiatives have been taken to professionalize and modernize the Police Department and for the welfare of police personnel. ..."

ಈ ಎಲ್ಲಾ ಸೌಕರ್ಯಗಳನ್ನು ನಾವು ಕೊಡುತ್ತೇವೆ. ಸದನದಲ್ಲಿ ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಆದರೆ police morale ಬಗ್ಗೆ ಏನು ಮಾಡಲಾಗುತ್ತಿದೆ? ಎರಡು ದಿನಗಳಲ್ಲಿ ನಡೆದಿರುವ ಘಟನೆ ಬಗ್ಗೆ ಎಲ್ಲರಿಗೂ ಗೊತ್ತಿದೆ, ಅದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಏಕೆಂದರೆ ರಾಜಕಾರಣಿಗಳ ಮಕ್ಕಳೇ ಇದರಲ್ಲಿ ತೊಡಗಿದ್ದಾರೆ. ಹೀಗಾಗಿ ನಾವು ಏನು ಮಾತನಾಡಲು ಆಗುತ್ತಿಲ್ಲ. ದಿನಾಂಕ 19.02.2018ರ Bangalore Mirror ದಿನಪತ್ರಿಕೆಯಲ್ಲಿ ಒಂದು ಸುದ್ದಿ ಇದೆ, ಅದು ಈ ರೀತಿ ಇದೆ:

> "Vijay Hadagali is close to MLA Haris and was suspended two years ago when he was Police Inspector of Vivek Nagar for not registering an FIR against Haris' associates for assaulting two policemen in front of police quarters. Vijay reportedly forced the constables to go on leave and then claim they were injured in an accident. The then-DCP Sandeep Patil learnt about this and suspended him. Hadagali returned to the force within a week with a plump posting at Ashok Nagar Police Station with the alleged blessing of Haris."

ರಾಜಕಾರಣಿಗಳ ಬೆಂಬಲವಿರುವ ಜನರು ಅವರ ಮನೆ ಮುಂದೆ ಬಂದು ಹೊಡೆದರೆ, ಅವರ ಮನೆಯಲ್ಲಿರುವ ಹೆಂಡತಿ-ಮಕ್ಕಳ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಶ್ರೀಮತಿ ಜಯಮಾಲರವರು ಇದ್ದರೆ ಅವರನ್ನು ಕೇಳುತ್ತಿದೆ. ಅವರ ಗಂಡ ಅವರಿಗೆ Prime Minister or Chief Minister ಆಗಿರುತ್ತಾರೆ. ಅವರ ಮುಂದೆಯೇ ಗಂಡನನ್ನು ಹೊಡೆದರೆ ಅವರಿಗೆ ಏನಾಗಿರಬೇಕು? ಮಕ್ಕಳಿಗೆ ತಂದೆ ಎಂದರೆ ಭಗವಾನಗೆ ಸಮಾನ. ಪೋಲೀಸ್ ಅಧಿಕಾರಿಗಳು ಇದರ ಬಗ್ಗೆ ಯೋಚನೆ ಮಾಡುವುದಿಲ್ಲವೆ? If you don't protect your own police, when they are on duty, what will happen? ಬರಿ ಗಲಾಟೆಯಾಗಿ bribe ತೆಗೆದುಕೊಂಡಿದ್ದರೆ, ಅದು ಬೇರೆ ರೀತಿಯದ್ದಾಗಿರುತ್ತಿತ್ತು. ಕೆಲವೊಮ್ಮೆ ಲಾಠಿಚಾರ್ಜ್ ಅಥವಾ ಗುಂಡಿನ ಗಲಾಟೆ ಆಗುತ್ತದೆ. But, when they are doing their duty, they are being attacked by the

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

criminals who are having the powerful backing of various people, not only politicians, sometimes bureaucrats and sometimes rich people. ಇದರ ಬಗ್ಗೆ ನನ್ನ ಹತ್ತಿರ ಸಾಕಷ್ಟು ದಾಖಲೆಗಳು ಇವೆ. ಬೇಕಾದಷ್ಟು ಕಡೆಗಳಲ್ಲಿ criminals have beaten the police. Why the criminals have beaten the police? They know that they will get the influence, because their boss will have some political links. ಈ ರೀತಿಯಾಗಿರುವ ಘಟನೆಗಳನ್ನು ನೋಡಿಯೂ ನಾವು ಸುಮ್ಮನಿದ್ದೇವೆ. ಆ ಕಡೆಯವರು ಈ ಕಡೆಯವರು ನಮ್ಮ ಸಮಯ ಬಂದಾಗ ಸುಮ್ಮನೆ ಇದ್ದೇವೆ. I am sorry to say, ಈ ಪೊಲೀಸ್ ಇಲಾಖೆಗೆ ಏನು ಆಗಿದೆ? Why Police Officers should keep quite? They are not defending the dignity of the Police Constables. ಏನಾದರೂ ದೊಂಬಿ, ಗಲಾಟೆಗಳಾದಾಗ ನಮ್ಮನ್ನು ರಕ್ಷಣೆ ಮಾಡಲು ಬರುವವರು Police Constables ಗಳು. ನಿಮ್ಮ ರಕ್ಷಣೆಗೆ Police Commissioners ಬರುವುದಿಲ್ಲ. ನಮಗೆ-ನಿಮಗೆ ಗನ್‌ಮ್ಯಾನ್ ಇರುತ್ತಾರೆ. ಆದರೆ Commissioner ಗೆ ಗನ್‌ಮ್ಯಾನ್ ಇರುವುದಿಲ್ಲ. Gunmen are the ordinary Police Constables. Their dignity is not protected. Police Constable ಗಳಿಗೆ ಬೈಯ್ದು ಹೋಗುತ್ತಾರೆ. ಒಂದೊಂದು ಸಾರಿ ನಾವೇ ಅವರನ್ನು ಬೈಯುತ್ತೇವೆ. ಅವರ dignity ಬಗ್ಗೆ ಏನು ಮಾಡಲಾಗಿದೆ? I am sorry to say, why Police Officers are not coming to their rescue to save their dignity? When the wife of the Police Constable is crying in the house, because her husband is beaten mercilessly and the Police Officers have not taken against the concerned, ಮನೆ ಸೌಕರ್ಯಗಳು ಏಕೆ ಬೇಕು ಅವರಿಗೆ? ಮೊನ್ನೆ ನಡೆದ ಘಟನೆಯಲ್ಲಿ ಹೊಡೆದಿರುವುದು ಶ್ರೀಮಂತ ಹುಡುಗನನ್ನು, ಅದೇ ಹುಡುಗ ಬಡವನಾಗಿದ್ದರೆ ಅವನ ಗತಿ ಏನು ಯೋಚನೆ ಮಾಡಿ. ಅದಕ್ಕಾಗಿ ಎಲ್ಲಾ ಪಕ್ಷಗಳ ಸದಸ್ಯರಿಗೆ ಹೇಳುವುದು unless we protect our subordinates, what will happen? It is a lesson to everybody. That's why the law and order is deteriorating every day. What they talk about the law and order? ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯು ಪೊಲೀಸ್ ಇಲಾಖೆ ಬಗ್ಗೆ ಪ್ರಸ್ತಾಪವಿದೆ. ಮಾನ್ಯ ಉಗ್ರಪ್ಪನವರು ಅದನ್ನೆ ಮಾತನಾಡುತ್ತಾರೆ, ನಾವು ಮಾತನಾಡುವುದು ಅದನ್ನೆ. What is the law and order? It is the naked truth that we are not protecting our police system, the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

staff and we are compromising the police system and in that process, we are compromising with the security and safety of the society. ನಮಗೆಲ್ಲ ಗನ್‌ಮ್ಯಾನ್ ಇರುತ್ತಾರೆ, ಆದರೆ ಜನರಿಗೆ ಯಾವ ಗನ್‌ಮ್ಯಾನ್ ಇರುವುದಿಲ್ಲ. ಇದರ ಬಗ್ಗೆ ನಾಳೆ ಚರ್ಚೆಯಾಗಬಹುದು.

(ಮುಂದು)

(150) 20-02-2018 BSD-MD (05-50)

ಶ್ರೀ ಲಹರ್ ಸಿಂಗ್ ಸಿರೋಯಾ (ಮುಂದು)

ವಿಠ್ಠಲ್ ಮಲ್ಯ ರಸ್ತೆಯಲ್ಲಿ 8 ಕಡೆ ಡ್ರಗ್ಸ್ ಮಾರಾಟವಾಗುತ್ತದೆ. ಎಲ್ಲಿ ಮತ್ತು ಯಾರು ಡ್ರಗ್ಸ್ ಮಾರಾಟ ಮಾಡುತ್ತಾರೆ ಎಂದು ಪೋಲೀಸ್ ಅಧಿಕಾರಿಗಳಿಗೆ ಗೊತ್ತಿದೆ. High profile party ಯಲ್ಲಿ ಶ್ರೀಮಂತ ಹುಡುಗರು ಮತ್ತು ಅವರ ಶಿಷ್ಯಂದಿರು ಹೋಗುತ್ತಾರೆ. In all the Hi-tech bars, clubs drugs are easily available. ಇದು ಗೊತ್ತಿರುವ ಸಂಗತಿ. They are protected by various forces, ಹೀಗಾದರೆ ಕಾನೂನು-ಸುವ್ಯವಸ್ಥೆ ಬಗ್ಗೆ ಮಾತನಾಡುವುದು ಏನಿದೆ? ನಾನು ಬಹಳ ಮಾತನಾಡುವುದಿದ್ದರೂ ತಾವು ಸಮಯದ ಅಭಾವ ಎಂದು ಹೇಳಿದ್ದೀರಿ. ಇದಲ್ಲದೇ communal harmony ಬಗ್ಗೆ ಕಾಂಗ್ರೆಸ್‌ಗೆ ಏನಾಗಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಜಾತಿ ಆಧಾರದ ಮೇಲೆ, ಧರ್ಮಗಳ ಆಧಾರದ ಮೇಲೆ we are trying to divide the society. ನೂರಾರು ವರ್ಷಗಳ ನಂತರ ಲಿಂಗಾಯಿತರು ಹಿಂದೂ ಆಗಿದ್ದಾರೋ, ಇಲ್ಲವೋ ಎಂದು ಚರ್ಚೆಯಾಗಬೇಕೆ? ಬಡವರಿಗೆ ಹೇಗೆ ಅನುಕೂಲ ಮಾಡಬೇಕು ಎಂದು ಯೋಚನೆ ಮಾಡಬೇಕು. ಮಾನ್ಯ ರಾಮಚಂದ್ರಗೌಡರು ಹೇಳಿದಂತೆ ಒಂದೊಂದು ಸಾರಿ ನಾವು ಟ್ರಾಫಿಕ್‌ನಲ್ಲಿರುವಾಗ ಅಸಹಾಯಕರಾಗಿ ಕಣ್ಣಲ್ಲಿ ನೀರು ಬರುತ್ತದೆ. Sometimes we also get stuck in the traffic, but we are also helpless. ಹೆಣ್ಣುಮಕ್ಕಳು traffic ಮಧ್ಯೆ ಬಸ್ಸಿನಲ್ಲಿ ನಲ್ಲಿ ಕುಳಿತಿರುತ್ತಾರೆ. ಏಕೆಂದರೆ ಅವರು ಬೇಗ ಮನೆಗೆ ಹೋಗಿ ಅಡುಗೆ ಮಾಡಬೇಕು. Most of the times in the peak hour, buses will not move due to the huge traffic. ಇದರ ಬಗ್ಗೆ ಏನೂ ಇಲ್ಲ. ಲಿಂಗಾಯಿತರು ಹಿಂದೂಗಳಾಗಿದ್ದಾರೋ, ಇಲ್ಲವೋ, ಮಠ-ಮಾನ್ಯರ ಬಗ್ಗೆ ಗಮನ ಕೊಟ್ಟು, ಮೂಲಭೂತ ಸೌಕರ್ಯಗಳ ಬಗ್ಗೆ ಏಕಿಲ್ಲ? ಟ್ರಾಫಿಕ್ ಸರಿಯಾಗಿ ಇದ್ದರೆ ರಿಕ್ಷಾ ಚಾಲಕ 3 ಟ್ರಿಪ್ ಓಡಿಸುತ್ತಾನೆ. ಅದರ ಬಗ್ಗೆ ಯೋಚನೆ ಇಲ್ಲ. ಮಾನ್ಯ ಉಗ್ರಪ್ಪನವರೇ, ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ.

ಉಪ ಸಭಾಪತಿಯವರು:- ತಾವು ಉಗ್ರಪ್ಪನವರಿಗೆ ಏಕೆ ಹೇಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಲಹರ್ ಸಿಂಗ್ ಸಿರೋಯಾಃ- ಏಕೆಂದರೆ ಅವರು ಸರ್ಕಾರಕ್ಕೆ influence ಮಾಡುತ್ತಾರೆ. He can influence his Government. Atleast, what we can do is, encroachment on the footpaths should be removed. All MLA's from all the parties should see that in their areas encroachments on the footpaths should be cleared. ಇದನ್ನು ಮಾಡುವುದರಿಂದ ಸ್ವಲ್ಪವಾದರೂ ಅನುಕೂಲವಾಗುತ್ತದೆ. ರಸ್ತೆಗಳನ್ನು overnight ಅಗಲ ಮಾಡುವುದಕ್ಕಾಗುವುದಿಲ್ಲ. 5 ವರ್ಷ ಆಡಳಿತ ಮಾಡಿದ್ದೇವೆ, ಅವರು 5 ವರ್ಷ ಆಡಳಿತ ಮಾಡಿದ್ದಾರೆ. Government can't widen the palace road. ಸುಪ್ರೀಂ ಕೋರ್ಟ್‌ಗೆ ಹೋಗಿ 24 ಗಂಟೆಗಳಲ್ಲಿ ಆದೇಶ ತೆಗೆದುಕೊಂಡು ಮಾಡುವುದಕ್ಕೆ ಆಗುವುದಿಲ್ಲ. ಆರ್ಧ ರಾತ್ರಿ 3 ಗಂಟೆಯಾದರೂ ಅಲ್ಲಿ ನಡೆಸುವ ಮೇಳಗಳನ್ನು ತೆರೆದಿರುತ್ತಾರೆ. ಬೆಂಗಳೂರು ಅರಮನೆ ಕೇಸ್ ಪೆಂಡಿಂಗ್ ಇದ್ದಾಗ, why are we not joining together to see that the road is widened? ಎಷ್ಟು ತಾಪತ್ರಯವಾಗುತ್ತದೆ ಎಂದು ಊಹಿಸಲೂ ಸಾಧ್ಯವಿಲ್ಲ. ಅದನ್ನು ಬಿಟ್ಟು ಮಠ-ಮಾನ್ಯ, ಧರ್ಮ, ಈ ಜಾತಿ, ಆ ಜಾತಿ ಎಂದರೆ ಏನದು? ಭ್ರಷ್ಟಾಚಾರದ ಬಗ್ಗೆ ಮಾನ್ಯ ಸಚಿವರ ಮನೆಯಲ್ಲಿ ದುಡ್ಡು ಹೋಗಿರುವುದು ಟಿ.ವಿ.ಯಲ್ಲಿ ಬಂದರೂ ಏನು ಕ್ರಮ ತೆಗೆದುಕೊಂಡಿದ್ದಾರೆ? ಈ ಸರ್ಕಾರ ಬರಬೇಕೆಂದು ನಮಗೆ ಆಸೆ ಇದೆ, ಆದರೆ ಅವರಿಗೂ ಆಸೆ ಇರಬೇಕಲ್ಲವೇ? Why are you taking that side? ಭ್ರಷ್ಟಾಚಾರ ತಡೆಗಟ್ಟಲು ಭ್ರಷ್ಟಾಚಾರ ನಿಗ್ರಹ ದಳ ರಚನೆ ಮಾಡಿದ್ದಾರೆ. When there is tonnes of money lying in the Minister's house and in the bureaucrats house ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೇ, what right they have to talk about corruption? The Government has referred about the Anti Corruption Bureau in the Governors' address. ಭ್ರಷ್ಟಾಚಾರವನ್ನು ನಿಗ್ರಹ ಮಾಡದಿದ್ದರೆ ಆಗುವುದಿಲ್ಲ. ಪುನಃ ಈ ಸರ್ಕಾರ ಬರಬೇಕು, ಏಕೆಂದರೆ ಕಾಂಗ್ರೆಸ್ ಮುಕ್ತ ಭಾರತ ಆಗಬಾರದು. ಏಕೆಂದರೆ, Karnataka is the last chance. ಆದ್ದರಿಂದ ಪುನಃ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕೆಂದರೆ ಎರಡು-ಮೂರು ಸಲಹೆಗಳನ್ನು ಕೊಡುತ್ತೇನೆ. ಕಾಂಗ್ರೆಸ್‌ನವರೂ ನಮಗೆ ಸಹಾಯ ಮಾಡಿದ್ದಾರೆ. ಅವರು ಅಧಿಕಾರಕ್ಕೆ ಬರಲಿ. ಆದ್ದರಿಂದ ಎರಡು ಸಲಹೆಗಳನ್ನು ಖಂಡಿತ ಒಪ್ಪಿಕೊಳ್ಳಬೇಕು. ನ್ಯಾಸೊಟ್ಟ ಸಾಮಾನ್ಯ ಕಾರ್ಯಕರ್ತ.

ಶ್ರೀ ವಿ.ಎಸ್. ಉಗ್ರಪ್ಪಃ- ಅವರು 50-50, ಅಲ್ಲ 50 ಮತ್ತು ಇಲ್ಲ 50.

ಉಪಸಭಾಪತಿಯವರುಃ- ಆ ರೀತಿ ಅಲ್ಲ, ಒಂದು ಕಡೆ 49 ಮತ್ತೊಂದು ಕಡೆ 51 ಪರ್ಸೆಂಟ್.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಲಹರ್ ಸಿಂಗ್ ಸಿರೋಯಾಃ- (**XXX**)

(ಗೊಂದಲ)

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಜೆಟ್ ಬಗ್ಗೆ ಮಾತನಾಡಬೇಕು, ನಮ್ಮ ರಾಷ್ಟ್ರೀಯ ಅಧ್ಯಕ್ಷರ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಐವನ್ ಡಿ'ಸೋಜಾಃ- ಆ ಪದವನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಶ್ರೀ ಎಂ.ಆರ್. ಸೀತಾರಾಂಃ- ಅವರು ಬಜೆಟ್ ಬಗ್ಗೆ ಮಾತನಾಡಲಿ, ರಾಷ್ಟ್ರೀಯ ಅಧ್ಯಕ್ಷರ ಬಗ್ಗೆ, ನಮ್ಮ ಪಕ್ಷದ ಬಗ್ಗೆ ಮಾತನಾಡಲು ಅವರಿಗೆ ಹಕ್ಕಿಲ್ಲ.

ಶ್ರೀ ಲಹರ್ ಸಿಂಗ್ ಸಿರೋಯಾಃ- ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರಿಗೆ ಪ್ರಾಮಾಣಿಕ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಎಂ.ಆರ್. ಸೀತಾರಾಂಃ- ಅವರ ಪ್ರಾಮಾಣಿಕ ಸಲಹೆ ನಮಗೆ ಬೇಕಿಲ್ಲ. ನಮ್ಮ ಪಕ್ಷವನ್ನು ನಡೆಸುವುದಕ್ಕೆ ಮಾನ್ಯ ಸದಸ್ಯರ ಸಲಹೆ ಬೇಕಾಗಿಲ್ಲ. ನಮ್ಮ ರಾಜ್ಯವನ್ನು ನಡೆಸುವುದಕ್ಕೆ ಏನಾದರೂ ಸಲಹೆಗಳು ಇದ್ದರೆ ಕೊಡಲಿ. ನಾವು ಸ್ವೀಕರಿಸುತ್ತೇವೆ.

ಶ್ರೀ ಕೆ.ಟಿ. ಶ್ರೀಕಂಠೇಗೌಡಃ- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಪ್ರೀತಿಯಿಂದ ಸಲಹೆ ಕೊಡುತ್ತೇನೆ ಎಂದರೆ ಅವರು ಸಲಹೆ ಕೊಡಿ ಎಂದು ಹೇಳಿ, ಸಲಹೆ ಕೊಟ್ಟ ಮೇಲೆ ಈ ರೀತಿ ಏಕೆ ಗಾಬರಿಯಾಗುತ್ತಿದ್ದಾರೆ? ದಯಮಾಡಿ ಸಲಹೆ ತೆಗೆದುಕೊಳ್ಳಬೇಕು.

ಶ್ರೀ ಎಂ.ಆರ್. ಸೀತಾರಾಂಃ- ನಮ್ಮ ಪಕ್ಷದ ಬಗ್ಗೆ ಸಲಹೆ ಬೇಡ, ನಮ್ಮ ಪಕ್ಷಕ್ಕೆ ಸಲಹೆ ಕೊಡಲು ನಾವು ಸಮರ್ಥರಿದ್ದೇವೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(**XXX**) **ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪ ಸಭಾಪತಿಯವರುಃ- ಮಾನ್ಯ ಸದಸ್ಯರೇ, ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ಪಕ್ಷಗಳ ನಾಯಕರುಗಳ ಬಗ್ಗೆ ಮಾತನಾಡುವುದು ಬೇಡ. ದಯಮಾಡಿ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿ. ಮಾನ್ಯ ರಾಹುಲ್ ಗಾಂಧಿಯವರ ಬಗ್ಗೆ ಮಾತನಾಡಿದ ಪದಗಳನ್ನು ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಲಹರ್ ಸಿಂಗ್ ಸಿರೋಯಾಃ- ಮಾನ್ಯ ಸಭಾಪತಿಯವರೇ, ಇಲ್ಲಿ ಯಾರ್‍ಯಾರ ಬಗ್ಗೆ ಮಾತನಾಡುವುದಿಲ್ಲ? ತಾವು ದಾಖಲೆ ನೋಡಿ. ನಾನು ದೇಶದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ.

ಉಪ ಸಭಾಪತಿಯವರುಃ- ವೈಯಕ್ತಿಕವಾಗಿ ಯಾರ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಎಂ.ಆರ್. ಸೀತಾರಾಂಃ- ಮಾನ್ಯ ಸದಸ್ಯರು ಮೊದಲು ಕರ್ನಾಟಕದ ಹಿತದೃಷ್ಟಿಯಿಂದ ಮಾತನಾಡಬೇಕು. ನಂತರ ದೇಶದ ಹಿತದೃಷ್ಟಿಯ ಬಗ್ಗೆ ನಾವೆಲ್ಲರೂ ಸೇರಿಕೊಂಡು ಮಾಡೋಣ.

ಉಪ ಸಭಾಪತಿಯವರುಃ- ತಾವು ಆ ಮಾತುಗಳನ್ನು ಹೇಳಬಾರದು.

ಶ್ರೀ ವಿ.ಎಸ್. ಉಗ್ರಪ್ಪಃ- ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು 2013ರಲ್ಲಿ ಅವರ ರಾಷ್ಟ್ರೀಯ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದಿದ್ದರು, ಆ ಪತ್ರದಲ್ಲಿ ಏನೆಲ್ಲಾ ಬರೆದಿದ್ದರು, ಅದರಲ್ಲಿ "ಬಿಜೆಪಿ ಯ ಸರ್ಕಾರದಿಂದ ಕೇಂದ್ರಕ್ಕೆ ಎಷ್ಟೆಲ್ಲಾ ಹಣ ಹೋಗಿದೆ ಎಂಬ ಬಗ್ಗೆ ಮರೆತಿದ್ದೀರಾ ಮಾನ್ಯ ಅಡ್ವಾನಿಯವರೇ ಹಾಗೂ ಮರೆತಿದ್ದೀರಾ ಬಿಜೆಪಿ ನಾಯಕರೇ?" ಆ ವಿಚಾರಗಳನ್ನು ದಯಮಾಡಿ ಸ್ವಲ್ಪ ಹೇಳಬೇಕು. ಅದನ್ನು ಏಕೆ ಬಿಡುತ್ತಿದ್ದಾರೋ?

ಶ್ರೀ ಲಹರ್ ಸಿಂಗ್ ಸಿರೋಯಾಃ- ಮಾನ್ಯ ಸಭಾಪತಿಯವರೇ, ನಾನು 6 ಕೋಟಿ ಜನತೆಗೆ ಹೇಳುವುದೇನೆಂದರೆ, ನಾನು ಆ ಪತ್ರವನ್ನು ದೇಶಕ್ಕೋಸ್ಕರ ಬರೆದಿದ್ದೇನೆಯೇ ಹೊರತು ರಾಜಕೀಯ ಮಾಡಲು ಅಥವಾ ನನ್ನ ಸ್ವಾರ್ಥಕ್ಕೋಸ್ಕರ ಬರೆದಿಲ್ಲ. ಈ ಸಲಹೆಯನ್ನು ದೇವರ ಸಾಕ್ಷಿಯಾಗಿ ನಾನು ದೇಶದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಏಕೆಂದರೆ ಮಾನ್ಯ ರಾಹುಲ್ ಗಾಂಧಿಯವರ ಮೇಲೆ ಬೇಕಾದಷ್ಟು ಆರೋಪಗಳಿವೆ. He is out on bail. ನಾಳೆ ಏನಾದರೂ ಹೆಚ್ಚು-ಕಡಿಮೆ ಆದರೆ ಅವರ ಪಕ್ಷದ ಗತಿ ಏನು?

ಶ್ರೀ ಎಂ.ಆರ್. ಸೀತಾರಾಂಃ- ನಮ್ಮ ಪಕ್ಷದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ನಾವೆಲ್ಲರೂ ಸಮರ್ಥರಿದ್ದೇವೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ವಿ.ಎಸ್. ಉಗ್ರಪ್ಪಃ- ಎಷ್ಟು ಕೋಟಿ ರೂಪಾಯಿಗಳ ಹಣ ಕಳುಹಿಸಿದ್ದಾರೆ ಎಂದು ಹೇಳಲಿ, ಈ ರಾಜ್ಯದ ಸಂಪತ್ತನ್ನು ಎಷ್ಟು ಕಳುಹಿಸಿದ್ದಾರೆ ಎಂದು ಹೇಳಲಿ.

ಶ್ರೀ ಎಂ.ಆರ್. ಸೀತಾರಾಂಃ- ಮಾನ್ಯ ಸದಸ್ಯರು ನಮ್ಮ ರಾಜ್ಯದ ಬಜೆಟ್ ಬಗ್ಗೆ ಚರ್ಚೆ ಮಾಡಲಿ, ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿ, ಸಲಹೆಗಳನ್ನು ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆ. ಆದರೆ ನಮ್ಮ ಪಕ್ಷ ಅಥವಾ ನಾಯಕರುಗಳ ಬಗ್ಗೆ ಮಾತನಾಡಲು ಅವರು ಯಾವುದೇ ರೀತಿಯ ಪ್ರಯತ್ನ ಮಾಡಬಾರದು ಎಂದು ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಲಹರ್ ಸಿಂಗ್ ಸಿರೋಯಾಃ- ಆಯಿತು. I will not speak about it. I will withdraw it.

**Sri M.R.SEETHRAM:-** Don't try to keep on repeating the same thing.

ಶ್ರೀ ಲಹರ್ ಸಿಂಗ್ ಸಿರೋಯಾಃ- ಆಯಿತು, ನಾನು ಬಜೆಟ್ ಬಗ್ಗೆ ಮಾತನಾಡುತ್ತೇನೆ.

ಶ್ರೀ ಕೃಷ್ಣ ಭೈರೇಗೌಡಃ- ಮಾನ್ಯ ಸಭಾಪತಿಯವರೇ, Westminister Parliamentary System ನಿಂದ ಹಿಡಿದುಕೊಂಡು ನಮ್ಮ Parliamentary, Assembly System ನಲ್ಲಿ across the floor ಇವೆಲ್ಲವನ್ನು exchange ಮಾಡುವುದು common ಆಗಿದೆ. ಆದರೆ ಅದರಲ್ಲಿಯೂ ಎಲ್ಲಿಯವರೆಗೆ ಮತ್ತು ಯಾವ ವಿಷಯಗಳ ಬಗ್ಗೆ ಎಂದು ಕೆಲವು ಮಿತಿಗಳು ನಮ್ಮ ಮೇಲೆ ಇರುತ್ತವೆ. Especially, ಮಾನ್ಯ ಸದಸ್ಯರು ಒಬ್ಬರನ್ನು ಟಾರ್ಗೆಟ್ ಮಾಡಿ ಮಾತನಾಡುವುದು, to some extent it is OK. But, beyond the limit ಇದು ಸರಿಯಲ್ಲ. ಈಗ we also respect. ಬೇಲ್ ಮೇಲೆ ಯಾರಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ನಾನು ಯಾರು ಜೈಲಿಗೆ ಹೋಗಿ ಬಂದಿದ್ದಾರೆ ಎಂದು ಹೇಳುವುದು, then we both will be crossing the limits. Let us respect the parliamentary culture.

**Sri LEHAR SINGH SIROYA:-** Sir, I assure that I have no respect and dignity on any corrupt politicians irrespective of any party. I have written a letter to Advaniji also.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

151/20.02.2018/6.00/ಹೆಚ್‌ವಿಃಎಂಡಿ

**ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಯಾರು ಜೈಲಿಗೆ ಹೋಗಿ ಬಂದಿದ್ದಾರೆ ಎನ್ನುವುದನ್ನು ನಾನು ಹೇಳುವುದು ಬೇಡ. Tit for tat ಸ್ವಲ್ಪ ಇರುತ್ತದೆ. ಅದು ಇದ್ದರೆನೇ parliamentary system alive ಆಗಿ ಇರುವುದು. ಅದರಲ್ಲಿಯೂ ನಾವು ಸ್ವಲ್ಪ limits ಇಟ್ಟುಕೊಳ್ಳಬೇಕಾಗುತ್ತದೆ. ನಾವು ಮಂತ್ರಿಗಳ ಬಗ್ಗೆ ಮತ್ತು ಪ್ರಧಾನ ಮಂತ್ರಿಗಳ ಬಗ್ಗೆ ಮಾತನಾಡುತ್ತೇವೆ. But, they are all answerable. ಅವರು parliamentary position ಇಟ್ಟುಕೊಂಡಿರುವಂತಹವರು. ಪಕ್ಷದ ಒಳಗೆ they are constitutional functionaries. We should respect the party functionaries.

**ಶ್ರೀ ಲಹರ್ ಸಿಂಗ್ ಸಿರೋೇಯಾ:-** ಸನ್ಮಾನ್ಯ ಸಭಾಪತಿಯವರೇ, ಈ ಸದನದ ನಡವಳಿಯನ್ನು ತೆಗೆದು ನೋಡಿದರೆ, ನಾನು ಯಾವಾಗಲೂ dignified ಆಗಿ ಮಾತನಾಡಿದ್ದೇನೆ. ಸರ್ಕಾರದ ಪರವಾಗಿಯೂ ಮಾತನಾಡಿದ್ದೇನೆ. When the DGP has gone to the court against the wish of the Chief Minister, ಮಾನ್ಯ ಮುಖ್ಯಮಂತ್ರಿಗಳು ಯಾರನ್ನೋ ಡಿ.ಜಿ.ಪಿ.ಯನ್ನಾಗಿ ಮಾಡಿದಾಗ, ಮತ್ತೊಬ್ಬರು,’ಡಿ.ಜಿ.ಪಿ. ಹುದ್ದೆ ನನಗೆ ಕೊಡಬೇಕು’ ಎಂದು ಕೋರ್ಟಿಗೆ ಹೋಗಿದ್ದರು. ಆಗ ನಾನು ಈ ಸದನದಲ್ಲಿ ಅದರ ಬಗ್ಗೆ ಮಾತನಾಡಿದ್ದೇನೆ. ಆ ಬಗ್ಗೆ ದಾಖಲೆಗಳು ಇವೆ. ಈ ರಾಜ್ಯದ 6 ಕೋಟಿ ಜನರಿಂದ ಆಯ್ಕೆಯಾಗಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಗೌರವವನ್ನು ಕೊಡಬೇಕಾಗುತ್ತದೆ. ಇಲ್ಲಿಯವರೆಗೆ ನಾನು ಅವರ ವಿರುದ್ಧ ಒಂದೇ ಒಂದು ಶಬ್ದವನ್ನು ಸಹ ಮಾತನಾಡಿಲ್ಲ. ಆ ರೀತಿ ಮಾತನಾಡುವುದಕ್ಕೂ ನಾನು ಇಷ್ಟಪಡುವುದಿಲ್ಲ. ಆದರೆ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಉಳಿಯಬೇಕೆನ್ನುವ ಭಾವನೆಯಿಂದ ನಾನು ಮಾನ್ಯ ರಾಹುಲ್ ಗಾಂಧಿಯವರ ಬಗ್ಗೆ ಮಾತನಾಡಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಆ ವಾಕ್ಯಗಳನ್ನು ಬಿಟ್ಟು ಅವರು ಮುಂದೆ ಹೋಗಬೇಕೆಂದು ನಾವು ಹೇಳುತ್ತಿದ್ದೇವೆ. ಆದರೆ, ಅವರು ಅದೇ ವಾಕ್ಯಗಳನ್ನು ಪುನರುಕ್ತಿ ಮಾಡುತ್ತಿದ್ದಾರೆ. Let him go forward. ಅವರ ಪಕ್ಷದನ್ನು ಅವರು ನೋಡಿಕೊಳ್ಳಲಿ. ನಾವು ಸಮರ್ಥರಿದ್ದೇವೆ ನಮ್ಮ ಪಕ್ಷವನ್ನು ನಾವು ನೋಡಿಕೊಳ್ಳುತ್ತೇವೆ. Please leave it. ಅವರು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿ ಮಾತನಾಡಲಿ ಮತ್ತು ನಮ್ಮ ರಾಜ್ಯದ ಆಯವ್ಯಯದ ಬಗ್ಗೆ ಮಾತನಾಡಲಿ. ಪದೇಪದೇ ಅವರು ಏತಕ್ಕೋಸ್ಕರ ಆ ಬಗ್ಗೆ ಮಾತನಾಡುತ್ತಿದ್ದಾರೆ? He must mind

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

his language. Don't persist on this. You have no business to talk about our party.

**ಶ್ರೀ ಕೃಷ್ಣ ಬೈರೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಅವರ ಪಕ್ಷವನ್ನು ಅವರು ನೋಡಿಕೊಳ್ಳಲಿ. ಜೈಲಿಗೆ ಹೋಗಿ ಬಂದಿರುವವರನ್ನು ಅವರ ಪಕ್ಷದ ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ. ಬೇಲ್ ಮೇಲೆ ಇರುವವರನ್ನು ಬಿಟ್ಟು ಬಿಡಲಿ. If he can't understand the sensible language, I can reply him in his language only. Their president was also imprisoned. If he has so much concern about our country let him talk about his own party leaders.

ಶ್ರೀ ಲಹರ್ ಸಿಂಗ್ ಸಿರೋಯಾಃ- ಸನ್ಮಾನ್ಯ ಸಭಾಪತಿಯವರೇ, I don't know. ಅವರು ಕೋಪ ಮಾಡಿಕೊಂಡರೆ ಏನು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಕೃಷ್ಣ ಬೈರೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆ ಮಾತಿನಲ್ಲಿ ಹೇಳುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಅವರಿಗೆ ಅರ್ಥವಾಗಲಿಲ್ಲವೆಂದರೆ ಬೇರೆ ರೀತಿಯಲ್ಲಿಯೂ ಹೇಳುವುದಕ್ಕೆ ನಮಗೆ ಬರುತ್ತದೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)ಃ-** ಸನ್ಮಾನ್ಯ ಸಭಾಪತಿಯವರೇ, ಅವರು ಪದೇಪದೇ ಅದೇ ಮಾತುಗಳನ್ನು ಹೇಳುತ್ತಿದ್ದಾರೆ ದಯವಿಟ್ಟು ತಾವು ಅವರಿಗೆ ಹೇಳಿ. You have to tell him that. Mr. Lehar Singh you please move forward. Please stop talking about our party repeatedly.

ಶ್ರೀ ಲಹರ್ ಸಿಂಗ್ ಸಿರೋಯಾಃ- ಸನ್ಮಾನ್ಯ ಸಭಾಪತಿಯವರೇ, ಅವರುಗಳು ಯಾಕೆ ಸಿಟ್ಟಾಗಿದ್ದಾರೆಂದು, I don't know why they are angry.

**Sri M.R.SEETHARAM :-** As it is not relevant, you should not talk about our party president over here. We are now talking only about the Karnataka Government budget.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri LEHAR SINGH SIROYA:-** Sir, we are talking about the welfare of the Karnataka.

**ಉಪ ಸಭಾಪತಿಯವರುಃ-** ಮಾನ್ಯ ಲಹರ್ ಸಿಂಗ್‌ರವರೇ, **ಮಾನ್ಯ ರಾಹುಲ್‌ಗಾಂಧಿಯವರ ಬಗ್ಗೆ ತಾವು ಮಾತನಾಡಿರುವ ಪದಗಳನ್ನು ಕಡತದಿಂದ ತೆಗೆದಿದ್ದೇನೆ**. ಮತ್ತೊಮ್ಮೆ ಅದರ ಬಗ್ಗೆ ಉಚ್ಚಾರಣೆ ಮಾಡುವುದು ಬೇಡ. ತಮ್ಮ ಮಾತುಗಳನ್ನು ಮುಂದುವರಿಸಿ.

**Sri LEHAR SINGH SIROYA:-** Sir, I have no objection on that. ಎರಡನೆಯ ಸಲಹೆಯನ್ನು ಕೊಡುವುದಕ್ಕೆ ನಾನು ಹೋಗುವುದಿಲ್ಲ, ಅವರಿಗೆ ಸಿಟ್ಟು ಬರುತ್ತದೆ. ನಮ್ಮ ರಾಜ್ಯದಲ್ಲಿ ಪುನಃ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರದಿದ್ದರೆ ನಮಗೇನು ತೊಂದರೆ ಇಲ್ಲ. ಅವರು ಅಧಿಕಾರಕ್ಕೆ ಬರದಿದ್ದರೆ ನಾವು ಬರುತ್ತೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣ ಬೈರೇಗೌಡರವರು ಮಾತನಾಡಿರುವ ಮಾತುಗಳನ್ನು ಸಹ ಕಡತದಿಂದ ತೆಗೆದು ಹಾಕಬೇಕಾಗುತ್ತದೆ.

**ಉಪ ಸಭಾಪತಿಯವರುಃ-** ಮಾನ್ಯ ಪುಟ್ಟಸ್ವಾಮಿಯವರೇ, ಇದು ಸರಿಯಲ್ಲ ಕುಳಿತುಕೊಳ್ಳಿ. ಅವರ ಪಕ್ಷದ ಅಧ್ಯಕ್ಷರ ಬಗ್ಗೆ ಮಾತನಾಡುವುದಕ್ಕೆ ನೀವು ಯಾರು? ಆ ರೀತಿ ಯಾರೂ ಮಾತನಾಡಬಾರದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣ ಬೈರೇಗೌಡರವರು ಮಾತನಾಡಿರುವ ಮಾತುಗಳನ್ನು ಸಹ ಕಡತದಿಂದ ತೆಗೆದು ಹಾಕಬೇಕಾಗುತ್ತದೆ. ಎರಡೂ ಕಡೆಯವರು ಮಾತನಾಡಿರುವ ಮಾತುಗಳನ್ನು ಕಡತದಿಂದ ತೆಗೆದು ಹಾಕಬೇಕು.

**(ಗೊಂದಲ)**

**ಉಪ ಸಭಾಪತಿಯವರುಃ-** ಮಾನ್ಯ ಪುಟ್ಟಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ. ಇಲ್ಲದಿದ್ದರೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

**(ಗೊಂದಲ)**

**ಶ್ರೀ ಕೃಷ್ಣ ಬೈರೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ನಾನು ಯಾರ ಹೆಸರನ್ನು ಉಲ್ಲೇಖ ಮಾಡಿಲ್ಲ. ಕೆಲವು ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡಿರುವ ಮಾತುಗಳನ್ನು ಸಹ ಕಡತದಿಂದ ತೆಗೆದು ಹಾಕಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಎರಡೂ ಕಡೆಯವರು ಮಾತನಾಡಿರುವ ಮಾತುಗಳನ್ನು ಕಡತದಿಂದ ತೆಗೆದು ಹಾಕಬೇಕು. ಹೀಗೆ partiality ಮಾಡಬಾರದು.

**ಉಪ ಸಭಾಪತಿಯವರುಃ-** ಮಾನ್ಯ ಪುಟ್ಟಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಲಹರ್ ಸಿಂಗ್ ಸಿರೋಯಾಃ-** ಸನ್ಮಾನ್ಯ ಸಭಾಪತಿಯವರೇ, I will obey your orders.

**ಉಪ ಸಭಾಪತಿಯವರುಃ-** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಾವು ಮತ್ತೊಮ್ಮೆ ಆ ರೀತಿ ಮಾತನಾಡಿದರೆ, ತಮ್ಮ ಮಾತುಗಳನ್ನು ಮುಂದುವರೆಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾಃ-** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಎರಡನೆಯ ಸಲಹೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಾನು ಸರ್ಕಾರದಲ್ಲಿ ಎರಡು ವಿನಂತಿಗಳನ್ನು ಮಾಡುತ್ತಿದ್ದೇನೆ. ಮೊದಲನೆಯದಾಗಿ, Law and Order ಬಗ್ಗೆ All Party Meeting ಕರೆದು Law and Order ಅನ್ನು ಹೇಗೆ ಸುಧಾರಿಸಬೇಕು ಎನ್ನುವುದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಏಕೆಂದರೆ, ನನಗೆ ತಿಳಿದ ಮಟ್ಟಿಗೆ ಶಾಲಾ/ಕಾಲೇಜಿನ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ಡ್ರಗ್ ಮಾರಾಟದಲ್ಲಿ ತೊಡಗಿದ್ದಾರೆ. And every senior officer knew all these things. ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಕೈಮುಗಿದು ಮಾನ್ಯ ಸಭಾ ನಾಯಕರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಕಾನೂನು ಸುವ್ಯವಸ್ಥೆಯ ಬಗ್ಗೆ ಮತ್ತು ಡ್ರಗ್ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ ಸಮಾಜ ಹಾಳಾಗುತ್ತದೆ. ಶ್ರೀಮಂತರ ಮನೆ ಮಕ್ಕಳು ಹೇಗೆ ವರ್ತಿಸುತ್ತಾರೆ ಎನ್ನುವುದರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಅವರಿಂದಾಗುವ ಕಷ್ಟವನ್ನು ಈ ರಾಜ್ಯದ ಜನ ಸುಮ್ಮನೆ ಅನುಭವಿಸುತ್ತಿದ್ದಾರೆ. ಅಪರಾಧಿಗಳಿಗೆ ಯಾವ ಮಟ್ಟದಲ್ಲಿ ಪೋಲೀಸ್ ರಕ್ಷಣೆ ದೊರೆಯುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ ಇಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸನ್ಮಾನ್ಯ ಸಭಾಪತಿಯವರೇ, ಸರಗಳ್ಳತನದ ಬಗ್ಗೆ ಹೇಳಬೇಕಾದರೆ, if the police wants they can reduce 50 percent of the cases within 24 hours and I am confident about that. In such cases, we have to move to the court for not to grant bail. Some gruesome things are happening over here. Across the party line we should strictly refer these kinds of issues to the Law and Order. The second major issue is about the traffic problem in the City. ಇದರ ಬಗ್ಗೆ ಹೇಳಬೇಕಾದರೆ, sometimes we will get stuck in the traffic in such a way that, many times I have observed people sitting in their vehicles and waiting for the traffic to move. We feel very guilty about it. I am not talking for any political point score over here. ನಾನು articulate ಮಾಡುತ್ತಿಲ್ಲ. ನಿಜವಾಗಿ ನನ್ನ ಮನಸ್ಸಿಗೆ ನೋವಾಗುತ್ತಿದೆ. ಟ್ರಾಫಿಕ್‌ನಿಂದಾಗಿ ರೈತರು ಸಹ ತೊಂದರೆಗೀಡಾಗುತ್ತಿದ್ದಾರೆ. ಏಕೆಂದರೆ, daily lakhs of people are coming into the city from outside. ಒಂದು ದಿನದ ಕೆಲಸ ಮಾಡುವುದಕ್ಕೆ ಎರಡು ದಿನಗಳು ಬೇಕಾಗುತ್ತದೆ. ಎಲ್ಲ ಕಡೆಗಳಲ್ಲಿ ಎಂ.ಎಲ್.ಎ.ಗಳನ್ನು confidence ಗೆ ತೆಗೆದುಕೊಳ್ಳದೇ ಹೋದರೆ road widening and encroachment and also foot path encroachment ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದನ್ನು ಹೇಳಬೇಕಾಗಿಯೇ ಇಲ್ಲ. ಬೆಂಗಳೂರು ನಗರದಲ್ಲಿ ನಡೆದುಕೊಂಡು ಹೋಗುವ ಪ್ರತಿಯೊಬ್ಬರಿಗೂ ಇದರ ಅನುಭವವಾಗಿರುತ್ತದೆ. ಉದಾಹರಣೆಗೆ ಹೇಳಬೇಕಾದರೆ, ಒಬ್ಬ ಫುಟ್‌ಪಾತ್ ಮೇಲೆ ಗಾಡಿಯಲ್ಲಿ ಹೋಟಲ್ ಇಟ್ಟುಕೊಳ್ಳುತ್ತಾನೆ. ರಸ್ತೆಯ ಮೇಲೆ ಸ್ಟೂಲ್ ಹಾಕುತ್ತಾನೆ. ಅಲ್ಲಿಗೆ ಬರುವವರು ತಮ್ಮ ವಾಹನಗಳನ್ನು ರಸ್ತೆಯಲ್ಲಿಯೇ ಪಾರ್ಕ್ ಮಾಡಿ ಅಲಲಿಗೆ ಬರುತ್ತಾರೆ. ಎಲ್ಲ ಕಡೆಗಳಲ್ಲಿಯೂ ಈ ಅವ್ಯವಸ್ಥೆಯನ್ನು ನಾವು ಕಾಣಬಹುದಾಗಿದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಯಾವುದೇ ಪಾಲಿಸಿ ಬೇಕಾಗಿಲ್ಲ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಉಲ್ಲೇಖ ಮಾಡಬೇಕಾಗಿಲ್ಲ ಅಥವಾ ಆಯವ್ಯಯದಲ್ಲಿ ಅನುದಾನವನ್ನು ಮೀಸಲಾಗಿಡಬೇಕಾಗಿಲ್ಲ. ಪೊಲೀಸ್ ಆಯುಕ್ತರು, ಮಹಾನಗರಪಾಲಿಕೆಯ ಆಯುಕ್ತರು ಈ ವ್ಯವಸ್ಥೆಯ ಮೇಲೆ ನಿಯಂತ್ರಣವನ್ನು ತರಬೇಕು ಹಾಗೂ ನಗರಪಾಲಿಕೆ ಸದಸ್ಯರು ಮತ್ತು ಎಂ.ಎಲ್.ಎ.ಗಳು we should not intervene in this ಎಂದು ಹೇಳಬೇಕು. And we should see that all encroachments have been removed. ರಸ್ತೆ ಅಗಲೀಕರಣಕ್ಕೆ ಸಂಬಂಧಪಟ್ಟಂತೆ ಕೋರ್ಟಿನಲ್ಲಿರುವ ಕೇಸ್‌ಗಳನ್ನು ಬೇಗನೇ ಬಗೆಹರಿಸಿಕೊಳ್ಳಬೇಕಾಗಿದೆ. ಬೆಂಗಳೂರು ಅರಮನೆಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯ ಬಗ್ಗೆ ರಾಜ ವಂಶಸ್ಥರ ಜೊತೆಗೆ ಮಾತನಾಡಿ ಬಗೆಹರಿಸಿಕೊಳ್ಳಬೇಕಾಗಿದೆ. ಸರ್ಕಾರ ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು ಸರ್ಕಾರಕ್ಕೆ ಅಷ್ಟು ಶಕ್ತಿಯಿದೆ. ಮಾನ್ಯ ಪ್ರಿಯಾಂಕ ಖರ್ಗೆಯವರ ಮನೆಯ ಹತ್ತಿರವೇ ರಸ್ತೆ ಅಗಲೀಕರಣಕ್ಕೆ ಸಂಬಂಧಪಟ್ಟಂತೆ ಕಳೆದ 5 ವರ್ಷಗಳಿಂದ ಕೋರ್ಟ್ ಕೇಸ್ ನಡೆಯುತ್ತಿದೆ. ಅಲ್ಲಿ ಸಂಬಂಧಪಟ್ಟವರು 40-50 ಅಳತೆಯ ಜಾಗವನ್ನು ಬಿಟ್ಟುಕೊಟ್ಟಿದ್ದಾರೆ. ಅಲ್ಲಿ ಗೋಡೆಯನ್ನು ಕಟ್ಟಿಕೊಳ್ಳಲಾಗಿದೆ. But now we are not doing that. ಆದ್ದರಿಂದ ನನ್ನ ಮನವಿಯೇನೆಂದರೆ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸರ್ಕಾರ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕಾಗಿದೆ. Don't wait till the elections. ನಾವು ಸಹ ಅದಕ್ಕೆ ಸಹಕರಿಸುತ್ತೇವೆ. ನಾವೆಲ್ಲರೂ ಈ ನಿಟ್ಟಿನಲ್ಲಿ ಕೈಜೋಡಿಸೋಣ.

ಸನ್ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ ಆ ಪಕ್ಷ ಈ ಪಕ್ಷವೆಂದು ಹೇಳುವುದಿಲ್ಲ. ಯಾರು ಭ್ರಷ್ಟ ರಾಜಕಾರಣಿಗಳಿದ್ದಾರೆ ಅವರಿಗೆ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಟಿಕೆಟ್ ಕೊಡಬಾರದೆಂದು ನಾನು ಎಲ್ಲ ಪಕ್ಷದವರಲ್ಲಿಯೂ ಮನವಿ ಮಾಡುತ್ತೇನೆ. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ನಿಜವಾಗಿಯೂ ನಾವೆಲ್ಲರೂ ಧನ್ಯವಾದಗಳನ್ನು ಸಲ್ಲಿಸಬೇಕಾದರೆ, All put together, we should see that criminals should not get any party ticket ಎನ್ನುವ ಮನವಿಯನ್ನು ಮಾಡುತ್ತಿದ್ದೇನೆ. ನನ್ನ ಮಾತುಗಳಿಂದ ಆಡಳಿತ ಪಕ್ಷದ ಸದಸ್ಯರ ಮನಸ್ಸಿಗೆ ನೋವುಂಟು ಮಾಡಿದ್ದರೆ ನಾನು ಕ್ಷಮೆ ಕೇಳುತ್ತಿದ್ದೇನೆ. ಅವರಿಗೆ ನೋವನ್ನುಂಟು ಮಾಡಬೇಕೆನ್ನುವ ಉದ್ದೇಶ ನನಗಿರಲಿಲ್ಲ ಎನ್ನುವ ಮಾತುಗಳನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀಮತಿ ತಾರಾಅನೂರಾಧ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಈಗಾಗಲೇ ಬಹಳಷ್ಟು ಜನ ಸದಸ್ಯರು ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾತನಾಡಿದ್ದಾರೆ ನಾನು ಅದರ ಬಗ್ಗೆ ನಂತರ ಮಾತನಾಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಸ್ಥಳೀಯ ವ್ಯಕ್ತಿಗಳಿಗೆ ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆಯೆಂದು ಮತ್ತು ಅದರಲ್ಲಿ ಒಟ್ಟು 18,993 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲಾಗಿದೆಯೆಂದು ಘನತೆವೆತ್ತ ರಾಜ್ಯಪಾಲರಿಂದ ಸರ್ಕಾರ ಹೇಳಿಸಿದೆ. ಆದರೆ, 2014ರ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಇದೇ ಸರ್ಕಾರ 50 ಸಾವಿರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎನ್ನುವ ಮಾತನ್ನು ಹೇಳಿಸಿತ್ತು. ಅಂದರೆ, 2014ರಲ್ಲಿ 50 ಸಾವಿರ ಹುದ್ದೆಗಳ ಜೊತೆಗೆ ಈಗ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ 18,993 ಹುದ್ದೆಗಳು ಸೇರಿವೆಯೇ ಅಥವಾ ಇಲ್ಲಿಯವರೆಗೆ ಕೇವಲ 18,993 ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೆ, ಇತ್ತೀಚೆಗಷ್ಟೇ ಮಾನ್ಯ ಸದಸ್ಯರಾದ ಅಮರನಾಥ್ ಪಾಟೀಲ್‌ರವರು ಹೈದ್ರಾಬಾದ್-ಕರ್ನಾಟಕ ಭಾಗದ ಬಗ್ಗೆ ಮಾತನಾಡುತ್ತಾ, ಆ ಭಾಗದಲ್ಲಿನ ಮೀಸಲಾತಿ ಹುದ್ದೆಗಳು ಭರ್ತಿಯಾಗಿಲ್ಲ ಬಹಳಷ್ಟು ಹುದ್ದೆಗಳು ಖಾಲಿ ಇವೆಯೆಂದು ಸದನದ ಬಾವಿಗಿಳಿದು ಧರಣಿ ಮಾಡಿದ್ದರು. ಸರ್ಕಾರ ಅದರ ಬಗ್ಗೆ ವಿವರವನ್ನು ನೀಡದೇ, 'ಒಟ್ಟು 18,993 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲಾಗಿದೆ' ಎಂದು ಘನತೆವೆತ್ತ ರಾಜ್ಯಪಾಲರಿಂದ ಸರ್ಕಾರ ಹೇಳಿಸಿದೆ. ಅಷ್ಟು ಸಂಖ್ಯೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಿದ್ದರೆ ಮಾನ್ಯ ಸದಸ್ಯರು ಏತಕ್ಕೋಸ್ಕರ ಧರಣಿಯನ್ನು ಮಾಡಬೇಕಾಗಿತ್ತು? ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಸಚಿವರಾದ ಮಾನ್ಯ ಪ್ರಿಯಾಂಕ ಖರ್ಗೆಯವರು ಸಹ ಆ ಭಾಗದಿಂದ ಬಂದವರಾಗಿದ್ದಾರೆ. ಅವರು ಈ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಏಕೆಂದರೆ, 2014ರಲ್ಲಿ ಇದೇ ಸರ್ಕಾರ ಘನತೆವೆತ್ತ ರಾಜ್ಯಪಾಲರಿಂದ 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎನ್ನುವ ಮಾತನ್ನು ಹೇಳಿಸಿತ್ತು.

ಶ್ರೀ ಪ್ರಿಯಾಂಕ ಖರ್ಗೆ(ವಿಜ್ಞಾನ,ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಸಚಿವರು) :- ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಸುಮಾರು 50 ಸಾವಿರ ಹುದ್ದೆಗಳು ಸೃಷ್ಟಿಯಾಗಿದ್ದು, ಅವುಗಳನ್ನು ಭರ್ತಿ ಮಾಡಲಾಗುತ್ತದೆಂದು ಹೇಳಿದ್ದೆವು. ಅದರಲ್ಲಿ ಈಗಾಗಲೇ 18,993 ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. As we speak, still 21,000 posts are there. ಇನ್ನೂ 10 ಸಾವಿರ ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇನ್ನೂ ಕೆಲವು ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಬೇರೆ ಬೇರೆ ಇಲಾಖೆಗಳಿಂದ ಮಾಹಿತಿಯನ್ನು ಪಡೆದುಕೊಂಡು ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆಯೆಂದು ಮೊನ್ನೆ ಹೆಚ್.ಕೆ.ಆರ್.ಡಿ.ಬಿ. ಅಧ್ಯಕ್ಷರು ಸದನಕ್ಕೆ ಮಾಹಿತಿಯನ್ನು ನೀಡಿದ್ದಾರೆ.

(ಮುಂದು)

ಶ್ರೀ ಪ್ರಿಯಾಂಕ ಖರ್ಗೆ(ಮುಂದುವರೆದಿದೆ)

ಮಾನ್ಯ ಸಭಾಪತಿಯವರೇ, ಮಾನ್ಯ ಅಮರನಾಥ್ ಪಾಟೀಲ್‌ರವರು ಇದರ ಬಗ್ಗೆ ನಮಗಿಂತಲೂ ಹೆಚ್ಚು ಅಧ್ಯಯನ ಮಾಡಿದ್ದಾರೆ. ಪ್ರಾಮಾಣಿಕವಾಗಿ, ಅಕ್ಷರಶಃ ಇದು ಕಾರ್ಯಗತವಾಗುವುದಕ್ಕೆ ನಮ್ಮ ಸರ್ಕಾರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಣ ತೊಟ್ಟಿದೆ. ಮಾನ್ಯ ಅಮರನಾಥ್ ಪಾಟೀಲ್‌ರವರು ಗುಲ್ಬರ್ಗಾದ ಗ್ರಾಮೀಣ ಪ್ರದೇಶದ ಮತಕ್ಷೇತ್ರದಿಂದ ಬರುತ್ತಾರೆ. ಈ ಸಲ ಎಷ್ಟು ಜನ ಎಸಿ ಆಗಿದ್ದಾರೆ, ಎಷ್ಟು ಜನ ಎಸ್‌ಡಿಎ ಗಳಾಗಿದ್ದಾರೆ, ಎಷ್ಟು ಜನ ಎಫ್‌ಡಿಎ ಗಳಾಗಿದ್ದಾರೆ, ಎಷ್ಟು ಜನ ಶಿಕ್ಷಕರಾಗಿದ್ದಾರೆ ಎಂಬ ಬಗ್ಗೆ ಅವರೇ ಅಂಕಿ-ಅಂಶಗಳನ್ನು ಕೊಡಲಿ. ನಮ್ಮ ಸರ್ಕಾರದ ಅವಧಿಯಲ್ಲಿ ಎಷ್ಟು ನೇಮಕಗಳಾಗಿವೆ, ಅವರ ಸರ್ಕಾರ ಇದ್ದಾಗ ಎಷ್ಟು ನೇಮಕಾತಿಗಳಾಗಿತ್ತು, 371(ಜೆ) ಮೀಸಲಾತಿ ಆಗುವುದಕ್ಕೆ ಮುಂಚೆ ಮತ್ತು ಈಗ ಎಷ್ಟಾಗಿದೆ ಎಂಬುದನ್ನು ಅವರೇ ಹೋಲಿಕೆ ಮಾಡಲಿ ಗೊತ್ತಾಗುತ್ತದೆ. ನಾವೆಲ್ಲವನ್ನೂ ಮಾಡಿಬಿಟ್ಟಿದ್ದೇವೆ ಎಂದು ಹೇಳುತ್ತಿಲ್ಲ. There were teething problems. ಅಂಬೆಗಾಲು ಇಡುತ್ತಿದ್ದೆವು. ಈಗ ಸ್ವಲ್ಪ ಸರಿ ಆಗುತ್ತಿದೆ. ಅನುದಾನದ ಬಳಕೆ ಮತ್ತು ಹುದ್ದೆಗಳಿಗೆ ಸಂಬಂಧಪಟ್ಟಂತೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದೇವೆ.

**ಶ್ರೀ ಅಮರನಾಥ್ ಪಾಟೀಲ್**:- ನಾನು ಮಾನ್ಯ ಪ್ರಿಯಾಂಕ ಖರ್ಗೆ ಅವರ ಬಗ್ಗೆ ಆಪಾದನೆ ಮಾಡುತ್ತಿಲ್ಲ. Counter allegation ಮಾಡುತ್ತಿಲ್ಲ. 2014ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕ್ಯಾಬಿನೆಟ್ ಮೀಟಿಂಗ್ ಮಾಡಿ, 2015ರ ಜೂನ್ ಒಳಗೆ 50 ಸಾವಿರ ಹುದ್ದೆಗಳನ್ನು ಹುದ್ದೆವಾರು-ವೃಂದವಾರು ಐಡೆಂಟಿಫೈ ಮಾಡುತ್ತೇವೆ, ಆ ವರ್ಷವೇ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು.

**Sri PRIYANKA KHARGE:** The intention of the government is not that.

**ಶ್ರೀ ಅಮರನಾಥ ಪಾಟೀಲ್**:- ನೀವು ಆ ಭಾಗದಲ್ಲಿ active ಆಗಿರುತ್ತೀರಿ. ಅದರಲ್ಲಿ ಎರಡು ಮಾತಿಲ್ಲ. ಕಳೆದ ಮೂರ್‍ನಾಲ್ಕು ವರ್ಷಗಳಿಂದ, ಹುದ್ದೆವಾರು-ವೃಂದವಾರು ಐಡೆಂಟಿಫಿಕೇಷನ್ ಮಾಡುತ್ತಿದ್ದೀರಾ ಎಂದು ಕೇಳುತ್ತಿದ್ದ ಪ್ರಶ್ನೆಗೆ ಇದುವರೆಗೂ ಉತ್ತರ ಕೊಟ್ಟಿಲ್ಲ. ಹುದ್ದೆಗಳನ್ನು ತುಂಬದೇ ಇರುವುದರಿಂದ ಯಾವ ವೇಗದಲ್ಲಿ ಅಭಿವೃದ್ಧಿ ಆಗಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಪಿಯು ಮಟ್ಟದಲ್ಲಿ ಯಾವರೀತಿ ಫಲಿತಾಂಶಗಳು ಬರುತ್ತಿವೆ ಎನ್ನುವುದು ಗೊತ್ತಿದೆ. ನಮ್ಮ ಕಾಮಗಾರಿಗಳು ಯಾವ ವೇಗದಲ್ಲಿ ಆಗುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ತೊಂದರೆ ಆಗುತ್ತಿದೆ. ಹುದ್ದೆಗಳನ್ನು ಆದಷ್ಟು ಬೇಗ ತುಂಬಬೇಕು ಎಂದು ಕೇಳುತ್ತಿದ್ದೇವೆ.

**ಶ್ರೀ ಪ್ರಿಯಾಂಕ ಖರ್ಗೆ**:-ಹುದ್ದೆಗಳನ್ನು ತುಂಬುವ ಸಂಬಂಧ ಮೊದಲೇನು ನಿಯಮಗಳು ಕಠಿಣವಾಗಿತ್ತೋ ಅವುಗಳನ್ನು ಈಗ ಸರಳೀಕರಣ ಮಾಡಲಾಗಿದೆ. ಮುಂಚೆ ಗವರ್ನರ್ ತನಕ ಹೋಗಿ ಬರಬೇಕಾಗಿತ್ತು. ನಾವು ಈಗ ಸರಳೀಕರಣ ಮಾಡಿದ್ದೇವೆ. I invite her (Smt.Tharaanooradha) to Gulbarga to see the development that has

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

taken place under Article 371J. ಮಾನ್ಯ ತಾರಾರವರು ಮಾನ್ಯ ಅಮರನಾಥ ಪಾಟೀಲ್‌ರವರ ಜೊತೆಯಲ್ಲೇ ಹೋಗಿ ನೋಡಲಿ. ನಮ್ಮ ಜೊತೆ ಬಂದರೆ ನಿರ್ದಿಷ್ಟವಾಗಿ ಕೆಲವನ್ನು ಮಾತ್ರ ತೋರಿಸುತ್ತೀರಿ ಎಂದು ಹೇಳಬಹುದು. 371(ಜೆ) ಅಡಿಯಲ್ಲಿ ಏನೇನು ಮಾಡಿದ್ದೇವೆ ಎಂಬುದನ್ನು ದಯವಿಟ್ಟು ತೋರಿಸಿ. 371(ಜೆ) ಯಿಂದ ಏನೇನು ಲಾಭವಾಗಿದೆಯೋ ಅದನ್ನು ನೀವು ಒಪ್ಪುತ್ತಿಲ್ಲ.

**ಶ್ರೀ ರಾಮಚಂದ್ರಗೌಡ**:- 371(ಜೆ) ಸಂಬಂಧ ಕೋರ್ಟ್‌ನಲ್ಲಿ ಸ್ಟೇ ಇತ್ತು ಅಲ್ಲವೇ?

**ಶ್ರೀ ಪ್ರಿಯಾಂಕ ಖರ್ಗೆ:-** ಹುಬ್ಬಳ್ಳಿ ಕೋರ್ಟ್‌ನಲ್ಲಿ ಅದು ಇತ್ತು, ಈಗ ಕ್ಲಿಯರ್ ಆಗಿದೆ. ಮಾನ್ಯ ಅಮರನಾಥ್ ಪಾಟೀಲ್‌ರವರು ಹೊರಗೆ ಒಪ್ಪದೇ ಇದ್ದರೂ 371(ಜೆ) ಬಂದಿದ್ದರಿಂದ ಆಗಿರುವ ಅಭಿವೃದ್ಧಿಯನ್ನು ಮನಸ್ಸಿನಲ್ಲಾದರೂ ಒಪ್ಪಿಕೊಳ್ಳುತ್ತಾರೆ. ಆ ವಿಷಯವನ್ನು ಹೇಳುವುದಕ್ಕೆ ಬಹುಶಃ ಅವರಿಗೆ ಮುಜುಗರ ಆಗಬಹುದು, ಅಂಥದ್ದನ್ನು ಹೇಳಬೇಡಿ ಎಂದು ಅವರ ಪಕ್ಷದವರು ತಿಳಿಸಿರಬಹುದು.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇ ಬೇರೆ, ಮಾನ್ಯ ಸಚಿವರು ಹೇಳುತ್ತಿರುವುದೇ ಬೇರೆ.

**Sri PRIYANKA KHARGE:** I invite the Hon'ble Member (Sri Amaranath Patil) to come and see the development that has taken place under Article 371J. ಫಲಾನುಭವಿಗಳನ್ನೂ ಕೂಡ ಬಂದು ಭೇಟಿ ಆಗಬಹುದು.

**ಶ್ರೀಮತಿ ತಾರಾಅನೂರಾಧ**:-ಮಾನ್ಯ ಸಭಾಪತಿಯವರೇ, 371(ಜೆ) ಬಗ್ಗೆ ಅಥವಾ ಅಭಿವೃದ್ಧಿ ಬಗ್ಗೆ ನಮಗೆ ಕಿಂಚಿತ್ತೂ ಸಂಶಯ ಇಲ್ಲ. ಅಭಿವೃದ್ಧಿ ಆಗಿದೆ. ಮಾನ್ಯ ಪ್ರಿಯಾಂಕ ಖರ್ಗೆಯವರೇ ಹೇಳಿದ ಹಾಗೆ, 2014ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕ್ಯಾಬಿನೆಟ್ ಮಾಡಿದಾಗ 50 ಸಾವಿರ ಹುದ್ದೆಗಳನ್ನು ಸೃಷ್ಟಿ ಮಾಡಿ 2015ರಲ್ಲಿ ಪೂರ್ತಿ ಭರ್ತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ನಾಲ್ಕು ವರ್ಷಗಳಲ್ಲಿ 15,993 ಹುದ್ದೆಗಳು ಭರ್ತಿಯಾಗಿವೆ ಎಂದು ರಾಜ್ಯಪಾಲರಿಂದ ಹೇಳಿಸಿದ್ದಾರೆ. ಇದನ್ನು ನಾವು ಬರೆದುಕೊಟ್ಟಿದ್ದಲ್ಲ. 1 ವರ್ಷದಲ್ಲಿ 30 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳಿದವರು 4 ವರ್ಷಗಳಲ್ಲಿ ಕೇವಲ 18 ಸಾವಿರ ಹುದ್ದೆಗಳನ್ನಷ್ಟೇ ಭರ್ತಿ ಮಾಡಿದ್ದಾರೆ.

**ಶ್ರೀ ಅಮರನಾಥ ಪಾಟೀಲ್**:- ಇನ್ನೊಂದು ವಿಷಯ ಎಂದರೆ, ಆ ಭಾಗದ ಹುದ್ದೆಗಳನ್ನು ತುಂಬುವಾಗ ಬೇರೆ ಪ್ರದೇಶದ ಅಭ್ಯರ್ಥಿಗಳಿಗೂ ಅಲ್ಲಿ ಅವಕಾಶ ನೀಡುವ option ಇಟ್ಟಿದ್ದೀರಿ, ಯಾರು ಬೇಕಾದರೂ ಅಲ್ಲಿ ಬರಬಹುದು, join ಆಗಬಹುದು ಎಂದು ಹೇಳುತ್ತಿದ್ದೀರಿ. ಹೀಗೆ ಮಾಡುತ್ತಿರುವುದರಿಂದ ನ್ಯಾಯಯುತವಾಗಿ ಸ್ಥಳೀಯರಿಗೆ ಸಿಗಬೇಕಾದ ಅವಕಾಶಗಳು ಸಿಗದೇ ಅವರು ಅವಕಾಶ ವಂಚಿತರಾಗುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧ**:- ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದಲ್ಲಿ, ಗ್ರಾಮಾಂತರ ಪ್ರದೇಶದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು 663 ವಸತಿ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ ಶಾಲೆಗಳ ಪರಿಸ್ಥಿತಿ ನಗರದಲ್ಲೇ ಯಾವರೀತಿ ಇದೆ ಎನ್ನುವುದು ನಮಗೆ ಗೊತ್ತಿದೆ. ಎಸ್‌ಸಿ/ಎಸ್‌ಟಿ ಮಕ್ಕಳಿಗೆ ಇರುವ ಹಾಸ್ಟೆಲ್‌ಗಳಿಗೆ ಸಂಬಂಧಪಟ್ಟಂತೆ, ಅಲ್ಲಿದ್ದ ದಿಂಬು, ಹಾಸಿಗೆ ಸಂಬಂಧ ಏನೇನು ಅವ್ಯವಹಾರವಾಯಿತು, ಎಷ್ಟು ಗಲಾಟೆ ಆಯಿತು, ಅವು ಎಷ್ಟು ಅಧೋಗತಿಯ್ಲಲಿವೆ ಎನ್ನುವುದು ನಮಗೆ ಗೊತ್ತಿದೆ. ಶೌಚಾಲಯದ ಸೌಕರ್ಯಗಳಿಲ್ಲ, ಮೂಲಭೂತ ಸೌಕರ್ಯಗಳಿಲ್ಲ ಎಂಬ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹೆಣ್ಣು ಮಕ್ಕಳ ಹಾಸ್ಟೆಲ್ ಪರಿಸ್ಥಿತಿಯಂತೂ ಅಧೋಗತಿಯಲ್ಲಿದೆ. ನಗರ ಪ್ರದೇಶಗಳಲ್ಲೇ ಇಂತಹ ಸ್ಥಿತಿ ಇರುವಾಗ ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಿತಿ ಹೇಗಿರಬಹುದು ಎಂಬುದನ್ನು ನಾವು ಕಲ್ಪನೆ ಮಾಡಿಕೊಳ್ಳಬಹುದು. ಕೆಲವು ಕಡೆ ಮಹಿಳಾ ವಸತಿ ಗೃಹಗಳಿಗೆ ಕಾಂಪೌಂಡ್‌ಗಳೇ ಇಲ್ಲ. ಮಹಿಳಾ ವಸತಿ ಗೃಹಗಳಿಗೆ ರಕ್ಷಣೆ ಇರಬೇಕು. ನಾವು ಮಹಿಳಾ ರಕ್ಷಣೆ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ಆದರೆ, ಮಹಿಳಾ ವಸತಿಗೃಹಗಳಿಗೆ ಕಾಂಪೌಂಡ್ ಇಲ್ಲ ಮತ್ತು ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಆದರೆ ಬಜೆಟ್ ಭಾಷಣದಲ್ಲಿ, ರೂ. 800 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಿದ್ದೇವೆ ಎಂದು ಹೇಳುತ್ತಾರೆ. ಅದು ಯಾವ ಭಾಗದಲ್ಲಿ ಅಭಿವೃದ್ಧಿಗೊಳಿಸಿದ್ದೀರಿ ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ಕೊಡಬೇಕು.

24ನೇ ಪಾಯಿಂಟ್‌ನಲ್ಲಿ, " ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ರೂ. 2814 ಕೋಟಿಗಳ ವೆಚ್ಚದಲ್ಲಿ "ವಿದ್ಯಾಸಿರಿ"ಯ ಹೆಸರಿನಲ್ಲಿ ವಿದ್ಯಾರ್ಥಿ ವೇತನವನ್ನು ನೀಡುತ್ತಿದ್ದು, 19 ಲಕ್ಷ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ ಎಂದು ಸರ್ಕಾರ ಹೇಳುತ್ತಿದೆ. ಇದರ ಬಗ್ಗೆ ಕೂಡ ನಿಜವಾದ ಮಾಹಿತಿ ನೀಡಬೇಕು. ಅದೇರೀತಿ, ಸ್ವಯಂ ಉದ್ಯೋಗಕ್ಕೆ ಸಾಲ, ಗಂಗಾಕಲ್ಯಾಣ, ವಿದ್ಯಾಸಿರಿ ಅಡಿಯಲ್ಲೇ ಅರಿವು ಶೈಕ್ಷಣಿಕ ಸಾಲ, ಈ ಯೋಜನೆಗಳಲ್ಲಿ ಸುಮಾರು 1 ಕೋಟಿ 50 ಲಕ್ಷ ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ ಎಂದು ಸರ್ಕಾರ ಹೇಳಿದೆ. ರೂ.2814 ಕೋಟಿ ಮೀಸಲಿಟ್ಟಿದ್ದರೂ ಫಲಾನುಭವಿಗಳ ಸಂಖ್ಯೆ ಇಷ್ಟು ಕಡಿಮೆ ಇದೆ ಎಂಬುದನ್ನು ಗಮನಿಸಬೇಕು.

ರಾಜ್ಯಪಾಲರ ಭಾಷಣದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಆಲೋಚನೆಗಳು ಇಲ್ಲ, ಮಹಿಳೆಯರಿಗೆ ಯಾವುದೇ ರೀತಿಯ ಕಾಳಜಿಯ ಮಾತುಗಳನ್ನು ಹೇಳದೇ ಇರುವುದು ಕಂಡುಬರುತ್ತದೆ. ಆದರೆ "ಮಾತೃಪೂರ್ಣ" ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆ ಇತರ ಯೋಜನೆಗಳ ಬಗ್ಗೆಯೂ ಪ್ರಸ್ತಾಪ ಮಾಡಬೇಕಿತ್ತು. ಮಾನ್ಯ ಯಡಿಯೂರಪ್ಪನವರ ಸರ್ಕಾರ ಇದ್ದಾಗ "ಮಡಿಲು ಯೋಜನೆ" ಎಂದು ಪ್ರಾರಂಭ ಮಾಡಿ ಬಾಣಂತಿಯರಿಗೆ 'ಮಡಿಲು ಕಿಟ್' ಕೊಡುತ್ತಿದ್ದರು. 'ಮಾತೃಪೂರ್ಣ ಯೋಜನೆ' ಗರ್ಭಿಣಿಯರಿಗೆ ಸಂಬಂಧಪಟ್ಟಂತೆ ಇದೆ. ಈ ಯೋಜನೆಗೂ ಕೇಂದ್ರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸರ್ಕಾರ ಬಹಳಷ್ಟು ಅನುದಾನ ಕೊಡುತ್ತಿದೆ. 2017ರಲ್ಲಿ ಈ ಮಾತೃಪೂರ್ಣ ಯೋಜನೆ ತಂದಿದ್ದು, ಬಾಣಂತಿಯರಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ಪೌಷ್ಠಿಕಾಂಶಯುಕ್ತ ಬಿಸಿಯೂಟ ಒದಗಿಸಲಾಗುತ್ತಿದೆ. 8.31 ಲಕ್ಷ ಮಹಿಳೆಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಹೇಳಲಾಗಿದೆ. ಇದರಲ್ಲಿ "ಮಡಿಲು" ಯೋಜನೆ ಕೂಡ ಸೇರಿಕೊಂಡಿದೆ. ಇಷ್ಟೂ ಮಹಿಳೆಯರು ಪ್ರಯೋಜನ ಪಡೆಯುತ್ತಿರುವುದು ಸತ್ಯವಾಗಿದ್ದರೆ ನಾನು ಒಬ್ಬ ಮಹಿಳೆಯಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ.

ಮುಂದುವರೆದು, ಮುಖ್ಯಮಂತ್ರಿಗಳ 'ಕೌಶಲ್ಯ ಕರ್ನಾಟಕ ಯೋಜನೆ' ಅಡಿ, 5 ಲಕ್ಷ ಯುವ ಜನತೆಗೆ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ತರಬೇತಿ ನೀಡುವ ಗುರಿ ಹೊಂದಿದೆ ಎಂದು ಹೇಳಿದ್ದಾರೆ. ಕೇವಲ ಗುರಿಯನ್ನಷ್ಟೇ ಹೊಂದಿದೆ, ಸಾಧಿಸುವ ನಿಟ್ಟಿನಲ್ಲಿ ಈ ಸಂಖ್ಯೆಯ ಹತ್ತಿರ ಕೂಡ ಬಂದಿಲ್ಲ. ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ 2013-14ರಲ್ಲಿ, ಕೌಶಲ್ಯಾಭಿವೃದ್ಧಿಯ ತರಬೇತಿ ಪಡೆದಿರುವಂತಹ ಅಭ್ಯರ್ಥಿಗಳ ಸಂಖ್ಯೆ 8847. 2014-15ರಲ್ಲಿ 1189 ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆ. 2015-16 ರಲ್ಲಿ ಯಾರೂ ತರಬೇತಿ ಪಡೆದಿಲ್ಲ. 2016-17 ರಲ್ಲಿ 15365 ಜನ ಅಭ್ಯರ್ಥಿಗಳು ತರಬೇತಿ ಪಡೆದಿದ್ದು 2013 ರಿಂದ 2017ರವರೆಗೆ ಒಟ್ಟು 25401 ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆ. ಆದರೆ ಸರ್ಕಾರ ರಾಜ್ಯಪಾಲರಿಂದ, 7.63 ಲಕ್ಷ ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆ ಎಂದು ಹೇಳಿಸಿದ್ದಾರೆ. ಇದನ್ನು ಯಾವ ಲೆಕ್ಕದ ಮೇಲೆ ಹೇಳುತ್ತಿದ್ದಾರೋ ಅರ್ಥವಾಗುತ್ತಿಲ್ಲ, ಅಂಕಿ-ಅಂಶಗಳೇ ಗೊತ್ತಾಗುತ್ತಿಲ್ಲ. ಮತ್ತೆ, 74476 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದ್ದೇವೆ ಎಂದು ಹೇಳಿದ್ದಾರೆ. ಈ ಅಂಕಿಗಳೂ ಕೂಡ ಸರಿಯಾಗಿಲ್ಲ. ನಾನು ಈ ಅಂಕಿ-ಅಂಶಗಳ ಮಾಹಿತಿ ಕಳುಹಿಸಿಕೊಡುತ್ತೇನೆ.

**ಶ್ರೀ ಪ್ರಿಯಾಂಕ ಖರ್ಗೆ:-** ತಮಗೆ ಈ ಅಂಕಿ-ಅಂಶಗಳ ಮಾಹಿತಿ ಎಲ್ಲಿಂದ ಸಿಕ್ಕಿದೆ ಎಂದು ದಯವಿಟ್ಟು ಹೇಳಬೇಕು. ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು.

(ಮುಂದು . . .)

153/20-2-2018/ಡಿಎಸ್-ಎಕೆ/6.20

**ಶ್ರೀ ಪ್ರಿಯಾಂಕ ಖರ್ಗೆ**(ಮುಂದು):-

ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಇಲಾಖೆಯಲ್ಲೇ 'ಯುವ ಯುಗ' ಎನ್ನುವ ಕಾರ್ಯಕ್ರಮ ಇದೆ. ನಾವು emerging technologies ನಲ್ಲಿ ಉದ್ಯಮ ಶೀಲ......

**ಶ್ರೀಮತಿ ತಾರಾಅನೂರಾಧ:-** ಸರ್, ಇದು ಕೌಶಲ್ಯ ಅಭಿವೃದ್ಧಿ ಯೋಜನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಿಯಾಂಕ ಖರ್ಗೆ**:- ಮಾನ್ಯ ಸಭಾಪತಿಯವರೇ, ಅಲ್ಲೇ ನಮ್ಮ ಟಾರ್ಗೆಟ್ 1.10 lakh ಇದೆ, where we have recently finished training to 8000 persons. ನಾನು ಬರೀ ನಮ್ಮ ಇಲಾಖೆಯ ಬಗ್ಗೆ ಹೇಳುತ್ತಿದ್ದೇನೆ. ಕೇವಲ ಈ ಯೋಜನೆಯಲ್ಲಿ ಮಾತ್ರ. ಮಾನ್ಯ ಸದಸ್ಯರಿಗೆ ಮಾಹಿತಿ ಕೊಡುತ್ತಿದ್ದೇನೆ. The highest target given by Skilling Department is for Karnataka. ಅವರಿಗೆ ಕೇಂದ್ರ ಸರ್ಕಾರದಲ್ಲಿ ಮಾಡುವುದಕ್ಕಾಗುತ್ತಿಲ್ಲ. ನಮ್ಮ ಟಾರ್ಗೆಟ್ ಕೂಡ ಹೆಚ್ಚು ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಯಾವ ಅಂಕಿ ಅಂಶಗಳ ಬಗ್ಗೆ ಕೇಳುತ್ತಿದ್ದಾರೆಂದು ನಮಗೆ ಮಾಹಿತಿ ಕೊಡಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಚಿವರೇ, ಅವರು ರಾಜ್ಯಪಾಲರ ಭಾಷಣದಲ್ಲಿರುವುದನ್ನು ಓದುತ್ತಿದ್ದಾರೆ.

**Sri PRIYANKA KHARGE:** There it is 3.27. I am asking the statistics that she (Smt. Tharaanooradha) spoke about.

**Capt. GANESH KARNIK:** Exactly, it is written by you.

**Sri PRIYANKA KHARGE:** 25,000 ಎಂದು ಹೇಳಿದ್ದಾರಲ್ಲಾ ಎಲ್ಲಿಂದ ಹೇಳುತ್ತಿದ್ದಾರೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಅದನ್ನೇ ಅವರು ಹೇಳುತ್ತಿದ್ದಾರೆ, ತಾವು ಕೇಳಿಸಿಕೊಳ್ಳಲಿಲ್ಲ.

**ಶ್ರೀ ಪ್ರಿಯಾಂಕ ಖರ್ಗೆ**:- 2013-14ನೇ ಸಾಲಿನಿಂದ ಅವರು ಹೇಳುತ್ತಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ರಾಜ್ಯಪಾಲರ ಭಾಷಣದಲ್ಲಿ ಪುಟ 17 ಪ್ಯಾರ 29 ಅನ್ನು ಅವರು ಓದಿರುವಂಥದ್ದು.

**Sri PRIYANKA KHARGE:** What does it state?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಇದನ್ನು ರಾಜ್ಯಪಾಲರು ಹೇಳಿರುವಂಥದ್ದು. 'ಕೌಶಲ್ಯಾಭಿವೃದ್ಧಿ ಒದಗಿಸುವುದಕ್ಕಾಗಿ ಇಲ್ಲಿಯವರೆಗೆ 7.63 ಲಕ್ಷ ಅಭ್ಯರ್ಥಿಗಳು' ಎಂದು ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri PRIYANKA KHARGE:** The Hon'ble Member is missing my point. I am not talking about that. Madam (Smt. Tharaanooradha) spoke about some figure of 25,000. I am just asking, from where she is quoting those figures. I will give a clarification but I am not debating that point.

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೇ, ಪ್ಯಾರ 54 ರಲ್ಲಿ '2014-19ರ ಕೈಗಾರಿಕಾ ನೀತಿ' ಯನುಸಾರ, 15 ಲಕ್ಷ ಜನರಿಗೆ ಉದ್ಯೋಗವನ್ನು ಸೃಜಿಸುವ ಗುರಿ ಹೊಂದಿದೆ ಎಂದು ಹೇಳುತ್ತಿದ್ದಾರೆ. ಅವರೇ ಮತ್ತೆ ರಾಜ್ಯಪಾಲರ ಭಾಷಣದಲ್ಲಿ 'ಕಳೆದ ನಾಲ್ಕುವರೆ ವರ್ಷಗಳಲ್ಲಿ 3.39 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಮತ್ತು 9.45 ಲಕ್ಷ ವ್ಯಕ್ತಿಗಳಿಗೆ ಸಮರ್ಥ ಉದ್ಯೋಗಗಳನ್ನು ಒದಗಿಸುವ ನಿಟ್ಟಿನಲ್ಲಿ ವಿವಿಧ ರಾಜ್ಯ ಅನುಮೋದನಾ ಸಮಿತಿಗಳಿಂದ 1,869 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ' ಎಂದು ಹೇಳಿಸುತ್ತಾರೆ. 2014 ರಿಂದ 2019 ರವರೆಗೆ ಸರ್ಕಾರ ನೀತಿ ಮಾಡುತ್ತದೆ. 15 ಲಕ್ಷ ಜನರಿಗೆ  ಉದ್ಯೋಗವನ್ನು ಸೃಷ್ಟಿಸುವ ಗುರಿ ಹೊಂದಿದೆ ಎಂದು ಹೇಳುತ್ತಿದ್ದಾರೆ. ಮತ್ತೆ ಅವರೇ ಭಾಷಣದಲ್ಲಿ ಹೇಳಿಸುತ್ತಾರೆ, 9.45 ಲಕ್ಷ ವ್ಯಕ್ತಿಗಳಿಗೆ ಉದ್ಯೋಗಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಅನುಮೋದನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಇಲ್ಲಿ ಮಾಹಿತಿ ಇಲ್ಲ. ಇಷ್ಟು ಜನಕ್ಕೆ ಅನುಮೋದನೆ ನೀಡಲಾಗಿದೆ, ಆದರೆ ಉದ್ಯೋಗ ಕೈಗಾರಿಕಾ ನೀತಿಯಲ್ಲಿ ಸೃಷ್ಟಿಯಾಗಿದೆಯೇ ಎಂಬುದರ ಬಗ್ಗೆ ಸ್ಪಷ್ಟನೆ ನೀಡಿಲ್ಲ.

ಮಾನ್ಯ ಸಭಾಪತಿಯವರೇ, ಪೊಲೀಸ್ ಇಲಾಖೆಯ ಬಗ್ಗೆ ಮಾನ್ಯ ಲಹರ್ ಸಿಂಗ್‌ರವರು ಬೆಳಕನ್ನು ಚೆಲ್ಲಿದರು. 4ನೇ ಪ್ಯಾರದಲ್ಲಿ, ಪೊಲೀಸ್ ಇಲಾಖೆಗೆ 232 ವಸತಿ quarters ಗಳು, 6 ಜಿಲ್ಲಾ ಪೊಲೀಸ್ ತರಬೇತಿ ಕೇಂದ್ರಗಳು, 10 ಪೊಲೀಸ್ ಉಪಠಾಣೆಗಳು, 10 barracks, 6 ಶಸ್ತ್ರಾಗಾರಗಳು, ಈ ರೀತಿ ಹಲವಾರು ಕಲ್ಯಾಣ ಯೋಜನೆಗಳನ್ನು ಪೊಲೀಸ್ ಇಲಾಖೆಗೆ ಕೊಟ್ಟಿದ್ದಾರೆ. ನಾನು ನಿಜವಾಗಿಯೂ ಹೇಳುತ್ತಿದ್ದೇನೆ, ಬೆಂಗಳೂರಿನಂತಹ ನಗರದಲ್ಲಿ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಪೊಲೀಸರಿಗೆ ಪ್ರತ್ಯೇಕವಾದ ಕೊಠಡಿ, ಪ್ರತ್ಯೇಕವಾದ ಶೌಚಾಲಯವೇ ಇಲ್ಲ. ಪುರುಷರು ಮತ್ತು ಮಹಿಳೆಯರು ಒಂದೇ ಶೌಚಾಲಯಕ್ಕೆ ಹೋಗಬೇಕು. ಅಕಸ್ಮಾತ್ ಬಟ್ಟೆ ಬದಲಾಯಿಸಬೇಕೆಂದರೆ ಅವರಿಗೊಂದು ಕೊಠಡಿ ಕೂಡ ಇಲ್ಲ. ಈ ರೀತಿ ಮೂಲಭೂತ ಸೌಕರ್ಯಗಳು ಬೆಂಗಳೂರಿನಲ್ಲಿಯೇ ಇಲ್ಲ. ಇನ್ನು ಪೊಲೀಸ್ ವಸತಿ ಕ್ವಾರ್ಟರ್ಸ್‌ಗಳಿಗೆ ಹೋದರೆ ಅಲ್ಲಿಯ ಕಟ್ಟಡಗಳು ಹೇಗೆ ಬಿದ್ದು ಹೋಗುತ್ತಿವೆ ಎಂದರೆ ಪೊಲೀಸ್ ಕುಟುಂಬಗಳು ಅಲ್ಲಿ ಹೇಗೆ ಬದುಕುತ್ತಿವೆ ಎಂಬುದೇ ಗೊತ್ತಿಲ್ಲ. ಅಲ್ಲಿ ಕಟ್ಟಡಗಳು ಬಹಳಷ್ಟು ಅಧೋಗತಿಯಲ್ಲಿವೆ. ಪೊಲೀಸ್ ಠಾಣೆಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ. ಇಂಥವುಗಳನ್ನೆಲ್ಲಾ ನೋಡಬೇಕಾಗುತ್ತದೆ. ಇಷ್ಟೊಂದು ಕಲ್ಯಾಣ ಯೋಜನೆಗಳಿಗೆ ಹಣ ಇಟ್ಟಿರುವುದನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿಲ್ಲ. ಅವರು ತಪ್ಪಿಸಿಕೊಂಡರು. ಇಷ್ಟೊಂದು ಕಲ್ಯಾಣಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಮಹಿಳಾ ಪೋಲೀಸರಿಗೆ ಮತ್ತು ವಸತಿ ಕಟ್ಟಡಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಏನು ಮಾಡುತ್ತಿದ್ದಾರೆ ಎಂಬುದನ್ನು ಹೇಳಬೇಕು.

ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ 3ನೇ ಪ್ಯಾರದಲ್ಲಿ, "ಸರ್ಕಾರವು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಹಲವಾರು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿದೆ ಹಾಗೂ ಕೋಮು ಸೌಹಾರ್ದ ಮತ್ತು ಸಾರ್ವಜನಿಕರ ಸುವ್ಯವಸ್ಥೆಯನ್ನು ಖಾತರಿಪಡಿಸಿದೆ" ಎಂದು ಹೇಳಿದ್ದಾರೆ. ಮಾನ್ಯ ಲೆಹರ್ ಸಿಂಗ್‌ರವರು ಜಾತಿ, ಮತ, ಧರ್ಮಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಕಾನೂನು ಸುವ್ಯವಸ್ಥೆಗಳ ಬಗ್ಗೆ ಮಾತನಾಡಬೇಕಾದರೆ ಖಂಡಿತವಾಗಿಯೂ ಇತ್ತೀಚಿನ ಒಂದು ಘಟನೆಯನ್ನು ನಾನು ಹೇಳಲೇಬೇಕಾಗುತ್ತದೆ. ಅದನ್ನು ಹೇಳದಿದ್ದರೆ ಪೂರ್ಣಗೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಮಾನ್ಯ ಗೃಹ ಮಂತ್ರಿಗಳು ಮಾತನಾಡುವಾಗ ದೊಡ್ಡವರ ಮಕ್ಕಳು, ದೊಡ್ಡವರ ಮಕ್ಕಳು ಎಂದು ಹೇಳಿದರು. ದೊಡ್ಡವರ ಮಕ್ಕಳು ಎಂದರೆ ಏನು ಎಂಬುದು ನನಗೆ ಅರ್ಥವಾಗಲಿಲ್ಲ. ದೊಡ್ಡವರ ಮಕ್ಕಳು ಹೋಗುವಂತಹ ಸ್ಥಳ ಎಂದು ಮಾನ್ಯ ಸಚಿವರು ಹೇಳಿದರು. ದೊಡ್ಡವರು, ಚಿಕ್ಕವರು ಎಂದರೆ ಯಾರು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಹಾಗಾದರೆ ದುಡ್ಡು ಇರುವವರೆಲ್ಲಾ ದೊಡ್ಡವರೆ? ದುಡ್ಡು ಇಲ್ಲದಿದ್ದವರು ಚಿಕ್ಕವರೆ? ಯಾವುದರಲ್ಲಿ ದೊಡ್ಡವರು, ಯಾವ ರೀತಿಯಲ್ಲಿ ಅವರನ್ನು ದೊಡ್ಡವರು ಎಂದು ಕರೆಯುತ್ತಾರೆ, ಗುಣದಲ್ಲಿ ದೊಡ್ಡವರೆ? ನಮ್ಮಲ್ಲಿ ಏನು ಹೇಳುತ್ತಿದ್ದರು ಎಂದರೆ ಗುಣದಲ್ಲಿ ಯಾರು ಒಳ್ಳೆಯವರು ಇರುತ್ತಾರೆಯೋ ಅವರನ್ನು ದೊಡ್ಡವರು ಎಂದು ಹೇಳುತ್ತೇವೆ. ದುಡ್ಡಿನಲ್ಲಿ ಅಳೆಯುವ ದೊಡ್ಡವರು, ಚಿಕ್ಕವರು ಎಂದು ಇದೆಯಲ್ಲಾ ಅದು ಬಹಳ ಆತಂಕಕಾರಿಯಾದ ಬೆಳವಣಿಗೆ. ಅಂತಹ ಮಾತುಗಳು ಮಾನ್ಯ ಗೃಹ ಮಂತ್ರಿಗಳ ಬಾಯಲ್ಲಿ ಬರಬಾರದಾಗಿತ್ತು. ಮಾನ್ಯ ಲೆಹರ್ ಸಿಂಗ್‌ರವರು ಡ್ರಗ್ಸ್ ಬಗ್ಗೆ ಚೆನ್ನಾಗಿ ಮಾತನಾಡಿದರು. ನಾನು ಕಾನೂನು ಸುವ್ಯವಸ್ಥೆಯ ಬಗ್ಗೆ ಮಾತನಾಡಬೇಕಾದರೆ ಡ್ರಗ್ಸ್‌ಗಳು ಬಹಳ ಸುಲಭವಾಗಿ ಸಿಗುತ್ತಿದೆ ಎಂದು ಅವತ್ತೆ ಹೇಳಿದ್ದೆ. ಎಷ್ಟೊಂದು ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ರಾತ್ರಿ ಹೊತ್ತು ಪಾರ್ಟಿಗಳು ನಡೆಯುತ್ತವೆ. ಇನ್ನು ಕೆಲವರು Weekend Party ಗಳನ್ನು ಮಾಡುತ್ತಾ ಫುಟ್‌ಪಾತ್‌ನಲ್ಲಿ ಕುಳಿತಿರುತ್ತಾರೆ. ನಾವು ಯುವ ಜನತೆಯನ್ನು ಎಲ್ಲಿಗೆ ತಳ್ಳಿದ್ದೇವೆ ಎಂಬುದನ್ನು ನೋಡುತ್ತಿದ್ದೇವೆ. ಇಲ್ಲಿ ತಂದೆ-ತಾಯಿಗಳ ಜವಾಬ್ದಾರಿಯ ಬಗ್ಗೆ ಮಾತನಾಡುತ್ತಾರೆ. ನಾವೆಲ್ಲಾ ಸಣ್ಣವರಿದ್ದಾಗ ಅಥವಾ ನಮ್ಮ ತಾಯಿಯವರು ಸಣ್ಣವರಿದ್ದಾಗ ಅವರ ತಂದೆಯವರು ದುಡಿಯುತ್ತಿದ್ದರು. ನಾವು ಸಣ್ಣವರಿದ್ದಾಗ ನಮ್ಮ ತಂದೆಯವರು ಕೆಲಸಕ್ಕೆ ಹೋಗುತ್ತಿದ್ದರು. ನಮ್ಮ ತಾಯಿಯವರು ಮನೆಯಲ್ಲಿ ನೋಡಿಕೊಳ್ಳುತ್ತಿದ್ದರು. ಈಗ ಇರುವ ಪರಿಸ್ಥಿತಿಯಲ್ಲಿ ತಂದೆ-ತಾಯಿ ಇಬ್ಬರು ದುಡಿದರೆ ಮಾತ್ರ ಮಕ್ಕಳಿಗೆ ಒಳ್ಳೆಯ ಭವಿಷ್ಯ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಂದೆ-ತಾಯಿ ಇಬ್ಬರು ದುಡಿಯದಿದ್ದರೆ ಮಕ್ಕಳಿಗೆ ಉತ್ತಮ ಮಟ್ಟದ ಭವಿಷ್ಯ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಆ ನಿಟ್ಟಿನಲ್ಲಿ ಆ ಕಾಲ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟ್ಟದಲ್ಲಿ ನಾವು ಬದುಕುತ್ತಿದ್ದೇವೆ. ಅಂತಹ ನಿಟ್ಟಿನಲ್ಲಿ ತಂದೆ-ತಾಯಿ ಜವಾಬ್ದಾರಿ ಬಗ್ಗೆ ಮಾತನಾಡುತ್ತೇವೆ, ಶಾಲೆಯ ಜವಾಬ್ದಾರಿ ಬಗ್ಗೆ ಮಾತನಾಡುತ್ತೇವೆ, ಆದರೆ ಸರ್ಕಾರದ ಜವಾಬ್ದಾರಿ ಏನಿದೆ ಎಂಬುದನ್ನು ಮರೆತು ಹೋಗಿಬಿಡುತ್ತೇವೆ. ಸರ್ಕಾರದ ಜವಾಬ್ದಾರಿಯ ಬಗ್ಗೆ ನಾವು ಯಾರು ಚಕಾರ ಎತ್ತುವುದಿಲ್ಲ. ಈ ರೀತಿಯಾಗಿ ಗೂಂಡಾಗಿರಿ ಮಾಡಿಕೊಂಡು ಪೋಲೀಸ್ ಠಾಣೆಯಲ್ಲೇ ಅವನಿಗೆ ರಾಜ ಮರ್ಯಾದೆ ಕೊಟ್ಟು ಮಾತನಾಡುತ್ತಾರೆ, ಪೋಲೀಸರು ಅವನನ್ನು ಕರೆದುಕೊಂಡು ಹೋಗಬೇಕಾದರೆ ಜೈಕಾರ ಹಾಕುತ್ತಾರೆ. ಅವನೇನೋ ದೊಡ್ಡ ಘನಂದಾರಿ ಕೆಲಸ ಮಾಡಿರುವ ರೀತಿಯಲ್ಲಿ ಮಾತನಾಡುತ್ತಾರೆ. ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಿಲ್ಲದಿದ್ದಾಗ ತಪ್ಪು ಮಾಡುವುದಕ್ಕೆ ಏಕೆ ಹೆದರಿಕೊಳ್ಳುತ್ತಾನೆ? ರಾಘವೇಂದ್ರ ರಾಜಕುಮಾರ್‌ರವರ ಪುತ್ರ ಗುರು ರವರು ಇದ್ದಾರೆ ಎಂದು ಕೆಲವು ಕಡೆ ಭಾವಚಿತ್ರಗಳು ಬಂದವು. ನಾನು ಈ ಸದನದಲ್ಲಿ ಇದನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಯಾರು ಗಾಯಗೊಂಡಿದ್ದಾರೆ ಅವರು ರಾಘವೇಂದ್ರ ರಾಜಕುಮಾರ್‌ರವರ ಮಗನ ಸ್ನೇಹಿತರು. ರೆಸ್ಟೋರೆಂಟ್‌ನಲ್ಲಿ ಗಲಾಟೆಗಳೆಲ್ಲಾ ಆದಮೇಲೆ ವಿದ್ವತ್‌ರವರು ಗುರು ಹಾಗೂ ಕೆಲವು ಸ್ನೇಹಿತರಿಗೆ ಫೋನ್ ಮಾಡುತ್ತಾರೆ. ರಾಘವೇಂದ್ರ ರಾಜಕುಮಾರ್‌ರವರ ಮಗ ಗುರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಡ್ಮಿಟ್ ಮಾಡಿದ ಮೇಲೆ ಮತ್ತೆ ಈ ಗುಂಪು ಆಸ್ಪತ್ರೆಗೆ ಹೋಗುತ್ತದೆ. 'ನೀನು complaint ಕೊಡಬಾರದು, ನೀವು ಯಾರಿಗೂ complaint ಮಾಡಬಾರದು, ಇದರ ಬಗ್ಗೆ ಪೋಲೀಸ್‌ನವರಿಗೆ ಹೇಳಬಾರದು, ಹೇಳಿದರೆ ನಾವು ಸುಮ್ಮನೆ ಬಿಡುವುದಿಲ್ಲ' ಎಂದು ಈ ಗುಂಪು ಬೆದರಿಕೆ ಹಾಕುತ್ತದೆ. ಅಷ್ಟೆ ಅಲ್ಲ, ಚಿಕಿತ್ಸೆ ಕೊಡುತ್ತಿರುವ ವೈದ್ಯರುಗಳನ್ನು ಕರೆದು ಚಿಕಿತ್ಸೆ ಮಾಡಬೇಡಿ ಎಂದು ಬೆದರಿಕೆ ಹಾಕುತ್ತಾರೆ. ಆಗ ರಾಘವೇಂದ್ರ ರಾಜಕುಮಾರ್ ಮಗ ಗುರು ಮತ್ತು ಅವರ ಸ್ನೇಹಿತರು ಇಲ್ಲ ಇವನು ನಮ್ಮ ಸ್ನೇಹಿತ, ನಾನು ಡಾ:ರಾಜ್‌ಕುಮಾರ್‌ರವರ ಮೊಮ್ಮಗ ಎಂದು ಪರಿಚಯ ಮಾಡಿಕೊಂಡ ಮೇಲೆ ಅಲ್ಲಿ ಸ್ವಲ್ಪ ತಣ್ಣಗಾಗುತ್ತದೆ. ಇವತ್ತು ಕೂಡ ಪುನೀತ್ ರಾಜ್‌ಕುಮಾರ್‌ರವರು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದಾರೆ. ಅವರು ಬಹಳ ನೊಂದುಕೊಂಡು ಕಣ್ಣೀರು ಹಾಕಿಕೊಂಡು ಹೇಳಿದ್ದಾರೆ, ನಿಜವಾಗಿಯೂ ಇಂತಹ ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು ಎಂದು ಅವರು ಬಹಳ ನೊಂದು ನುಡಿದಿದ್ದಾರೆ. ಈ ರೀತಿ ಹಲವಾರು ಪ್ರಕರಣಗಳಿವೆ. ಕಾನೂನು ಸುವ್ಯವಸ್ಥೆಯ ಬಗ್ಗೆ ಮಾತನಾಡಬೇಕೆಂದರೆ ಇಡೀ ದಿನ ಮಾತನಾಡಬಹುದು. ಮಹಿಳೆಯರ ಅತ್ಯಾಚಾರದ ಬಗ್ಗೆ ಮಾತನಾಡಬಹುದು, ಮಕ್ಕಳ ಹಕ್ಕುಗಳ ಬಗ್ಗೆ ಮಾತನಾಡಬಹುದು. ನಿಜವಾಗಿಯೂ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಸೋತಿದೆ, ಸತ್ತಿದೆ ಎನ್ನುವುದರ ಬಗ್ಗೆ ಬಹಳ ಸಾಕ್ಷಿಗಳನ್ನು ಕೊಟ್ಟು ಮಾತನಾಡಬಹುದು.

ಮಾನ್ಯ ಸಭಾಪತಿಯವರೇ, ಬೆಂಗಳೂರು ಅಭಿವೃದ್ಧಿಯ ಬಗ್ಗೆ ರಾಜ್ಯಪಾಲರು ಮಾತನಾಡಿದ್ದಾರೆ. ನಿಜವಾಗಿಯೂ ಇವತ್ತು ಬೆಂಗಳೂರಿನಲ್ಲಿ ೮೦೦ ಕೆರೆಗಳಷ್ಟು ಬತ್ತಿ ಹೋಗಿವೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸಲಿಲ್ಲ. ನೀರಿನ ಸಮಸ್ಯೆ ತೀರಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹದಗೆಟ್ಟಿದೆ. ಬೆಂಗಳೂರಿನಲ್ಲಿ ಕೆರೆಗಳನ್ನು ಉಳಿಸುವ ನಿಟ್ಟಿನಲ್ಲಿ ಸರ್ಕಾರ ಏನಾದರೂ ಮಾಡುತ್ತದೆಂದು ನಾವು ತಿಳಿದುಕೊಂಡಿದ್ದೆವು. ಅದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೇನು ಹೇಳಿಲ್ಲ. ಹೇಳಿದ್ದರೂ ಕೂಡ ಅಂಕಿಅಂಶಗಳನ್ನು ಕೊಟ್ಟಿಲ್ಲ.

ಕೊನೆಯದಾಗಿ, ನನ್ನ ಚಲನಚಿಂತ್ರ ರಂಗದ ಬಗ್ಗೆ ಹೇಳಬಯಸುತ್ತಿದ್ದೇನೆ. ಚಲನಚಿತ್ರ ರಂಗ ಕೂಡ ಸಾಂಸ್ಕೃತಿಯ ಒಂದು ಭಾಗವಾಗಿದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕನ್ನಡ ಚಲನಚಿತ್ರಗಳಿಗೆ ನಿಜವಾಗಿಯೂ ಒಂದು ರೀತಿ ಬೆಂಬಲವಾಗಿ ನಿಂತಿವೆ. ಈ ಸರ್ಕಾರ ಕೂಡ ಹಲವಾರು ಸಹಾಯಗಳನ್ನು ಮಾಡಿವೆ. ಆದರೆ ಬಜೆಟ್‌ನಲ್ಲಾಗಲಿ, ರಾಜ್ಯಪಾಲರ ಭಾಷಣದಲ್ಲಾಗಲಿ ಚಲನಚಿತ್ರಗಳ ಬಗ್ಗೆ ಚಕಾರ ಕೂಡ ಇಲ್ಲ. ಚಲನಚಿತ್ರರಂಗದವರು 75 ವರ್ಷ ಪೂರ್ಣಗೊಳಿಸಿದ ಮೇಲೆ ಅಮೃತ ಭವನದ ಬಗ್ಗೆ ಕನಸು ಕಂಡಿದ್ದೆವು.

(ಮುಂದು)

154/20.02.2018/ಬಿಕೆಪಿ/ಆರ್‌ಎನ್/6-30).

**ಶ್ರೀಮತಿ ತಾರಾಅನೂರಾಧ(ಮುಂದು. . )**

ಅಮೃತ ಭವನಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿಕೆಗಳನ್ನು ಕೊಟ್ಟಿದ್ದರು. ಆದರೆ, ಇದುವರೆವಿಗೂ ನಮ್ಮ ಕನಸು ನನಸಾಗಲೇ ಇಲ್ಲ. ಅಮೃತ ಭವನದ ವಿಚಾರ ಯಾವ ನಿಟ್ಟಿನಲ್ಲಿ ಇದೆ, ಯಾವ ಹಂತದಲ್ಲಿದೆ ಎಂದು ಖಂಡಿತವಾಗಿಯೂ ಗೊತ್ತಾಗಲೇ ಇಲ್ಲ. ಇನ್ನು ಡಾ॥ ರಾಜಕುಮಾರ್‌ರವರ ಸಮಾಧಿ ವಿಚಾರವಾಗಿ ಆಗಲಿ, ಡಾ॥ ವಿಷ್ಣುವರ್ಧನ್‌ರವರ ಸಮಾಧಿ ವಿಚಾರವಾಗಲಿ ಕೆಲಸ ಮಾಡುತ್ತಿರುವುದು ಇವತ್ತಿಗೂ doubt ಇದೆ. ಡಾ॥ ವಿಷ್ಣುವರ್ಧನ್‌ರವರ ಸಮಾಧಿ ಬೆಂಗಳೂರಿನಲ್ಲಿ ಇದೆಯಾ ಅಥವಾ ಅದನ್ನು ಮೈಸೂರಿಗೆ ತೆಗೆದುಕೊಂಡು ಹೋಗಿದ್ದಾರೆಯೇ ಎನ್ನುವುದು ಗೊತ್ತಿಲ್ಲ. ಎಲ್ಲಾ ವಿಧಿವಿಧಾನಗಳು ಬೆಂಗಳೂರಿನಲ್ಲಿ ಆಗಿದೆ. ವಿಧಿವತ್ತಾಗಿ ಬೆಂಗಳೂರಿನಲ್ಲಿಯೇ ಅವರ ಸಮಾಧಿ ಇರಬೇಕಾಗಿತ್ತು. ಏತಕ್ಕೆ ಮೈಸೂರಿಗೆ ಹೋಗಿದೆ. ಮೈಸೂರಿಗೆ ಹೋದಮೇಲೆ ಅಲ್ಲಿ ಏನು ಮಾಡುತ್ತಿದ್ದಾರೆನ್ನುವ ಬಗ್ಗೆ ನಮಗೆ ಏನೂ ಮಾಹಿತಿ ಇರುವುದಿಲ್ಲ. ಈಗ ಈ ಬಜೆಟ್‌ನಲ್ಲಿ ಡಾ॥ ರಾಜ್‌ಕುಮಾರ್ ಸ್ಮರಣಾರ್ಥ ರಾಜ್‌ಕುಮಾರ್ ಪುಣ್ಯಭೂಮಿ ಆವರಣದಲ್ಲಿ ಸುಸಜ್ಜಿತವಾದ ಯೋಗ ಕೇಂದ್ರ ಸ್ಥಾಪಿಸಲಾಗುವುದು ಎನ್ನುವ ಒಂದು ಸಾಲು ಮಾತ್ರ ಇದೆ. ಡಾ॥ ರಾಜಕುಮಾರ್‌ರವರ ಸಮಾಧಿ ಹತ್ತಿರ ಯೋಗಕೇಂದ್ರವನ್ನು ಪ್ರಾರಂಭ ಮಾಡುತ್ತೇವೆ ಎನ್ನುವುದನ್ನು ಬಿಟ್ಟರೆ ಅದರ ಬಗ್ಗೆ ಯಾವುದೇ ಮಾಹಿತಿ ನಮಗೆ ಸರಿಯಾಗಿಲ್ಲ. ಈ ವಿಚಾರವನ್ನು ಸಚಿವರಾದ ಶ್ರೀಮಾನ್ ಪ್ರಿಯಾಂಕರವರು ಗಮನಿಸಬೇಕು, ಏಕೆಂದರೆ, ಪ್ರತಿ ಬಾರಿಯೂ ಸಹ ಮಾನ್ಯ ಸಚಿವರು ಎದ್ದು ನಿಂತು ಮಾತನಾಡುತ್ತಿರುತ್ತಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇನ್ನು ಚಿತ್ರರಂಗದ ಬಗ್ಗೆ ಹೇಳಬೇಕೆಂದರೆ, 2013-14 ಮತ್ತು 2014-15 ರಲ್ಲಿನ ಬಜೆಟ್‌ನಲ್ಲಿ ಜನತಾ ಚಿತ್ರಮಂದಿರಗಳ ಬಗ್ಗೆ ಹೇಳಿದ್ದರು. ಬಜೆಟ್‌ನಲ್ಲಿ ಜನತಾ ಚಿತ್ರಮಂದಿರಗಳು ಎಂದು ಹೇಳಿ ಸರ್ಕಾರವೇ ಚಿತ್ರಮಂದಿರಗಳನ್ನು ಕಟ್ಟುತ್ತದೆ, ಚಿಕ್ಕ ಚಿಕ್ಕ ಮಿನಿ ಥಿಯೇಟರ್‌ಗಳನ್ನು ಕಟ್ಟುತ್ತದೆ, ಜನತಾ ಚಿತ್ರಮಂದಿರಗಳಲ್ಲಿ ಹೆಚ್ಚು ಹೆಚ್ಚು ಪ್ರೇಕ್ಷಕರು ಕನ್ನಡ ಚಲನಚಿತ್ರಗಳನ್ನು ನೋಡಬಹುದು, ಕನ್ನಡ ಚಿತ್ರಗಳು ಪ್ರಸಿದ್ಧಿಯಾಗಬೇಕು, ಕನ್ನಡ ಚಲನಚಿತ್ರಗಳಿಗೆ ಚಿತ್ರಮಂದಿರಗಳು ಇಲ್ಲ ಎನ್ನುವ ಕೂಗಿಗೆ ಸರ್ಕಾರವೇ ನಮ್ಮ ಜೊತೆ ನಿಂತುಕೊಳ್ಳುತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ, ಈ ಬಾರಿಯ ಬಜೆಟ್‌ನಲ್ಲಿ ಆಗಲಿ, ರಾಜ್ಯಪಾಲರ ಭಾಷಣದಲ್ಲಿ ಆಗಲಿ, ಜನತಾ ಚಿತ್ರಮಂದಿರದ ಬಗ್ಗೆ ಯಾವುದೇ ಚಕಾರವಿಲ್ಲ.

ಇನ್ನು ಕಾರ್ಮಿಕರ ನಿಧಿ ಬಗ್ಗೆ ಹೇಳುವುದಾದರೆ ಸಿನಿಮಾ ಕಾರ್ಮಿಕರು ಕೂಡ ಅಸಂಘಟಿತ ಕಾರ್ಮಿಕರಾಗಿರುತ್ತಾರೆ.

**ಶ್ರೀ ಪ್ರಿಯಾಂಕ್ ಎಂ.ಖರ್ಗೆ(ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ಪ್ರವಾಸೋದ್ಯಮ ಇಲಾಖೆಯಲ್ಲಿ ಫಿಲಂ ಟೂರಿಸಂ ಪಾಲಿಸಿ ಆಗಿದೆ, ಅದನ್ನು ಮಾನ್ಯ ಸದಸ್ಯರು ಉಲ್ಲೇಖ ಮಾಡಲಿಲ್ಲ. ಮಾನ್ಯ ಸದಸ್ಯರು ಅದನ್ನು ಗಮನಿಸಬೇಕು.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಮಾನ್ ಪ್ರಿಯಾಂಕಾಜೀಯವರು ಇದನ್ನು ಉಲ್ಲೇಖ ಮಾಡಲಿಲ್ಲ. ಈ ವಿಚಾರವನ್ನು ಬಜೆಟ್‌ನಲ್ಲಿ ಉಲ್ಲೇಖ ಮಾಡಬೇಕಾಗಿತ್ತು.

**ಶ್ರೀ ಪ್ರಿಯಾಂಕ್ ಎಂ.ಖರ್ಗೆ:-** ಮಾನ್ಯ ಸಭಾಪತಿಯವರೇ, ಈ ಸಂಬಂಧ ಕರೆದಿದ್ದ ಒಂದು ಸಭೆಗೆ ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧ ರವರನ್ನು ಆಹ್ವಾನಿಸಲಾಗಿದ್ದು, ಅವರು ಸಹ ಆ ಒಂದು ಸಭೆಗೆ ಹಾಜರಾಗಿದ್ದರು. ನಮ್ಮ ಇಲಾಖೆಯಿಂದ ಫಿಲಂ ಟೂರಿಸಂ ಪಾಲಿಸಿಯಿಂದ ಚಲನ ಚಿತ್ರಗಳ ನಿರ್ದೇಶನಕ್ಕೆ ನಿರ್ಮಾಪಕರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಒಂದು ವಾರದಲ್ಲಿ, ಹತ್ತು ದಿವಸಗಳಲ್ಲಿ ಕರಡು ಪಾಲಿಸಿಯನ್ನು ಬಿಡುಗಡೆ ಮಾಡುತ್ತೇವೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಮಾನ್ ಪ್ರಿಯಾಂಕರವರು ಗಮನಿಸಬೇಕು. ಮಾನ್ಯ ಸಚಿವರು ಹೇಳಿರುವ ವಿಚಾರದಲ್ಲಿ ನಮಗೆ ಖಂಡಿತವಾಗಿಯೂ ಸಹ ಸಂತೋಷವಿದೆ. ಈ ವಿಚಾರವನ್ನು ಸಚಿವರು ಏತಕ್ಕೆ ಬಜೆಟ್‌ನಲ್ಲಿ ಹಾಕಿಸಲಿಲ್ಲವೆಂದು ಕೇಳಲಿಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಿಯಾಂಕ್ ಎಂ.ಖರ್ಗೆ:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಮಾನ್ಯ ಸದಸ್ಯರು ನನ್ನ ಹೆಸರನ್ನು ಸರಿಯಾಗಿ ಹೇಳಬೇಕು. ನನ್ನ ಹೆಸರು 'ಪ್ರಿಯಾಂಕ್' ಎಂದು ಹೇಳುವುದನ್ನು ಬಿಟ್ಟು 'ಪ್ರಿಯಾಂಕ' ಎಂದು ಹೇಳುತ್ತಿದ್ದಾರೆ. 'ಪ್ರಿಯಾಂಕ' ಎಂದರೆ ಹೆಣ್ಣು ಮಗಳು ಆಗುತ್ತಾರೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, "ಪ್ರಿಯಾ ಖರ್ಗೆಯವರೇ ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಪ್ರಿಯಾಂಕ್ ಎಂ.ಖರ್ಗೆ:-** ಮಾನ್ಯ ಸಭಾಪತಿಯವರೇ, ಪ್ರಿಯಾಂಕ್ ಎಂದು ಹೇಳಿದರೆ ಸಾಕು. ಖಣ ೨ ತಿಙುಥಾ 'ಚಿ'. ಪ್ರಿಯಾಂಕ್ ಅಷ್ಟೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, 'ಜೂನಿಯರ್ ಖರ್ಗೆ' ಯವರೇ ಎಂದು ಕರೆಯಲಿಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಆ ಒಂದು ಕೆಲಸವನ್ನು ಮಾಡಿದ್ದಾರೆ. ನಾನು ಖುದ್ದಾಗಿ, ಆ ಒಂದು ಸಭೆಗೆ ಬಂದಿದ್ದೆ. ಆದರೆ, ಈ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಆಗಲಿ, ಆಯವ್ಯಯ ಭಾಷಣದಲ್ಲಿ ಆಗಲಿ, ಉಲ್ಲೇಖ ಆಗಲೇ ಇಲ್ಲ. ಅದನ್ನು ಹೇಳಬಹುದಿತ್ತು.

**ಶ್ರೀ ಪ್ರಿಯಾಂಕ್ ಎಂ.ಖರ್ಗೆ:-** ಈ ವಿಚಾರ ಬಜೆಟ್‌ನಲ್ಲಿ ಇದೆ. ನಮ್ಮ 'ಪ್ರವಾಸೋದ್ಯಮ' ಎಂದು ನಮೂದಿಸಿರುವ ಖಂಡಿಕೆಯನ್ನು ಮಾನ್ಯ ಸದಸ್ಯರು ಓದಿರುವುದಿಲ್ಲ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀಮತಿ ತಾರಾಅನೂರಾಧ:-** ಇಲ್ಲ. I am not neglecting you. How can I neglect you? ಮಾನ್ಯ ಸಚಿವರು ಪ್ರಿಯಾಂಕ್ ಅಲ್ಲ, ಪ್ರಿಯಾ, ಜೂನಿಯರ್ ಖರ್ಗೆ.

ಮಾನ್ಯ ಸಭಾಪತಿಯವರೇ, ಇನ್ನು ಕಾರ್ಮಿಕರ ಕಲ್ಯಾಣ ನಿಧಿ ಎಂದು ಹೇಳಿ 50 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಸರ್ಕಾರ ಆ ನಿಧಿಯನ್ನಿಟ್ಟು 4-5 ವರ್ಷಗಳಾಗಿದೆ, ಇವತ್ತಿನವರೆಗೂ ಸಹ ಚಲನಚಿತ್ರರಂಗದ ಯಾವುದೇ ಕಾರ್ಮಿಕನಿಗೂ ಸಹ ಆ ನಿಧಿಯಿಂದ ಯಾವುದೇ ಸಹಾಯ ಸಿಕ್ಕಿರುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಚಲನಚಿತ್ರ ರಂಗದ ವಿಷಯವನ್ನು ಪ್ರಸ್ತಾಪಿಸುವಲ್ಲಿ ಸಂಪೂರ್ಣವಾಗಿ ಮರೆತಿದ್ದಾರೆ. ನಿಮ್ಮ ಪ್ರವಾಸೋದ್ಯಮ ನೀತಿಯೊಂದನ್ನು ಬಿಟ್ಟು ಚಲನಚಿತ್ರರಂಗದ ವಿಷಯವನ್ನು ರಾಜ್ಯದ ಯಾವುದೇ ಭಾಗ ಅಲ್ಲವೆಂದು ತೋರಿಸಲಿಕ್ಕೆ ಹೊರಟಂತೆ ಕಾಣುತ್ತದೆ. ಆದ್ದರಿಂದ, ಇದೆಲ್ಲದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಸಭಾನಾಯಕರು ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಸರ್ಕಾರವನ್ನು ಬೇಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಆಗಲಿ, ಬಜೆಟ್ ಮೇಲೆ ಆಗಲಿ ಮಾತನಾಡಲಿಕ್ಕೆ ಅವಕಾಶ ಸಿಗುವುದು ಸಂಜೆ 6 ಗಂಟೆ ಅಥವಾ 7 ಗಂಟೆಯ ನಂತರ. ಏಕೆಂದರೆ, ಕುರ್ಚಿಗಳು ಖಾಲಿ ಇರಬೇಕು, ಪತ್ರಕರ್ತರು ಇರಬಾರದು. ಈ ರೀತಿಯ ವ್ಯವಸ್ಥೆಯನ್ನು ಕಳೆದ 11 ವರ್ಷಗಳಿಂದ ನೋಡಿಕೊಂಡು ಬಂದಿದ್ದೇನೆ. ಆದರೂ ಸಹ ತಾವು ಕುಳಿತಾಗ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಗೌರವಾನ್ವಿತ ರಾಜ್ಯಪಾಲರ ಭಾಷಣ ಏನಿದೆ, ಅದು ಒಂದು ರೀತಿಯಲ್ಲಿ ಸಪ್ಪೆ, ನೀರಸ. ಒಂದು ರೀತಿಯಲ್ಲಿ ಪುನರಾವರ್ತನೆ. ಬರೆದುಕೊಟ್ಟಿರುವುದನ್ನು ಓದುವಂತಹ ಭಾಷಣ ಎಂದು ನಾನು ತಿಳಿದುಕೊಂಡಿದ್ದೇನೆ. It is far from reality. ಏನೋ ಒಂದು ವಿಷಯವನ್ನು ಹೇಳಬೇಕು, ಅದನ್ನು ಹೇಳಿಸಿದ್ದೀರಿ. ಅದರೂ ಕೂಡ ಚರ್ಚೆ ಮಾಡುವುದಕ್ಕೋಸ್ಕರವೇ ಸದನ ಇದೆ. ಈ ಬಗ್ಗೆ ನಾನು ನಾಲ್ಕಾರು ವಿಷಯಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ 1,04,74,992 ರಷ್ಟು ಪರಿಶಿಷ್ಟ ಜಾತಿಯವರ ಜನಸಂಖ್ಯೆ ಇದೆ. ಪರಿಶಿಷ್ಟ ಪಂಗಡದವರು 42,48,987 ರಷ್ಟು ಜನಸಂಖ್ಯೆ ಇದ್ದಾರೆ. ಒಟ್ಟು 1,47,23,979 ರಷ್ಟು ಜನಸಂಖ್ಯೆ ಇದೆ. ಇದನ್ನು ಜನಗಣತಿ ಅಧಾರದ ಅಂಕಿ-ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಸರ್ಕಾರ ಒಂದು ಕಾನೂನು ತಂದಿದೆ. ಬಜೆಟ್‌ನಲ್ಲಿ 24.10% ಹಣವನ್ನು SCP/TSP ಗೆ ನಾವು ಮೀಸಲಿಡುತ್ತೇವೆಂದು ಹೇಳಲಾಗಿದೆ. 24% ಎಂದರೆ ಎಷ್ಟು ಹಣವಾಗುತ್ತದೆ? ಅದನ್ನು ನಾನು ಲೆಕ್ಕಚಾರ ಮಾಡಿದ್ದೇನೆ. 35,280 ಕೋಟಿ ರೂಪಾಯಿಗಳಾಗುತ್ತದೆ. ಇವರು ಕೊಟ್ಟಿರುವುದು ಎಷ್ಟೆಂದರೆ, ರಾಜ್ಯಪಾಲರ ಭಾಷಣದ ಪ್ರಕಾರ 2017-18ನೇ ಸಾಲಿನಲ್ಲಿ 27,700 ಕೋಟಿ ರೂಪಾಯಿಗಳು. ಇದು ಆ ವರ್ಗದ ಅಭಿವೃದ್ಧಿಗೋಸ್ಕರ ಇರುವಂತಹ ಹಣವಾಗಿದೆ. ಕಾನೂನು ಕೂಡ ಹೇಳುತ್ತದೆ. ಇದು ಒಂದು ರೀತಿಯ ವಿಶೇಷ ಸೌಲಭ್ಯ. ಆ ವರ್ಗದ ಕಾರ್ಯಕ್ರಮಗಳಿಗೋಸ್ಕರ ಈ ಹಣವನ್ನು ಉಪಯೋಗಿಸಬೇಕು. ಈ ವಿಚಾರವನ್ನು ಆಕ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದಕ್ಕೋಸ್ಕರ ಕಾನೂನು. ಈ ಕಾನೂನನ್ನು ಏತಕ್ಕೆ ತರಬೇಕಾಯಿತು ಎಂದರೆ ಅನೇಕ ವರ್ಷಗಳಿಂದ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಈ ವರ್ಗಕ್ಕೆ ಖರ್ಚು ಮಾಡಿದ್ದಾರೆ. ಆದರೂ ಕೂಡ ಯಾವ ಒಂದು ವೇಗದಲ್ಲಿ ಈ ವರ್ಗದ ಪ್ರಗತಿ ಆಗಬೇಕಾಗಿತ್ತೋ ಆ ಒಂದು ವೇಗದಲ್ಲಿ ಪ್ರಗತಿಯಾಗಲಿಲ್ಲ. ಹೀಗಾಗಿ, ಯೋಜನಾ ಆಯೋಗ ಈ ಒಂದು ಪರಿಸ್ಥಿತಿಯನ್ನು ಮನಗಂಡಿದೆ. ಇದಕ್ಕೆ ವಿಶಿಷ್ಟವಾದ ಕಾರ್ಯಕ್ರಮವನ್ನು ಕೊಡಬೇಕು. ಸಂವಿಧಾನದ ಅನುಚ್ಛೇಧ 46 ರ ಪ್ರಕಾರ ವಿಶೇಷ ಸವಲತ್ತುಗಳನ್ನು ಕೊಡುವುದರ ಮೂಲಕ ಈ ವರ್ಗವನ್ನು ಆರ್ಥಿಕವಾಗಿ ಅಭಿವೃದ್ಧಿ ಮಾಡಬೇಕೆಂದು ತೀರ್ಮಾನ ಮಾಡಲಾಯಿತು. ಪ್ರಜಾಪ್ರಭುತ್ವದ ಅರ್ಥವೂ ಕೂಡ ಅದೇ ಆಗಿದೆ. ಪ್ರಜಾಪ್ರಭುತ್ವ ಎಂದರೆ ದೇಶದ ಎಲ್ಲಾ ಜನರ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಕ್ರಾಂತಿಕಾರಕವಾಗಿ, ಯಾವುದೇ ಹಿಂಸಾತ್ಮಕ ಮಾರ್ಗವಿಲ್ಲದೆ, ಕಾನೂನು ಮೂಲಕ ಬದಲಾವಣೆ ಮಾಡುವ ಒಂದು ಸರ್ಕಾರದ ಪದ್ಧತಿ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪ್ರಜಾಪ್ರಭುತ್ವದ ವ್ಯವಸ್ಥೆ. ಈ ವಿಚಾರವನ್ನು ಡಾ|| ಅಂಬೇಡ್ಕರ್‌ರವರು ಹೇಳಿದ್ದಾರೆ. ನಾವು 70 ವರ್ಷಗಳ ಸ್ವಾತಂತ್ರ್ಯ, ಗಣರಾಜ್ಯವಾದ ನಂತರ ಇಷ್ಟು ವರ್ಷಗಳು ಮುಂದುವರಿದುಕೊಂಡು ಬಂದಿದ್ದೇವೆ. ನಾವು ಹಿಂದೆ ತಿರುಗಿ ನೋಡಬೇಕಾಗುತ್ತದೆ. ಸಂವಿಧಾನದ ಆಶಯ ಈಡೇರಿದೆಯೇ? ಅಂಕಿ-ಅಂಶಗಳನ್ನು ನೋಡಿದಾಗ ಖಂಡಿತವಾಗಿಯೂ ಸಹ ಇಲ್ಲವೆಂದು ಅನಿಸುತ್ತದೆ. ವಸತಿರಹಿತ ರೈತರು ಈ ರಾಜ್ಯದಲ್ಲಿ 12,99,790 ಜನರು ಇದ್ದಾರೆ. ನಿವೇಶನ ಇಲ್ಲದೇ ಇರುವಂತಹವರು 12,98,813 ಜನ ಇದ್ದಾರೆ. ಇದು ಅಂಕಿ-ಅಂಶಗಳ ಸಮೀಕ್ಷೆಯಿಂದ ಬಂದಿರುವುದಾಗಿದೆ. ಹೆಚ್ಚು ಕಡಿಮೆ, 25,98,602 ಜನಕ್ಕೆ ನಿವೇಶನವೂ ಇಲ್ಲ, ಮನೆಯೂ ಇಲ್ಲ. ಇದನ್ನು ಕೊಳಚೆ ಪ್ರದೇಶದಲ್ಲಿ ವಾಸಿಸುವವರನ್ನು ಬಿಟ್ಟು ಹೇಳಿರುವುದಾಗಿದೆ. ಇನ್ನು ಕೊಳಗೇರಿ ಕುಟುಂಬಗಳು ಎಷ್ಟು ಇವೆ ಎಂದು ನೋಡಿ. 7,07,662 ಕೊಳಗೇರಿ ಕುಟುಂಬಗಳಿವೆ. ಅಲ್ಲಿ ವಾಸ ಮಾಡುವ ಜನಸಂಖ್ಯೆ 32,94,033. ಇವರು ಇವತ್ತಿಗೂ ಕೂಡ ಕೊಳಗೇರಿಯಲ್ಲಿ ವಾಸ ಮಾಡುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಶೇಕಡ 24.5 ರಷ್ಟು ಬಡತನದ ಜನಸಂಖ್ಯೆ ಇದೆ. ಅಂದರೆ ಈ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡತಕ್ಕಂತಹ ಬಡವರು ಇನ್ನೂ 24%ರಷ್ಟು ಇದ್ದಾರೆ. ನಗರದಲ್ಲಿ ವಾಸ ಮಾಡುವವರು ಸಹ 15% ರಷ್ಟು ಇದ್ದಾರೆ. ಅಂದರೆ ಒಟ್ಟು 31% ರಷ್ಟು ಜನಸಂಖ್ಯೆ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವಾಸ ಮಾಡತಕ್ಕಂತಹ ಬಡವರು ಇದ್ದಾರೆ. ಅಂದರೆ, ಆರ್ಥಿಕ ಸಮಾನತೆ ಬರಲಿಲ್ಲ. ಅವರಿಗೆ ವಸತಿ ಕೂಡ ಇಲ್ಲ, ಸ್ಲಮ್‌ನಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ಶಿಕ್ಷಣ ಇಲ್ಲ, ಉದ್ಯೋಗ ಇಲ್ಲ. ಮತ್ತೆ ಸಂವಿಧಾನದ ಆಶಯಗಳು ಎಲ್ಲಿ ಈಡೇರಿವೆ? ಒಂದು ಬಾರಿ ಡಾ|| ಅಂಬೇಡ್ಕರ್‌ರವರು ಹೇಳುತ್ತಾರೆ; "ಭಾರತದ ಸಂವಿಧಾನವನ್ನು ಬದ್ಧತೆಯಿಂದ ಹಾಗೂ ಯಥಾವತ್ತಾಗಿ, ಪ್ರಾಮಾಣಿಕವಾಗಿ ಜಾರಿಗೊಳಿಸಿದ್ದೇ ಆದರೆ, ಇನ್ನು 20 ವರ್ಷಗಳಲ್ಲಿ ಭಾರತದ ಎಲ್ಲಾ ವರ್ಗಗಳು ಸಹ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕ ಸಮಾನತೆ ದೊರೆತು ಸಮ ಸಮಾಜ ನಿರ್ಮಾಣವಾಗುತ್ತದೆ".

**ಮುಂದು. . .**

**(155) 20.02.2018 06.40 ಎಸ್‌ವಿ-ಆರ್‌ಎನ್**

**ಶ್ರೀ ಡಿ.ಎಸ್.ವೀರಯ್ಯ (ಮುಂದು):-**

ಒಂದು ವೇಳೆ ಆ ಸಂವಿಧಾನ ಜಾರಿ ಮಾಡುವುದು ಪಟ್ಟಭದ್ರ ಹಿತಾಸಕ್ತಿಗಳಾಗಿದ್ದು, ಅಂದರೆ ಸಮಾನತೆಯ ಬಗ್ಗೆ ನಂಬಿಕೆ ಇರತಕ್ಕಂಥವರು ಮತ್ತು ಬಡತನ, ಸಿರಿತನಗಳ ನಡುವಿನ ಅಂತರದ ಬಗ್ಗೆ ನಂಬಿಕೆಯುಳ್ಳಂಥವರಾಗಿದ್ದರೆ ಭಾರತದ ಸಂವಿಧಾನವು ಯಥಾವತ್ತಾಗಿ ಜಾರಿಗೊಂಡಿಲ್ಲವೆಂದು ತಿಳಿದುಕೊಳ್ಳಬೇಕಾಗಿ ಡಾ:ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದಾರೆ. ಇದು ನಿಶ್ಚಿತವಾಗಿ ಆಗುತ್ತಾ ಬಂದಿರುವಂಥದ್ದು. ಎಲ್ಲೋ ಒಂದು ಕಡೆ ಯೋಚಿಸಿದಾಗ ಇದರ ಬಗ್ಗೆ ಗಂಭೀರವಾದಂತಹ ಚರ್ಚೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವುದಿಲ್ಲ. ನ್ಯಾಷನಲ್ ಕಮಿಷನ್ ಅವರು ತಮ್ಮ ವರದಿಯನ್ನು ಕೊಟ್ಟಿರುತ್ತಾರೆ. ಅದರ ಕುರಿತು ಪಾರ್ಲಿಮೆಂಟ್‌ನಲ್ಲಿ ಚರ್ಚೆ ನಡೆಯಲಿಲ್ಲ. ಇಲ್ಲಿ Committee on the Welfare of Scheduled Castes/Scheduled Tribes ಎಂದು ಇದೆ. ಅವರೂ ಸಹ ಪ್ರತಿ ವರ್ಷ ತಮ್ಮ ವರದಿಯನ್ನು ಕೊಡುತ್ತಿರುತ್ತಾರೆ. ಆದರೆ ಒಂದು ದಿನವೂ ಅದು ಚರ್ಚೆಯಾಗಲಿಲ್ಲ. ಸಮೀಕ್ಷೆಯ ಪ್ರಕಾರ ಬಡತನ, ನಿವೇಶನ ರಹಿತರ, ಶಿಕ್ಷಣ ವಂಚಿತರ ಈ ರೀತಿ ಅಂಕಿ ಅಂಶಗಳನ್ನು ನಾವು ನೋಡುತ್ತಾ ಬಂದಿದ್ದೇವೆ. ಸರ್ಕಾರ ಇದರ ಬಗ್ಗೆ ಏಕೆ ಗಂಭೀರವಾಗಿ ಆಲೋಚನೆ ಮಾಡುತ್ತಿಲ್ಲ? ಆಲೋಚನೆ ಮಾಡಿದಂತಹ ಸಂದರ್ಭ ನನಗಂತೂ ಕಂಡು ಬಂದಿಲ್ಲ. ಇಷ್ಟು ವರ್ಷಗಳ ನನ್ನ ಎಂ.ಎಲ್.ಸಿ. ಅವಧಿಯಲ್ಲಿ ಕೂಡ ನಾನು ಅದನ್ನು ಕಾಣುವುದಕ್ಕೆ ಆಗಲೇ ಇಲ್ಲ. ಇದಕ್ಕೆ ಇಚ್ಛಾಶಕ್ತಿಯ ಕೊರತೆಯೇ ಕಾರಣ. ಸರ್ಕಾರ ಆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಇಂದು ಬಡವ-ಶ್ರೀಮಂತರ ನಡುವಿನ ಅಂತರ ಎಷ್ಟಿದೆಯೆಂದರೆ ಬಡವನಾದವನ ಬಳಿ ಎರಡು ಜೊತೆ ಬಟ್ಟೆಯಷ್ಟೇ ಇದ್ದರೆ, ಸಿರಿವಂತನ ಬಳಿ ಎರಡು ನೂರು ಜೊತೆ ಬಟ್ಟೆಗಳು ಇರುತ್ತದೆ. ಶನಿವಾರ ಯಾವ ಬಟ್ಟೆ ಹಾಕಿಕೊಳ್ಳಲಿ, ಭಾನುವಾರ ಯಾವ ಬಟ್ಟೆ ಹಾಕಿಕೊಳ್ಳಲಿ, ಕ್ಲಬ್‌ಗೆ ಹೋಗುವಾಗ ಯಾವ ಬಟ್ಟೆ ಹಾಕಿಕೊಳ್ಳಲಿ, ಪಾರ್ಟಿಗೆ ಯಾವ ಬಟ್ಟೆ ಹಾಕಿಕೊಳ್ಳಲಿ, ಬೆಳಗ್ಗೆ ವಾಕಿಂಗ್ ಹೋಗುವಾಗ ಯಾವ ಬಟ್ಟೆ ಹಾಕಿಕೊಳ್ಳಲಿ ಎಂದು ಯೋಚನೆ ಮಾಡುತ್ತಾನೆ. ಅದೇ ಬಡವನಾದವನು ಒಂದನ್ನು ಸ್ವಚ್ಛಗೊಳಿಸಿ ಮತ್ತೊಂದನ್ನು ಧರಿಸಬೇಕು. ಅವನ ಪರಿಸ್ಥಿತಿ ಆ ರೀತಿಯಾಗಿರುತ್ತದೆ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯೇ?

ಶಾಸಕರು, ಜನಪ್ರತಿನಿಧಿಗಳೂ ಆದ ನಮಗೆ ಕೊಳಗೇರಿಗಳ ಮತದಾರರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹಾಗೂ ಹಿಂದುಳಿದ ವರ್ಗಗಳ ಮತದಾರರೂ ಸಹ ತಮ್ಮ ಮತವನ್ನು ಹಾಕಿರುತ್ತಾರೆ. ಅವರಿಗೆ ನಾವು ಏಕೆ ವಂಚನೆಯನ್ನು ಮಾಡುತ್ತಿದ್ದೇವೆ. Grassroot level ನಿಂದ ತೆಗೆದುಕೊಳ್ಳೋಣ. ಗ್ರಾಮಪಂಚಾಯ್ತಿಯಿಂದ ಒಬ್ಬ ಸದಸ್ಯನನ್ನು ಜನ ಆಯ್ಕೆ ಮಾಡಿ ಕಳುಹಿಸುತ್ತಾರೆ. ಆ ಸದಸ್ಯನು ಗಂಭೀರವಾಗಿ ಈ ಸಮಸ್ಯೆಯನ್ನು ಪರಿಗಣಿಸಿದ್ದರೆ, ಆ ಊರಿನಲ್ಲಿನ ವಸತಿ ರಹಿತರನ್ನು ಗುರುತಿಸಿ ಅವರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಬಹುದಿತ್ತು. ಆ ಊರಿನಲ್ಲಿ ನಿರುದ್ಯೋಗಿಗಳು ಯಾರಿದ್ದಾರೆಂದು ತಿಳಿದುಕೊಳ್ಳುವುದು ಅವನಿಗೆ ಬಹಳ ಸುಲಭವಾದ ಕೆಲಸ. ಕೊಳೆಗೇರಿಗಳ ಜನರಿಂದ ಮತವನ್ನು ಪಡೆಯುತ್ತಾರೆ. ಆದರೆ ಅವರ ಸಮಸ್ಯೆಯನ್ನು ಮಾತ್ರ ಎಂದೂ ಗಂಭೀರವಾಗಿ ಪರಿಗಣಿಸಲಿಲ್ಲ. ಇದರ ಪರಿಣಾಮವಾಗಿ ಇಂದು ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಾಗಿದೆ. ಯಾವುದಾದರೊಂದು ಪಂಚತಾರಾ ಹೋಟೆಲಿಗೆ ಹೋದಾಗ ಅದರಲ್ಲಿಯೂ 12 ಗಂಟೆಯ ನಂತರ ಹೋದರೆ ಇದನ್ನು ಕಾಣಬಹುದು. ಒಬ್ಬ ವ್ಯಕ್ತಿ ಅವನಿಗೆ ತಿನ್ನಲು ಸಾಧ್ಯವಾಗದಿದ್ದರೂ 10-15 ಬಗೆಯ ತಿಂಡಿಗಳನ್ನು ಆರ್ಡರ್ ಮಾಡುತ್ತಾನೆ. ಉದಾಹರಣೆಗೆ ಚಿಕನ್ ಕಬಾಬ್, ಚಿಲ್ಲಿ ಚಿಕನ್, ತಂದೂರಿ ಚಿಕನ್ ಇತ್ಯಾದಿ. ಅದರಲ್ಲಿ ಅರ್ಧ ಭಾಗ ಮಾತ್ರ ತಿಂದಿರುತ್ತಾನೆ. ಉಳಿದರ್ಧವನ್ನು ತಿನ್ನದೇ ಬಿಡುವುದು ಅವನಿಗೆ ಶೋಕಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನಿಸುತ್ತದೆ. ಬಿಡಬೇಕೆಂದೇ ಆರ್ಡರ್ ಮಾಡುತ್ತಾನೆ. ಎಲ್ಲದರಲ್ಲಿಯೂ ಸ್ವಲ್ಪವನ್ನು ತಿಂದು ರುಚಿ ನೋಡುವುದು ಅವನ ಬಯಕೆ. ಕ್ಲೀನ್ ಮಾಡುವವರು ಅವನು ಉಳಸಿದ್ದನ್ನು ತೆಗೆದುಕೊಂಡು ಹೋಗಿ ಹೊರಗೆ ಬಿಸಾಕುತ್ತಾರೆ. ಆ ರೀತಿ ಬಿಸಾಕಿದ್ದನ್ನು ಆಯ್ದುಕೊಂಡು ತಿನ್ನುವ ಜನರನ್ನು ಇಂದಿಗೂ ಕಾಣಬಹುದು. ಅಂತಹ ಜನರು ನಾಯಿಗಳ ಜೊತೆ ಪೈಪೋಟಿಗಿಳದು ತಿನ್ನುತ್ತಾರೆ. ನಾಯಿಗಳು ಸುಮ್ಮನಿರುತ್ತವೆಯೇ? ಬಿಸಾಕಿದ್ದನ್ನು ತಿನ್ನುವುದಕ್ಕೆ ಅವು ಬರಲೇ ಬೇಕಲ್ಲವೆ? ಅಂದರೆ ಇಂದು ಒಬ್ಬ ಮನುಷ್ಯ ಬಿಸಾಕಿದ ಅನ್ನವನ್ನು ತಿಂದರೆ, ಇನ್ನೊಬ್ಬನು ತಿನ್ನದೆ ಬಿಸಾಕುತ್ತಾನೆ. ಇದಕ್ಕೆ ಎಲ್ಲಿಯಾದರೊಂದು ಕಡೆ ಕೊನೆಯಿರಬೇಕಲ್ಲವೆ?

ಈ ರೀತಿಯಾಗಿಯೇ ಫ್ರಾನ್ಸ್‌ನಲ್ಲಿ ಕ್ರಾಂತಿಯಾಯಿತು. ಅಲ್ಲಿನ ರಾಜ ಅವನ ವಿರುದ್ಧ ಬಂದವರ ಶಿರಚ್ಛೇದನ ಮಾಡಿ cupboard ನಲ್ಲಿ ಇಡುತ್ತಿದ್ದನು. ಯಾರಾದರೂ ವೈರಿಗಳು ಬಂದರೆ ತೆಗೆದು ತೋರಿಸಿ **'ನಿನ್ನ ಗತಿಯೂ ಹೀಗೆಯೇ ಆಗುತ್ತದೆ'** ಎಂದು ಹೇಳುತ್ತಿದ್ದನು. ಒಂದಿಷ್ಟು ಜನರನ್ನು ಹಾಗೆಯೇ ಕೊಂದು ಹಾಕಿದನು. ಒಮ್ಮೆ ಅಲ್ಲಿ ಕ್ಷಾಮವುಂಟಾಯಿತು. ಅವರೆಲ್ಲರೂ ರಾಜನ ವಿರುದ್ಧ ಘೋಷಣೆಗಳನ್ನು ಕೂಗಿದರು. ಅಂದು ಅರಮನೆಯಲ್ಲಿ ರಾಜ ಇರಲಿಲ್ಲ. ರಾಣಿ ಮಾತ್ರ ಇದ್ದಳು. Why they are crying? ಎಂದು ಕೇಳುತ್ತಾಳೆ. ಆಗ ಮಂತ್ರಿ 'they are crying for bread' ಎಂದು ಹೇಳುತ್ತಾನೆ. 'Why bread? Give them cake' ಎಂದು ರಾಣಿ ಹೇಳುತ್ತಾಳೆ. ಅವಳಗೆ ರೊಟ್ಟಿಯ ಅನುಭವ ಇಲ್ಲ. ಅವಳ ಅನುಭವವೆಲ್ಲಾ ಕೇಕ್‌ನ ಅನುಭವ ಮಾತ್ರ. ಹಾಗಾಗಿ ರೊಟ್ಟಿಯ ಬದಲು ಕೇಕ್ ಎಂದು ಹೇಳುತ್ತಾಳೆ. ರಾಜನ ದಬ್ಬಾಳಿಕೆ, ದರ್ಪ, ವೈಭವದ ಜೀವನ ಇವುಗಳ ಬಗ್ಗೆ ಅಲ್ಲಿನ ಜನರಲ್ಲಿ ಆಗಲೇ ಜಾಗೃತಿಯು ಮೂಡಿರುತ್ತದೆ. ನಾವು ರೊಟ್ಟಿಯನ್ನು ಕೇಳದರೆ ಇವಳು ಕೇಕ್ ತಿನ್ನಿ ಎಂದು ಹೇಳುತ್ತಿರುವ ರಾಣಿಯ ಗರ್ವ ಎಷ್ಟಿರಬಹುದೆಂದು ರೊಚ್ಚಿಗೆದ್ದ ಜನರು ರಾಣಿಯ ಶಿರವನ್ನು ಛೇದಿಸುತ್ತಾರೆ. ರಾಜನನ್ನು ಹುಡುಕಿಕೊಂಡು ಹೋಗಿ ಅದೇ ರೀತಿಯೇ ಮಾಡುತ್ತಾರೆ. Louis-XIV ಆ ರೀತಿ ಜನರ ದಾಳಿಗೆ ಗುರಿಯಾದ ರಾಜ. ಈ ರೀತಿಯ ಘಟನೆಗಳು ಭಾರತದಲ್ಲಿಯೂ ಆಗಬೇಕೆ?

ನಕ್ಸಲೀಯರು ಯಾರು? ತಿನ್ನುವುದಕ್ಕೆ ಅನ್ನವಿಲ್ಲದೆ, ಉದ್ಯೋಗ ಇಲ್ಲದೆ ಇರುವವನಿಗೆ ಒಬ್ಬ ಲಕ್ಷುರಿ ಜೀವನ ನಡೆಸುವವನ್ನು ನೋಡಿದಾಗ ನಾನೂ ಹೀಗೆಯೇ ಆಗಬೇಕು ಎನಿಸುವುದು ಸಹಜ. ಅವನು ಕೆಟ್ಟ ಕೆಲಸ ಮಾಡುವುದಕ್ಕೆ ಇಳಯುತ್ತಾನೆ. ಕೊಲೆ ಮಾಡುತ್ತಾನೆ. ಸುಲಿಗೆ ಮಾಡುತ್ತಾನೆ. ಇದು ಗಂಭೀರವಾಗಿ ಯೋಚಿಸಬೇಕಾದಂತಹ ವಿಚಾರ. ಇಷ್ಟು ವರ್ಷಗಳ ಕಾಲ ಸ್ವತಂತ್ರ ಭಾರತದಲ್ಲಿ ನಾವು ಆಡಳತವನ್ನು ಮಾಡಿದ್ದೇವೆ. ಇದಕ್ಕೆ ಒಂದು ಚರ್ಚೆಯಾಗಬೇಕು. ಅದಕ್ಕಾಗಿ ಒಂದು ವಿಶೇಷ ಸದನವನ್ನು ಕರೆಯಬೇಕು. ಚರ್ಚೆ ಮಾಡೋಣ. ಈ ಎಲ್ಲಾ ಅಂಕಿ-ಅಂಶಗಳನ್ನು ಅವಲೋಕಿಸೋಣ. ಒಂದು ಪರಿಹಾರವನ್ನು ಕಂಡು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಡಿಯೋಣ. ಒಂದು ತಿಂಗಳು, ಹದಿನೈದು ದಿನ ಅಥವಾ ಒಂದು ವಾರ ಈ ರೀತಿ ಎಂದಾದರೂ ಇದರ ಬಗ್ಗೆ ಚರ್ಚೆ ಮಾಡೋಣವೆಂದು ಯೋಚನೆ ಮಾಡಿದ್ದೇವೆಯೇ?

ಇನ್ನೊಂದು ಸಂತೋಷದ ವಿಷಯವೆಂದರೆ ನಾವೇ ಕಾನೂನನ್ನು ರೂಪಿಸಿದ್ದು, 2014ರಲ್ಲಿ ಅಧಿಕಾರಕ್ಕೆ ಬಂದಂತಹ ಈ ಸರ್ಕಾರವು SCP/TSP (Special Component Plan and Tribal Sub Plan) ಅನ್ನು ಜಾರಿಗೆ ತಂದಿದೆ. ಜಾರಿಗೆ ತಂದ ಮೇಲೆ ಇಂದಿನವರೆವಿಗೂ ಕಾನೂನನ್ನು ಮಾಡಲಿಲ್ಲ. ಕಾನೂನು ಮಾಡದಿದ್ದರೆ ಯಾರನ್ನೂ accountable ಮಾಡುವುದಕ್ಕೆ ಆಗುವುದಿಲ್ಲ. ಈ ಕಾನೂನಿಗೆ ಹಲ್ಲು ಇಲ್ಲ, ವಿಷವೂ ಇಲ್ಲ. ಯಾವುದಾದರೊಂದು ಕಾನೂನಿನ ಬಗ್ಗೆ ಭಯ ಇರಬೇಕಲ್ಲವೆ? ಇದು ಸರ್ಕಾರ ನಡೆಸುವವರ ತಪ್ಪು ಎಂದು ನಾನು ಹೇಳುವುದಿಲ್ಲ. ಅಧಿಕಾರಿಗಳು ಯೋಚನೆ ಮಾಡಬೇಕು. ಯಾವುದೇ ಕಾಯ್ದೆಯು ಒಂದು ವರ್ಷದೊಳಗೆ ಕಾನೂನು ಆಗದಿರುವಂತಹ ಪ್ರಸಂಗ ಇಲ್ಲ. ಆದರೆ ಎಸ್‌ಸಿ/ಎಸ್‌ಟಿ ಕಾಯ್ದೆಗೆ ಇಂದಿನವರೆವಿಗೂ ಕಾನೂನಾಗಿರುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸುವಾಗ ತಿಳಿಸಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ (ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ-ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ವಿಶೇಷವಾಗಿ ಅವರು ಸಂವಿಧಾನದ ಬಗ್ಗೆ ಮಾತನಾಡಿದರು. ನನ್ನ ವಯಸ್ಸಿನಷ್ಟು ಅವರಿಗೆ ಅನುಭವ ಇದೆ. ಸಂವಿಧಾನ Constituent Assembly ಯಲ್ಲಿ ಲೋಕಾರ್ಪಣೆಯಾದಾಗ ಡಾ||ಬಾಬಾಸಾಹೇಬ್ ಅಂಬೇಡ್ಕರ್ ಅವರ ಮುಂದೆ ಸಾಕಷ್ಟು ಪ್ರಶ್ನೆಗಳಿದ್ದವು. ಈ ಮೀಸಲಾತಿ ಏಕೆ? ಆ ಮೀಸಲಾತಿ ಏಕೆ? ಈ ಆರ್ಟಿಕಲ್ ಏನು? ಆ ಆರ್ಟಿಕಲ್ ಏನು? ಈ ರೀತಿ ಹಲವಾರು ಪ್ರಶ್ನೆಗಳು ಎದುರಾಯಿತು. Totally around 3500 questions. ಅದಕ್ಕೆ ಡಾ||ಬಾಬಾಸಾಹೇಬ್ ಅಂಬೇಡ್ಕರ್ ಅವರು 20,000 ಪುಟಗಳ ಉತ್ತರವನ್ನು ನೀಡಿದ್ದರು. ಅದಾದ ನಂತರ ಸಂವಿಧಾನ ಜಾರಿಯಾಯಿತು. ಇದನ್ನು ಬಾಬಾಸಾಹೇಬ್ ಅಂಬೇಡ್ಕರ್ ಅವರು on record ಹೇಳಿರುತ್ತಾರೆ. Constitution by itself is not bad. If it is implemented rightly, then there will be equality' ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಬಹಳಷ್ಟು ವಿಷಯಗಳು ಅಕ್ಷರಶಃ ಜಾರಿಗೊಂಡಿಲ್ಲ, ಅವುಗಳ ಬಗ್ಗೆ ಚರ್ಚೆಯಾಗಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಇವತ್ತು ಸಂವಿಧಾನವನ್ನೇ ಬದಲಾವಣೆ ಮಾಡಬೇಕೆಂದು ಕೆಲವು ನಾಯಕರು ಹೇಳುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರು ಏನೂ ಹೇಳುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು SCP/TSP Fund ಬಗ್ಗೆ ಕೂಡ ಮಾತನಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರುವ ಜನಸಂಖ್ಯೆಗನುಗುಣವಾಗಿ ಹಣವನ್ನು ಆಯವ್ಯಯದಲ್ಲಿ ಮೀಸಲಿಡುತ್ತಿದ್ದೇವೆ. ಇಡೀ ರಾಷ್ಟ್ರದ ಬಜೆಟ್‌ನಲ್ಲಿ SCP/TSP ಗಾಗಿ 48,000 ದಿಂದ 52,000 ಕೋಟಿ ಇರಬಹುದು. ನಮ್ಮ ರಾಜ್ಯದ ಬಜೆಟ್ 29,000 ಕೋಟಿ ಇದೆ. Intention of the government is also there. ಮಾನ್ಯ ಸದಸ್ಯರು ಈ ಎರಡು ಅಂಶಗಳನ್ನು ಕೂಡ ಹೇಳಬೇಕು. ಮಾನ್ಯ ಸದಸ್ಯರು ಸಂವಿಧಾನದ ಬಗ್ಗೆ, ಡಾ॥ಬಾಬಾಸಾಹೇಬ್ ಅಂಬೇಡ್ಕರ್ ಅವರ ಆಶಾಭಾವನೆಯ ಬಗ್ಗೆ ಹಾಗೂ ಎಸ್‌ಸಿ/ಎಸ್‌ಟಿಗಳಿಗೆ ಸಮಾನತೆ ದೊರಕಿಸಿಕೊಡುವುದರ ಬಗ್ಗೆ ತಿಳಿದವರಾಗಿದ್ದಾರೆ. ಆದರೆ ದೊಡ್ಡವರು ಮಾತನಾಡಿದಾಗ ಅಂದರೆ ಸಾಂವಿಧಾನಿಕವಾಗಿ ಆಯ್ಕೆಯಾದಂತಹ ಜನಪ್ರತಿನಿಧಿಗಳು ಮಾತನಾಡಿದಾಗ ಈ ಅಂಶಗಳ ಬಗ್ಗೆ ಸುಮ್ಮನೆ ಇದ್ದರೆ ಹೇಗೆ? ಕೇವಲ SCP/TSP Fund allocate ಮಾಡಿದ ತಕ್ಷಣ ಎಲ್ಲರೂ ಉದ್ಧಾರವಾಗುವುದಿಲ್ಲ. ಸಂವಿಧಾನವನ್ನು ಅಕ್ಷರಶಃ implementation ಮಾಡುವುದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಆದರೆ ಕೆಲವು ನಾಯಕರು ಬದಲಾವಣೆ ಮಾಡಬೇಕೆಂದು ಹೇಳುತ್ತಿರುವಾಗ ಅದಕ್ಕೆ ಮಾನ್ಯ ಸದಸ್ಯರು ಏನು ಹೇಳುತ್ತಾರೆ? ಏಕೆಂದರೆ ಅವರು ಸಂವಿಧಾನದ ಆಶಾಕಿರಣದ ಬಗ್ಗೆ ಮಾತನಾಡುತ್ತಿದ್ದರು.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಆ ವಿಷಯ ಇಲ್ಲಿ ಅಪ್ರಸ್ತುತ. ಇಲ್ಲಿ ನಾನು ಕೇವಲ ರಾಜ್ಯಪಾಲರ ಭಾಷಣಕ್ಕೆ ಸೀಮಿತವಾಗಿ ಮಾತನಾಡುತ್ತಿದ್ದೇನೆ. ಕೇವಲ ಕಾನೂನು ಮಾಡಿದರೆ ಅಥವಾ ಕಾಯ್ದೆ ಮಾಡಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಅಲ್ಲವೆ? ಇಷ್ಟು ವರ್ಷಗಳಿಂದ ಮೀಸಲಾತಿಯು ಜಾರಿಯಲ್ಲಿದೆ. ಆದರೆ ಅವುಗಳನ್ನು fulfil ಮಾಡಲಾಗಿದೆಯೇ? ಇಷ್ಟು ಲಕ್ಷ ಕೋಟಿ ರೂಪಾಯಿ ಹಣವನ್ನು ಇಡಲಾಗಿದ್ದರೂ, ಅದನ್ನು ಖರ್ಚು ಮಾಡಲಾಗಿದೆಯೇ? ಅಂಕಿ ಅಂಶಗಳ ಪ್ರಕಾರವೇ ಹೋಗೋಣ. ನಾನು ಸವಾಲು ಹಾಕುತ್ತೇನೆ. ಏನೂ ಆಗಿಲ್ಲವೆಂಬುದನ್ನು ನಾವೆಲ್ಲಾ ಒಪ್ಪಿಕೊಳ್ಳಬೇಕು. ಎರಡು ದಿನಗಳಾದರೂ ಇದರ ಬಗ್ಗೆ ಚರ್ಚೆ ನಡೆದಿಲ್ಲ ಎಂದು ನಾನು ಹೇಳಿದ್ದೇನೆ. ಅದಕ್ಕಾಗಿಯೇ ಇದು ಪಟ್ಟಭದ್ರ ಹಿತಾಸಕ್ತಿಗಳ ಕೈಗೆ ಹೋದರೆ ಈ ಸಂವಿಧಾನ ಜಾರಿಯಾಗುವುದಿಲ್ಲ, ಎಷ್ಟು ವರ್ಷಗಳು ಕಳೆದರೂ ದೇಶ ಹೀಗೆಯೇ ಉಳಿಯುತ್ತದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದರು. ಇಲ್ಲಿ ಅಂತರ ಏಷ್ಟಿದೆ ಎಂದು ನಾನು ಹೇಳುತ್ತಿದ್ದೇನೆ. ಇದು ಮಾನ್ಯ ಪ್ರಿಯಾಂಕ್ ಖರ್ಗೆಯವರಿಗೂ ತಿಳಿದಿರುವ ವಿಷಯ.

(...ಮುಂದು)

**ಶ್ರೀ ಡಿ.ಎಸ್.ವೀರಯ್ಯ (ಮುಂದು):-**

ಮಾನ್ಯ ಸಚಿವರಾದ ಪ್ರಿಯಾಂಕ್ ಖರ್ಗೆ ರವರ ತಂದೆಯವರು ಹೋರಾಟಗಾರರು, ಅವರು ಈ ಸಮುದಾಯಕ್ಕೆ ಒಂದು ನ್ಯಾಯ ದೊರಕಿಸಿಕೊಟ್ಟಿರುವವರು, ಅವರಿಗೆ ಗೊತ್ತಿರುತ್ತದೆ. ಹಾಗಾಗಿ ನೀವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳಿ. ಒಂದು ಕಾಯಿದೆ ಬಂದು ನಾಲ್ಕು ವರ್ಷವಾದರೂ ಕೂಡ ಕಾನೂನು ಆಗಲಿಲ್ಲವೆಂದರೆ, ನಿಮಗೆ ಯಾವ ಇಚ್ಛಾಶಕ್ತಿ ಇದೆ? ಬರಿ ಹಣ ಒದಗಿಸಿಬಿಟ್ಟು ಅದನ್ನು ಖರ್ಚುಮಾಡದೆ ಇದ್ದರೆ, what does it mean? Why did the Government announce it? ಹಾಗಾದರೆ ಜನರಿಗೆ ಏನು ಮಂಕುಬೂದಿ ಎರುಚುತ್ತಿದ್ದೀರಿ; ಮೋಸ ಮಾಡುತ್ತಿದ್ದೀರಿ? ಈಗ ನಾನು ಹೇಳುತ್ತೇನೆ ನೋಡಿ, ಸಮಾಜ ಕಲ್ಯಾಣ ಇಲಾಖೆಗೆ 2015 ರಿಂದ 2017-18ನೇ ಸಾಲಿನಲ್ಲಿ ಮೀಸಲಿಟ್ಟಿರುವ ಹಣ 20,766 ಕೋಟಿ ರೂಪಾಯಿಗಳು, ಅದರಲ್ಲಿ ಖರ್ಚು ಮಾಡಿರುವುದು 13,413 ಕೋಟಿ ರೂಪಾಯಿಗಳು, ಬಾಕಿ ಉಳಿದುಕೊಂಡಿರುವುದು 7,357 ಕೋಟಿ ರೂಪಾಯಿಗಳು, ಅಂದರೆ ಇದು ಇಲಾಖೆಗೆ ಕೊಟ್ಟಿರುವ ಹಣ. ಇದು ಸದನದಲ್ಲಿ ಕೊಟ್ಟಿರುವಂತಹ ಉತ್ತರ. ಈಗ ನಾನು ಹೇಳಿರುವುದು ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟಿರುವುದು, ಮತ್ತೆ ಬೇರೆ ಬೇರೆ ಇಲಾಖೆಗೆ ಕೊಟ್ಟಿರುವುದು ಸಹ ಇದೆ. ಈಗ ನೀರಾವರಿ ಇಲಾಖೆಗೆ ಕೊಟ್ಟಿರುವುದು, ತೋಟಗಾರಿಕೆ ಇಲಾಖೆಗೆ ಕೊಟ್ಟಿರುವುದು ಮತ್ತು ಕೃಷಿ ಇಲಾಖೆಗೆ ಕೊಟ್ಟಿರುವುದು, ಎಲ್ಲದಕ್ಕೂ ಸಹ ಕೊಟ್ಟಿದೆ. ಈ ನಾಲ್ಕು ವರ್ಷಗಳಲ್ಲಿ ಇದಕ್ಕೆ ಮೀಸಲಿರಿಸಿದ ಹಣ 37,992 ಕೋಟಿ ರೂಪಾಯಿಗಳು. ಅದರಲ್ಲಿ ಖರ್ಚು ಮಾಡಿರುವ ಹಣ 34,388 ಕೋಟಿ ರೂಪಾಯಿಗಳು. ಬಾಕಿ ಉಳಿಸಿಕೊಂಡಿರುವ ಹಣ 3,604 ಕೋಟಿ ರೂಪಾಯಿಗಳು. ಈಗ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಬಗ್ಗೆ ಹೇಳುವುದಾದರೆ, ಈ ನಾಲ್ಕು ವರ್ಷಗಳಲ್ಲಿ 2,031 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಅದರಲ್ಲಿ ಖರ್ಚಾಗಿರುವುದು 1,236 ಕೋಟಿ ರೂಪಾಯಿಗಳು, ಬಾಕಿ ಉಳಿದಿರುವುದು 1,219 ಕೋಟಿ ರೂಪಾಯಿಗಳು. ಈಗ ಇದರಲ್ಲಿ ಕೊಳವೆಬಾವಿ ಕೊರೆಯಬಹುದಿತ್ತು, ಅದನ್ನು ಸ್ವಂತ ಉದ್ಯೋಗ ಕೈಗೊಳ್ಳುವುದಕ್ಕೆ ಕೊಡಬಹುದಿತ್ತು, sky is the limit, ಆದರೂ ಸಹ ಕೊಡಲಿಲ್ಲ.

ಮಾನ್ಯ ಸಭಾಪತಿಯವರೇ, ಈಗ ವಾಲ್ಮೀಕಿ ಅಭಿವೃದ್ಧಿ ನಿಗಮ ಪ್ರಾರಂಭ ಮಾಡಿದ್ದಾರೆ, ಅದಕ್ಕೆ 763 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದು, ಅದರಲ್ಲಿ ಖರ್ಚಾಗಿರುವ ಹಣ 605 ಕೋಟಿ ರೂಪಾಯಿಗಳು, 445 ಕೋಟಿ ರೂಪಾಯಿಗಳ ಹಣ ಬಾಕಿ ಉಳಿದಿದೆ. ಬೋವಿ ಅಭಿವೃದ್ಧಿ ನಿಗಮ ಪ್ರಾರಂಭ ಮಾಡಲಾಗಿದೆ. ಅದಕ್ಕೆ ಕೊಟ್ಟಿರುವ ಹಣ 92 ಕೋಟಿ ರೂಪಾಯಿಗಳು, ಅದರಲ್ಲಿ ಖರ್ಚಾಗಿರುವ ಹಣ ಸೊನ್ನೆ, ಅದರ ಅಂಕಿ-ಅಂಶ ಇದೆ. ಬಾಕಿ ಉಳಿದಿರುವ ಹಣ 92.94 ಕೋಟಿ ರೂಪಾಯಿಗಳು ಅದು ಹಾಗೆ ಇದೆ. ಅಲ್ಲಿ ನಿಗಮ ಸ್ಥಾಪನೆಯಾಗಿದೆ, ಅಲ್ಲಿಗೆ ಒಬ್ಬ ಎಂಡಿಯನ್ನು ನೇಮಕ ಮಾಡಿದ್ದಾರೆ, ಚೇರ್ಮನ್ ಮಾಡಿದ್ದಾರೆ. ಆದರೆ ಅವರು ವರದಿ ಮಾಡಿಕೊಂಡಿಲ್ಲ, ಹಣ ಖರ್ಚು ಮಾಡಲಿಲ್ಲ. ಸಣ್ಣ ಚೀಟಿ ಇದ್ದ ಹಾಗೆ, SC-ST Development Corporation ನಲ್ಲಿ ತಗುಲಿ ಹಾಕಿಕೊಂಡು ಬಿದ್ದಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಇಲಾಖೆಗೆ ನೀಡಿರುವ ಹಣ 4,942 ಕೋಟಿ ರೂಪಾಯಿಗಳು, ಅದರಲ್ಲಿ ಖರ್ಚಾಗಿರುವ ಹಣ 2,170 ಕೋಟಿ ರೂಪಾಯಿಗಳು, ಬಾಕಿ ಉಳಿದಿರುವ ಹಣ 2,770 ಕೋಟಿ ರೂಪಾಯಿಗಳು. ಅಂದರೆ ಶೇಕಡ 50ರಷ್ಟು ಸಹ ಖರ್ಚಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಲ್ಪಸಂಖ್ಯಾತರ ಬಗ್ಗೆ ಬಹಳ ಮಾತನಾಡುತ್ತಾರೆ, ಅಲ್ಪಸಂಖ್ಯಾತರ ಇಲಾಖೆಗೆ 582 ಕೋಟಿ ರೂಪಾಯಿಗಳನ್ನು ಮೀಸಲಿರಿಸಿದ್ದಾರೆ, ಅದರಲ್ಲಿ ಖರ್ಚಾಗಿರುವ ಹಣ 341 ಕೋಟಿ ರೂಪಾಯಿಗಳು, ಅದರಲ್ಲಿ ಬಾಕಿ ಉಳಿದಿರುವ ಹಣ 221 ಕೋಟಿ ರೂಪಾಯಿಗಳು, ಅವರಿಗೂ ಸಹ ಸರಿಯಾಗಿ ಖರ್ಚು ಮಾಡಲಿಲ್ಲ. ಇದು ನಾನು ನಿಮಗೆ ಕೊಟ್ಟಿರುವಂತಹ ಮಾಹಿತಿ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೂ ಸಹ ಆ ಹಣವನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿಗೆ ಕೊಡಬಾರದು. ಕಾಯ್ದೆ ಪ್ರಕಾರ ಅದನ್ನು ಆ ವರ್ಗಕ್ಕೆ ಮಾತ್ರ ಸೀಮಿತಗೊಳಸಬೇಕು. ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೂ ಸಹ ಕೊಟ್ಟಿದ್ದಾರೆ. ಅಲ್ಲಿ 6,379 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಇಷ್ಟು ಹಣ ಖರ್ಚಾಗಿದೆ ಎಂದು ತೋರಿಸಬಹುದು ಎಂದು. ಅಂದರೆ ಜನರಲ್‌ಗೆ ಕೊಡಲೇಬಾರದು ಆದರೂ ಸಹ ಕೊಟ್ಟಿದ್ದಾರೆ. ಅದರಲ್ಲೂ ಸಹ 3,218 ಕೋಟಿ ರೂಪಾಯಿಗಳನ್ನು ಆ ಇಲಾಖೆಯವರು ಖರ್ಚು ಮಾಡಿಲ್ಲ. ಅದೇ ಇಲಾಖೆಯವರು *TSP (Tribal* Sub-Plan) ಯೋಜನೆಯಲ್ಲಿ 1,350 ಕೋಟಿ ರೂಪಾಯಿಗಳನ್ನು ಅವರು ಸಹ ಖರ್ಚು ಮಾಡಿಲ್ಲ. ನಾನು ಇದನ್ನು official ಆಗಿ ಬಿಡುಗಡೆ ಮಾಡುತ್ತೇನೆ. ಮತ್ತೆ ಇದರಲ್ಲಿ ಸಣ್ಣ ನೀರಾವರಿ ಇಲಾಖೆ ಇದೆ, ಅಂದರೆ ಅಲ್ಲಿ ಬೋರ್‌ವೆಲ್ ಕೊರೆಸುವುದು, ವಿದ್ಯುದೀಕರಣಗೊಳಸುವುದು, ಪಂಪ್‌ಸೆಟ್ ಅಳವಡಿಸುವುದು. ಆ ಇಲಾಖೆಗೆ 2014-15 ರಿಂದ 2017-18 ರವರೆಗೆ ಮೀಸಲಿಟ್ಟಿರುವ ಹಣ 1,245 ಕೋಟಿ ರೂಪಾಯಿಗಳು. ಅದರಲ್ಲಿ ಖರ್ಚಾಗಿರುವುದು 646 ಕೋಟಿ ರೂಪಾಯಿಗಳು, ಬಾಕಿ ಉಳಿದಿರುವುದು 599 ಕೋಟಿ ರೂಪಾಯಿಗಳು. ಇದನ್ನು ಹೀಗೆ ಹೇಳುತ್ತಾ ಹೋದರೆ ಇನ್ನು ಬಹಳ ಇದೆ. ಇರುವಂತಹ 33 ಇಲಾಖೆಯಲ್ಲೂ ಸಹ ಇದೆ ರೀತಿಯ ಗೋಳು. ಅಂದರೆ ನೀವು ಇಟ್ಟಿರುವಂತಹ ಹಣದಲ್ಲಿ ಶೇಕಡ 40ರಷ್ಟನ್ನು ಸಹ ಖರ್ಚು ಮಾಡಿಲ್ಲ. ಇದರಿಂದ ನಮಗೆ ನೋವಾಗುವುದಿಲ್ಲವೆ? ಆ ವರ್ಗದವರು ಅಭಿವೃದ್ಧಿಯಾಗುವುದಕ್ಕೆ ಏನಾದರೂ miracle ಆಗುತ್ತದೆಯೆ? ನೀವುಗಳು ಮಾತ್ರವಲ್ಲ, ನಾವೆಲ್ಲರೂ ಸಹ ಅರ್ಥ ಮಾಡಿಕೊಳ್ಳಬೇಕು. It is not Veeraiah alone should take initiative on it. ನಾವೆಲ್ಲರೂ ಸಹ ಒಂದು ಬಾರಿ ಯೋಚನೆ ಮಾಡೋಣ. ಎಷ್ಟು ವರ್ಷಗಳಿಂದ ನಾವು ಕೇಳುತ್ತಿರುವುದು, ನೀವು ಕೊಟ್ಟ ಹಾಗೆ ಕೊಡುತ್ತಿರುವುದು. ಖರ್ಚು ಮಾಡದೆ ಇರುವುದು, ಅಭಿವೃದ್ಧಿಯಾಗದೇ ಇರುವುದು. ಇದು *SCP* (Special Component Plan) and *TSP* (Tribal Sub-Plan) ಬಗ್ಗೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಸಲಹೆಯನ್ನು ನೀಡಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಎಸ್.ವೀರಯ್ಯ**:- ಮಾನ್ಯ ಸಭಾಪತಿಯವರೇ, ನನ್ನ ಸಲಹೆ ಏನೂ ಇಲ್ಲ. ಕಟ್ಟುನಿಟ್ಟಾಗಿ ಕಾನೂನನ್ನು ಜಾರಿಗೆ ತಂದು ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಲಿ. ನಿಮಗೆ ಅಧಿಕಾರಿಗಳನ್ನು ಜೈಲಿಗೆ ಕಳುಹಿಸುವ ಅಧಿಕಾರವಿಲ್ಲವೆ?

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ, With regard to your fair submission by quoting about the provision of the Constitution, ವಿಶೇಷವಾಗಿ ಈಗಾಗಲೇ ಮಾನ್ಯ ಪ್ರಿಯಾಂಕ ಖರ್ಗೆ ಸಾಹೇಬರು ನಿಮ್ಮನ್ನು appreciate ಮಾಡಿದರು. ಎರಡನೆಯದಾಗಿ ಖರ್ಚು ಮಾಡಿಲ್ಲವೆಂದು ಏನು ಹೇಳಿದ್ದಿರಲ್ಲ, ನಿಜವಾಗಿಯೂ ನಾನು ಕೂಡ ಅದನ್ನು ಒಪ್ಪುತ್ತೇನೆ. ಯಾವ ಅಧಿಕಾರಿಗಳು ಸರ್ಕಾರದ ಯೋಜನೆಯಲ್ಲಿ ಒದಗಿಸಿರುವಂತಹ ಹಣವನ್ನು ಖರ್ಚು ಮಾಡದೆ ಇದ್ದಂತಹ ಸಂದರ್ಭದಲ್ಲಿ, ಅಂತಹ ಅಧಿಕಾರಿಗಳನ್ನು ಆ ಒಂದು ಬಾಧ್ಯತೆಗೆ ಒಳಪಡಿಸಿ, ಶಿಕ್ಷೆ ಕೊಡಿಸಬೇಕು ಎನ್ನುವಂತಹ ಉದ್ದೇಶ ಇಟ್ಟುಕೊಂಡು, ಸರ್ಕಾರ ಬದ್ಧತೆಯಿಂದ 2013ರಲ್ಲಿ ಒಂದು ಕಾಯಿದೆಯನ್ನು ಸಹ ತಂದಿದೆ.

**ಶ್ರೀ ಡಿ.ಎಸ್.ವೀರಯ್ಯ**:- ಮಾನ್ಯ ಸಭಾಪತಿಯವರೇ, ಹಾಗಾದರೆ ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದಾರೆ ಮತ್ತು ಎಷ್ಟು ಜನರಿಗೆ ಒಂದು Show Cause Notice ಕೊಟಿದ್ದಾರೆ. ಈ ಇಲಾಖೆ ಅವರ ಹಿಡಿತದಲ್ಲಿ ಇದೆ. ನೋಡಿ ಇರುವಂತಹ ವಸ್ತು ಸ್ಥಿತಿಯನ್ನು ಹೇಳಿದರೆ ಯಾರೂ ಅದನ್ನು ತಪ್ಪಾಗಿ ಭಾವಿಸಬಾರದು.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದನ್ನು ಪರಿಶೀಲಿಸಿ ಅದರ ಪಟ್ಟಿಯನ್ನು ನೋಡಲಿ. Let us have a fair answer with regard to this point.

**ಶ್ರೀ ಡಿ.ಎಸ್.ವೀರಯ್ಯ**:- ಮಾನ್ಯ ಸಭಾಪತಿಯವರೇ, ಈಗ ನಾನು ಅವರಿಗೆ ಅಂಕಿ-ಅಂಶವನ್ನು ಕೊಟ್ಟಿದ್ದೇನೆ, ಅದನ್ನು ಅವರು deny ಮಾಡಲಿ. ಇಲ್ಲ ನಾವು ಶೇಕಡ 100ರಷ್ಟು ಖರ್ಚು ಮಾಡಿದ್ದೇವೆಂದು ಹೇಳಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಂಬಾ ಗಂಭೀರವಾದ ವಿಷಯವನ್ನು ಎತ್ತಿದ್ದಾರೆ, ಕೇವಲ 2014 ರಿಂದ 2018ರವರೆಗೆ ಮಾಡಿದ್ದು ಅಲ್ಲ. ಅವರು ಹೇಳುತ್ತಿರುವುದು ಸಂವಿಧಾನಾತ್ಮಕವಾಗಿ ನಾವು ಆ ಎರಡೂ ಜನಾಂಗಗಳ ಅಭಿವೃದ್ಧಿಗಾಗಿ ಇಂತಿಷ್ಟೆ ಹಣವನ್ನು ಖರ್ಚು ಮಾಡಬೇಕು. ಆದರೆ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಸದಸ್ಯರು ಅದನ್ನು ದೂಷಣೆ ಮಾಡುತ್ತಿಲ್ಲ. ನಾವು ಎಲ್ಲಿ ತಪ್ಪಿದ್ದೇವೆ? ನಾಲ್ಕು ಜನ ಅಧಿಕಾರಿಗಳನ್ನು ಕಾರಾಗೃಹಕ್ಕೆ ಕಳುಹಿಸಿದ

ಮಾತ್ರಕ್ಕೆ ಈ ಸಮಸ್ಯೆ ಪರಿಹಾರವಾಗುತ್ತದೆಯೆ? ಕಾನೂನು ಪ್ರಕಾರ ಎಷ್ಟು ಕೊಡಬೇಕೊ ಅದನ್ನು ಕೊಡುತ್ತಿಲ್ಲ. ಕೊಟ್ಟಿರುವುದನ್ನು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಏತಕ್ಕೆ ಅದನ್ನು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಹಾಗಾದರೆ ಎಲ್ಲಿ ತಪ್ಪಿದ್ದೇವೆ. ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕಲ್ಲವೆ? ಎಷ್ಟು ವರ್ಷ ಇದೆ ರೀತಿಯ ಕಷ್ಟವನ್ನು ಅನುಭವಿಸುತ್ತಿರಬೇಕು ಎಂಬುದನ್ನು ಅವರು ಬಹಳ ಗಂಭೀರವಾಗಿ ಹೇಳುತ್ತಿದ್ದಾರೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತು ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರ ರವರು ವಕೀಲರು, ಈ ಆ್ಯಕ್ಟ್‌ನಲ್ಲಿ 24ನೇ ಅಂಶವನ್ನು ನೋಡಿದರೆ, 'ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿಸತಕ್ಕದ್ದು' ಯಾವುದು ಎಂದರೆ, SCP and TSP ಹಣವನ್ನು ಖರ್ಚು ಮಾಡದೆ ಇದ್ದರೆ. ಅಂತಹ ಅಧಿಕಾರಿಗಳನ್ನು ಆರು ತಿಂಗಳು ಜೈಲಿಗೆ ಕಳುಹಿಸಬಹುದು ಎಂದು ಇದೆ, ಯಾವ ಅಧಿಕಾರಿಯನ್ನಾದರೂ ಮೂರು ದಿನ ಜೈಲಿಗೆ ಕಳುಹಿಸಿದ್ದಾರೆಯೆ? ಇದು ನನ್ನ ಇಂಗಿತ. ಹಣವನ್ನು ಖರ್ಚು ಮಾಡಿಲ್ಲವೆಂದು ಒಂದು ನೋಟಿಸ್ ಅಥವಾ ಶೋಕಾಸ್ ನೋಟಿಸ್ ಅನ್ನು ಕೊಟ್ಟು ಏತಕ್ಕೆ ಹಣವನ್ನು ಖರ್ಚು ಮಾಡಿಲ್ಲವೆಂದು ಕೇಳಬಹುದಾಗಿತ್ತು. ಇಚ್ಛಾಶಕ್ತಿಯ ಕೊರತೆ ಇದೆ ಮತ್ತು ಎಲ್ಲೋ ಒಂದು ಕಡೆ ಮೂಗಿಗೆ ತುಪ್ಪ ಸವರುವಂಥದ್ದು, ಈ ವರ್ಗಗಳನ್ನು ಇದ್ದ ಸ್ಥಿತಿಯಲ್ಲೆ, ಯಥಾಸ್ಥಿತಿಯಲ್ಲೆ ಇರಿಸುವಂತಹ ಒಂದು ಪ್ರವೃತ್ತಿ ನಡೆದು ಬಂದಿದೆ. ಅದಕ್ಕೋಸ್ಕರ ಇನ್ನೂ ಕೂಡ ಆ ಕೂಗು SCP and TSP ವಿಚಾರದಲ್ಲಿ ಬೇಕು. ಅಂಬೇಡ್ಕರ್‌ರವರು ಸುಮಾರು 20 ವರ್ಷ ಸಾಕು ಎಂದಿದ್ದರು. ಆದರೆ ಏತಕ್ಕೆ ಇಷ್ಟು ವರ್ಷ ಬಂತು ಎಂದರೆ, ಈ ಕಾರಣಕ್ಕಾಗಿ ಆ ಇಚ್ಛಾಶಕ್ತಿಯ ಕೊರತೆ ಇದೆ. ಕಾನೂನು ಮಾಡಿಕೊಂಡಿದ್ದೇವೆ, ಸ್ವಾಮಿ ತಪ್ಪಿತಸ್ಥರನ್ನು ಶಿಕ್ಷಿಸಿ. ನಾನು ಇದನ್ನು ತಮಗೆ ಕೊಡುತ್ತೇನೆ, ಇದನ್ನು ತೆಗೆದು ನೋಡಿ.

ಮಾನ್ಯ ಸಭಾಪತಿಯವರೇ, ನೋಡಿ ಇನ್ನೊಂದನ್ನು ಮಾಡಿದ್ದಾರೆ 'ಇಲಾಖಾವಾರು ಸಾಧನೆಗಳನ್ನು ಬಳಕೆಯಾಗದೆ ಉಳಿದ ನಿಧಿಗಳನ್ನು ಒಳಗೊಂಡ ಅನುಸೂಚಿತ ಜಾತಿ ಉಪಯೋಜನೆ, ಬುಡಕಟ್ಟು ಯೋಜನೆ ಅನುಷ್ಟಾನದ ಫಲಿತಾಂಶ ಕುರಿತ ಒಂದು ವಾರ್ಷಿಕ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು' ಈಗ ನಾಲ್ಕು ವರ್ಷವಾಯಿತು. ಮಾನ್ಯ ಸಭಾಪತಿಯವರೇ, ತಾವೇನಾದರೂ ಸಹ ಮಂಡಿಸಿರುವುದನ್ನು ನೋಡಿದ್ದೀರಾ? ಅದನ್ನು ಏಕೆ ಮಂಡಿಸಲಿಲ್ಲ? ಕಾನೂನು ಮಾಡಿದವರು ಯಾರು? ಕಾಯಿದೆ ಮಾಡಿದವರು ಯಾರು? ಅದನ್ನು ಒಂದು ದಿವಸವಾದರು ತರಬಹುದಿತ್ತು. ಮತ್ತೆ ಜಿಲ್ಲಾಮಟ್ಟದ ಉಸ್ತುವಾರಿ ಸಮಿತಿ ಮಾಡಬೇಕು ಎಂದು ಕಾನೂನಿನಲ್ಲಿ ಇದೆ. ಅದು ಜಿಲ್ಲಾಮಟ್ಟದಲ್ಲಿ ಎಲ್ಲಿದೆ ಸ್ವಾಮಿ? ಎಷ್ಟು ಮೀಟಿಂಗ್‌ಗಳನ್ನು ಮಾಡಿದ್ದಾರೆ. ನೀವು ಎಲ್ಲೋ ಒಂದು ಕಡೆ ಕಾನೂನನ್ನು ಮಾಡಿಬಿಟ್ಟು, ಆ ಕಾನೂನನ್ನು ಜಾರಿ ಮಾಡಿ ಅದನ್ನು monitor ಮಾಡದೆ ಇದ್ದರೆ, fix ಮಾಡದೆ ಹೋದರೆ, ನಾವು

ಎಲ್ಲಿ ಇದ್ದೇವೆ ಎಂದು ನೋಡಿ. ಏತಕ್ಕೆ ಹಣವನ್ನು ನಿಗದಿ ಮಾಡುತ್ತೀರಿ. ಹಾಗಾದರೆ ಬರಿ ಬಜೆಟ್ ಅನ್ನು ಓದಿಕೊಂಡು ಹೋಗುವುದೆ.

ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, 2017-18ನೇ ಸಾಲಿನಲ್ಲಿ 27,700 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹಾಗಾದರೆ ಖರ್ಚಾಗಿರುವ ಹಣ ಎಷ್ಟು? ಈಗ ಎಲ್ಲಾ ಹೋಬಳಿಗಳಲ್ಲೂ ವಸತಿ ಶಾಲೆಗಳನ್ನು ಕೊಡುತ್ತೇವೆ ಎಂದರು, ಅದು ಯಾವಾಗ ಎಂದರೆ 2014-15ರಲ್ಲಿ ಸಾಲಿನಲ್ಲಿ ಎಂದರು ಮಾನ್ಯ ಸಚಿವರಾದ ಹೆಚ್.ಆಂಜನೇಯರವರು. ಮಾನ್ಯ ಸಚಿವರಿಗೆ ಎಷ್ಟು ಹೋಬಳಿಗಳು ಇವೆ ಎಂದು ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 725 ಹೋಬಳಿಗಳು ಇವೆ. ಇದಕ್ಕೆ ನಾನು ಪ್ರಶ್ನೆಯನ್ನು ಹಾಕಿದ್ದೆ. ಅದಕ್ಕೆ ಅವರು ಸುಮಾರು 45 ಹೋಬಳಿಗಳಲ್ಲಿ ಆಗಿದೆ ಎಂದು ಹೇಳುತ್ತಾರೆ. ಹಾಗಾದರೆ ಎಲ್ಲಿ ಆಗಿದೆ ಸ್ವಾಮಿ, ನೀವು ಏತಕ್ಕೆ ಸುಳ್ಳು ಹೇಳುತ್ತೀರಿ. ಖರ್ಚಾಗದೆ ದುಡ್ಡು ಸಹ ಬಾಕಿ ಇದೆ. ಆ ವಸತಿ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೂ ಸಹ ನಿಮ್ಮ ಕೈಯಲ್ಲಿ ಆಗಲಿಲ್ಲ. ಈಗ ಸುಮಾರು 55 ಶಾಲಾ ಸಂಕೀರ್ಣಗಳಿಗೆ ಅನುಮೋದನೆ ನೀಡುವುದಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

**(ಮುಂದು...)**

**ಶ್ರೀ ಡಿ.ಎಸ್. ವೀರಯ್ಯ(ಮುಂದುವರೆದಿದ್ದು...):-**

ಈ ಬಾರಿ 55 ಶಾಲಾ ಸಂಕೀರ್ಣಗಳಿಗೆ ಅನುಮೋದನೆ ನೀಡುವುದಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ ಎಂದು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಈ ಸಂಕೀರ್ಣಗಳನ್ನು ಎಲ್ಲೆಲ್ಲಿ ಮಾಡಲಾಗಿದೆ? ಈ ಹಾಸ್ಟೆಲ್ ಸಂಕೀರ್ಣಗಳು ಸಂಕೀರ್ಣ ಎಂದರೆ ಏನು? ಅದು ನನಗೆ ಗೊತ್ತಾಗುವುದಿಲ್ಲ. ಹೋಬಳಿಗೆ ಒಂದು ವಸತಿ ಶಾಲೆಗಳನ್ನು ಮಾಡುವುದಕ್ಕಾಗಲಿಲ್ಲ, ಇನ್ನು ಕಾಂಪ್ಲೆಕ್ಸ್‌ಗಳನ್ನು ಎಲ್ಲಿ ಮಾಡುತ್ತಾರೆ? ಆದರೆ, ಈ ಬಗ್ಗೆ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಸುಮ್ಮನೆ ಓದಿಸುತ್ತಾರೆ.

**(ಗೊಂದಲ)**

ಸಂಕೀರ್ಣಗಳು ಎಲ್ಲಿ ಆಗಿವೆ ಎಂದು ಒಂದು ಉದಾಹರಣೆಗೆ ಕೊಡಲಿ. ಹಾಸ್ಟೆಲ್‌ಗಳ ಬಗ್ಗೆ ನಾನು ಹೇಳುತ್ತಿಲ್ಲ. ಸಂಕೀರ್ಣಗಳು ಎಂದರೆ complexes. ಎಲ್ಲಾ ಎಸ್‌ಸಿ/ಎಸ್‌ಟಿ ಎಲ್ಲಾ ವರ್ಗದವರ ಹಾಸ್ಟೆಲ್‌ಗಳ ಸಂಕೀರ್ಣ. ಅವುಗಳು ಎಲ್ಲಿಯೂ ಆಗಿರುವುದಿಲ್ಲ. ಹೋಬಳಿ ಬಗ್ಗೆ ಹೇಳಿ. ನನಗೆ ಉತ್ತರ ನೀಡುವುದರಲ್ಲಿ ಈ ಬಗ್ಗೆ ಮಾಹಿತಿ ಇದೆ. 2014-15ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ Laptop ಕೊಡುತ್ತೇವೆಂದು announce ಮಾಡಿದ್ದಾರೆ. ಆ Laptop ಗಳನ್ನು ಇವತ್ತಿನ ದಿವಸಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಲ್ಪ ಕೊಟ್ಟಿದ್ದಾರೆ ಮತ್ತು ಅವು ಕೂಡ ಕಳಪೆ ಗುಣಮಟ್ಟದ್ದಾಗಿವೆ ಎಂದು ಈ ಸದನದಲ್ಲಿಯೇ ಸದನ ಸಮಿತಿ ಆದದ್ದು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಹಾಗಾದರೆ, 2014-15 ರಿಂದ 2016-17 ನೇ ಇಸವಿಯವರೆಗೆ ಆ ವರ್ಗದವರಿಗೆ ಸರ್ಕಾರ ವಂಚನೆ ಮಾಡಿಲ್ಲವೇ? ಯಾವನೋ ಒಬ್ಬ ಹತ್ತು ರ್‍ಯಾಂಕ್...

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಸದನ ಸಮಿತಿ ಮಾಡಿದ್ದು ಕಳಪೆ Laptop ಕೊಟ್ಟಿದ್ದಕ್ಕೆ ಅಲ್ಲ. ಅಲ್ಲಿ ನಮ್ಮ ...

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಟೆಂಡರ್ ಬಗ್ಗೆಯೇ ಸದನ ಸಮಿತಿ ಮಾಡಿರುವುದು.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಟೆಂಡರ್ ಪ್ರಕ್ರಿಯೆಯೇ ಆಗಿರಲಿಲ್ಲ. ಅದಕ್ಕೆ core vaccine ಏನು ಅವಶ್ಯಕತೆ ಇರಲಿಲ್ಲ. ನಮ್ಮ ಉನ್ನತ ಶಿಕ್ಷಣ ಸಚಿವರು ಸ್ವತಃ ಅವರೇ ನಾನು ಸದನ ಸಮಿತಿ ರಚನೆ ಮಾಡುವುದಕ್ಕೆ ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದರಿಂದಲೇ ಮಾನ್ಯ ಸಭಾಪತಿಯವರು ಸದನ ಸಮಿತಿ ರಚಿಸಿದರೇ ವಿನಃ ಈ ಒಂದು ಸದನ ಸಮಿತಿಯಲ್ಲಿ ಯಾವುದೇ Laptop ಗೆ ಟೆಂಡರ್ ಪ್ರಕ್ರಿಯೆ ಆಗಿರಲಿಲ್ಲ ಮತ್ತು ಅದಕ್ಕೆ Cause of Action ಇರಲಿಲ್ಲ. ಆದರೂ ವಿರೋಧ ಪಕ್ಷದ ಸದಸ್ಯರೆಲ್ಲರೂ ಒತ್ತಡ ಮಾಡಿದರೆಂದು ನಮ್ಮ ಮಂತ್ರಿಗಳು ಒಪ್ಪಿದರು, ನಾವು ಕೂಡ ಅದನ್ನು ಒಪ್ಪಿದೆವು.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಸತ್ಯವನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಯಾವುದೇ ಸುಳ್ಳು ಹೇಳುವುದಿಲ್ಲವೆನ್ನುವುದು ನನ್ನ ಅನುಭವ. ಆವೊತ್ತಿನ ದಿವಸ ಶ್ರೀ ಅಜಯ್ ನಾಗಭೂಷಣ್‌ರವರು ಏತಕ್ಕೆ ಆ Laptop ನ ಟೆಂಡರ್ ಪ್ರಕ್ರಿಯೆ ಅನ್ನು reject ಮಾಡಿದರು ಎಂಬ ವಿಷಯದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಶ್ರೀ ಅಜಯ್ ನಾಗಭೂಷಣ್‌ರವರು ಆವೊತ್ತಿನ ದಿವಸ 4-5 ಫೇಸ್‌ನಲ್ಲಿ different zones ನಲ್ಲಿ ಮಾಡಬೇಕೆಂದು ಮಾಡಿಕೊಂಡಿದ್ದರು, ಈ ರೀತಿ ರಾಜ್ಯವ್ಯಾಪಿ ಒಂದು ಬಾರಿ ಟೆಂಡರ್ ಮಾಡಬಾರದೆಂದು ಅವರಿಗೂ ಮತ್ತು ಕಾರ್ಯದರ್ಶಿಯವರಿಗೂ ಈ ವಿಷಯದಲ್ಲಿ ವ್ಯತ್ಯಾಸ ಇದ್ದುದರಿಂದ ಆ ಪತ್ರ ಬರೆದಿದ್ದೇನೆಂದು ಅಷ್ಟೇ ಹೇಳಿದ್ದರು. ಆ ಬಗ್ಗೆ ವಿರೋಧ ಪಕ್ಷದ ಸದಸ್ಯರು ಕೇಳಿದ್ದರಿಂದಲೇ ಸದನ ಸಮಿತಿ ರಚನೆಗೆ ಒಪ್ಪಿಕೊಂಡಿದ್ದೆವು.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಸದನ ಸಮಿತಿ ಏತಕ್ಕೆ ರಚನೆ ಮಾಡಿದರು? ಅದಕ್ಕೆ ಕಾರಣ ಇರಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಒತ್ತಡ ಮಾಡಿದರೆಂದು ಸದನ ಸಮಿತಿ ರಚನೆ ಮಾಡಿದೆವು.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ನಾವು ಸುಮ್ಮನೆ ಸದನ ಸಮಿತಿ ಮಾಡಬೇಕೆಂದು ಹೇಳುತ್ತೇವೆಯೇ?

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸೀತಾರಾಂ ಸರ್...

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಆವೊತ್ತಿನ ದಿನದ ಸಭೆಯಲ್ಲಿ ಇದರಲ್ಲಿ ಟೆಂಡರ್ ಆಗಿರುವುದಿಲ್ಲ. ಆದುದರಿಂದ, there is no cause for action ಎಂದು ನಾನೇ ಹೇಳಿದ್ದೆನು. ಆದರೆ, ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನ ಸಮಿತಿ ರಚನೆ ಮಾಡಬೇಕೆಂದು ಒತ್ತಡ ಮಾಡಿದ್ದರಿಂದಲೇ ನಮ್ಮ ಮಂತ್ರಿಗಳು ಸಮಿತಿ ರಚನೆಗೆ ಒಪ್ಪಿಕೊಂಡರು ನಾವೂ ಕೂಡ ಅದನ್ನು ಒಪ್ಪಿದೆವು.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ಸದನ ಸಮಿತಿ ರಚನೆ ಮಾಡಿದರೆಂದು ಹೇಳಬಹುದಲ್ಲವೇ? ಇದರಲ್ಲಿ ನಮ್ಮ ಬೇಡಿಕೆ ಏನಿತ್ತು ಎಂದು ತಿಳಿಸಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:-** ಮಾನ್ಯ ಶರಣಪ್ಪ ಮಟ್ಟೂರರವರೇ...

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕಡತಕ್ಕೆ ತಪ್ಪು ಮಾಹಿತಿ...

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದೆಂದು ನಾನು ಈ ರೀತಿ ಹೇಳಿದೆನಷ್ಟೇ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಆ ಟೆಂಡರ್‌ನಲ್ಲಿ ಲೋಪ ಇದೆ, ಟೆಂಡರ್‌ನಲ್ಲಿ cost high ಮಾಡಿದೆ ಎಂದು ಟೆಂಡರ್ ಅನ್ನು ವಜಾಗೊಳಿಸಿ, ಮತ್ತೆ ನಾವೆಲ್ಲರೂ ಒತ್ತಾಯ ಮಾಡಿದ ನಂತರ ಸದನ ಸಮಿತಿ ರಚನೆಯಾಯಿತು.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು. ಬೆಳಗಾವಿ ಅಧಿವೇಶನದಲ್ಲಿ ಸನ್ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರು 10 ಸಾವಿರ kickback ಪ್ರತಿಯೊಂದು Laptop ಯೂನಿಟ್‌ಗೆ ತೆಗೆದುಕೊಂಡಿದ್ದಾರೆ ಎನ್ನತಕ್ಕಂತಹ ಆರೋಪವನ್ನು ಹಿಡಿದು, ಪ್ರಶ್ನೆಗಳ ಮೇಲೆ ವಿಚಾರಣೆ ಬಂದಾಗ ಸದನ ಸಮಿತಿ ರಚನೆ ಮಾಡಿದರು. ಯಾವುದೇ ರೀತಿಯ ಅಂತಹ ಅವಘಡಗಳು ಇದರಲ್ಲಿ ನಡೆದಿಲ್ಲ ಎನ್ನುವಂತಹ ಮಾತುಗಳನ್ನು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಹೇಳಿದಾಗ ನನ್ನ ಹತ್ತಿರ ದಾಖಲೆಗಳಿವೆ ಅವುಗಳನ್ನು ನಾನು ತೋರಿಸುತ್ತೇನೆಂದು ಮಾನ್ಯ ಸದಸ್ಯರು ಹೇಳಿದರು. ಆ ತಕ್ಷಣವೇ ಮಾನ್ಯ ಸಚಿವರು ನಾನು ಈ ಯೋಜನೆಯಲ್ಲಿ ಒಂದು ಕಪ್ ಕಾಫಿಯನ್ನು ಸಹ ಕುಡಿದಿರುವುದಿಲ್ಲ, ಇಂತಹ ಆರೋಪಗಳನ್ನು ಮಾಡಬಾರದು, ಪ್ರಾಮಾಣಿಕತೆಯಿಂದ ನಾನು ಕೆಲಸ ಮಾಡುತ್ತಿದ್ದೇನೆ. 22 ಸಾವಿರ ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿ 32 ಸಾವಿರ Laptop ಅನ್ನು ನಾವು ಡಿಗ್ರಿ ಕಾಲೇಜಿನಲ್ಲಿ ಓದುತ್ತಿರುವ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಕೊಟ್ಟಿರುತ್ತೇವೆ. ಈಗ ಎಸ್‌ಸಿ/ಎಸ್‌ಟಿ/ಓಬಿಸಿ ನಂತರ ಸಾಮಾನ್ಯ ವರ್ಗದ ವಿದ್ಯಾರ್ಥಿಗಳನ್ನು ಸೇರಿಸಿ 1 ಲಕ್ಷ 50 ಸಾವಿರ Laptop ಗಳನ್ನು ಕೊಡುತ್ತಿದ್ದೇವೆ, 227 ಕೋಟಿ ರೂಪಾಯಿಗಳ ಹಣವನ್ನು ಬಜೆಟ್‌ನಲ್ಲಿ allocation ಮಾಡಿದ್ದಾರೆ. ಅದಕ್ಕೋಸ್ಕರ ಇನ್ನೂ ಟೆಂಡರ್ ಪ್ರಕ್ರಿಯೆ ಕೂಡ ನಡೆದಿರುವುದಿಲ್ಲ. 3 ಬಾರಿ ನಡೆದ TAP (Technical Advisory Panel) Committee report ಅನ್ನು ತೆಗೆದುಕೊಂಡು, configuration ಕೋಸ್ಕರ ಅದು ವಿಳಂಬವಾಗಿತ್ತು, ಆದರೆ, ಅದು ಟೆಂಡರ್ ಪ್ರಕ್ರಿಯೆಗೆ ತಯಾರಾಗಿದೆ ಎನ್ನುವಂತಹ ಮಾತನ್ನು ಸಹ ಹೇಳಿದ್ದಾರೆ. ಅದರಲ್ಲಿ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅವ್ಯವಹಾರ ಆಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ತಮಗೂ ಕೂಡ ಗೊತ್ತಿದೆ. ಈ ವಿಷಯದಲ್ಲಿ ಅನೇಕ ಚರ್ಚೆಗಳು ನಡೆದಿವೆ. ಮುಖ್ಯವಾಗಿ ಶ್ರೀ ಅಜಯ್ ನಾಗ್‌ಭೂಷಣ್‌ರವರನ್ನು ವರ್ಗಾವಣೆ ಮಾಡಿದ್ದು, ಅದನ್ನು ಏತಕ್ಕೆ ಮಾಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ಆಯಿತು, I will not go into deep. ಈಗ ಆ ವಿಷಯ ಸದನ ಸಮಿತಿ ಇರುವುದರಿಂದ ನಾನು ಆ ಬಗ್ಗೆ ಮಾತನಾಡುವುದಿಲ್ಲ.

**ಉಪ ಸಭಾಪತಿಯವರು:-** ಈ ವಿಷಯ ಸದನ ಸಮಿತಿ ಮುಂದೆ ಇರುವುದರಿಂದ, ಆ ವಿಷಯದ ಬಗ್ಗೆ ಚರ್ಚೆ ಬೇಡ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಇನ್ನು ಸಫಾಯಿ ಕರ್ಮಚಾರಿಗಳ ಬಗ್ಗೆ ಹೇಳುವುದಾದರೆ, carrying night-soil ಅಥವಾ ಅದನ್ನು ತಲೆ ಮೇಲೆ ಹೊರುವುದಾಗಲಿ, ತೆಗೆಯುವುದಾಗಲಿ, ಕಳುಹಿಸುವುದಾಗಲಿ, ಅದು ಶ್ರೀ ದೇವರಾಜು ಅರಸುರವರ ಕಾಲದಲ್ಲಿ ಶ್ರೀ ಬಸವಲಿಂಗಪ್ಪ ನವರ ಹೋರಾಟದಿಂದ ಇಡೀ ವಿಧಾನಮಂಡಲ ಒಪ್ಪಿಕೊಂಡು ಆ ಬಗ್ಗೆ ಒಂದು ಕಾನೂನು ಅನ್ನು ಮಾಡಿದರು. ಇದೇ ವರ್ಷದಲ್ಲಿ ಒಟ್ಟು 5 ಜನ ಸತ್ತಿದ್ದಾರೆ. ಇತ್ತೀಚೆಗೆ ಒಂದು ಹೋಟೆಲ್‌ನಲ್ಲಿ septic tank ಗಳನ್ನು ಸ್ವಚ್ಛಗೊಳಿಸಲು ಒಳಗಡೆ ಇಳಿದ, ರಾಮು ಮತ್ತು ಮತ್ತೊಬ್ಬ ರವಿ ಎನ್ನುವವರು ಕೂಡ ಸತ್ತಿದ್ದಾರೆ. ಅಂತಹ ಟ್ಯಾಂಕ್‌ಗಳಲ್ಲಿ carbon dioxide ಇರುತ್ತದೆ, ಅಲ್ಲಿ ಅವರು 5 ನಿಮಿಷ ಸಹ

ಬದುಕುವುದಕ್ಕೆ ಆಗುವುದಿಲ್ಲವೆಂದು ನಮಗೆ ಗೊತ್ತಿಲ್ಲವೇ? ಅಂತಹ ಟ್ಯಾಂಕ್‌ಗಳನ್ನು ಎಷ್ಟು ದಿನದ ಹಿಂದೆ ತೆಗೆದಿದ್ದಾರೆ, ಇಂತಹ ಟ್ಯಾಂಕ್‌ಗಳನ್ನು ತೆಗೆಯುವುದಕ್ಕೆ ಬಿ.ಬಿ.ಎಂ.ಪಿ. ಅಧಿಕಾರಿಗಳು ಆ ಹೋಟೆಲ್‌ಗೆ ಪರವಾನಗಿ ಪತ್ರ ಕೊಟ್ಟಿದ್ದಾರೆ. ಆ ಹೋಟೆಲ್‌ನ septic tank ಕ್ರೀಡಾಂಗಣದಲ್ಲಿದೆ. ಅಲ್ಲಿ ಬಿ.ಬಿ.ಎಂ.ಪಿ. ಇನ್ಸ್‌ಪೆಕ್ಟರ್ ಇರಲಿಲ್ಲವೇ? ಅಂತಹ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಕಾರ್ಮಿಕ ಇಳಿಯುತ್ತಾನೆ, ಅವನು ಉಸಿರಾಟದ ತೊಂದರೆಯಿಂದ ಕೂಗಿಕೊಂಡಾಗ, ಮತ್ತೊಬ್ಬ ಕಾರ್ಮಿಕ ಇಳಿಯುತ್ತಾನೆ. ಇದರಿಂದಾಗಿ, ಇಬ್ಬರು ಕಾರ್ಮಿಕರು ಸತ್ತು ಹೋಗುತ್ತಾರೆ. ಈ ರೀತಿ ಇದೇ ವರ್ಷದಲ್ಲಿ ಒಟ್ಟು 5 ಜನ ಸತ್ತಿದ್ದಾರೆ. ಇದು ನಮ್ಮ ಸರ್ಕಾರದ ಆಡಳಿತಾವಧಿಯಲ್ಲಿ ಆಗಿಲ್ಲವೆಂದು ನಾನು ಹೇಳುತ್ತಿಲ್ಲ. ನಮ್ಮ ಕಾಲದಲ್ಲಿಯೂ ಆಗಿದೆ. ಹಾಗಾದರೆ, ಎಲ್ಲಿಯಾದರೂ ಒಂದು ಕಡೆ ಇದನ್ನು ನಿಲ್ಲಿಸಬೇಕಲ್ಲವೇ? ಅಂತಹ ಹೋಟೆಲ್‌ಗಳಿಗೆ ಪರವಾನಗಿಯನ್ನು ಹೇಗೆ ಕೊಟ್ಟಿದ್ದಾರೆ? ಅಂತಹ ಕಾರ್ಮಿಕರು ಏತಕ್ಕೆ ಸಾಯಬೇಕು? ಇಂತಹ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ಮಿಷಿನ್‌ಗಳನ್ನು ತರಿಸಿದ್ದೇವೆಂದು ಸರ್ಕಾರದವರು ಉತ್ತರ ಕೊಟ್ಟಿದ್ದಾರೆ? ಹಾಗಾದರೆ, ಅವುಗಳಲ್ಲಿ ಎಷ್ಟು ಮಿಷಿನ್‌ಗಳು ಕೆಲಸ ಮಾಡುತ್ತಿವೆ? Government has replied that, machines have been purchased for cleaning drainage and nobody is using their hands for drainage cleaning purpose. Manual ಆಗಿ ಯಾವುದೇ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಆದರೆ, ಇಂತಹ ಕೆಲಸಗಳೂ ಇನ್ನು ನಡೆಯುತ್ತದೆಯಲ್ಲವೇ? ಇಷ್ಟು ವರ್ಷಗಳು ಈ ಪದ್ಧತಿಯನ್ನು ತಡೆ ಹಾಕುವುದಕ್ಕೆ ಆಗಲಿಲ್ಲ. ಈಗ ಅಧಿಕಾರದಲ್ಲಿರುವ ಸರ್ಕಾರ ಇಂತಹ ಪದ್ಧತಿಗೆ ಈಗಲಾದರು ತಡೆ ಹಾಕಿದರೆ ಅದು ನಿಲ್ಲುತ್ತದೆಯಲ್ಲವೇ? ಇಂತಹ ಕಾರ್ಮಿಕರುಗಳಿಗೆ ಪುನರ್ವಸತಿ ಕಲ್ಪಿಸಿಕೊಡುತ್ತೇವೆಂದು ಹೇಳಿದ್ದರು, ಆ ಬಗ್ಗೆ ನಾನು ಕೂಡ ಚರ್ಚೆ ಮಾಡಿದ್ದೆನು. ಅದರ ಪ್ರಕಾರ ಒಂದಿಷ್ಟು ಜನಕ್ಕೆ ಪುನರ್ವಸತಿ ಕಲ್ಪಿಸಿಕೊಟ್ಟಿದ್ದಾರೆ. ಈಗ ಸತ್ತ ಕಾರ್ಮಿಕನ ಗತಿಯೇನು? ಈ ಕಾರ್ಮಿಕರೆಲ್ಲರ ಆಯಸ್ಸು ಕೇವಲ 35 ರಿಂದ 40 ವರ್ಷಗಳು, ನಂತರ ಅವರು ಸಾಯುತ್ತಾರೆ. ಅವರಿಗೆ ಸಾಂಕ್ರಾಮಿಕ ರೋಗಗಳು ಕಾಡುತ್ತವೆ. ಅವರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವುದಿಲ್ಲ, ಅವರ ಜೀವನವೆಲ್ಲ ಅದೇ ಗತಿಯಾಗುತ್ತದೆ. ಅದಕ್ಕೆ ನಾನು ಹೇಳುತ್ತಿರುವುದು, ನಾವು ಯಾವುದೇ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತಿರುವುದಿಲ್ಲ. ಎಸ್‌ಸಿ/ಎಸ್‌ಟಿ ವಿಷಯದ ಬಗ್ಗೆ ನಾನು ಹೇಳುತ್ತಿದ್ದೇನೆ.

ಪ್ರಗತಿಪರ ಲಿಂಗತ್ವ ಅಲ್ಪಸಂಖ್ಯಾತರ ನೀತಿಯನ್ನು ಜಾರಿಗೊಳಿಸಲಾಗುವುದೆಂದು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಹೇಳಿದ್ದಾರೆ. ಡಾ॥ ಜಯಮಾಲ ರಾಮಚಂದ್ರ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಅವರು ತಮ್ಮ ವರದಿಯನ್ನು 2017 ರಲ್ಲಿ ಕೊಟ್ಟಿದ್ದಾರೆ. ಕಳೆದ ಬಜೆಟ್‌ನಲ್ಲಿಯೂ ಕೂಡ ಇದನ್ನು announce ಮಾಡಿದ್ದಾರೆ. 2011 ರಲ್ಲಿಯೇ ಈ ಬಗ್ಗೆ ಇಷ್ಟು ಕೋಟಿ ರೂಪಾಯಿ ಖರ್ಚಾಗಬೇಕು ಎನ್ನುವುದನ್ನು ಸಹ ಅಂದಾಜು ಮಾಡಿ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಆ ವರದಿಯನ್ನು ಸದನದಲ್ಲಿ ಮಂಡಿಸಿರುವುದಿಲ್ಲ. ಯಾವಾಗ ಮಂಡಿಸಿದ್ದಾರೆ? ಹಾಗಾದರೆ, ರಾಜ್ಯಪಾಲರ ಭಾಷಣದಲ್ಲಿ ಏತಕ್ಕೆ ಈ ನೀತಿ ಜಾರಿ ಮಾಡಿದ್ದೇವೆಂದು ಹೇಳಿಸುತ್ತಾರೆ? ಲಕ್ಷಾಂತರ ಹೆಣ್ಣುಮಕ್ಕಳ ಭವಿಷ್ಯ ಆ ವರದಿಯಲ್ಲಿ ಅಡಗಿದೆ. ಇದನ್ನು ಡಾ॥ ಜಯಮಾಲ ರಾಮಚಂದ್ರರವರು ನೀಡಿರುವ ವರದಿ ಹೇಳುತ್ತದೆ. 2 ಲಕ್ಷ ಹೆಚ್.ಐ.ವಿ. ಸೋಂಕಿತರು ಈ ರಾಜ್ಯದಲ್ಲಿದ್ದಾರೆ. 1 ಲಕ್ಷ registered sex workers ಇದ್ದಾರೆ. ದೇವದಾಸಿ ಮಕ್ಕಳು ಕೂಡ ತಮ್ಮ ದಂಧೆಯನ್ನು ಮುಂದುವರೆಸಿದ್ದಾರೆ. ಹಾಗಾದರೆ, ಈ ನೀತಿಯನ್ನು ಏತಕ್ಕೆ ಜಾರಿಗೆ ತಂದಿರುವುದಿಲ್ಲ? ಇವುಗಳಿಗೆ ಖಾಯಂ ಪರಿಹಾರ ಎಲ್ಲಿದೆ? ಸುಮ್ಮನೆ ಹೇಳಿಕೊಂಡು ಹೋಗುವುದಾ? ನೊಂದಾಯಿತ ಆಗಿರುವುದನ್ನು ಮಾತ್ರ ನಾನು ಹೇಳಿದ್ದೇನೆ. ಆದರೆ, ಸರ್ಕಾರ ಇದನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಿದೆ. ಎಲ್ಲಿ ಜಾರಿಗೆ ತಂದಿದ್ದಾರೆ? ಈ ರೀತಿಯ ವಿಷಯಗಳನ್ನು ಸರ್ಕಾರ ಮಾಡುತ್ತಿರುವುದಿಲ್ಲ.

ಒಂದು ರೀತಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ... ನಮ್ಮ ಕಡೆ ಒಂದು ಮಾತು ಹೇಳುತ್ತಾರೆ. ಅದೇನೆಂದರೆ, "ಗೂಳಿಗಳು ಎಂದು ಕರೆಯುತ್ತಾರೆ. ಅವುಗಳು ಮೇಯುವುದಕ್ಕೆ ಹುಲ್ಲುಗಾವಲು ಎಂದು ಇರುತ್ತದೆ. ಅದು ಬಹಳ ಸೊಗಸಾಗಿ ಬೆಳೆದ ಹಸಿರು ಹುಲ್ಲುಗಾವಲು ಆಗಿರುತ್ತದೆ. ಅಲ್ಲಿಗೆ ಈ ಗೂಳಿಗಳು ನುಗ್ಗಿ ಮೇಯುತ್ತಿರುತ್ತವೆ. ಆದರೆ, ಬಡಕಲು ದನಗಳು ಸುಮ್ಮನೆ ನಿಂತುಕೊಂಡು ಗೂಳಿಗಳು ಮೇಯುವುದನ್ನು ನೋಡುತ್ತಿರುತ್ತವೆ. ಇದು ಸಮಾನತೆ ಪ್ರತಿಪಾದನೆ ಅಲ್ಲ, ಇದು ಸಂವಿಧಾನದ ಆಶಯವಲ್ಲ. ಆ ಬಡಕಲು ದನಗಳು ಸಹ ಹೋಗಿ ಆ ಹುಲ್ಲುಗಾವಲಿನಲ್ಲಿ ಮೇಯಬೇಕು. ಈ ಬಡಕಲು ದನಗಳು ಅಲ್ಲಿಗೆ ನುಗ್ಗುವುದಕ್ಕೆ ಆಗುವುದಿಲ್ಲ. ಗೂಳಿಗಳು ಒಂದು ಸಾರಿ ತಲೆ ಅಲ್ಲಾಡಿಸಿದರೆ ಈ ಬಡಕಲು ದನಗಳು ಓಡಿ ಹೋಗುತ್ತವೆ. ಬಡವರ ಸ್ಥಿತಿ, ಎಸ್‌ಸಿ/ಎಸ್‌ಟಿ ಯವರ ಸ್ಥಿತಿ ಇದೇ ರೀತಿಯಾಗಿದೆ. ಎಲ್ಲಿಯವರೆಗೆ ನಾವು ಇದನ್ನು ಮುಂದುವರೆಸಿಕೊಂಡು ಹೋಗಬೇಕು? ಸಮಾನತೆ ನಿಲ್ಲುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಈ ಬಗ್ಗೆ ಎಲ್ಲಾ ಸರ್ಕಾರಗಳು ಏನು ಮಾಡುತ್ತಿವೆ? ಆದರೆ, 22 ಸಾವಿರ ಕೋಟಿ, 46 ಸಾವಿರ ಕೋಟಿ ಖರ್ಚು ಮಾಡಿದ್ದೇವೆಂದು ಸರ್ಕಾರದವರು ಭಾಷಣ ಬಿಗಿಯುತ್ತಿರುವುದನ್ನು ಕನ್ನಡಿ ಒಳಗೆ ತೋರಿಸಿದ್ದಾರೆ. ಪಾಪ, ಮುಗ್ಧ ಜನರು ಹೌದು, ಇದು ನಿಜವಿರಬಹುದೆಂದು ನಂಬುತ್ತಾರೆ. ಮೊದಲು ಕನ್ನಡಿಯೊಳಗಿನ ಗಂಟನ್ನು ತೋರಿಸುವ ಕೆಲಸವನ್ನು ತೋರಿಸುವುದನ್ನು ಬಿಡಬೇಕು. ನಿಜವಾದ ಗಂಟನ್ನು ತೋರಿಸಬೇಕು.

ನಾವು ಚಿಕ್ಕ ವಯಸ್ಸಿನಲ್ಲಿದ್ದಾಗ, ಬೊಂಬಾಯಿ ನೋಡು, ಕಲ್ಕತ್ತಾ ನೋಡು ಎಂದು ಕನ್ನಡಿ ಹಾಕಿಕೊಂಡು ತೋರಿಸುತ್ತಿದ್ದರು. ಆಗ ಇನ್ನು ಸಿನಿಮಾಗಳು ಬಂದಿರಲಿಲ್ಲ. ಬಯೋಸ್ಕೋಪ್‌ನಲ್ಲಿ ತೋರಿಸುತ್ತಿದ್ದರು. ಇದನ್ನು ನೋಡಿಕೊಂಡು ಕುಳಿತಿರಬೇಕೇ? ಕೇಳುವವರು ಯಾರೂ ಇಲ್ಲ, ಅದನ್ನು ಕೇಳಬಾರದು. ಅದಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಹೇಳುತ್ತಾರೆ, "ಕೇಳಿದರೆ ಸಿಗುವುದಿಲ್ಲ, ಕಿತ್ತುಕೊಳ್ಳುವುದನ್ನು ಕಲಿಯಬೇಕು. ಕಿತ್ತುಕೊಳ್ಳುವುದಕ್ಕೆ ಬಿಡದೇ ಇದ್ದರೆ, ನಾನು ಮುಂದೆ ಹೋಗಿ ಜಡಿದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಿತ್ತುಕೊಳ್ಳಬೇಕು. ಜಡಿದು ಕಿತ್ತುಕೊಳ್ಳುವುದಕ್ಕೂ ಬಿಡದೇ ಇದ್ದರೆ, ಅದಕ್ಕೂ ಮುಂದೆ ನಾನು ಪದಗಳನ್ನು ಉಪಯೋಗಿಸುವುದಿಲ್ಲ. ಅಲ್ಲಿಯವರೆಗೆ ಇದು ಹೋಗುತ್ತದೆ." ಆದುದರಿಂದ, ಆ ಹಂತಕ್ಕೆ ಹೋಗುವುದಕ್ಕೆ ಬಿಡಬೇಡಿ. ಈಗಲೇ ಸಮಸ್ಯೆಯ ಗಂಭೀರತೆಯನ್ನು ಅರಿತುಕೊಳ್ಳೋಣ. ನಾವು ಏನು ಅನ್ಯಾಯ ಮಾಡಿದ್ದೇವೋ, ಅದಕ್ಕೆ ನ್ಯಾಯ ದೊರಕಿಸಿಕೊಳ್ಳುವಂತಹ ಪ್ರಯತ್ನ ಮಾಡೋಣ. ಯಾವ ಸಮಸ್ಯೆಗೆ ಪರಿಹಾರ ಕಂಡುಕೊಂಡಿಲ್ಲವೋ ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಎಂ.ಎಲ್.ಎ.ಗಳ ಒಂದೊಂದು ಕ್ಷೇತ್ರದಲ್ಲಿ ಸುಮಾರು 46 ಸಾವಿರ ಎಸ್‌ಸಿ/ಎಸ್‌ಟಿ ವರ್ಗದವರು ಇದ್ದಾರೆ.

(ಮುಂದುವರೆದಿದೆ...)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್.ವೀರಯ್ಯ(ಮುಂದು):-** ಪ್ರಜಾಪ್ರಭುತ್ವ ಉಳಿಸಿರುವವರೆ ಶೇಕಡ 90 ರಷ್ಟು ಜನ ಮತ ಹಾಕುತ್ತಾರೆ. ಸದಾಶಿವನಗರ ಪೋಲಿಂಗ್ ಬೂತ್ ತೆಗೆದರೆ, ಶೇಕಡ 15, 20 ರಷ್ಟು ಮತ ಹಾಕುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಶಿವಾಜಿನಗರದಲ್ಲಿಯೂ ಅಷ್ಟೇ.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಶ್ರೀಮಂತರ ಏರಿಯಾದಲ್ಲಿಯೂ ಇದ್ದಾರೆ. ಅದೇ ಸ್ವತಂತ್ರಪಾಳ್ಯ ಅಥವಾ ಶ್ರೀರಾಂಪುರದ ಮತ ಪೆಟ್ಟಿಗೆಗಳನ್ನು ತೆಗೆದರೆ, ಶೇಕಡಾ 80 ರಿಂದ 85 ರಷ್ಟು ಜನ ಮತ ಹಾಕುತ್ತಾರೆ. ಇಂತಹ ಜನರಿಂದಲ್ಲೇ ಪ್ರಜಾಪ್ರಭುತ್ವ ಉಳಿದಿರುವುದು. ಇಷ್ಟೆಲ್ಲಾ ಅನ್ಯಾಯ ಮಾಡಿದರೂ ಅದನ್ನು ತಡೆದುಕೊಂಡು, ಮತ ಹಾಕಿ, ಉಳಿಸಿದ್ದಾರೆ. ಆದ್ದರಿಂದ, ಇನ್ನು ಮುಂದೆಯಾದರೂ ಕೂಡ ಅವರಿಗೂ.... ವೈರಿ ಎಂದರೆ ಭ್ರಷ್ಟಾಚಾರದಲ್ಲಿ ತೊಡಗಿ ಎಂದಂತಲ್ಲ. ದಯವಿಟ್ಟು, ಅವರನ್ನು ಆರ್ಥಿಕವಾಗಿ ಮೇಲೆತ್ತುವಂತಹದನ್ನು ಮಾಡಿ. ಬರೀ ಮೀಸಲಾತಿ ಕೊಟ್ಟಿದ್ದಕ್ಕೆ, ಶೇಷಾದ್ರಿಪುರಂನಲ್ಲಿ ಒಂದು ಸಂವಾದ ಆಗುತ್ತಿರುವಾಗ, ಒಬ್ಬ ಹುಡುಗ ಕೇಳಿದ; 'why reservation should continue and why should they get special privilege?' ಪಾಪ, ಆತ ಬೆಳ್ಳಿ ಚಮಚದಲ್ಲಿ ಊಟ ಮಾಡುತ್ತಾ ಹುಟ್ಟಿದ್ದಾನೆ. ಅದಕ್ಕೆ ನಾನು ಹೇಳಿದೆ, ಐನೂರು ಹುಡಗರಿದ್ದೀರಾ. ಯಾರ‍್ಯಾರು ಪರಿಶಿಷ್ಟ ಸಮುದಾಯದಕ್ಕೆ ಒಳಪಡುವವರು ಕೈ ಎತ್ತಿ ಎಂದು ನಾನು ಹೇಳಿದೆ. ಪರಿಶಿಷ್ಟ ಸಮುದಾಯಕ್ಕೆ ಒಳಪಟ್ಟವರಾಗಿದ್ದರೂ ಸಹ identify ಆಗುತ್ತೇವೆ ಎಂದು ಒಬ್ಬರು ಕೈ ಎತ್ತಲಿಲ್ಲ. ಅವನು ಕ್ಲಾಸ್ ರೂಮಿನಲ್ಲಿ ಜನರ ಮಧ್ಯದಲ್ಲಿ ಬೆಳೆದಿರುತ್ತಾನೆ. ಅದರಲ್ಲಿ untouchables ಎಷ್ಟು ಜನರಿದ್ದೀರಾ ಕೈ ಎತ್ತಿ ಎಂದು ನಾನು ಹೇಳಿದೆ. ಒಬ್ಬನೂ ಸಹ ಕೈ ಎತ್ತಲಿಲ್ಲ. That is why reservation should continue. ಎಲ್ಲಿಯವರೆಗೂ ಭಯ-ಭೀತಿ ಇದೆಯೋ, ಅದಕ್ಕಾಗಿ ಮೀಸಲಾತಿ ಬೇಕು ಎಂದು ನಾನು ಹೇಳಿದ ನಂತರ he was convinced.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವನಿಗೆ ಬಹಳ ಖುಷಿಯಾಯಿತು. ಹೌದು ಸರ್. ಈಗ ನೂರು ವರ್ಷ ಮುಂದೆ ಹೋಗಿ ಬಿಟ್ಟಿದ್ದೀರಾ. ಅವನು ಓಡುವುದಕ್ಕೆ ಈಗ ಆರಂಭ ಮಾಡಿದ್ದಾನೆ. ಅವನು ಜೊತೆಯಲ್ಲಿ ಸೇರಬೇಕಲ್ಲಾ. ಅವನಿಗೆ ಒಂದು ಊರುಗೋಲು ಕೊಡಬೇಕು ಅಥವಾ ಕುರುಡನಾಗಿದ್ದರೆ ಕನ್ನಡಕ ಕೊಡಬೇಕು. ಅವನನ್ನು ಓಡಿಸಬೇಕಲ್ಲವೆ. ಆ ಹಿನ್ನೆಲೆಯಲ್ಲಿ ಮೀಸಲಾತಿ ಬಂದಿದೆಯೇ ಹೊರೆತು, ಅದಕ್ಕೆ ಹೊಟ್ಟೆಕಿಚ್ಚು ಪಡುವಂತಹದ್ದು ಅಪ್ರಸ್ತುತ. ಅದಕ್ಕಾಗಿ ಪ್ರತಿಯೊಬ್ಬ ಜನಪ್ರತಿನಿಧಿಗಳು ಅರ್ಥಮಾಡಿಕೊಳ್ಳಬೇಕು. ಈ ವಿಚಾರದಲ್ಲಿ ಸುಮಾರು ನಲವತ್ತಾರು ಸಾವಿರ ಮತಗಳನ್ನು ಪಡೆದ ನಾನು ಮಾತನಾಡಬೇಕೇ ಅಥವಾ ಬೇರೆಯವರು ಮಾತನಾಡಬೇಕೇ? ಡಾ|| ಬಿ.ಆರ್.ಅಂಬೇಡ್ಕರ್‌ರವರೊಬ್ಬರೇ ಮಾತನಾಡಿದರು. ಅವರಿಗೆ time restrict ಮಾಡುತ್ತಿದ್ದರು. ನಮ್ಮ ಸದನದಲ್ಲಿ ವೀರಯ್ಯನವರೇ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುತ್ತಿರುತ್ತಾರೆ. ಆದರೆ, ಡಾ. ಬಿ.ಆರ್. ಅಂಬೇಡ್ಕರ್‌ರವರು ಒಂದು ಮಾತು ಹೇಳುತ್ತಾರೆ. ಅದೇನೆಂದರೆ ಮೂರು ಸಾವಿರ ವರ್ಷಗಳಿಂದ ನಾವು ಬಾಯಿ ಮುಚ್ಚಿಕೊಂಡು ಕುಳಿತುಕೊಂಡಿದ್ದೇವೆ. ನಮ್ಮ ಧ್ವನಿ ಇಲ್ಲದಿರುವ ಹಾಗೆ ಮಾತನಾಡಿದ್ದೇವೆ. ಅವರ ಪರವಾಗಿ ನಾನು ಮಾತನಾಡುತ್ತಿದ್ದೇನೆ, don't restrict my timings ಎಂದು ಹೇಳಿದರು. Then they understood his language, anxiety and outrage and said that there is no time limit for you. That is how he was able to convince. ಮಾನ್ಯ ಖರ್ಗೆಯವರು ಮೂರು ಸಾವಿರದ ಆರುನೂರು ತಿದ್ದುಪಡಿ ಎಂದು ಹೇಳಿದರು. ಬರೀ ಆರುನೂರು ತಿದ್ದುಪಡಿಗೆ ಅವರು ತಲೆ ಬಗ್ಗಿಸುತ್ತಾರೆ. ಉಳಿದಿರುವಂತಹದ್ದಕ್ಕೆಲ್ಲಾ ಪ್ರತ್ಯುತ್ತರ ಕೊಟ್ಟು ಸಮಾಜಾಯಿಷಿ ಮಾಡುತ್ತಾರೆ. ಆರುನೂರು ತಿದ್ದುಪಡಿಗಳನ್ನು ಏನು ಒಪ್ಪಿಕೊಳ್ಳುತ್ತಾರೋ, ಅವು ಇವತ್ತು ನಿಮ್ಮನ್ನು ಕಾಡುತ್ತಿವೆ. Water should be nationalized ಎಂದು ಹೇಳುತ್ತಾರೆ. But, you have not done it. ಆರ್ಥಿಕ ಸಂಸ್ಥೆಗಳು ರಾಷ್ಟ್ರೀಕರಣವಾಗಬೇಕು ಎಂದು ಹೇಳುತ್ತಾರೆ. There should not be borders between States ಎಂದು ಹೇಳುತ್ತಾರೆ. ರಾಜ್ಯಗಳಿಗೆ ಬಾರ್ಡರ್ ಇರಬಾರದು. ಇವತ್ತು ನಾವುಗಳು ಗಡಿ ಸಮಸ್ಯೆ ಎದುರಿಸುತ್ತಿದ್ದೇವೆ. Then, he says that there should be compulsory education upto 14th level. ಅದು ಮಾಡಲಿಲ್ಲ. ಇದನ್ನು ಮಾಡಿದ್ದೇವೆ. There should be compulsory voting ಎಂದು ಹೇಳುತ್ತಾರೆ. ಪ್ರಜಾಪ್ರಭುತ್ವಕ್ಕೆ ನಿಜವಾದ ಬೆಲೆ ಸಿಗಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ಸಹ ಮತ ಚಲಾಯಿಸಬೇಕು ಎಂದು ಹೇಳುತ್ತಾರೆ. ಆದರೆ ಅದನ್ನು ಮಾಡಲಿಲ್ಲ. ಹೀಗಾಗಿ ಸಂವಿಧಾನದ ಆಶಯಗಳು ಈಡೇರಬೇಕು ಎನ್ನುವುದಾದರೆ, ಶೇಕಡಾ 24 ರಷ್ಟು ಇರತಕ್ಕಂಥ ಪರಿಶಿಷ್ಟ ಸಮುದಾಯದ ಜನರು ಆರ್ಥಿಕವಾಗಿ..... ಸರ್ಕಾರದಿಂದ ಏನು ಕೊಡಲಾಗುತ್ತಿದೆ. ಬಾರ್‌ಗಳನ್ನು ಕೊಡುವುದಿಲ್ಲ. Contract ನಲ್ಲಿ ನಿಮ್ಮ ಸರ್ಕಾರ 50 ಲಕ್ಷ ಕೊಟ್ಟಿದೆ. ಇಷ್ಟು ವರ್ಷಗಳು ಬೇಕೇ? ಏಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

50 ಲಕ್ಷಕ್ಕೆ restrict ಮಾಡಿದ್ದಾರೆ. 5 ಕೋಟಿ ಕೆಲಸ ಮಾಡಲು ತಾಕತ್ತು ಇಲ್ಲವೇ? ಎಲ್ಲೋ ಒಂದು ಕಡೆ ಪರಿಶಿಷ್ಟ ಸಮುದಾಯದವರಿಗೆ ಕೊಡಬೇಕೆಂದರೆ 50 ಲಕ್ಷಕ್ಕೆ ಸೀಮಿತಗೊಳಿಸುವುದೇ? ಆರ್ಥಿಕ ಸಬಲೀಕರಣ ಬರಬೇಕೆಂದರೆ ಸದರಿ ಸಮುದಾಯದವರಿಗೆ purchase and delivery ನಲ್ಲಿ contract ಕೊಡಬೇಕು. ಅಂದರೆ, ವಸ್ತುವನ್ನು ಸಂಗ್ರಹಿಸುವುದಕ್ಕೆ, ವಿತರಣೆ ಮಾಡುವುದಕ್ಕೆ contract ಕೊಡಬೇಕು. ಟೆಂಡರ್‌ನಲ್ಲಿ ಅವಕಾಶ ಕೊಡಬೇಕು. ಲೈಸೆನ್ಸ್ ಕೊಡಬೇಕು. ಕುಡಿಸುವುದು ಬೇಡ. ಏಕೆಂದರೆ, ಅವರು ಬಹಳ ವರ್ಷಗಳಿಂದ ಕುಡಿಸಿದ್ದಾರೆ. ಕನಿಷ್ಟ ಪಕ್ಷ ಒಂದು ಸಾವಿರದಷ್ಟು ಬಾರ್‌ಗಳನ್ನಾದರೂ ನೀಡಿದರೆ, ಅವರು ಕುಡಿಸಲಿ. ಅವರಿಗೂ ಲೈಸೆನ್ಸ್ ನೀಡಲಿ. ಬೇರೆಯವರು ಕುಡಿಸುವುದನ್ನು ಕುಡಿದುಕೊಂಡೇ ಇರಬೇಕಾ? ಅವರು ಕಟ್ಟುವ ತೆರಿಗೆ ಹಣದಿಂದಲೇ ರಾಜ್ಯ ಸರ್ಕಾರವನ್ನು ನಡೆಸುತ್ತಿದ್ದೇವೆ. ಎಲ್ಲೋ ಒಂದು ಕಡೆ ನಾವು ಆರ್ಥಿಕ ಸಬಲೀಕರಣ ಮಾಡುವುದರಲ್ಲಿ ವಿಫಲವಾಗಿದ್ದೇವೆ. ಆರ್ಥಿಕವಾಗಿ ಮೇಲೆ ಬಂದರೆ, automatically ಸಾಮಾಜಿಕವಾಗಿ ಅವನು ಮೇಲೆ ಬರುತ್ತಾನೆ. ಸಾಮಾಜಿಕವಾಗಿ ಮೇಲೆ ಬಂದರೆ, ಸಮಾನತೆಯ ಕನಸು ನನಸಾಗುತ್ತದೆ. ಆ ನಿಟ್ಟಿನಲ್ಲಿ ಗಂಭೀರವಾಗಿ ಚರ್ಚೆಯಾಗಬೇಕು. ಇದು ನನ್ನ ಜವಾಬ್ದಾರಿ ಮಾತ್ರವಲ್ಲ. ಎಲ್ಲರೂ ಇದರ ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳಬೇಕು. ಯಾರನ್ನೋ ದೂಷಿಸುವುದಕ್ಕೋಸ್ಕರ ಮಾತನಾಡುತ್ತಿಲ್ಲ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಾಗಿದೆ. ಒಬ್ಬರಿಂದ ಮಾತ್ರ ತೊಂದರೆಯಾಗಿಲ್ಲ. ಹಾಗಾಗಿ ಈ ಸಮಸ್ಯೆಯನ್ನು ಗಂಭೀರವಾಗಿ ಎದುರಿಸದೇ ಇದ್ದರೆ ಮುಂದೆ ಒಂದು ದಿವಸ Louis XIV of France ಗೆ ಆದ ರೀತಿ ಆಗುತ್ತದೆ. ಮಾಡುವುದಕ್ಕೆ ಅವಕಾಶ ಇದೆ. ನಾವೇ ಹಳ್ಳಿಗಳಿಗೆ ಹೋದಾಗ ಆತನ ಆಕ್ರೋಶ ಹುಟ್ಟಿದೆ ಎಂಬುದನ್ನು ನೋಡಿದ್ದೇವೆ. ಹಾಗಾಗಿ ಇದಕ್ಕೆಲ್ಲಾ ಅವಕಾಶವನ್ನು ನೀಡದೇ ಪ್ರಜಾಪ್ರಭುತ್ವದ ವ್ಯವಸ್ಥೆ ಸಾವಿರ ವರ್ಷಗಳಾದರೂ ಗಟ್ಟಿಯಾಗಿ ನಿಲ್ಲುವಂತಹ ವ್ಯವಸ್ಥೆ, ಇದು ನಮ್ಮ ದೇಶಕ್ಕೆ ಸಿಕ್ಕಿದೆ ಅದು ನಮ್ಮ ಅದೃಷ್ಟ. ಅದನ್ನು ಉಳಿಸಿಕೊಳ್ಳುವಂತಹ ಕೆಲಸವನ್ನು ಮಾಡೋಣ. ಬಡವರು ಮೇಲೆ ಬಂದಾಗ ಪ್ರಜಾಪ್ರಭುತ್ವದ ವ್ಯವಸ್ಥೆ ಉಳಿಯುತ್ತದೆ. ಅದರಲ್ಲಿಯೂ ಅತ್ಯಂತ ಕಟ್ಟಕಡೆಯ ಮನುಷ್ಯ ಸ್ವತಂತ್ರವಾಗಿ ಬದುಕುವ ದಾರಿ ಸಿಕ್ಕಿದಾಗ ಉಳಿಯುತ್ತದೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಗಂಭೀರವಾಗಿ ಕೆಲಸ ಮಾಡೋಣ. ಇವತ್ತಿನ ನನ್ನ ಭಾಷಣ... SCP (Special Component Plan)/TSP (Tribal Sub Plan) ಹಣ ಕಟ್ಟುನಿಟ್ಟಾಗಿ ಜಾರಿಯಾಗಬೇಕು ಮತ್ತು ಯಾವ ಹಣ ಖರ್ಚು ಆಗಿಲ್ಲವೋ ಅದನ್ನು ಉಳಿದ 3 ತಿಂಗಳೊಳಗಾದರೂ ಖರ್ಚು ಮಾಡುವಂತೆ ಆಜ್ಞೆ ನೀಡಬೇಕು.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾನ್ಯ ಸದಸ್ಯರು ಕಾಳಜಿ ವಹಿಸುವುದು ಬೇಡ. ಉಳಿದಿರತಕ್ಕಂಥ ಹಣವು lapse ಆಗುವುದಿಲ್ಲ. Continuously ಆ ಹಣ ಉಳಿಯುತ್ತದೆ. ಅದರ ಬಗ್ಗೆ ಚಿಂತಿಸುವುದು ಬೇಡ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಒಂದು ಭರವಸೆಯನ್ನು ನೀಡಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಹ ಗಮನ ಹರಿಸಿದ್ದಾರೆ. ಯಾವುದೇ ಕಾರಣಕ್ಕೂ ಆ ಹಣವು lapse ಆಗುವುದಿಲ್ಲ. ಆ ಹಣವು ಇದ್ದೇ ಇರುತ್ತದೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಕಳೆದ ವರ್ಷ ಆಗಿರತಕ್ಕಂಥ ಖರ್ಚಿನ ಬಗ್ಗೆ ಏನು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.....

**ಉಪ ಸಭಾಪತಿಯವರು:-** ಮಾನ್ಯ ಡಿ.ಎಸ್.ವೀರಯ್ಯನವರೆ, ನೀವು ಸರ್ಕಾರಕ್ಕೆ ಏನು ಹೇಳಬೇಕೋ ಅದನ್ನು ಹೇಳಿ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮಯ 7.15 ಆಗಿದೆ ಎಂದು ನನ್ನ ಮಾತನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ನನಗೆ ಅವಕಾಶ ಸಿಗುವುದೇ ಬಹಳ ಕಡಿಮೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಆ ಹಣವು lapse ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ ನೋಡಿ ಮಾನ್ಯ ಸಭಾನಾಯಕರು ತಾವು ಹೇಳಿದ ಮಾತಿಗೆ ಅನುಷ್ಠಾನ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಹೌದು ಒಪ್ಪಿಕೊಂಡಿದ್ದಾರೆ. ಆದರೆ, ಅನುಷ್ಠಾನ ಮಾಡಬೇಕಲ್ಲವೇ? ಹೇಳಿದ ಮಾತಿಗೆಲ್ಲಾ ಒಪ್ಪಿಕೊಂಡು, ಒಪ್ಪಿಕೊಂಡು 70 ವರ್ಷಗಳು ಸಮಯವನ್ನು ಕಳೆದಿದ್ದೇವೆ. ನಾನು ಕೇಳುವುದೇನೆಂದರೆ, ಅನುಷ್ಠಾನ ಮಾಡುವ ಇಚ್ಛಾಶಕ್ತಿ ಪ್ರದರ್ಶನ ಮಾಡಿ ಎಂಬುದಾಗಿದೆ.

**ಉಪ ಸಭಾಪತಿಯವರು:-** ಮಾಡುತ್ತೇವೆ ಎಂದು ಹೇಳಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಯಾವಾಗಲೋ ಒಂದು ಸಲ ಮಾತನಾಡಲು ಅವಕಾಶ ಸಿಗುತ್ತದೆ. ಇವತ್ತು ಅವರು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. Actually, it touched my heart.

(ಗೊಂದಲ)

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಈ ವರ್ಗವನ್ನು ಆಡಳಿತ ಪಕ್ಷದವರು mislead ಮಾಡುವುದು ಬೇಡ. ಈಗ ಕೊಟ್ಟಿರುವ ಬಜೆಟ್‌ನಲ್ಲಿಯೂ ಸಹ ಕಳೆದ ವರ್ಷ ಖರ್ಚಾಗದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವ ಅನುದಾನ ಎಷ್ಟು ಎಂಬುದನ್ನು ನಮೂದಿಸಿಲ್ಲ. ಹಿಂದಿನ ವರ್ಷದ ವಿವರವನ್ನು ಸೇರಿಸಿಲ್ಲ. ಈ ವರ್ಷವೂ ಸಹ 24% ಅಥವಾ 10% ಸಹ ಮಾಡಿಲ್ಲ. ಈ ಬಜೆಟ್ ಪುಸ್ತಕದಲ್ಲಿರುವ ಅಂಕಿಅಂಶಗಳೇ ಸಾಕ್ಷಿ ಹೇಳುತ್ತದೆ. ಹಾಗಾಗಿ ದಯವಿಟ್ಟು ಮಾಡಿಸಬೇಕು. ಸರ್ಕಾರದಲ್ಲಿದ್ದು ಹಿಂದುಳಿದ ವರ್ಗವನ್ನು ಮೇಲಕ್ಕೆ ಎತ್ತಿದ್ದೇವೆ ಎಂಬ ಒಂದು ಸಮಾಧಾನವಾದರೂ ಆಡಳಿತ ಪಕ್ಷದವರಿಗೂ ಇರುತ್ತದೆ. ಕೇವಲ ಘೋಷಣೆಗಳಲ್ಲ. ಭಿಕ್ಷೆ ಕೊಡುವಂತಹ ಕಾರ್ಯಕ್ರಮವೂ ಅಲ್ಲ. ಖಾಯಂ ಪುನಶ್ಚೇತನಕ್ಕೆ ಒತ್ತು ಕೊಟ್ಟಿದ್ದೇವೆ ಎಂದು ಹೇಳಿದಾಗ ಮಾತ್ರ ಹಿಂದುಳಿದ ವರ್ಗದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇದೆ. ಇಲ್ಲದಿದ್ದರೆ, ನನ್ನನ್ನು ಸೇರಿಸಿಕೊಂಡು ಹೇಳುತ್ತೇನೆ, ನಮಗೆ ಯಾರಿಗೂ ಆ ವರ್ಗದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇಲ್ಲ. 3 ತಿಂಗಳೊಳಗಾದರೂ ಆ ಹಣವನ್ನು ಖರ್ಚು ಮಾಡಿ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಉಪ ಸಭಾಪತಿಯವರು:-** ತಮಗೂ ಧನ್ಯವಾದಗಳು. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೆ, ತಮಗೆ ಮಾತನಾಡಲು ನಾಳೆಯ ಸದನದಲ್ಲಿ ಅವಕಾಶ ಮಾಡಿಕೊಡುತ್ತೇವೆ. ಈಗ ಒಂದು ಪ್ರಕಟಣೆ ಬಂದಿದೆ.

## ಪ್ರಕಟಣೆ

**ಉಪ ಸಭಾಪತಿಯವರು:-** ಕರ್ನಾಟಕ ಸರ್ಕಾರದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವತಿಯಿಂದ ಶಾಸಕರ ಭವನದಲ್ಲಿ ಮಾನ್ಯ ಶಾಸಕರುಗಳ ಸೌಕರ್ಯಕ್ಕಾಗಿ ಶಾಸಕರ ಭವನದ ಆವರಣದಲ್ಲಿ ನೂತನವಾಗಿ 5ನೇ ಶಾಸಕರ ಭವನದ ಕಟ್ಟಡ ನಿರ್ಮಾಣ ಮಾಡಲಾಗಿದೆ. ಸದರಿ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ದಿನಾಂಕ 21/02/2018 ರಂದು ಬೆಳಗ್ಗೆ 9.00 ಗಂಟೆಗೆ ಏರ್ಪಡಿಸಲಾಗಿರುತ್ತದೆ. ಮಾನ್ಯ ಸದಸ್ಯರುಗಳು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಈ ಮೂಲಕ ಕೋರಲಾಗಿದೆ.

**ಸಭಾಪತಿಯವರು:-** ಸದನವನ್ನು ನಾಳೆ ಪೂರ್ವಾಹ್ನ 11.00 ಘಂಟೆಗೆ ಮುಂದೂಡಿದ್ದೇನೆ.

**(ಸದನವನ್ನು ಸಂಜೆ 7 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 21ನೇ ಫೆಬ್ರವರಿ ಮಾಹೆ 2018ರ ಬುಧವಾರದಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"